ಮಂಗಳವಾರ, ಡಿಸೆಂಬರ್ 5, 2023 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬೆಡಗು

ಲಾಸ್ ಏಂಜಲೀಸ್‌ನಲ್ಲಿ ಭಾನುವಾರ ನಡೆದ ಅಕಾಡೆಮಿ ಮ್ಯೂಸಿಯಂ ಗಾಲಾದ ಮೂರನೇ ವಾರ್ಷಿಕೋತ್ಸವದಲ್ಲಿ ಬಾಲಿವುಡ್ ನಟ ದೀಪಿಕಾ ಪಡುಕೋಣೆ ಅವರು ಪಾಲ್ಗೊಂಡಿದ್ದರು

SHOWROOMS: KARNATAKA: BENGALURU: RENAULT Bannerghatta Road Mob: +91 8546820204, RENAULT Mysore Road Mob: +91 8527240549 & +91 7026666922, RENAULT Palace Orchards Mob: +91 8527240717, RENAULT Silk Board Mob: +91 8527240654, RENAULT Whitefield Mob: +91 8527240685, RENAULT JP Nagar Mob: +91 8527240626 & +91 7353760555, RENAULT Kalyan Nagar Mob: +91 8527236137 & +91 8722866664, RENAULT Sarjapura Mob: +91 8448481374, +91 8746811000 & +91 8496915111, RENAULT Yelahanka Mob: +91 8527234592, +91 9071767600 & +91 8884498993, RENAULT Yeswanthpur Mob: +91 9311832962 & +91 9311832968. **TUMKUR:** RENAULT Tumkur Mob: +91 7353764337.

ಟೆಂಡರ್ ಪ್ರಕ್ರಿಯೆಯ ಲೋಪಗಳಿಂದ ಸ್ಥಗಿತಗೊಂಡಿದ್ದ ಉಚಿತ ಸ್ಯಾನಿಟರಿ ನ್ಯಾಪ್ಕಿನ್ ವಿತರಣೆ ಯೋಜನೆ

ಜನವರಿಯಿಂದ ಮತ್ತೆ 'ಶುಚಿ'– ದಿನೇಶ್

ಪ್ರಜಾವಾಣಿ ವಾರ್ತೆ

ವಿಧಾನ ಪರಿಷತ್: 'ನಾಲ್ಕು ವರ್ಷಗಳಿಂದ ಸ್ಥಗಿತಗೊಂಡಿರುವ, ಶಾಲಾ ವಿದ್ಯಾರ್ಥಿನಿಯರಿಗೆ ಉಚಿತ ಸ್ಯಾನಿಟರಿ ನ್ಯಾಪ್ಕಿನ್ ವಿತರಿಸುವ 'ಶುಚಿ' ಯೋಜನೆ ಜನವರಿ ತಿಂಗಳಿನಿಂದ ಮತ್ತೆ ಆರಂಭವಾಗಲಿದೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಜೆಡಿಎಸ್‌ನ ಕೆ.ಎ. ತಿಪ್ಪೇಸ್ವಾಮಿ ಅವರ ಪ್ರಶ್ನೆಗೆ ಉತ್ತರಿಸಿದ ಅವರು, '2013ರಲ್ಲಿ ಆರಂಭವಾಗಿರುವ ಶುಚಿ ಯೋಜನೆಯು ಟೆಂಡರ್ ಪ್ರಕ್ರಿಯೆಯ ಲೋಪಗಳಿಂದ ಸ್ಥಗಿತವಾಗಿತ್ತು' ಎಂದರು.

'ಈ ಬಾರಿ ಟೆಂಡರ್ ವಹಿಸಿದ ಏಜೆನ್ಸಿಗಳೇ ಶಾಲೆಗಳಿಗೆ ಸ್ಯಾನಿಟರಿ ನ್ಯಾಪ್ಕಿನ್ ತಲುಪಿಸಲಿವೆ. ಮುಟ್ಟಿನ ಕಪ್‌ಗಳನ್ನು ವಿತರಿಸುವ ಕಾರ್ಯಕ್ರಮ ಈಗಾಗಲೇ ಚಾಲನೆ ನೀಡಲಾಗಿದೆ. ಈ ಬಗ್ಗೆ ಇನ್ನೂ ಜಾಗೃತಿ ಮೂಡಿಸಬೇಕಿದೆ' ಎಂದರು.

'ಹದಿಹರೆಯದ ಹೆಣ್ಣು ಮಕ್ಕಳು ಸ್ಯಾನಿಟರಿ ನ್ಯಾಪ್ಕಿನ್ ಬದಲಿಗೆ ಬಟ್ಟೆಗಳನ್ನು ಬಳಸುತ್ತಿರುವುದು ಆರೋಗ್ಯ ಇಲಾಖೆಯ

ವಿಧಾನಮಂಡಲ ಚಳಿಗಾಲದ ಅಧಿವೇಶನ ಅಂಗವಾಗಿ ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಗೌರವ ರಕ್ಷೆ ಸ್ವೀಕರಿಸಿದರು

ಸಮೀಕ್ಷೆಯಿಂದಲೇ ಬಹಿರಂಗವಾಗಿದೆ. ಇದು ವಿವಿಧ ರೋಗಗಳಿಗೆ ಕಾರಣವಾಗುತ್ತಿದೆ. ಹೀಗಾಗಿ ಶುಚಿತ್ವದ ಬಗ್ಗೆ ಹೆಚ್ಚಿನ ಗಮನಹರಿಸಬೇಕು' ಎಂದು ತಿಪ್ಪೇಸ್ವಾಮಿ ಸಲಹೆ ನೀಡಿದರು.

'ಶಿಕ್ಷಣ ಮಾಧ್ಯಮವಾಗಿ ಮಾತೃಭಾಷೆ ಕಡ್ಡಾಯ ಅಸಾಧ್ಯ'

'ಮೂಲಭೂತ ಹಕ್ಕುಗಳ ಉಲ್ಲಂಘನೆ ಕಾರಣಕ್ಕೆ ಶಾಲೆಗಳಲ್ಲಿ 1ರಿಂದ 5ನೇ ತರಗತಿಯವರೆಗೆ ವಿದ್ಯಾರ್ಥಿಗಳಿಗೆ ಮಾತೃಭಾಷೆ ಅಥವಾ ರಾಜ್ಯ ಭಾಷೆಯನ್ನು ಶಿಕ್ಷಣ ಮಾಧ್ಯಮವಾಗಿ ಕಡ್ಡಾಯಗೊಳಿಸಲು ಸಾಧ್ಯ ಇಲ್ಲ' ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ವಿಧಾನ ಪರಿಷತ್‌ನಲ್ಲಿ ಹೇಳಿದರು.

ಕಾಂಗ್ರೆಸ್‌ನ ಯು.ಬಿ. ವೆಂಕಟೇಶ್ ಅವರು, '1ರಿಂದ 5ನೇ ತರಗತಿವರೆಗೆ ವಿದ್ಯಾರ್ಥಿಗಳಿಗೆ ಮಾತೃಭಾಷೆಯನ್ನು ಶಿಕ್ಷಣ ಮಾಧ್ಯಮವಾಗಿ ಕಡ್ಡಾಯಗೊಳಿಸಿ ವಿಧಾನ ಮಂಡಲದ ಎರಡೂ ಸದನಗಳಲ್ಲಿ ಮಸೂದೆಯನ್ನು ಅಂಗೀಕರಿಸಿರುವಾಗ ಕಡ್ಡಾಯಗೊಳಿಸಲೇಬೇಕು' ಎಂದು ಆಗ್ರಹಿಸಿದರು.

ಅದಕ್ಕೆ ಉತ್ತರಿಸಿದ ಸಚಿವರು, '2015ರಲ್ಲೇ ಈ ಮಸೂದೆ ಅಂಗೀಕಾರ ಆಗಿದೆ. ಆದರೆ, ಈ ಮಸೂದೆಗೆ ಕೇಂದ್ರ ಸರ್ಕಾರ ಅನುಮೋದನೆ ನೀಡಿಲ್ಲ. ಮಾತೃಭಾಷೆಯ ಕಡ್ಡಾಯ ಶಿಕ್ಷಣ ಮೂಲಭೂತ ಹಕ್ಕುಗಳ ಉಲ್ಲಂಘನೆ ಎಂದು ಮಸೂದೆಯನ್ನು ಕೇಂದ್ರ ತಿರಸ್ಕರಿಸಿದೆ' ಎಂದರು.

'ಸುಪ್ರೀಂ ಕೋರ್ಟ್ ತೀರ್ಪು ಆಧರಿಸಿ ಮೂಲಭೂತ ಹಕ್ಕುಗಳ ಉಲ್ಲಂಘನೆ ಎಂದು ಉಲ್ಲೇಖಿಸಿ ರಾಜ್ಯದ ಮಸೂದೆಗೆ ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ ಅನುಮೋದನೆ ನೀಡಿಲ್ಲ. ಮಾತೃಭಾಷೆಯಲ್ಲಿ ಶಿಕ್ಷಣ ಪಡೆಯುವುದು ಅವರವರಿಗೆ ಬಿಟ್ಟ ವಿಚಾರ. ಮೂಲಭೂತ ಹಕ್ಕುಗಳನ್ನು ಮೀರಿ ಜಾರಿ ಮಾಡಲು ಅವಕಾಶ ಇಲ್ಲ' ಎಂದು ಸ್ಪಷ್ಟಪಡಿಸಿದರು.

ಸರ್ಕಾರ ಸುಳ್ಳು ಹೇಳುತ್ತಿದೆ– ವಿಪಕ್ಷ ಟೀಕೆ

ವಿಧಾನ ಪರಿಷತ್: 'ರಾಜ್ಯದಲ್ಲಿ ವಿದ್ಯುತ್ ಬೇಡಿಕೆಯನ್ನು ಸಮರ್ಪಕವಾಗಿ ಪೂರೈಸಲಾಗುತ್ತಿದೆ' ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಪರವಾಗಿ ಸಚಿವ ಪ್ರಿಯಾಂಕ್ ಖರ್ಗೆ ಸಮರ್ಥನೆ ನೀಡಿದಾಗ, 'ಸರ್ಕಾರ ಸುಳ್ಳು ಹೇಳುತ್ತಿದೆ' ಎಂದು ಬಿಜೆಪಿ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿಯ ಛಲವಾದಿ ನಾರಾಯಣಸ್ವಾಮಿ, 'ರಾಜ್ಯ ಬರದಿಂದ ಕಂಗೆಟ್ಟಿದ್ದು, ಅಳಿದುಳಿದ ನೀರಾವರಿ ಆಶ್ರಿತ ಬೆಳೆಗಳಿಗೆ ನೀರು ಹಾಯಿಸಲು ತೊಂದರೆಯಾಗುತ್ತಿದೆ' ಎಂದರು.

ಆಗ ಉತ್ತರಿಸಿದ ಪ್ರಿಯಾಂಕ್, 'ರೈತರ ಕೃಷಿ ಪಂಪ್ ಸೆಟ್‌ಗಳಿಗೆ ಸರ್ಕಾರದ ಆದೇಶದಂತೆ ದಿನದಲ್ಲಿ 7 ಗಂಟೆ ಕಾಲ ತ್ರೀ ಫೇಸ್ ವಿದ್ಯುತ್ ಪೂರೈಸಲಾಗುತ್ತಿದೆ. ವಿದ್ಯುತ್ ಬಳಕೆ ಪ್ರಮಾಣ ಹಿಂದಿನ ವರ್ಷಕ್ಕಿಂತ ದ್ವಿಗುಣವಾಗಿರುವುದರಿಂದ ಒಂದೂವರೆ ತಿಂಗಳು ತೊಂದರೆ ಆಗಿತ್ತು' ಎಂದರು.

ಅದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದ ಬಿಜೆಪಿಯ ವೈ.ಎ. ನಾರಾಯಣಸ್ವಾಮಿ, ಕೋಟ ಶ್ರೀನಿವಾಸ ಪೂಜಾರಿ, 'ಸುಳ್ಳು ಹೇಳುವುದಕ್ಕೂ ಮಿತಿ ಬೇಕು' ಎಂದು ತಿವಿದರು.

'ಅವೈಜ್ಞಾನಿಕ ಲೋಡ್ ಶೆಡ್ಡಿಂಗ್ ನಡೆಯುತ್ತಿದೆ. ನೀರಾವರಿ ಆಧರಿಸಿ ಬೆಳೆ ಬೆಳೆಯುವವರಿಗೆ ಅನ್ಯಾಯವಾಗಿದೆ. ಏಳು ಗಂಟೆ ವಿದ್ಯುತ್ ಕೊಡುತ್ತೇವೆ ಎಂದು ಸರ್ಕಾರ ವಾಗ್ದಾನ ಮಾಡಿದೆ. ಆದರೆ, ಬರ ಅಧ್ಯಯನಕ್ಕೆ ಹೋಗಿದ್ದಾಗ, ಸರ್ಕಾರದ ಸಮರ್ಪಕವಾಗಿ ವಿದ್ಯುತ್ ಪೂರೈಸುತ್ತಿಲ್ಲ ಎನ್ನುವುದು ಮನವರಿಕೆ ಆಯಿತು' ಎಂದು ದೂರಿದರು.

ಆಡಳಿತ ಮತ್ತು ವಿರೋಧ ಪಕ್ಷದ ಸದಸ್ಯರು ಜಟಾಪಟಿಗೆ ಮುಂದಾಗುತ್ತಿದ್ದಂತೆ, ಸಭಾಪತಿ ಬಸವರಾಜ ಹೊರಟ್ಟಿ, 'ಈ ವಿಷಯದ ಬಗ್ಗೆ ಅರ್ಧ ಗಂಟೆ ಚರ್ಚೆಗೆ ಅವಕಾಶ ನೀಡಲಾಗುವುದು' ಎಂದು ಭರವಸೆ ನೀಡಿದರು.

ಸುದ್ದಿ 2 ನಿಮಿಷ

ಕಲಾಪ ವೇಳೆಯಲ್ಲಿ ಸಚಿವರ ಗೈರು ಬಸವರಾಜ ಹೊರಟ್ಟಿ ಗರಂ

ವಿಧಾನ ಪರಿಷತ್: 'ಕಲಾಪ ನಡೆಯುವ ದಿನಗಳಲ್ಲಿ ಪೂರ್ವ ನಿಯೋಜಿತ ಕಾರ್ಯಕ್ರಮದಲ್ಲಿ ಸಚಿವರು ಭಾಗವಹಿಸಲು ಅವಕಾಶ ನೀಡಬಾರದು' ಎಂದು ಸಭಾನಾಯಕ ಎನ್.ಎಸ್. ಬೋಸರಾಜು ಅವರಿಗೆ ಸಭಾಪತಿ ಬಸವರಾಜ ಹೊರಟ್ಟಿ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಪ್ರಶ್ನೋತ್ತರ ಕಲಾಪದ ವೇಳೆ ಕಾಂಗ್ರೆಸ್ಸಿನ ಎಂ.ಎಲ್. ಅನಿಲ್‌ಕುಮಾರ್ ಅವರು ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ್ ಪಾಟೀಲ್ ಅವರಿಗೆ ಕೇಳಿದ ಪ್ರಶ್ನೆಗೆ ಸಚಿವರ ಪರವಾಗಿ ಬೋಸರಾಜು ಉತ್ತರಿಸಲು ಮುಂದಾದರು.

ಈ ವೇಳೆ ಅಸಮಾಧಾನಗೊಂಡ ಸಭಾಪತಿ, 'ಕಲಾಪ ನಡೆಯುವ ವೇಳೆ ಸಂಬಂಧಪಟ್ಟ ಇಲಾಖೆಗಳ ಸಚಿವರು ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕು. ಪ್ರತಿಯೊಂದಕ್ಕೂ ಸಭಾನಾಯಕರು ಉತ್ತರಿಸುವ ಪರಿಸ್ಥಿತಿ ಬರಬಾರದು' ಎಂದು ಸಲಹೆ ಮಾಡಿದರು.

ಸಭಾಪತಿ ಮಾತಿಗೆ ದನಿಗೂಡಿಸಿದ ಬಿಜೆಪಿ ಸದಸ್ಯರು, ಸಂಬಂಧಪಟ್ಟ 'ಇಲಾಖೆ ಸಚಿವರು ಸದನದಲ್ಲಿ ಹಾಜರಿರದಿದ್ದರೆ ಚರ್ಚೆ ನಡೆಯುವುದು ಹೇಗೆ? ಕಲಾಪ ನಡೆಯುತ್ತಿರುವ ವೇಳೆ ಸಚಿವರು ತೆಲಂಗಾಣಕ್ಕೆ ಹೋಗಿದ್ದಾರೆ. ಇದು ಸರಿಯೇ?' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಹಾಗಾದರೆ ನೀವು ಬೇರೆ ಸಂದರ್ಭಗಳಲ್ಲಿ ಇದನ್ನೇ ಮಾಡಿರಲಿಲ್ಲವೇ' ಎಂದು ಕಾಂಗ್ರೆಸ್ಸಿನ ಯು.ಬಿ. ವೆಂಕಟೇಶ್ ತಿರುಗೇಟು ನೀಡಿದರು. ಆಗ ಬೋಸರಾಜು 'ಸಚಿವರು ಬರುತ್ತಿದ್ದಾರೆ. ದಾರಿಯಲ್ಲಿದ್ದಾರೆ' ಎಂದು ಹೇಳಿ ಗೊಂದಲಕ್ಕೆ ತೆರೆ ಎಳೆದರು



ಕುಡಿಯುವ ನೀರು, ಮೇವು ವ್ಯವಸ್ಥೆಗೆ ಜಿಲ್ಲಾಡಳಿತಕ್ಕೆ ಸುತ್ತೋಲೆ

ಬೆಳಗಾವಿ: ರಾಜ್ಯದ ಬರ ಪೀಡಿತ 223 ತಾಲ್ಲೂಕುಗಳಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀರು ಮತ್ತು ಜಾನುವಾರುಗಳಿಗೆ ಕುಡಿಯುವ ನೀರು ಹಾಗೂ ಮೇವು ಒದಗಿಸಲು ಕೈಗೊಳ್ಳಬೇಕಾದ ಕ್ರಮದ ಕುರಿತು ರಾಜ್ಯ ಸರ್ಕಾರ ಸುತ್ತೋಲೆ ಹೊರಡಿಸಿದೆ.

- ಜನ ಮತ್ತು ಜಾನುವಾರುಗಳಿಗೆ ಕುಡಿಯುವ ನೀರು ಅಭಾವ ಇರುವ ಗ್ರಾಮಗಳ ಪಟ್ಟಿಯನ್ನು ತಾಲ್ಲೂಕುವಾರು ತಕ್ಷಣವೇ ಸಿದ್ಧಪಡಿಸಬೇಕು.
- ಗ್ರಾಮಗಳಲ್ಲಿ ಪರ್ಯಾಯವಾಗಿ ಹತ್ತಿರದಲ್ಲಿರುವ ಹೆಚ್ಚು ನೀರು ಲಭ್ಯತೆ ಇರುವ ಕೊಳವೆ ಬಾವಿಗಳನ್ನು ಗುರುತಿಸಿ, ಅವಶ್ಯಕ್ಕೆ ಅನುಗುಣವಾಗಿ ನಿಯಮಾನುಸಾರ ಕರಾರು ಒಪ್ಪಂದ ಮಾಡಿಕೊಳ್ಳಬೇಕು. ಅಲ್ಲಿಂದ ನೀರು ಸರಬರಾಜು ಮಾಡಲು ಕ್ರಮ ತೆಗೆದುಕೊಳ್ಳಬೇಕು.
- ಗುಡ್ಡಗಾಡು ಪ್ರದೇಶಗಳು ಅಥವಾ ಅಂತರ್ಜಲ ಮೂಲ ಇಲ್ಲದ ಗ್ರಾಮಗಳಲ್ಲಿ ಕುಡಿಯುವ ನೀರಿನ ಅಭಾವ ಇದ್ದಲ್ಲಿ ಮಾತ್ರ ಶುದ್ಧ ನೀರನ್ನು ಟ್ಯಾಂಕರ್ ಮೂಲಕ ಪೂರೈಕೆ ಮಾಡಬೇಕು.
- ಹಾನಿಗೊಳಗಾದ ಕೊಳವೆ ಬಾವಿಗಳ ದುರಸ್ತಿಗಾಗಿ ವಾಸ್ತವಿಕ ವೆಚ್ಚ ಅಥವಾ ₹2 ಲಕ್ಷ ಮಿತಿಗೆ ಒಳಪಟ್ಟು ದುರಸ್ತಿಗೆ ಕ್ರಮ ಕೈಗೊಳ್ಳಬೇಕು.
- ಮೇವು ಅಭಾವ ಉಂಟಾಗಬಹುದಾದ ಗ್ರಾಮಗಳನ್ನು ಗುರುತಿಸಿ ಪಟ್ಟಿ ಮಾಡಬೇಕು, ಗೋಶಾಲೆ ಮತ್ತು ಮೇವಿನ ಬ್ಯಾಂಕ್ ನಿರ್ವಹಣೆ ಮಾಡಬೇಕು. ಹತ್ತಿರದ ಗ್ರಾಮಗಳು ಮತ್ತು ತಾಲ್ಲೂಕುಗಳಲ್ಲಿ ಮೇವಿನ ಮೂಲ ಗುರುತಿಸಬೇಕು ಮತ್ತು ನೀರಿನ ಮೂಲ ಇದ್ದಲ್ಲಿ ಹಸಿರು ಮೇವು ಬೆಳೆಯಬೇಕು.
- ಜಿಲ್ಲಾಧಿಕಾರಿಗಳು ತಮ್ಮ ಪಿಡಿ ಖಾತೆಯಲ್ಲಿ ಹಾಗೂ ತಹಶೀಲ್ದಾರರು ತಮ್ಮ ಪಿಡಿ ಖಾತೆಯಲ್ಲಿ ಎಷ್ಟು ಹಣ ಲಭ್ಯ ಇದೆ ಎಂಬುದನ್ನು ಜಾಲತಾಣದ ಮೂಲಕ ಪ್ರಕಟಿಸಬೇಕು.

ಆಸನಕ್ಕೆ ಹುಡುಕಾಡಿದ ವಿಶ್ವನಾಥ್!

ವಿಧಾನ ಪರಿಷತ್: ಸದನ ಕಲಾಪ ಆರಂಭವಾಗುತ್ತಿದ್ದಂತೆ ಆಡಳಿತ ಪಕ್ಷದ ಸದಸ್ಯರ ಪ್ರವೇಶ ದ್ವಾರದ ಮೂಲಕ ಪರಿಷತ್ ಸಭಾಂಗಣ ಪ್ರವೇಶಿಸಿದ ಸದಸ್ಯ ಎಚ್. ವಿಶ್ವನಾಥ್ ಅವರು ತಮ್ಮ ಆಸನಕ್ಕಾಗಿ ತಡಕಾಡಿದ ಪ್ರಸಂಗ ನಡೆಯಿತು!

ಆಡಳಿತ ಪಕ್ಷದ ಸದಸ್ಯರು ಕುಳಿತಿದ್ದ ಸಾಲಿನಲ್ಲಿ ತಮ್ಮ ಹೆಸರಿರುವ ಆಸನವನ್ನು ವಿಶ್ವನಾಥ್ ಹುಡುಕುತ್ತಿದ್ದುದನ್ನು ಕಂಡ ಇತ್ತ ವಿರೋಧ ಪಕ್ಷದ ಸಾಲಿನಲ್ಲಿ ಆಸೀನರಾಗಿದ್ದ ಬಿಜೆಪಿಯ ತೇಜಸ್ವಿನಿಗೌಡ ಮತ್ತು ರಘುನಾಥ ರಾವ್ ಮಲ್ಕಾಪುರೆ ಅವರು ನಸುನಗುತ್ತಲೇ ಕೈ ಸನ್ನೆ ಮಾಡಿ ವಿಶ್ವನಾಥ್ ಅವರನ್ನು 'ಇಲ್ಲಿದೆ ನಿಮ್ಮ ಆಸನ' ಎಂದು ಕರೆದರು!

'ಪೋಡಿ ಮುಕ್ತ ಗ್ರಾಮಕ್ಕೆ ಹೊಸ ಸ್ವರೂಪ'

ಪ್ರಜಾವಾಣಿ ವಾರ್ತೆ

ವಿಧಾನಸಭೆ: 'ಪೋಡಿ ಮುಕ್ತ ಗ್ರಾಮ ಅಭಿಯಾನಕ್ಕೆ ಹೊಸ ಸ್ವರೂಪ ಮಾಡಲಾಗುವುದು. ಅರ್ಜಿ ಸಲ್ಲಿಸದಿದ್ದರೂ ಗ್ರಾಮದ ಎಲ್ಲ ಆಸ್ತಿಗಳ ಭೂಮಾಪನ ಪೂರ್ಣಗೊಳಿಸಿ, ಪೋಡಿ ಮಾಡುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗುವುದು' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಬಿಜೆಪಿಯ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, '2015ರಲ್ಲಿ ನಮ್ಮದೇ (ಕಾಂಗ್ರೆಸ್) ಸರ್ಕಾರ ಇದ್ದಾಗ ಪೋಡಿ ಮುಕ್ತ ಗ್ರಾಮ ಅಭಿಯಾನ ಆರಂಭಿಸಲಾಗಿತ್ತು. 16,630 ಗ್ರಾಮಗಳನ್ನು ಈ ಅಭಿಯಾನಕ್ಕೆ ಆಯ್ಕೆ ಮಾಡಲಾಗಿತ್ತು. ಅಷ್ಟೂ ಗ್ರಾಮಗಳಲ್ಲಿ ಜಮೀನುಗಳ ಅಳತೆ ಪೂರ್ಣಗೊಂಡಿದೆ. 16,266 ಗ್ರಾಮಗಳಲ್ಲಿ ಪಹಣಿಗಳ ದುರಸ್ತಿ ಪೂರ್ಣಗೊಂಡಿದೆ. 20.90 ಲಕ್ಷ ಪಹಣಿಗಳನ್ನು ಸೃಜಿಸಲಾಗಿದೆ' ಎಂದು ಹೇಳಿದರು.

ಪೋಡಿ ಮುಕ್ತ ಗ್ರಾಮ ಅಭಿಯಾನದ ಅಡಿಯಲ್ಲಿ ಗ್ರಾಮದ ಎಲ್ಲ ಆಸ್ತಿಗಳ ಅಳತೆ, ಪಹಣಿ ಸೃಜನೆ ಆಗಬೇಕು. ಆದರೆ, ಅಧಿಕಾರಿಗಳು ಅರ್ಜಿ ಸಲ್ಲಿಸದವರ ಸ್ವತ್ತುಗಳ ಅಳತೆ ಮತ್ತು ಪೋಡಿ ಪೂರ್ಣಗೊಳಿಸುತ್ತಿಲ್ಲ. ಸ್ವಯಂಪ್ರೇರಿತವಾಗಿ ಎಲ್ಲ ಆಸ್ತಿಗಳನ್ನೂ ಅಳತೆ ಮಾಡಿ, ಪೋಡಿ ಪೂರ್ಣಗೊಳಿಸುವುದನ್ನು ಕಡ್ಡಾಯ ಮಾಡಲಾಗುವುದು ಎಂದು ತಿಳಿಸಿದರು.

ರಾಜ್ಯದಲ್ಲಿ ಭೂಮಾಪಕರ ಕೊರತೆ ಇದೆ. 1,800 ಪರವಾನಗಿ ಹೊಂದಿದ ಭೂಮಾಪಕರ ಸೇವೆ ಬಳಸಿಕೊಳ್ಳಲು ಅನುಮತಿ ನೀಡಲಾಗಿದೆ. 364 ಭೂಮಾಪಕರು ಮತ್ತು 27 ಭೂ ದಾಖಲೆಗಳ ಸಹಾಯಕ ನಿರ್ದೇಶಕರನ್ನು ನೇಮಕ ಮಾಡಿಕೊಳ್ಳಲಾಗಿದೆ. ಭೂಮಾಪನ ಮತ್ತು ಪೋಡಿ ಪ್ರಕ್ರಿಯೆಯಲ್ಲಿನ ಸಮಸ್ಯೆಗಳ ಪರಿಹಾರಕ್ಕೆ ಎಲ್ಲ ರೀತಿಯ ಪ್ರಯತ್ನಗಳನ್ನೂ ಸರ್ಕಾರ ಮಾಡಲಿದೆ ಎಂದರು. 'ಪೋಡಿ ಮುಕ್ತ ಗ್ರಾಮ ಅಭಿಯಾನ ಸಮರ್ಪಕವಾಗಿ ಅನುಷ್ಠಾನಗೊಳ್ಳುತ್ತಿಲ್ಲ. ರೈತರಿಗೆ ಅನ್ಯಾಯವಾಗುತ್ತಿದೆ. ಪ್ರಭಾವ ಉಳ್ಳವರ ಅರ್ಜಿಗಳು ಬೇಗ ವಿಲೇವಾರಿಯಾಗುತ್ತಿವೆ' ಎಂದು ಅಶ್ವತ್ಥ ನಾರಾಯಣ ದೂರಿದರು.

ಬರ: ನಿಲುವಳಿ ಸೂಚನೆ ಮಂಡನೆಗೆ ಸಜ್ಜಾದ ವಿಪಕ್ಷ

ವಿಧಾನಸಭೆ: ಬರ ನಿರ್ವಹಣೆಗೆ ಸಂಬಂಧಿಸಿದಂತೆ ಜೆಡಿಎಸ್ ಜತೆಯಾಗಿ ನಿಲುವಳಿ ಸೂಚನೆ ಮಂಡಿಸಲು ಸಜ್ಜಾಗಿರುವ ಬಿಜೆಪಿ, ಪ್ರಾಸ್ತಾವಿಕ ಚರ್ಚೆಗೆ ಸೋಮವಾರವೇ ಅವಕಾಶ ನೀಡುವಂತೆ ಆಗ್ರಹಿಸಿತು.

ಪ್ರಶ್ನೋತ್ತರ ಕಲಾಪಕ್ಕೂ ಮುನ್ನವೇ ನಿಲುವಳಿ ಸೂಚನೆ ಮಂಡನೆ ಮೇಲಿನ ಪ್ರಾಸ್ತಾವಿಕ ಚರ್ಚೆಗೆ ಅವಕಾಶ ನೀಡುವಂತೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಆಗ್ರಹಿಸಿದರು. ಪ್ರಶ್ನೋತ್ತರ ಕಲಾಪ ಮತ್ತು ಶೂನ್ಯವೇಳೆಗೂ ಮುನ್ನ ಚರ್ಚೆಗೆ ಅವಕಾಶ ನೀಡಲಾಗದು ಎಂದು ಸಭಾಧ್ಯಕ್ಷ ಯು.ಟಿ. ಖಾದರ್ ಹೇಳಿದರು. 'ಚರ್ಚೆಗೆ ಸರ್ಕಾರವೇ ಆತುರದಲ್ಲಿದೆ. ಪ್ರಶ್ನೋತ್ತರದ ಬಳಿಕ ಅವಕಾಶ ನೀಡಲಾಗುವುದು. ವಿರೋಧ ಪಕ್ಷದವರ ಮಾತನ್ನು ಆಲಿಸೋಣ ಎಂದು ಮುಖ್ಯಮಂತ್ರಿಯವರೂ ಹೇಳಿದ್ದಾರೆ' ಎಂದು ಕಾನೂನು ಸಚಿವ ಎಚ್.ಕೆ. ಪಾಟೀಲ ಬಿಜೆಪಿಯವರಿಗೆ ಪ್ರತಿಕ್ರಿಯಿಸಿದರು.

ಮಧ್ಯ ಪ್ರವೇಶಿಸಿದ ಕಂದಾಯ ಸಚಿವ ಕೃಷ್ಣಬೈರೇಗೌಡ, 'ನಾವೇ ಸ್ವಯಂಪ್ರೇರಿತವಾಗಿ ಹೇಳಿಕೆ ನೀಡಲು ತೀರ್ಮಾನಿಸಿದ್ದೆವು. ನಿಯಮಾವಳಿ ಪ್ರಕಾರ ಚರ್ಚೆಗೆ ಅವಕಾಶ ನೀಡಲಾಗುವುದು' ಎಂದರು.

ಸಿದ್ದರಾಮಯ್ಯ ಅವರು ವಿರೋಧ ಪಕ್ಷದ ನಾಯಕರಾಗಿದ್ದ ಅವಧಿಯಲ್ಲಿ ಬೇರೆ ಕಲಾಪ ಬದಿಗೊತ್ತಿ ನಿಲುವಳಿ ಸೂಚನೆ ಮಂಡಿಸಲು ಅವಕಾಶ ನೀಡುವಂತೆ ಕೋರಿದ್ದ ಉದಾಹರಣೆ ಇದೆ. ಈಗ ಏಕೆ ವಿರೋಧ ಎಂದು ಅಶೋಕ ಕೇಳಿದರು.

ಚರ್ಚೆಗೆ ಅವಕಾಶ ಕಲ್ಪಿಸುವುದಾಗಿ ವಿರೋಧ ಪಕ್ಷಗಳ ಸದಸ್ಯರನ್ನು ಸಮಾಧಾನಪಡಿಸಿದ ಸಭಾಧ್ಯಕ್ಷರು, ಪ್ರಶ್ನೋತ್ತರ ಕಲಾಪ ಆರಂಭಿಸಿದರು.

ಪರಿಷತ್‌ನಲ್ಲೂ ಪ್ರಸ್ತಾಪ: ಇದೇ ವಿಷಯದ ಕುರಿತು ವಿಧಾನ ಪರಿಷತ್‌ನಲ್ಲೂ ನಿಲುವಳಿ ಸೂಚನೆ ಮಂಡನೆಗೆ ಅವಕಾಶ ನೀಡುವಂತೆ ಬಿಜೆಪಿ ಆಗ್ರಹಿಸಿತು.

ಬಿಜೆಪಿಯ ಕೋಟ ಶ್ರೀನಿವಾಸ ಪೂಜಾರಿ ವಿಷಯ ಪ್ರಸ್ತಾಪಿಸಿದರು. ಅದನ್ನು ವಿರೋಧಿಸಿದ ಕಾಂಗ್ರೆಸ್ ಸದಸ್ಯರು, 'ಕೇಂದ್ರ ಸರ್ಕಾರ ಬರ ಪರಿಹಾರಕ್ಕೆ ಹಣ ಬಿಡುಗಡೆ ಮಾಡಿಲ್ಲ' ಎಂದು ತಿರುಗೇಟು ನೀಡಿದರು. 'ಸರ್ಕಾರ ಪ್ರತಿ ರೈತನಿಗೆ ₹10 ಸಾವಿರ ಮೊದಲು ನೀಡಲಿ. ಆ ಬಳಿಕ, ಕೇಂದ್ರಕ್ಕೆ ಕರೆದೊಯ್ಯುವ ನಿಯೋಗದಲ್ಲಿ ನಾವು ಬರುತ್ತೇವೆ' ಎಂದು ಕೋಟ ಹೇಳಿದರು.

ಸದನದಲ್ಲೇ ಪಕ್ಷಕ್ಕೆ ಕುಟುಕಿದ ಶಾಸಕ ಯತ್ನಾಳ!

ಪ್ರಜಾವಾಣಿ ವಾರ್ತೆ

ವಿಧಾನಸಭೆ: ವಿಧಾನಸಭೆ ವಿರೋಧ ಪಕ್ಷದ ನಾಯಕನ ಆಯ್ಕೆ ಮತ್ತು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರ ನೇಮಕದ ಬಳಿಕ ಮುನಿಸಿಕೊಂಡಿರುವ ಬಸನಗೌಡ ಪಾಟೀಲ ಯತ್ನಾಳ, ವಿಧಾನಮಂಡಲ ಅಧಿವೇಶನದ ಮೊದಲ ದಿನವೇ ಸದನದಲ್ಲಿ ಹಲವು ಬಾರಿ ತಮ್ಮದೇ ಪಕ್ಷವನ್ನು ಕುಟುಕಿದರು.

ಆರ್. ಅಶೋಕ ವಿರೋಧ ಪಕ್ಷದ ನಾಯಕರಾಗಿ ಆಯ್ಕೆಯಾಗಿದ್ದಾರೆ ಎಂದು ಪ್ರಕಟಿಸಿದ ಸಭಾಧ್ಯಕ್ಷ ಯು.ಟಿ. ಖಾದರ್, ಅಭಿನಂದಿಸಲು ಅವಕಾಶ ನೀಡಿದರು. ಆಡಳಿತ ಮತ್ತು ವಿರೋಧ ಪಕ್ಷಗಳ ಹಲವರು ಅಶೋಕ ಅವರನ್ನು ಅಭಿನಂದಿಸಿ ಮಾತನಾಡಿದರು. ಮಾತನಾಡುವಂತೆ ಯತ್ನಾಳ ಅವರ ಹೆಸರನ್ನು ಸ್ಪೀಕರ್ ಕರೆದರು. ಮಾತನಾಡುವುದಿಲ್ಲ ಎಂದು ಕೈ ಸನ್ನೆ ಮಾಡಿದ ಅವರು, ಸುಮ್ಮನೆ ಕುಳಿತು ತಮ್ಮ ವಿರೋಧವನ್ನು ಹೊರಹಾಕಿದರು.

'ಚುನಾವಣೆ ಬಳಿಕ ಇಬ್ಬರೂ ಬದಲು'

'ವಿಧಾನಸಭೆ ವಿರೋಧ ಪಕ್ಷದ ನಾಯಕ ಮತ್ತು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಇಬ್ಬರೂ ಲೋಕಸಭಾ ಚುನಾವಣೆಯ ಬಳಿಕ ಬದಲಾಗಲಿದ್ದಾರೆ. ಚುನಾವಣೆವರೆಗಷ್ಟೇ ಅವರ ಅವಧಿ' ಎಂದು ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಅಭಿನಂದನೆಯ ಬಳಿಕ ಬರ ಪರಿಸ್ಥಿತಿ ಕುರಿತು ನಿಲುವಳಿ ಸೂಚನೆ ಮಂಡಿಸಲು ಅವಕಾಶ ನೀಡುವಂತೆ ಅಶೋಕ ಆಗ್ರಹಿಸಿದರು. ಪ್ರಶ್ನೋತ್ತರ ಮತ್ತು ಶೂನ್ಯವೇಳೆಯ ಬಳಿಕವೇ ಅವಕಾಶ ನೀಡುವುದಾಗಿ ಸಭಾಧ್ಯಕ್ಷರು ಹೇಳಿದರು. ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರೂ ಪ್ರಶ್ನೋತ್ತರ ಮತ್ತು ಶೂನ್ಯವೇಳೆಯ ಬಳಿಕವೇ ಚರ್ಚೆಗೆ ಅವಕಾಶ ನೀಡುವಂತೆ ಆಗ್ರಹಿಸಿದರು.

ಆಗ ಮಧ್ಯ ಪ್ರವೇಶಿಸಿದ ಯತ್ನಾಳ, 'ಪ್ರಶ್ನೋತ್ತರ ಕಲಾಪ ಪ್ರತಿಯೊಬ್ಬ ಶಾಸಕರ ಹಕ್ಕು. ಅದಕ್ಕೇ ಆದ್ಯತೆ ಸಿಗಲಿ' ಎನ್ನುವ ಮೂಲಕ ಪಕ್ಷದ ವಿರುದ್ಧದ ನಿಲುವು ಪ್ರದರ್ಶಿಸಿದರು.

ಉತ್ತರ ಕರ್ನಾಟಕದ ಸಮಸ್ಯೆಗಳ ಕುರಿತು ಬುಧವಾರದಿಂದ ಎರಡು ದಿನ ಚರ್ಚೆಗೆ ಅವಕಾಶ ನೀಡಲಾಗುವುದು ಎಂದು ಖಾದರ್ ಪ್ರಕಟಿಸಿದರು. ಆಗಲೂ ಎದ್ದುನಿಂತ ಯತ್ನಾಳ, 'ಸಭಾಧ್ಯಕ್ಷರೇ ಉತ್ತರ ಕರ್ನಾಟಕದ ಕುರಿತ ಚರ್ಚೆಗೆ ಅವಕಾಶ ಕಲ್ಪಿಸುತ್ತಿರುವುದಕ್ಕೆ ಧನ್ಯವಾದ. ರಾಜಕೀಯ ನಾಯಕತ್ವವೂ ಸೇರಿದಂತೆ ಉತ್ತರ ಕರ್ನಾಟಕಕ್ಕೆ ಆಗುತ್ತಿರುವ ಎಲ್ಲ ಅನ್ಯಾಯಗಳ ಬಗ್ಗೆಯೂ ಚರ್ಚೆಯಾಗಲಿ' ಎಂದರು.

ಶಾಸಕಾಂಗ ಸಭೆಗೆ ಗೈರು: ಕಲಾಪಕ್ಕೆ ಹಾಜರಾಗುವ ಮುನ್ನ ಸುದ್ದಿಗಾರರ ಜತೆ ಮಾತನಾಡಿದ ಯತ್ನಾಳ, 'ಪಕ್ಷದಲ್ಲಿ ಉತ್ತರ ಕರ್ನಾಟಕಕ್ಕೆ ಪ್ರಾತಿನಿಧ್ಯ ಕೊಡುವವರೆಗೂ ನಾನು ಶಾಸಕಾಂಗ ಪಕ್ಷದ ಸಭೆಯಲ್ಲಿ ಭಾಗವಹಿಸುವುದಿಲ್ಲ' ಎಂದು ಹೇಳಿದರು.

'ಅನುಕೂಲಸ್ಥರಿಗೆ ಅಧ್ಯಕ್ಷ ಮತ್ತು ವಿರೋಧ ಪಕ್ಷದ ನಾಯಕ ಸ್ಥಾನಗಳನ್ನು ನೀಡಲಾಗಿದೆ. ರಾಜ್ಯದ ಜನರ ದೃಷ್ಟಿಯಲ್ಲಿ ಎರಡೂ ಹುದ್ದೆಗಳಿಗೂ ನಾನು ಅರ್ಹನಿದ್ದೇನೆ. ಉತ್ತರ ಕರ್ನಾಟಕ ಭಾಗಕ್ಕೆ ಈ ಹುದ್ದೆಗಳು ಸಿಗಬೇಕು. ಎರಡೂ ಹುದ್ದೆಗಳನ್ನು ಹಳೇ ಮೈಸೂರು ಭಾಗಕ್ಕೆ ನೀಡಲಾಗಿದೆ. ನಾವು ಉತ್ತರ ಕರ್ನಾಟಕದವರು ಗಂಟೆ ಹೊಡೆಯಬೇಕಾ. ನಮಗೆ ನ್ಯಾಯ ಸಿಗುವವರೆಗೆ ಯಾವುದೇ ಹೋರಾಟಕ್ಕೂ ಸಿದ್ಧ' ಎಂದರು.

ಪಂಚರಾಜ್ಯಗಳ ಚುನಾವಣೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ನಾಯಕತ್ವ ಒಪ್ಪಿ ಜನರು ಮತ ಹಾಕಿದ್ದಾರೆ. ದೇಶಕ್ಕೆ ಮೋದಿ ಒಬ್ಬರೇ ಗ್ಯಾರಂಟಿ. ತೆಲಂಗಾಣದಲ್ಲಿ ಕುಟುಂಬ ರಾಜಕಾರಣವನ್ನು ಕಿತ್ತು ಹಾಕಿದ್ದಾರೆ. ಮುಂದಿನ ದಿನಗಳಲ್ಲಿ ಇಡೀ ದೇಶದಲ್ಲಿ ಕುಟುಂಬ ರಾಜಕಾರಣ ಕೊನೆಗೊಳ್ಳಲಿದೆ. ವಂಶ ರಾಜಕಾರಣ ಮುಕ್ತಿ ಮಾಡುವುದೇ ತಮ್ಮ ಗುರಿ ಎಂದು ಹೇಳಿದರು.

ಕಣ್ಗಾವಲು
ವಿಧಾನಮಂಡಲ ಚಳಿಗಾಲದ ಅಧಿವೇಶನ ನಡೆಯುತ್ತಿರುವ ಬೆಳಗಾವಿಯ ಸುವರ್ಣ ವಿಧಾನಸೌಧದ ಕಟ್ಟಡದಲ್ಲಿ ಭದ್ರತೆಗೆ ಪೊಲೀಸರನ್ನು ನಿಯೋಜಿಸಲಾಗಿತ್ತು
ಪ್ರಜಾವಾಣಿ ಚಿತ್ರ: ಪ್ರಶಾಂತ ಎಚ್.ಜಿ

ಬರ: ₹10,000 ಕೋಟಿ ಬಿಡುಗಡೆಗೆ ಆಗ್ರಹ

'ಬರ ಪರಿಸ್ಥಿತಿಯ ವಿಷಯ ಬಂದಾಗಲೆಲ್ಲ ಕೇಂದ್ರ ಸರ್ಕಾರವನ್ನು ದೂರುವ ಬದಲು ರಾಜ್ಯ ಸರ್ಕಾರ ತಕ್ಷಣದ ಪರಿಹಾರವಾಗಿ ₹10 ಸಾವಿರ ಕೋಟಿ ಬಿಡುಗಡೆ ಮಾಡಬೇಕು. ನಾವು ಕೊಟ್ಟಿದ್ದೇವೆ ನೀವು ಕೊಡಿ ಎಂದು ನಂತರ ಕೇಂದ್ರ ಸರ್ಕಾರಕ್ಕೆ ಮನವಿ ಮಾಡೋಣ' ಎಂದು ಬಿಜೆಪಿಯ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.

ಬರ ನಿರ್ವಹಣೆ ಮಾಡಲು ಸಾಧ್ಯವಾಗದಿದ್ದರೆ ಮುಖ್ಯಮಂತ್ರಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂಬ ಅವರ ಮಾತು ಆಡಳಿತ ಪಕ್ಷದ ಸದಸ್ಯರನ್ನು ಕೆರಳಿಸಿತು. ಮಾತಿನ ಚಕಮಕಿಗೆ ದಾರಿಮಾಡಿಕೊಟ್ಟಿತು. ಬರದ ವಿಷಯವನ್ನು ನಾಳೆಗೆ ಮುಂದುವರಿಸೋಣ ಎಂದು ಸಭಾಪತಿ ಹೊರಟ್ಟಿ ಚರ್ಚೆಗೆ ತೆರೆ ಎಳೆದರು.

ಪರಿಷತ್: ಚಳಿಗಾಲದ ಅಧಿವೇಶನಕ್ಕೂ ವಿಪಕ್ಷ ನಾಯಕ ಇಲ್ಲ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಈ ಅಧಿವೇಶನದಲ್ಲೂ ವಿಧಾನಪರಿಷತ್ ಕಲಾಪ ಅಧಿಕೃತ ವಿರೋಧ ಪಕ್ಷದ ನಾಯಕ ನಿಲ್ಲದೆಯೇ ನಡೆಯುವ ಸಾಧ್ಯತೆ ಇದೆ.

ವಿಧಾನಸಭೆಯ ವಿರೋಧ ಪಕ್ಷದ ನಾಯಕನಾಗಿ ಆರ್. ಅಶೋಕ ಅವರನ್ನು ಆಯ್ಕೆ ಮಾಡಿದಾಗಲೇ, ಪರಿಷತ್ತಿಗೂ ಆಯ್ಕೆಯಾಗಲಿದೆ ಎಂದು ಹೇಳಲಾಗಿತ್ತು. ಬೆಳಗಾವಿ ಅಧಿವೇಶನದ ಎರಡು ದಿನ ಮೊದಲು ಪಕ್ಷದ ವರಿಷ್ಠರು ಹೆಸರು ಸೂಚಿಸಬಹುದು ಎನ್ನಲಾಗಿತ್ತು.

ಬಿಜೆಪಿ ರಾಜ್ಯ ನಾಯಕರು ಮೂವರ ಹೆಸರುಗಳನ್ನು ದೆಹಲಿಗೆ ಕಳುಹಿಸಿದ್ದು, ಯಾವುದಕ್ಕೂ ವರಿಷ್ಠರು ಒಪ್ಪಿಗೆ ನೀಡಿಲ್ಲ. ಈ ಬಾರಿಯೂ ಆಯ್ಕೆ ಆಗುವ ಸಾಧ್ಯತೆ ಇಲ್ಲ ಎಂದು ಬಿಜೆಪಿಯ ನಾಯಕರೊಬ್ಬರು ತಿಳಿಸಿದ್ದಾರೆ.

ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಸೋತ ಬಳಿಕ ರಾಜ್ಯ ಬಿಜೆಪಿ ನಾಯಕರ ಬಗ್ಗೆ ಮುನಿಸಿಕೊಂಡಿದ್ದ ವರಿಷ್ಠರು ರಾಜ್ಯ ಘಟಕದ ಅಧ್ಯಕ್ಷ ಸ್ಥಾನ, ವಿಧಾನಸಭೆ ವಿರೋಧಪಕ್ಷದ ಸ್ಥಾನವನ್ನು ಆರು ತಿಂಗಳಾದರೂ ಆಯ್ಕೆ ಮಾಡಿರಲಿಲ್ಲ. ಇದು ಆಡಳಿತಾರೂಢ ಕಾಂಗ್ರೆಸ್‌ನಿಂದ ಟೀಕೆಗೂ ಒಳಗಾಗಿತ್ತು. ನವೆಂಬರ್‌ನಲ್ಲಿ ಅಧ್ಯಕ್ಷರ ನೇಮಕ ಮತ್ತು ವಿಪಕ್ಷ ನಾಯಕರ ಆಯ್ಕೆ ನಡೆಯಿತು. ಇದರ ಬೆನ್ನಲ್ಲೇ ವಿಧಾನಪರಿಷತ್ತಿನ ವಿರೋಧ ಪಕ್ಷದ ನಾಯಕ, ಎರಡೂ ಸದನಗಳ ಉಪನಾಯಕ ಮತ್ತು ಸಚೇತಕರ ಸ್ಥಾನಕ್ಕೂ ಆಯ್ಕೆ ಆಗಬಹುದು ಎಂಬ ನಿರೀಕ್ಷೆ ಇತ್ತು. ವಿಧಾನಪರಿಷತ್ತಿನಲ್ಲಿ ಬಿಜೆಪಿ 34 ಸದಸ್ಯ ಬಲವನ್ನು ಹೊಂದಿದೆ. ವಿರೋಧಪಕ್ಷದ ನಾಯಕನ ಸ್ಥಾನಕ್ಕೆ ಕೋಟ ಶ್ರೀನಿವಾಸಪೂಜಾರಿ, ಶಶೀಲ್ ನಮೋಶಿ, ರಘುನಾಥರಾವ್ ಮಲ್ಕಾಪುರೆ ಹೆಸರುಗಳನ್ನು ಸೂಚಿಸಿ ಕಳುಹಿಸಲಾಗಿತ್ತು ಎಂದು ಮೂಲಗಳು ಹೇಳಿವೆ.

ವಿಪಕ್ಷ ಉಪ ನಾಯಕ ಸ್ಥಾನಕ್ಕೆ ಬೆಲ್ಲದ?

ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸ್ಥಾನಕ್ಕೆ ಅರವಿಂದ ಬೆಲ್ಲದ ಅವರನ್ನು ತರಲು ಪಕ್ಷದ ನಾಯಕರು ಯತ್ನ ಆರಂಭಿಸಿದ್ದಾರೆ.

ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹಾಗೂ ಶಾಸಕ ಬಸವರಾಜ ಬೊಮ್ಮಾಯಿ ಅವರು ಬೆಲ್ಲದ ಪರ ಲಾಬಿ ನಡೆಸಿದ್ದಾರೆ. ಬೆಲ್ಲದ ಅವರು ಪಂಚಮಸಾಲಿ ಸಮುದಾಯದವರಾಗಿದ್ದು, ಅವರ ಆಯ್ಕೆ ಮೂಲಕ, ಸಮುದಾಯಕ್ಕೂ ನ್ಯಾಯ ಕೊಟ್ಟಂತಾಗುತ್ತದೆ ಎಂಬ ವಾದ ಮುಂದಿಟ್ಟಿದ್ದಾರೆ ಎಂದು ಗೊತ್ತಾಗಿದೆ.

ಬೆಲ್ಲದ ಅವರನ್ನು ವಿರೋಧ ಪಕ್ಷದ ಮುಖ್ಯಸಚೇತಕ ಸ್ಥಾನಕ್ಕೆ ತರುವ ಬಗ್ಗೆ ವರಿಷ್ಠರು ಚಿಂತನೆ ನಡೆಸಿದ್ದಾರೆ ಎಂದು ಮೂಲಗಳು ಹೇಳಿವೆ.

'ಕುವೆಂಪು ರಾಷ್ಟ್ರೀಯ ಪುರಸ್ಕಾರಕ್ಕೆ ಆಯ್ಕೆ'

ಶೀರ್ಷೇಂದು ಮುಖ್ಯೋಪಾಧ್ಯಾಯ

ಬೆಂಗಳೂರು: ಕುಪ್ಪಳಿಯ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ ನೀಡುವ 'ಕುವೆಂಪು ರಾಷ್ಟ್ರೀಯ ಪುರಸ್ಕಾರ'ಕ್ಕೆ ಬಂಗಾಳಿ ಸಾಹಿತಿ ಶೀರ್ಷೇಂದು ಮುಖ್ಯೋಪಾಧ್ಯಾಯ ಆಯ್ಕೆಯಾಗಿದ್ದಾರೆ. ಡಿ.29ರಂದು ಪುರಸ್ಕಾರ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಪುರಸ್ಕಾರ ₹5 ಲಕ್ಷ ನಗದು, ಬೆಳ್ಳಿ ಪದಕ ಒಳಗೊಂಡಿದೆ. ಪ್ರತಿಷ್ಠಾನದ ಅಧ್ಯಕ್ಷ ಬಿ.ಎಲ್.ಶಂಕರ್ ನೇತೃತ್ವದ ಸಮಿತಿ ಈ ಆಯ್ಕೆ ಮಾಡಿದೆ. ನಿರ್ಮಲ್ ಕಾಂತಿ ಭಟ್ಟಾಚಾರ್ಯ, ಗೀತಾ ವಿಜಯಕುಮಾರ್ ಹಾಗೂ ಅಗ್ರಹಾರ ಕೃಷ್ಣಮೂರ್ತಿ ಸಮಿತಿಯಲ್ಲಿದ್ದರು.

ಶೀರ್ಷೇಂದು ಅವರು ಕಥೆ, ಕಾದಂಬರಿ, ಪ್ರವಾಸ ಕಥನ, ಮಕ್ಕಳ ಕಥೆಗಳು ಸೇರಿ 90 ಕೃತಿ ರಚಿಸಿದ್ದಾರೆ.

ಉ.ಕ, ಮೈಸೂರು ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಆಮಿಷ

ಹೆಬ್ಬಾರ್, ಸೋಮಶೇಖರ್‌ಗೆ 'ಕೈ' ಗಾಳ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಲೋಕಸಭೆಯ ವಿವಿಧ ಕ್ಷೇತ್ರಗಳಿಗೆ ಪ್ರಬಲ ಅಭ್ಯರ್ಥಿಗಳ ಹುಡುಕಾಟದಲ್ಲಿರುವ ಕಾಂಗ್ರೆಸ್ ಪಕ್ಷ ಬಿಜೆಪಿ ಶಾಸಕರಾದ ಶಿವರಾಂ ಹೆಬ್ಬಾರ್ ಮತ್ತು ಎಸ್.ಟಿ.ಸೋಮಶೇಖರ್ ಅವರಿಗೆ ಗಾಳ ಹಾಕಿದೆ.

ಇಬ್ಬರನ್ನೂ ಸಂಪರ್ಕಿಸಿರುವ ಕಾಂಗ್ರೆಸ್ ನಾಯಕರು ಮೈಸೂರಿನಿಂದ ಎಸ್.ಟಿ.ಸೋಮಶೇಖರ್ ಮತ್ತು ಉತ್ತರ ಕನ್ನಡದಿಂದ ಶಿವರಾಂ ಹೆಬ್ಬಾರ್ ಅವರನ್ನು ಕಾಂಗ್ರೆಸ್ ಅಭ್ಯರ್ಥಿಗಳಾಗಿ ಕಣಕ್ಕಿಳಿಯುವಂತೆ ಆಹ್ವಾನ ನೀಡಿದೆ.

ಆದರೆ ಬಿಜೆಪಿ ಜತೆ ಜೆಡಿಎಸ್ ಕೈಜೋಡಿಸಿರುವುದು ಮತ್ತು ಐದು ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಮೂರು ರಾಜ್ಯಗಳಲ್ಲಿ ಬಿಜೆಪಿ ಭರ್ಜರಿ ಜಯದ ಹಿನ್ನೆಲೆಯಲ್ಲಿ ಇಬ್ಬರೂ ಯಾವುದೇ ನಿರ್ಧಾರ ತೆಗೆದುಕೊಳ್ಳಲು ಹಿಂದೇಟು ಹಾಕುತ್ತಿದ್ದಾರೆ ಎಂದೂ ಮೂಲಗಳು ತಿಳಿಸಿವೆ. 'ಇಬ್ಬರಿಗೂ ಆಹ್ವಾನ ಬಂದಿರುವುದು ನಿಜ. ಆದರೆ ಯಾವುದೇ ನಿರ್ಣಯ ತೆಗೆದುಕೊಂಡಿಲ್ಲ. ತೆಗೆದುಕೊಳ್ಳುವ ಸಾಧ್ಯತೆಯೂ ಇಲ್ಲ' ಎಂದು ಅವರ ಆಪ್ತ ಮೂಲಗಳು ಹೇಳಿವೆ.

ವಿಧಾನಸಭೆ ಚುನಾವಣೆ ಬಳಿಕ ಕ್ರಮೇಣ ಇಬ್ಬರು ಶಾಸಕರು ಬಿಜೆಪಿಯಿಂದ ಅಂತರ ಕಾಯ್ದುಕೊಂಡಿದ್ದರು. 'ಬಿಜೆಪಿಗೆ ಕರೆದುಕೊಳ್ಳುವಾಗ ಜಾಮೂನು ಕೊಟ್ಟು, ಕೆಲಸ ಆದ ಮೇಲೆ ವಿಷ ಕೊಡುತ್ತಾರೆ' ಎಂದು ಎಸ್.ಟಿ.ಸೋಮಶೇಖರ್ ಹರಿಹಾಯ್ದಿದ್ದರು. ಈ ಇಬ್ಬರೂ ಕಾಂಗ್ರೆಸ್ ಸೇರುತ್ತಾರೆ ಎಂಬ ಮಾತುಗಳು ಹರಡಿತ್ತು. ಇಬ್ಬರು ರಾಜ್ಯ ಸರ್ಕಾರದ ಕಾರ್ಯಕ್ರಮಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳಲಾರಂಭಿಸಿದರು.

'ಬಿಜೆಪಿ ಮತ್ತು ಜೆಡಿಎಸ್ ಮೈತ್ರಿ ಆದ ಬಳಿಕ ಕಾಂಗ್ರೆಸ್ ಸೇರುವ ತಮ್ಮ ಅಪೇಕ್ಷೆಗೆ ಸದ್ಯದ ಮಟ್ಟಿಗೆ ಕಡಿವಾಣ ಹಾಕಿದ್ದಾರೆ. ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಮತ್ತೆ ಚುನಾವಣೆ ಎದುರಿಸುವುದು ಕಷ್ಟ. ಬಿಜೆಪಿ– ಜೆಡಿಎಸ್ ಸಂಪೂರ್ಣ ಬಲವನ್ನು ತೊಡಗಿಸಿದರೆ, ಈ ಕ್ಷೇತ್ರಗಳಲ್ಲಿ ಮತ್ತೆ ಗೆಲ್ಲುವುದು ಕಷ್ಟವಾಗುತ್ತದೆ ಮತ್ತು ಲೋಕಸಭೆ ಚುನಾವಣೆ ಸುಲಭದ ತುತ್ತಲ್ಲ ಎಂಬುದು ಅವರಿಗೆ ಮನವರಿಕೆ ಆಗಿದೆ' ಎಂದು ಪಕ್ಷದ ಮೂಲಗಳು ತಿಳಿಸಿವೆ.

'ಇವರಿಬ್ಬರಲ್ಲದೇ ಬಿಜೆಪಿಯ ವಿ.ಸೋಮಣ್ಣ ಸೇರಿ ಹಲವು ಶಾಸಕರು. ಮಾಜಿ ಶಾಸಕರನ್ನು ಕಾಂಗ್ರೆಸ್ ನಾಯಕರು ಸಂಪರ್ಕಿಸಿ ಲೋಕಸಭೆ ಚುನಾವಣೆಯಲ್ಲಿ ಕಣಕ್ಕಿಳಿಸುವ ಪ್ರಯತ್ನ ನಡೆಸಿದ್ದಾರೆ. ಅಂತಹ ಶಾಸಕರು ಮತ್ತು ಮಾಜಿ ಶಾಸಕರನ್ನು ಪಕ್ಷದಲ್ಲೇ ಉಳಿಸಿಕೊಳ್ಳಲು ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಮತ್ತು ವಿರೋಧಪಕ್ಷದ ನಾಯಕ ಆರ್.ಅಶೋಕ ಜೋಡಿ ಪ್ರಯತ್ನ ನಡೆಸುತ್ತಿದೆ' ಎಂದು ಮೂಲಗಳು ಹೇಳಿವೆ.

ಸ್ವಾಮಿನಾಥನ್‌ಗೆ 'ಭಾರತ ರತ್ನ' ನೀಡಲು ಒತ್ತಾಯ

ನವದೆಹಲಿ (ಪಿಟಿಐ): ಈಚೆಗೆ ನಿಧನರಾದ ಕೃಷಿ ವಿಜ್ಞಾನಿ ಎಂ.ಎಸ್. ಸ್ವಾಮಿನಾಥನ್ ಅವರಿಗೆ ಭಾರತ ರತ್ನ ಪ್ರಶಸ್ತಿ ನೀಡಿ ಗೌರವಿಸಬೇಕು ಎಂದು ಕಾಂಗ್ರೆಸ್ ಸಂಸದ ಕೆ. ಸುರೇಶ್ ಅವರು ಲೋಕಸಭಾ ಅಧಿವೇಶನದ ಶೂನ್ಯ ಅವಧಿಯಲ್ಲಿ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದರು.

'ಕೇಂದ್ರ ಸರ್ಕಾರವು ಸ್ವಾಮಿನಾಥನ್ ಅವರಿಗೆ ಸೂಕ್ತ ಗೌರವ ಸಲ್ಲಿಸದೇ ಅಥವಾ ಅವರ ಕೊಡುಗೆಗಳನ್ನು ಸ್ಮರಿಸದೇ ಅವರಿಗೆ ಅಗೌರವ ತೋರಿದೆ. ಕೇಂದ್ರ ಸರ್ಕಾರದ ಕಡೆಯಿಂದ ಯಾರೊಬ್ಬರೂ ಸ್ವಾಮಿನಾಥನ್ ಅವರ ಅಂತ್ಯಸಂಸ್ಕಾರದಲ್ಲಿ ಪಾಲ್ಗೊಳ್ಳಲಿಲ್ಲ' ಎಂದು ಸುರೇಶ್ ಆಕ್ಷೇಪಿಸಿದರು. ಭಾರತೀಯ ಕೃಷಿ ಸಂಶೋಧನಾ ಮಂಡಳಿಗೆ ಅವರ ಹೆಸರನ್ನೇ ಮರುನಾಮಕರಣ ಮಾಡಬೇಕು. ನೂತನ ಸಂಸತ್ ಭವನದಲ್ಲಿ ಅವರ ಪ್ರತಿಮೆ ಸ್ಥಾಪಿಸಬೇಕು ಎಂದರು.

ಸಿ.ಪಿ.ಯೋಗೇಶ್ವರ್ ಬಾವನ ಶವಪತ್ತೆ

ಪ್ರಜಾವಾಣಿ ವಾರ್ತೆ


ಮಹದೇವಯ್ಯ

ಹನೂರು (ಚಾಮರಾಜನಗರ): ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಅವರ ಬಾವ (ತಂಗಿಯ ಗಂಡ) ಮಹದೇವಯ್ಯ ಪಿ. ಅವರ ಮೃತದೇಹ ತಾಲ್ಲೂಕು ರಾಮಾಪುರದ ದೊಡ್ಡಗುಂಡು ಮುನೇಶ್ವರ ದೇವಾಲಯ ಬಳಿ ಅರಣ್ಯದಲ್ಲಿ ಸೋಮವಾರ ಪತ್ತೆಯಾಗಿದೆ.

ಡಿ.1ರ ರಾತ್ರಿ ಚನ್ನಪಟ್ಟಣ ತಾಲ್ಲೂಕಿನ ಚಕ್ಕೆರೆ ಗ್ರಾಮದ ತೋಟದ ಮನೆಯಿಂದ ಅವರ ಅಪಹರಣವಾಗಿತ್ತು. 'ಅಪಹರಣಕಾರರು ಅವರನ್ನು ಕೊಲೆ ಮಾಡಿ, ಅರಣ್ಯ ಪ್ರದೇಶದಲ್ಲಿ 50 ಅಡಿ ಆಳದಲ್ಲಿ ಮೃತದೇಹ ಇಟ್ಟು ಹೋಗಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

ಅವರ ಕಾರು ಭಾನುವಾರ ರಾತ್ರಿ ರಾಮಾಪುರದ ಪ್ರಾಥಮಿಕ ಆರೋಗ್ಯ ಕೇಂದ್ರದ ಬಳಿ ಪತ್ತೆಯಾಗಿತ್ತು. ಚನ್ನಪಟ್ಟಣದ ಪೊಲೀಸರಿಂದ ಮಾಹಿತಿ ದೊರೆತ ನಂತರ, ಕಾರು ರಸ್ತೆ ಬದಿಯಲ್ಲಿ ನಿಂತಿರುವುದು ಸ್ಥಳೀಯ ಪೊಲೀಸರ ಗಮನಕ್ಕೆ ಬಂದಿತ್ತು. ಶನಿವಾರ ಬೆಳಿಗ್ಗೆಯಿಂದಲೇ ಕಾರು ಅಲ್ಲಿ ನಿಂತಿದ್ದು, ಮೂವರು ಇಳಿದು ಹೋದ ದೃಶ್ಯಗಳು ಸುತ್ತಮುತ್ತಲಿನ ಸಿಸಿಟಿವಿ ಕ್ಯಾಮೆರಾಗಳಲ್ಲಿ ಸೆರೆಯಾಗಿವೆ. ಕಾರಿನಲ್ಲಿ ರಕ್ತದ ಕಲೆಗಳು ಕಂಡು ಬಂದಿದ್ದರಿಂದ, ಮಹದೇವಯ್ಯ ಅವರ ಕೊಲೆಯಾಗಿರಬಹುದು ಎಂದು ಶಂಕಿಸಿದ್ದರು.

ಸೋಮವಾರ ಬೆಳಿಗ್ಗೆ ಚನ್ನಪಟ್ಟಣ ಪೊಲೀಸರು, ಶ್ವಾನದಳ, ಬೆರಳಚ್ಚು ತಜ್ಞರ ನೆರವಿನಲ್ಲಿ ವಾಹನ ಪರಿಶೀಲಿಸಿದ್ದರು. ರಾಮಾಪುರದ ಸುತ್ತಮುತ್ತ ಅರಣ್ಯ ಸಿಬ್ಬಂದಿಯ ನೆರವಿನಿಂದ ಹುಡುಕಾಡಿದ್ದರು. ಮಧ್ಯಾಹ್ನದ ನಂತರ ಕಾಡಿನಲ್ಲಿ ಅರಣ್ಯ ಸಿಬ್ಬಂದಿಗೆ ಮೃತದೇಹ ಕಾಣಿಸಿತ್ತು.

'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು, 'ಕಾಡಿನಲ್ಲಿ ಶವ ಪತ್ತೆಯಾಗಿದೆ. ರಾಮಾಪುರದಲ್ಲಿ ಕಾರಿದ್ದ ಸಂಗತಿ ಭಾನುವಾರ ಸಂಜೆ ಗೊತ್ತಾಗಿತ್ತು. ಸಿಸಿಟಿವಿ ಕ್ಯಾಮೆರಾ ದೃಶ್ಯಗಳ ಪ್ರಕಾರ ಶನಿವಾರ ಬೆಳಿಗ್ಗೆಯೇ ಕಾರು ಅಲ್ಲಿಗೆ ಬಂದಿರುವುದು ಗೊತ್ತಾಗಿದೆ. ಚನ್ನಪಟ್ಟಣದ ಪೊಲೀಸರಿಗೆ ತನಿಖೆಗೆ ಎಲ್ಲ ಸಹಕಾರ ನೀಡುತ್ತಿದ್ದೇವೆ' ಎಂದರು.

ಯೋಗೇಶ್ವರ್ ಭೇಟಿ: ಬಾವನ ಕಾರು ಪತ್ತೆಯಾಗಿದ್ದು ತಿಳಿಯುತ್ತಿದ್ದಂತೆಯೇ ಸಿ.ಪಿ.ಯೋಗೇಶ್ವರ್ ರಾಮಾಪುರಕ್ಕೆ ಬಂದು ಪೊಲೀಸರಿಂದ ಮಾಹಿತಿ ಪಡೆದರು. ಅವರ ಸೋದರ ಸಿ.ಪಿ.ರಾಜೇಶ್ ಅವರೂ ಬಂದಿದ್ದರು.

'ಮಹದೇವಯ್ಯ ಅವರ ಕಾರು ನಾಲ್‌ರೋಡ್ ರಸ್ತೆ, ರಾಮಾಪುರ ವೃತ್ತದಲ್ಲಿ ಸಂಚರಿಸಿದ ದೃಶ್ಯಾವಳಿ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಶನಿವಾರ ಬೆಳಿಗ್ಗೆ ಐದು ಗಂಟೆ ಸುಮಾರಿಗೆ ಕಾರನ್ನು ಆರೋಗ್ಯ ಕೇಂದ್ರದ ಬಳಿ ನಿಲ್ಲಿಸಿ ಅದರಿಂದ ಮೂವರು ಇಳಿಯುವುದು, ನಂತರ ಬಸ್ ಹತ್ತಿ ಹೋಗುವ ದೃಶ್ಯಗಳೂ ಸಿಕ್ಕಿವೆ' ಎಂದು ಮೂಲಗಳು ತಿಳಿಸಿವೆ.

ಮಂಗಳವಾರ, ಡಿಸೆಂಬರ್ 5, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 335 | ಪುಟ 16

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಅತಿ ಕಾಳಜಿ, ಅತಿ ನಿರ್ಲಕ್ಷ್ಯಗಳೆರಡೂ ಮಗುವಿನ ಮಾನಸಿಕ ಬೆಳವಣಿಗೆಗೆ ಮಾರಕ

ಆಳ-ಅಗಲ
ಅತ್ಯಾಚಾರ: ಶಿಕ್ಷೆ ಕನಿಷ್ಠ, ಖುಲಾಸೆ ಗರಿಷ್ಠ

ಸಿ.ಎಂ ಆಯ್ಕೆ: ಮಲ್ಲಿಕಾರ್ಜುನ ಖರ್ಗೆಗೆ ಅಧಿಕಾರ 10

ನಾಟಕೀಯ ಸನ್ನಿವೇಶಗಳಿಗೆ ಕಲಾಪ ಸಾಕ್ಷಿ 7

ಸೆನ್ಸೆಕ್ಸ್	ನಿಫ್ಟಿ	₹/$
68,865 ▲	20,686 ▲	83.38 ▼



ಕಾದಾಡುತ್ತಲೇ ಜೀವ ತೆತ್ತ 'ಅರ್ಜುನ'

• ಎಂ. ಮಹೇಶ

ಮೈಸೂರು: ವಿವಿಧೆಡೆ ಹುಲಿ ಹಾಗೂ ಪುಂಡಾನೆಗಳ ಕಾರ್ಯಾಚರಣೆಯಲ್ಲಿ ಬಹು ಮುಖ್ಯ ಪಾತ್ರ ವಹಿಸುತ್ತಿದ್ದ ಸಾಕಾನೆ 'ಅರ್ಜುನ', ಇದೇ ಕಾರ್ಯದಲ್ಲಿ ತೊಡಗಿರುವಾಗಲೇ ಹೋರಾಡುತ್ತಾ ವಿರೋಚಿತ ಸಾವು ಕಂಡಿದ್ದಾನೆ. 'ಬಲಶಾಲಿ', 'ಮಾಸ್ಟರ್' ಹಾಗೂ 'ಹಿರಿಯ' ಹೀಗೆ ಇತರ ಹೆಸರುಗಳಿಂದಲೂ ಅರ್ಜುನ ಖ್ಯಾತನಾಗಿದ್ದ.

ಅರ್ಜುನನ್ನು 1968ರಲ್ಲಿ 'ಖೆಡ್ಡಾ' ವಿಧಾನದಲ್ಲಿ ಕಾಕನಕೋಟೆ ಅರಣ್ಯ ಪ್ರದೇಶದಲ್ಲಿ ಸೆರೆ ಹಿಡಿಯಲಾಗಿತ್ತು. 22 ವರ್ಷಗಳಿಂದ ನಾಡಹಬ್ಬ ಮೈಸೂರು ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುತ್ತಿದ್ದ. 2012ರಿಂದ 2019ರವರೆಗೆ, ನಾಡ ಹಬ್ಬದ ಪ್ರಮುಖ ಆಕರ್ಷಣೆಯಾದ 'ಜಂಬೂಸವಾರಿ'ಯಲ್ಲಿ (ವಿಜಯದಶಮಿ ಮೆರವಣಿಗೆ) ಚಿನ್ನದ ಅಂಬಾರಿಯನ್ನು ಹೊರುವ ಜವಾಬ್ದಾರಿಯನ್ನು ನಿರ್ವಹಿಸಿ ಸೈ ಎನಿಸಿಕೊಂಡಿದ್ದ. ಆನೆಪ್ರಿಯರ ಪ್ರೀತಿಗೆ ಪಾತ್ರವಾಗಿದ್ದ.

65 ವರ್ಷದ 'ಅರ್ಜುನ' ಜಿಲ್ಲೆಯ ನಾಗರಹೊಳೆ ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯ ಬಳ್ಳೆ ಶಿಬಿರದಲ್ಲಿದ್ದ. 60 ವರ್ಷ ವಯಸ್ಸು ದಾಟಿದ ನಂತರ, ಚಿನ್ನದ ಅಂಬಾರಿ ಹೊರುವ ಕೆಲಸದಿಂದ ನಿವೃತ್ತಿ ನೀಡಲಾಗಿತ್ತು. 5,800 ಕೆ.ಜಿ. ತೂಕದ ಅರ್ಜುನನ್ನು ಆನೆ, ಹುಲಿ ಸೆರೆ ಕಾರ್ಯಾಚರಣೆಯಲ್ಲಿ ತೊಡಗಿಸಿಕೊಳ್ಳಲಾಗುತ್ತಿತ್ತು. ಹಾಸನ ಜಿಲ್ಲೆಯಲ್ಲಿ ಕಾರ್ಯಾಚರಣೆ ವೇಳೆಯೇ ಸೋಮವಾರ ಸಾವಿಗೀಡಾಗಿದ್ದಾನೆ. ಹಾಸನದಲ್ಲಿ ನಡೆದ ಘಟನೆಯು, 'ಕಾಡಾನೆಗಳನ್ನು ಸೆರೆ ಹಿಡಿಯುವಾಗ ವನ್ಯಪ್ರಾಣಿಗಳ ಜೀವಕ್ಕೆ ಹಾನಿಯಾಗದಂತೆ ಅರಣ್ಯ ಇಲಾಖೆಯು ಇನ್ನೂ ಹೆಚ್ಚಿನ ಕಾಳಜಿ ವಹಿಸಬೇಕು' ಎಂಬ ಸಂದೇಶವನ್ನು ರವಾನಿಸಿದೆ.

'ನಿಶಾನೆ' ಆನೆಯೂ ಆಗಿದ್ದ: ಈ ಬಾರಿಯ ದಸರಾ ಮೆರವಣಿಗೆಯಲ್ಲಿ, ದಿಕ್ಕು ತೋರುವ 'ನಿಶಾನೆ ಆನೆ'ಯಾಗಿ ಸಾಗಿದ್ದ 'ಅರ್ಜುನ' ಲಕ್ಷಾಂತರ ಜನರ ಗಮನಸೆಳೆದಿದ್ದ. ಮಾವುತ ವಿನು ಹಾಗೂ ಕಾವಾಡಿ ರಾಜು ಡಿ. ಆತನನ್ನು ಮುನ್ನಡೆಸಿದ್ದರು.

ಅರಣ್ಯ ಇಲಾಖೆ ಹಾಗೂ ಪೊಲೀಸರ ನಡುವಿನ ಸಮನ್ವಯದ ಕೊರತೆಯಿಂದ 'ನಿಶಾನೆ' ಆನೆಗಳನ್ನು ಮೆರವಣಿಗೆಗೆ ಈ ಸಲ ತಡವಾಗಿ ಕರೆತರಲಾಗಿತ್ತು. ಕಾರ್ಯಾಚರಣೆ ಎನ್ನುತ್ತಿದ್ದಂತೆಯೇ ಅರಣ್ಯ ಇಲಾಖೆಯ ಅಧಿಕಾರಿಗಳು 'ಅರ್ಜುನ'ನಿಗೆ ಆದ್ಯತೆ ನೀಡುತ್ತಿದ್ದರು. ಎಚ್‌.ಡಿ.ಕೋಟೆ ತಾಲ್ಲೂಕಿನ ಸಿದ್ದಾಪುರ ಗ್ರಾಮದ ಬಳಿ 8 ವರ್ಷದ ಗಂಡು ಹುಲಿಯ ಸೆರೆ ಕಾರ್ಯಾಚರಣೆಯಲ್ಲಿ 'ಅರ್ಜುನ' ಸೇರಿದಂತೆ 3 ಆನೆಗಳನ್ನು ಬಳಸಲಾಗಿತ್ತು. ಮೇಟಿಕುಪ್ಪೆ ವನ್ಯಜೀವಿ ವಲಯ ವ್ಯಾಪ್ತಿಯ ಕಲ್ಲಟ್ಟಿ ಗ್ರಾಮದ ಕೃಷ್ಣನಾಯಕ್ ಅವರ ಪುತ್ರ ಚರಣ್ ನಾಯಕ್ (9) ಸೆ. 4ರಂದು ಹುಲಿ ದಾಳಿಗೆ ಬಲಿಯಾಗಿದ್ದ. ಈ ಕಾರಣದಿಂದ ಕಾರ್ಯಾಚರಣೆ ನಡೆದಿತ್ತು.

ವೀರನಹೊಸಹಳ್ಳಿಯಿಂದ ಸೆ.1ರಂದು ಕ್ಯಾಪ್ಟನ್ 'ಅಭಿಮನ್ಯು' ನೇತೃತ್ವದ 9 ಆನೆಗಳು ಅರಮನೆ ನಗರಿಗೆ ಬಂದಿದ್ದವು. ಅರಣ್ಯ ಭವನದಲ್ಲಿದ್ದ ಆನೆಗಳ ಅರಮನೆ ಪ್ರವೇಶ ಸೆ.5ರಂದು ನಡೆದಿತ್ತು. ಹುಲಿ ಸೆರೆ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದ ಅರ್ಜುನ ತಡವಾಗಿ ಅಂದರೆ ಸೆ.14ರಂದು 'ದಸರಾ ಗಜಪಡೆ'ಯನ್ನು ಮೈಸೂರಿನಲ್ಲಿ ಸೇರಿಕೊಂಡಿದ್ದ.

'ಹತ್ತು ದಿನ ಮೇಟಿಕುಪ್ಪೆ ಅರಣ್ಯದಂಚಿನಲ್ಲಿ ನಡೆದ ಹುಲಿ ಹುಡುಕಾಟದಲ್ಲಿ ಅರ್ಜುನ ತನ್ನ ತಂಡದೊಂದಿಗೆ ನಿತ್ಯ 4ರಿಂದ 6 ಕಿ.ಮೀ ಕ್ರಮಿಸುತ್ತಿತ್ತು. ಆದರೆ, ಹುಲಿ ಸಿಗಲಿಲ್ಲ. ಹೀಗಾಗಿ ಇಲಾಖೆಯ ಸೂಚನೆಯಂತೆ, ದಸರೆಗೆ ಸಿದ್ಧವಾಗಬೇಕಾದ್ದರಿಂದ ಅರಮನೆಗೆ ಬಂದೆವು' ಎಂದು ಕಾವಾಡಿ ರಾಜು ತಿಳಿಸಿದ್ದರು.

ಚನ್ನಪಟ್ಟಣ ತಾಲ್ಲೂಕು, ಹಂಪಾಪುರ, ಸಿದ್ದಾಪುರ, ಸಕಲೇಶಪುರ, ಹಾಸನ, ಸಿದ್ದಾಪುರ, ಗೋಣಿಕೊಪ್ಪಲು ಹೀಗೆ... ಹಲವೆಡೆ ನಡೆದಿದ್ದ ಕಾರ್ಯಾಚರಣೆಯಲ್ಲಿ 'ಅರ್ಜುನ' ಪಾಲ್ಗೊಂಡಿದ್ದ.

ಅರಿವಳಿಕೆ ಚುಚ್ಚುಮದ್ದು ತಾಕಿತ್ತೇ?

'ಕಾಡಾನೆಗೆ ನೀಡಬೇಕಿದ್ದ ಅರಿವಳಿಕೆ ಚುಚ್ಚುಮದ್ದು ಅರ್ಜುನನಿಗೆ ತಗುಲಿದ್ದರಿಂದ, ಅದು ಕಾಡಾನೆ ಜೊತೆಗೆ ಸೆಣಸಲು ಸಾಧ್ಯವಾಗಲಿಲ್ಲ' ಎನ್ನುವ ದೂರು ಕೇಳಿಬಂದಿದೆ. ಇದಕ್ಕೆ ಸ್ಪಷ್ಟನೆ ನೀಡಿರುವ ಎಸಿಎಫ್ ಮಹಾದೇವ, 'ಆನೆಯ ಕಳೇಬರವನ್ನು ಸ್ಥಳಾಂತರಿಸಿದ ನಂತರ, ಮರಣೋತ್ತರ ಪರೀಕ್ಷೆ ನಡೆಸಲಾಗುವುದು. ಅದರಲ್ಲಿ ಎಲ್ಲವೂ ಸ್ಪಷ್ಟವಾಗಲಿದೆ. ಅರಣ್ಯ ಇಲಾಖೆಯಿಂದ ಯಾವುದೇ ನಿರ್ಲಕ್ಷ್ಯವಾಗಿಲ್ಲ' ಎಂದರು.

ಸಿದ್ದರಾಮಯ್ಯ ಬೇಸರ

'ಐತಿಹಾಸಿಕ ಮೈಸೂರು ದಸರಾದ ಕೇಂದ್ರ ಬಿಂದುವಾದ ಜಂಬೂಸವಾರಿಯನ್ನು ಎಂಟು ವರ್ಷ ಅತ್ಯಂತ ಯಶಸ್ವಿಯಾಗಿ ನಡೆಸಿಕೊಟ್ಟು ಜನರ ಪ್ರೀತಿ ಪಾತ್ರವಾಗಿದ್ದ ಆನೆ 'ಅರ್ಜುನ' ಇನ್ನಿಲ್ಲ ಎಂಬ ಸುದ್ದಿ ಕೇಳಿ ನೋವಾಯಿತು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬೇಸರ ವ್ಯಕ್ತಪಡಿಸಿದ್ದಾರೆ.

'ಎಕ್ಸ್' ಮಾಡಿರುವ ಅವರು, 'ಬರೋಬ್ಬರಿ 750 ಕೆ.ಜಿ ತೂಕದ ಚಿನ್ನದ ಅಂಬಾರಿ ಹೊತ್ತು, ಮೆರವಣಿಗೆಯಲ್ಲಿ ಸಾಗುವ ಮೂಲಕ ತಾಯಿ ಚಾಮುಂಡೇಶ್ವರಿಯ ಸೇವೆಗೈದಿದ್ದ ಅರ್ಜುನ, ಕಾಡಾನೆ ಜೊತೆಗಿನ ಕಾದಾಟದಲ್ಲಿ ಮೃತಪಟ್ಟಿದೆ. ಲಕ್ಷಾಂತರ ಜನರ ನಡುವೆ ಗಾಂಭೀರ್ಯದಿಂದ ಸಾಗುತ್ತಿದ್ದ ಅರ್ಜುನನ ನಡಿಗೆ ನನ್ನಂತಹ ಕೋಟ್ಯಂತರ ಕನ್ನಡಿಗರ ಮನದಲ್ಲಿ ಶಾಶ್ವತವಾಗಿ ಇರಲಿದೆ' ಎಂದು ಹೇಳಿದ್ದಾರೆ.

ಇನ್ನಷ್ಟು ಸುದ್ದಿಗಳು 5

ಗ್ಯಾರಂಟಿಗೆ ₹11 ಸಾವಿರ ಕೋಟಿ ಬಳಸಿದ್ದ ಸರ್ಕಾರ • ಕಾಯ್ದೆಯ ಸೆಕ್ಷನ್ '7ಡಿ' ರದ್ದತಿಗೆ ಮಸೂದೆ

ಅನ್ಯರ ಬಳಕೆಗಿಲ್ಲ ಎಸ್ಸಿಎಸ್ಟಿ ನಿಧಿ

• ರಾಜೇಶ್ ರೈ ಚಟ್ಲ

ಬೆಳಗಾವಿ: ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಎಸ್‌ಪಿ) ಮತ್ತು ಪರಿಶಿಷ್ಟ ಪಂಗಡಗಳ ಉಪಯೋಜನೆಯ (ಟಿಎಸ್‌ಪಿ) ₹11 ಸಾವಿರ ಕೋಟಿಯನ್ನು 'ಗ್ಯಾರಂಟಿ'ಗೆ ಬಳಕೆಗೆ ಮಾಡಿದ್ದ ಕಾಂಗ್ರೆಸ್ ನೇತೃತ್ವದ ಸರ್ಕಾರ, ಕಾಯ್ದೆಯಡಿ ಮೀಸಲಿಡುವ ಮೊತ್ತವನ್ನು ಇನ್ನು ಮುಂದೆ ಅನ್ಯ ಉದ್ದೇಶಕ್ಕೆ ಬಳಸದಂತೆ ಕಡಿವಾಣ ಹಾಕಲು ಮುಂದಾಗಿದೆ.

ಕರ್ನಾಟಕ ಅನುಸೂಚಿತ ಜಾತಿ ಮತ್ತು ಬುಡಕಟ್ಟು ಉಪ ಯೋಜನೆ (ಯೋಜನೆ, ಹಂಚಿಕೆ, ಮತ್ತು ಆರ್ಥಿಕ ಸಂಪನ್ಮೂಲಗಳ ಬಳಕೆ) ಕಾಯ್ದೆ–2013ರ ಅನ್ವಯ, ಬಜೆಟ್‌ನ ಒಟ್ಟು ಮೊತ್ತದ ಶೇ 24.1ರಷ್ಟನ್ನು ಪರಿಶಿಷ್ಟ ಸಮುದಾಯದ ಹಿತಕ್ಕೆ ಬಳಸುವುದು ಕಡ್ಡಾಯ. ಈ ಕಾಯ್ದೆಯ 'ಸೆಕ್ಷನ್ 7 ಡಿ' ಬಳಸಿಕೊಂಡು ಅನುದಾನವನ್ನು ಅನ್ಯ ಉದ್ದೇಶಕ್ಕೆ ಬಳಸಬಹುದಾದ ಅವಕಾಶ ಇತ್ತು.

ಈ ದಾರಿಯನ್ನು ಉಪಯೋಗಿಸಿಕೊಂಡು ಬಿಜೆಪಿ ಸರ್ಕಾರದ ಅವಧಿಯಲ್ಲಿಯೂ ಅನುದಾನವನ್ನು ರಸ್ತೆ, ಹೆದ್ದಾರಿ, ಮೆಟ್ರೊ ಯೋಜನೆಗಳಿಗೆ ವರ್ಗಾವಣೆ ಮಾಡಲಾಗಿತ್ತು. ಸಿದ್ದರಾಮಯ್ಯ ನೇತೃತ್ವದ ಸರ್ಕಾರ, 'ಗ್ಯಾರಂಟಿ' ಯೋಜನೆಗಳಿಗೆ ಬಳಸಿಕೊಂಡಿತ್ತು.

ಮುಂದಿನ ದಿನಗಳಲ್ಲಿ ಅನ್ಯ ಉದ್ದೇಶಕ್ಕೆ ಬಳಕೆ ಆಗದಂತೆ ನಿರ್ಬಂಧಿಸುವ ಉದ್ದೇಶದಿಂದ ಈ ಕಾಯ್ದೆಯ 'ಸೆಕ್ಷನ್ 7 ಡಿ' ರದ್ದುಪಡಿಸಲು ಮುಂದಾಗಿರುವ ಸರ್ಕಾರ, ತಿದ್ದುಪಡಿ ಮಸೂದೆ ಮಂಡಿಸಲು ನಿರ್ಧರಿಸಿದೆ. ಇಲ್ಲಿನ ಸುವರ್ಣ ವಿಧಾನಸೌಧದಲ್ಲಿ ಗುರುವಾರ (ಡಿ. 7) ನಡೆಯಲಿರುವ ಸಚಿವ ಸಂಪುಟ ಸಭೆಯ ಮುಂದೆ ಸಮಾಜ ಕಲ್ಯಾಣ ಇಲಾಖೆ ಪ್ರಸ್ತಾವವನ್ನು ಮಂಡಿಸಲಿದೆ. ಇದೇ ಅಧಿವೇಶನದಲ್ಲಿ ಮಸೂದೆ ಮಂಡನೆಯಾಗಲಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ರಾಜ್ಯ ಪರಿಷತ್‌ಗೆ ಉಪ ಮುಖ್ಯಮಂತ್ರಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಚಿವರನ್ನು ಅಧಿಕಾರೇತರ ಸದಸ್ಯರನ್ನಾಗಿ ನೇಮಿಸಲು ಮತ್ತು ಎಸ್‌ಸಿಎಸ್‌ಪಿ, ಟಿಎಸ್‌ಪಿ ಅನುದಾನ ಹಂಚಿಕೆಯ ನೋಡಲ್ ಏಜೆನ್ಸಿಗೆ ಪರಿಶಿಷ್ಟ ಪಂಗಡಗಳ ಸಚಿವರನ್ನು ಉಪಾಧ್ಯಕ್ಷರನ್ನಾಗಿ ಮಾಡಲು ಈ ತಿದ್ದುಪಡಿಯ ಮೂಲಕ ಅವಕಾಶ ಕಲ್ಪಿಸಲಾಗುವುದು ಎಂದು ಮೂಲಗಳು ತಿಳಿಸಿವೆ.

2013ರಲ್ಲಿ ಅಧಿಕಾರಕ್ಕೆ ಬಂದಿದ್ದ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಪರಿಶಿಷ್ಟರ ಜನಸಂಖ್ಯೆ ಆಧರಿಸಿ ಅನುದಾನ ನೀಡುವುದಕ್ಕಾಗಿ ಈ ಉಪ ಹಂಚಿಕೆ ಕಾಯ್ದೆಯನ್ನು ಜಾರಿಗೆ ತಂದಿತ್ತು. ಇದರ ಅನ್ವಯ ಎಲ್ಲ ಇಲಾಖೆಗಳಲ್ಲಿ ಶೇ 24.1ರಷ್ಟು ಹಣವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ಕಲ್ಯಾಣಕ್ಕೆ ಮೀಸಲಿಡಬೇಕು. ಆರಂಭದಲ್ಲಿ ₹ 8,908 ಕೋಟಿ ಇದ್ದ ಅನುದಾನ 2023–24ನೇ ಸಾಲಿನಲ್ಲಿ ₹ 34,294 ಕೋಟಿಗೆ ಹೆಚ್ಚಳವಾಗಿದೆ.

'ಎಸ್‌ಸಿಪಿ, ಟಿಎಸ್‌ಪಿ ಅನುದಾಯ ದಲಿತ ಸಮುದಾಯದ ಒಳಿತಿಗೆ ಬಳಕೆಯಾಗಬೇಕು. ಆದರೆ, 7ಡಿ ಹೆಸರಲ್ಲಿ ದುರುಪಯೋಗವಾಗುತ್ತಿದ್ದು ಅದನ್ನು ತಡೆಯಬೇಕು ಎಂದು ದಲಿತ ಸಂಘಟನೆಗಳು ಮತ್ತು ಚಿಂತಕರು ಒತ್ತಾಯಿಸಿದ್ದರು. ಸೆಕ್ಷನ್ 7 ಡಿಯನ್ನು ಕೈಬಿಡಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇತ್ತೀಚೆಗೆ ಪರಿಶಿಷ್ಟ ಸಮುದಾಯದ ಮುಖಂಡರಿಗೆ ಭರವಸೆ ನೀಡಿದ್ದರು.

ಏನಿದು ಸೆಕ್ಷನ್ 7ಡಿ?

ಪರಿಶಿಷ್ಟರಿಗೆ ಮೀಸಲಿಟ್ಟ ಹಣವನ್ನು ಪರಿಶಿಷ್ಟರ ಕಲ್ಯಾಣ ಕಾರ್ಯಕ್ರಮಗಳಿಗೆ ಮಾತ್ರ ಬಳಸಬೇಕು ಎಂದು ಎಸ್‌ಸಿಎಸ್‌ಪಿ, ಟಿಎಸ್‌ಪಿ ಕಾಯ್ದೆ ಹೇಳುತ್ತದೆ. ಆದರೆ, ಅದೇ ಕಾಯ್ದೆಯ ಸೆಕ್ಷನ್ 7 ಡಿಯು, 'ವಿಭಜಿಸಲಾಗದ ಪ್ರಕರಣಗಳಲ್ಲಿ ಆಗುವ ವೆಚ್ಚದ ಒಂದು ಭಾಗ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದೆ ಎಂದು ಭಾವಿಸತಕ್ಕದ್ದು' ಎಂದಿದೆ. ಅಂದರೆ, 'ಡೀಮ್ಡ್ ಎಕ್ಸ್‌ಪೆಂಡಿಚರ್' ಎಂದು ಅನುದಾನವನ್ನು ಉಪ ಹಂಚಿಕೆ ಮಾಡುವುದಾಗಿದೆ. ಅದರ ಅಡಿಯಲ್ಲಿ ಬೇರೆ ಉದ್ದೇಶಗಳಿಗೆ ಅನುದಾನವನ್ನು ದುರ್ಬಳಕೆ ಮಾಡಲಾಗುತ್ತಿತ್ತು. ರಸ್ತೆ, ನೀರಾವರಿಯಂಥ ಯೋಜನೆಗಳಿಗೆ ಅನುದಾನವನ್ನು ಬಳಸಿ ಆ ರಸ್ತೆಗಳನ್ನು ಪರಿಶಿಷ್ಟರು ಕೂಡಾ ಬಳಸುತ್ತಾರೆ ಎಂದು ಸಮಜಾಯಿಷಿ ಕೊಡಲಾಗುತ್ತಿತ್ತು. ಹೀಗಾಗಿ ಈ ಸೆಕ್ಷನ್ 7ಡಿಯನ್ನು ತೆಗೆದುಹಾಕಬೇಕೆಂದು ದಲಿತ ಸಂಘಟನೆಗಳು ಒತ್ತಾಯಿಸುತ್ತಿದ್ದವು.

ವಿಜಯಪುರ: ನಾಲ್ವರು ಕಾರ್ಮಿಕರ ರಕ್ಷಣೆ

ಮೆಕ್ಕೆಜೋಳ ಮೂಟೆಯಡಿ ಸಿಲುಕಿದ್ದ ಒಬ್ಬ ಕಾರ್ಮಿಕ ಉಸಿರುಗಟ್ಟಿ ಸಾವು

ಪ್ರಜಾವಾಣಿ ವಾರ್ತೆ

ವಿಜಯಪುರ: ನಗರದ ಅಲಿಯಾಬಾದ್ ಕೈಗಾರಿಕಾ ಪ್ರದೇಶದಲ್ಲಿ ಇರುವ ರಾಜ್‌ಗುರು ಗೋದಾಮಿನ ಆಹಾರ ಸಂಸ್ಕರಣ ಘಟಕದಲ್ಲಿ ಉರುಳಿ ಬಿದ್ದಿರುವ ಮೆಕ್ಕೆಜೋಳದ ಚೀಲಗಳ ಅಡಿಯಲ್ಲಿ ಸಿಲುಕಿರುವ 13 ಕಾರ್ಮಿಕರ ಪೈಕಿ, ಒಬ್ಬ ಕಾರ್ಮಿಕ ಉಸಿರುಗಟ್ಟಿ ಮೃತಪಟ್ಟಿದ್ದಾರೆ.

ಸೋಮವಾರ ಮಧ್ಯರಾತ್ರಿ 12ರ ವರೆಗೆ ನಡೆದ ಕಾರ್ಯಾಚರಣೆಯಲ್ಲಿ ನಾಲ್ವರನ್ನು ರಕ್ಷಣೆ ಮಾಡಲಾಗಿದೆ. ಇನ್ನುಳಿದ ಕಾರ್ಮಿಕರ ರಕ್ಷಣೆಗಾಗಿ ಅಗ್ನಿಶಾಮಕ ದಳ ಹಾಗೂ ಪೊಲೀಸರು ಹರಸಾಹಸಪಡುತ್ತಿದ್ದಾರೆ. ಮೂಟೆಗಳ ಅಡಿಯಲ್ಲಿ ಸಿಲುಕಿರುವ ಕಾರ್ಮಿಕರ ಉಸಿರಾಟಕ್ಕೆ ತೊಂದರೆಯಾಗದಂತೆ ಆಮ್ಲಜನಕವನ್ನು ಪೂರೈಸಲಾಗುತ್ತಿದೆ.

ರಕ್ಷಣಾ ಕಾರ್ಯಾಚರಣೆ ನಿಧಾನವಾಗಿ ಸಾಗುತ್ತಿದೆ. ಹಾಗಾಗಿ, ಸ್ಥಳದಲ್ಲಿರುವ ಕಾರ್ಮಿಕರ ಸಂಬಂಧಿಕರಲ್ಲಿ ಆತಂಕ ಹೆಚ್ಚಿದೆ. ಜಿಲ್ಲಾಧಿಕಾರಿ ಟಿ. ಭೂಬಾಲನ್ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹೃಷಿಕೇಶ ಸೋನಾವಣೆ ಅವರು ಸ್ಥಳದಲ್ಲಿಯೇ ಮೊಕ್ಕಾಂ ಹೂಡಿದ್ದು ಕಾರ್ಯಾಚರಣೆ ಮೇಲೆ ನಿಗಾವಹಿಸಿದ್ದಾರೆ.

ಘಟನೆ ನಡೆದಿದ್ದು ಹೇಗೆ?: ಸಂಜೆ ಕಾರ್ಮಿಕರು ಕೆಲಸದಲ್ಲಿ ತೊಡಗಿದ್ದ ವೇಳೆ ಏಕಾಏಕಿ ಮೆಕ್ಕೆಜೋಳದ ಮೂಟೆಗಳು ಅವರ ಮೇಲೆ ಉರುಳಿಬಿದ್ದಿವೆ. ತಕ್ಷಣವೇ ನಾಲ್ಕು ಜೆಸಿಬಿಗಳ ಮೂಲಕ ರಕ್ಷಣಾ ಕಾರ್ಯಾಚರಣೆ ಆರಂಭಿಸಲಾಯಿತು. ಎಸ್‌ಡಿಆರ್‌ಎಫ್, ಅಗ್ನಿಶಾಮಕ ದಳದ ಸಿಬ್ಬಂದಿಯೂ ಕಾರ್ಯಾಚರಣೆಗೆ ಕೈಜೋಡಿಸಿದ್ದಾರೆ. ವೈದ್ಯರ ತಂಡವನ್ನು ನಿಯೋಜಿಸಲಾಗಿದೆ.

'ಕಾರ್ಮಿಕರ ಮೇಲೆ ಬಿದ್ದಿರುವ ಮೂಟೆಗಳನ್ನು ತೆರವು ಮಾಡುವ ಕಾರ್ಯ ಭರದಿಂದ ನಡೆದಿದೆ. ಬೆಳಗಾವಿ, ಕಲಬುರಗಿಯಿಂದ ಎಸ್‌ಡಿಆರ್‌ಎಫ್ ಸಿಬ್ಬಂದಿ ಸ್ಥಳಕ್ಕೆ ಬಂದಿದ್ದಾರೆ. ಅಗತ್ಯ ಬಿದ್ದರೆ ಹೈದರಾಬಾದ್‌ನಿಂದ ಎನ್‌ಡಿಆರ್‌ಎಫ್ ತಂಡವನ್ನು ಕರೆಸಲು ಸಿದ್ಧತೆ ನಡೆದಿದೆ' ಎಂದು ಜಿಲ್ಲಾಧಿಕಾರಿ ಭೂಬಾಲನ್ ತಿಳಿಸಿದರು.

ಮೂಟೆಗಳ ಅಡಿಯಲ್ಲಿ ಸಿಲುಕಿರುವ ಕಾರ್ಮಿಕರು ಬಿಹಾರ ಮೂಲದವರು ಎಂದು ಹೇಳಲಾಗಿದೆ. ಹಲವು ವರ್ಷಗಳಿಂದ ಇದೇ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಸಚಿವರ ಭೇಟಿ: ವಿಷಯ ತಿಳಿಯುತ್ತಿದ್ದಂತೆ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ ಅವರು ಬೆಳಗಾವಿಯಿಂದ ವಿಜಯಪುರಕ್ಕೆ ರಾತ್ರಿಯೇ ಆಗಮಿಸಿ ಕಾರ್ಯಾಚರಣೆಯನ್ನು ಖುದ್ದಾಗಿ ವೀಕ್ಷಿಸಿದರು. ಘಟನೆ ಕುರಿತು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅವರಿಂದ ಮಾಹಿತಿ ಪಡೆದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ವಿವರಿಸಿದ್ದಾರೆ.

ಕಾರ್ಮಿಕರ ರಕ್ಷಣಾ ಕಾರ್ಯಾಚರಣೆ ಮುಂದುವರಿದಿದೆ

ಒಳ ಪುಟ

ಮಿಜೋರಾಂ: ಸಿ.ಎಂ ಪಟ್ಟಕ್ಕೇರಲು ಸಜ್ಜಾದ ಲಾಲ್ದುಹೋಮಾ 10

ಝೆಡ್‌ಪಿಎಂಗೆ ಸ್ಪಷ್ಟ ಬಹುಮತ

• ಸುಮಿರ್ ಕರ್ಮಾಕರ್

ಗುವಾಹಟಿ: ಹೊಸ ಪ್ರಾದೇಶಿಕ ಪಕ್ಷವಾಗಿರುವ ಜೋರಂ ಪೀಪಲ್ಸ್ ಮೂವ್‌ಮೆಂಟ್ (ಝೆಡ್‌ಪಿಎಂ) ಮಿಜೋರಾಂ ವಿಧಾನಸಭೆಯಲ್ಲಿ 27 ಸ್ಥಾನಗಳನ್ನು ಗೆಲ್ಲುವ ಮೂಲಕ ಸರ್ಕಾರ ರಚನೆಯ ಹೊಸ್ತಿಲಿಗೆ ಬಂದು ನಿಂತಿದೆ. ಈ ಗೆಲುವಿನ ಮೂಲಕ ಝೆಡ್‌ಪಿಎಂ ಪಕ್ಷವು, ಸರ್ಕಾರ ರಚನೆಯಲ್ಲಿ ಮಿಜೊ ನ್ಯಾಷನಲ್ ಫ್ರಂಟ್ (ಎಂಎನ್‌ಎಫ್) ಮತ್ತು ಕಾಂಗ್ರೆಸ್ 1987ರಿಂದಲೂ ಹೊಂದಿದ್ದ ಪಾರಮ್ಯವನ್ನು ಮುರಿದಿದೆ.

ಸತತ ಎರಡನೆಯ ಬಾರಿಗೆ ಸರ್ಕಾರ ರಚಿಸುವ ಹುಮ್ಮಸ್ಸಿನಲ್ಲಿ ಇದ್ದ ಎಂಎನ್‌ಎಫ್ ಪಕ್ಷವು 10 ಸ್ಥಾನಗಳಲ್ಲಿ ಮಾತ್ರ ಗೆಲುವು ಕಂಡಿದೆ. ಕಾಂಗ್ರೆಸ್ ಪಕ್ಷವು ಒಂದು ಸ್ಥಾನ ಮಾತ್ರ ಗೆದ್ದು, ತೀವ್ರ ಹಿನ್ನಡೆ ಅನುಭವಿಸಿದೆ. ಒಂದು ಕಾಲದಲ್ಲಿ ಮಿಜೋರಾಂ ರಾಜ್ಯವು ಕಾಂಗ್ರೆಸ್ಸಿನ ಭದ್ರ ನೆಲೆಯೂ ಆಗಿತ್ತು.

2018ರಲ್ಲಿ ಒಂದು ಸ್ಥಾನ ಗೆದ್ದಿದ್ದ ಬಿಜೆಪಿ ಈ ಬಾರಿ ಎರಡು ಸ್ಥಾನ ಪಡೆದಿದೆ. ಈ ಬಾರಿ ಮೂವರು ಮಹಿಳೆಯರು (ಝೆಡ್‌ಪಿಎಂನಿಂದ ಇಬ್ಬರು, ಎಂಎನ್‌ಎಫ್‌ನಿಂದ ಒಬ್ಬರು) ವಿಧಾನಸಭೆ ಪ್ರವೇಶಿಸಲಿದ್ದಾರೆ. ಮುಖ್ಯಮಂತ್ರಿ ಜೋರಮ್‌ಥಂಗಾ ಮತ್ತು ಉಪ ಮುಖ್ಯಮಂತ್ರಿ ತಾವ್ನ್‌ಲುಯಾ ಅವರು ಸೋಲುಂಡಿರುವುದು ಎಂಎನ್‌ಎಫ್‌ಗೆ ತೀವ್ರ ಆಘಾತ ಉಂಟುಮಾಡಿದೆ. ಇವರಿಬ್ಬರ ಎದುರು ಝೆಡ್‌ಪಿಎಂ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದಾರೆ.

ಮಾಜಿ ಐಪಿಎಸ್ ಅಧಿಕಾರಿ ಲಾಲ್ದುಹೋಮಾ ನೇತೃತ್ವದ ಝೆಡ್‌ಪಿಎಂ ಹೊಸ ವ್ಯವಸ್ಥೆಯನ್ನು ತರುವ ಮತ್ತು ಭ್ರಷ್ಟಾಚಾರ ಮುಕ್ತ ಆಡಳಿತ ನೀಡುವ ಭರವಸೆ ನೀಡಿತ್ತು. 'ಇಲ್ಲಿ ಕೆಲಸ ಮಾಡಿರುವುದು ಆಡಳಿತ ವಿರೋಧಿ ಅಲೆ ಮಾತ್ರ. ಹೊಸ ಪಕ್ಷವೊಂದಕ್ಕೆ ಅವಕಾಶ ಕಲ್ಪಿಸುವ ಬಯಕೆಯು ಮತದಾರರಲ್ಲಿ ಇತ್ತು. ಝೆಡ್‌ಪಿಎಂ ಪಕ್ಷ ನೀಡಿದ ಭರವಸೆಗಳು ಅವರಿಗೆ ಆಕರ್ಷಕವಾಗಿ ಕಂಡಿವೆ' ಎಂದು ಮಿಜೋರಾಂ ವಿ.ವಿ ರಾಜ್ಯಶಾಸ್ತ್ರದ ಪ್ರಾಧ್ಯಾಪಕ ಜಾಂಗ್ ಖೊಂಗಂ ದೌಂಗೆಲ್ ವಿಶ್ಲೇಷಿಸಿದ್ದಾರೆ.

'ಕಾಂಗ್ರೆಸ್ ಒಳಗಿನಿಂದಲೇ ಸಮಸ್ಯೆ ಎದುರಿಸುತ್ತಿತ್ತು. ಹೀಗಾಗಿ ಈ ಬಾರಿ ಸ್ಪರ್ಧೆ ಇದ್ದಿದ್ದು ಎಂಎನ್‌ಎಫ್ ಮತ್ತು ಝೆಡ್‌ಪಿಎಂ ನಡುವೆ ಮಾತ್ರ. ಮತದಾರರು ಹೊಸ ಪಕ್ಷವನ್ನು ಆಯ್ಕೆ ಮಾಡಿದ್ದಾರೆ' ಎಂದು ಅವರು ಹೇಳಿದರು. 2018ರ ವಿಧಾನಸಭಾ ಚುನಾವಣೆಗೂ ಮೊದಲು ಝೆಡ್‌ಪಿಎಂ ಪಕ್ಷ ಅಸ್ತಿತ್ವಕ್ಕೆ ಬಂತು. ಆಗ ಝೆಡ್‌ಪಿಎಂ ಪಕ್ಷವು ಎಂಟು ಸ್ಥಾನಗಳಲ್ಲಿ ಗೆಲುವು ಸಾಧಿಸಿತ್ತು. 2018ರಲ್ಲಿ ಎಂಎನ್‌ಎಫ್ 26 ಸ್ಥಾನಗಳನ್ನು ಗೆದ್ದಿತ್ತು.

'ಎಂಎನ್‌ಎಫ್, ಕಾಂಗ್ರೆಸ್ ಮತ್ತು ಅವರ ಭ್ರಷ್ಟಾಚಾರವನ್ನು ತೊಲಗಿಸಲು ಜನರು ಬಯಸಿದ್ದಾರೆ. ಹೀಗಾಗಿ ಅವರು ಝೆಡ್‌ಪಿಎಂ ಪಕ್ಷಕ್ಕೆ ಮತ ನೀಡಿದ್ದಾರೆ' ಎಂದು ಮತದಾನದ ನಂತರ ಲಾಲ್ದುಹೋಮಾ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

10ನೇ ಪುಟ ನೋಡಿ

ಬಿಜೆಪಿ ಮುಖಂಡನ ಮೇಲೆ ಹಲ್ಲೆ: ದೂರು

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಶಾಸಕ ರಮೇಶ ಜಾರಕಿಹೊಳಿ ಅವರ ಆಪ್ತ, ಬಿಜೆಪಿ ಮುಖಂಡ ಪೃಥ್ವಿ ಸಿಂಗ್ ಅವರ ಮೇಲೆ ಚಾಕುವಿನಿಂದ ಇರಿದು ಹಲ್ಲೆ ಮಾಡಲಾಗಿದೆ. ಇದು ಸಚಿವೆ ಲಕ್ಷ್ಮಿ ಹೆಬ್ಬಾಳಕರ ಅವರ ಸಹೋದರ, ಮೇಲ್ಮನೆ ಸದಸ್ಯ ಚನ್ನರಾಜ ಹಟ್ಟಿಹೊಳಿ ಬೆಂಬಲಿಗರ ಕೃತ್ಯ' ಎಂದು ಬಿಜೆಪಿ ಮುಖಂಡರು ದೂರಿದ್ದಾರೆ.

'ಚನ್ನರಾಜ ಹಟ್ಟಿಹೊಳಿ ಅವರ ಐದಾರು ಬೆಂಬಲಿಗರು, ಜಯನಗರದಲ್ಲಿರುವ ಮನೆಗೆ ಬಂದು ಪೃಥ್ವಿ ಸಿಂಗ್ ಅವರನ್ನು ಕರೆದೊಯ್ದು ಹಲ್ಲೆ ಮಾಡಿದ್ದಾರೆ. ಅವರನ್ನು ಕೆಎಲ್‌ಇ ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ತಿಳಿಸಿದ್ದಾರೆ.

ಚನ್ನರಾಜ ಅವರ ಆಪ್ತರು ಪೃಥ್ವಿ ಸಿಂಗ್ ಜೊತೆಗೆ ಮಾತನಾಡುತ್ತಿರುವುದು ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಎಪಿಎಂಸಿ ಠಾಣೆಯ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

7ನೇ ಪುಟ ನೋಡಿ

ಪಿಎಸ್‌ಐ ನೇಮಕ ಪರೀಕ್ಷೆ ಜ.23ಕ್ಕೆ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: 545 ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ಹುದ್ದೆಗಳ ಭರ್ತಿಗೆ ಡಿಸೆಂಬರ್ 23ಕ್ಕೆ ನಿಗದಿಯಾಗಿರುವ ಲಿಖಿತ ಪರೀಕ್ಷೆಯನ್ನು ಜನವರಿ 23ಕ್ಕೆ ಮುಂದೂಡಲಾಗುವುದು ಎಂದು ಗೃಹ ಸಚಿವ ಜಿ. ಪರಮೇಶ್ವರ ಪ್ರಕಟಿಸಿದರು.

ಸೋಮವಾರ ವಿಧಾನಸಭೆಯಲ್ಲಿ ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ, '545 ಪಿಎಸ್‌ಐ ಹುದ್ದೆಗಳ ಭರ್ತಿಗೆ ಹಿಂದೆ ಪರೀಕ್ಷೆ ನಡೆಸಲಾಗಿತ್ತು. ಅಕ್ರಮ ನಡೆದಿದೆ ಎಂಬ ಕಾರಣಕ್ಕಾಗಿ ಪರೀಕ್ಷೆಯನ್ನು ರದ್ದುಗೊಳಿಸಲಾಗಿತ್ತು. ಈಗ ಡಿ.23ಕ್ಕೆ ಮರು ಲಿಖಿತ ಪರೀಕ್ಷೆ ನಿಗದಿ ಮಾಡಲಾಗಿದೆ. 54,000ಕ್ಕೂ ಹೆಚ್ಚು ಅಭ್ಯರ್ಥಿಗಳಿದ್ದಾರೆ. ಪರೀಕ್ಷಾ ತಯಾರಿಗೆ ಅನುಕೂಲವಾಗುವಂತೆ ಆರು ತಿಂಗಳ ಕಾಲ ಪರೀಕ್ಷೆ ಮುಂದೂಡಬೇಕು' ಎಂದು ಆಗ್ರಹಿಸಿದರು.

5ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

ಜನಜೀವನ ಸಂಪೂರ್ಣ ಅಸ್ತವ್ಯಸ್ತ • ವಿಮಾನ, ರೈಲು ಸಂಚಾರ ಬಂದ್

ಮಿಚಾಂಗ್ ಅಬ್ಬರ, ಐದು ಸಾವು

ಪ್ರಜಾವಾಣಿ ವಾರ್ತೆ

ಚೆನ್ನೈ: ಚಂಡಮಾರುತ 'ಮಿಚಾಂಗ್' ತಮಿಳುನಾಡಿನ ನಾಲ್ಕು ಜಿಲ್ಲೆಗಳಲ್ಲಿ ಅಬ್ಬರಿಸಿದೆ. ಧಾರಾಕಾರ ಮಳೆ, ಗಾಳಿಯಿಂದ ಸಂಭವಿಸಿದ ಅವಘಡಗಳಲ್ಲಿ ಮಹಿಳೆ ಸೇರಿ ಐವರು ಮೃತಪಟ್ಟಿದ್ದಾರೆ. ಕೋಟ್ಯಂತರ ರೂಪಾಯಿ ಮೌಲ್ಯದ ಆಸ್ತಿ ನಷ್ಟವಾಗಿದೆ.

ರಾಜಧಾನಿ ಚೆನ್ನೈ ಮತ್ತು ನೆರೆಯ ಮೂರು ಜಿಲ್ಲೆಗಳಲ್ಲಿ ಮಿಚಾಂಗ್ ತೀವ್ರ ಪರಿಣಾಮ ಬೀರಿದೆ. ಕಳೆದೆರಡು ದಿನದಲ್ಲಿ 40 ಸೆಂ.ಮೀ ಮಳೆ ಆಗಿದೆ. ಚೆನ್ನೈ ವಿಮಾನ ನಿಲ್ದಾಣ, ಪಾಲಿಕೆ ಆವರಣ, ನಗರದ ಬಹುತೇಕ ರಸ್ತೆಗಳು ಜಲಾವೃತಗೊಂಡಿವೆ. ಜನಜೀವನ ನಿಯಂತ್ರಣ ತಪ್ಪಿದೆ.

ಚೆನ್ನೈ, ಹೊರವಲಯದಲ್ಲಿ ಮಹಿಳೆ ಸೇರಿ ಐವರು ಸಾವಿಗೀಡಾಗಿದ್ದಾರೆ. ಈ ಪೈಕಿ ಇಬ್ಬರು ವಿದ್ಯುತ್ ತಂತಿ ಸಂಪರ್ಕದಿಂದ ಸಾವಿಗೀಡಾಗಿದ್ದಾರೆ.

ಕಳೆದ 24 ಗಂಟೆಗಳಲ್ಲಿ ಚೆನ್ನೈನ ಪೆರುಂಗುಡಿಯಲ್ಲಿ ಗರಿಷ್ಠ ಅಂದರೆ 29 ಸೆಂ.ಮೀ ಮಳೆ ಪ್ರಮಾಣ ದಾಖಲಾಗಿದ್ದರೆ, ತಿರುವಲ್ಲೂರು ಜಿಲ್ಲೆಯ ಅವಡಿಯಲ್ಲಿ 28 ಸೆಂ.ಮೀ., ಚೆಂಗಲ್‌ಪೇಟ್‌ನ ಮಾಮಲ್ಲಪುರಂನಲ್ಲಿ 22 ಸೆಂ.ಮೀ ಮಳೆ ಸುರಿದಿರುವುದು ದಾಖಲಾಗಿದೆ.

ರಾಜಧಾನಿಯಲ್ಲಿ ಲಕ್ಷಾಂತರ ನಿವಾಸಿಗಳು ಭಾನುವಾರದಿಂದ ಸೋಮವಾರ ಸಂಜೆಯವರೆಗೂ ಮನೆಗಳಲ್ಲಿಯೇ ಬಂದಿಯಾಗಿದ್ದರು. ಈ ಹಿಂದೆ 2015ರಲ್ಲಿ ಮೂಡಿದ್ದ ಮುಳುಗಡೆ ಭೀತಿ ಮತ್ತೆ ನಾಗರಿಕರನ್ನು ಕಾಡುತ್ತಿದೆ. ಹೀಗಾಗಿ, ಅಗತ್ಯ ವಸ್ತುಗಳು, ಕುಡಿಯುವ ನೀರಿನ ಸಂಗ್ರಹಕ್ಕೆ ಒತ್ತು ನೀಡಿದ್ದು, ಇವುಗಳಿಗೆ ಬೇಡಿಕೆ ಹೆಚ್ಚಿದೆ.

7ನೇ ಪುಟ ನೋಡಿ

ಭಾರಿ ಮಳೆಯಿಂದಾಗಿ ಚೆನ್ನೈನ ವಸತಿ ಪ್ರದೇಶದಲ್ಲಿ ರಸ್ತೆ ಹೊಳೆಯಂತಾಗಿ ಕಾರು ಮತ್ತು ಬೈಕ್‌ಗಳು ನೀರಿನಲ್ಲಿ ಮುಳುಗಿದ್ದವು —ಎಎಫ್‌ಪಿ ಚಿತ್ರ

‘ಧಮ್ಮ ಚರ್ಚೆ’ 7ರಿಂದ

ಬೆಂಗಳೂರು: ಭಾರತದ ಧಮ್ಮ ಫೌಂಡೇಷನ್ ವತಿಯಿಂದ ಇದೇ 7 ಮತ್ತು 8ರಂದು ಎರಡು ದಿನಗಳ ‘ಧಮ್ಮ ಚರ್ಚೆ’ ಕಾರ್ಯಕ್ರಮವು ಸದಾಶಿವನಗರದ ನಾಗಸೇನಾ ಬುದ್ಧವಿಹಾರದಲ್ಲಿ ನಡೆಯಲಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ನಾಗಸೇನ ಬುದ್ಧವಿಹಾರದ ಬುದ್ಧಮ್ಮ, ‘ಬುದ್ಧನ ಜ್ಞಾನೋದಯದ ನಂತರ ಸಾರಿದ ಧಮ್ಮಮಾರ್ಗದ ಬಗ್ಗೆ ಚರ್ಚೆಗಳು ನಡೆಯಲಿವೆ. ಧಮ್ಮ ಅರಿವಿಕೆಯ-ಲ್ಲಿನ ಗೊಂದಲ ಮತ್ತು ಪ್ರಶ್ನೆಗಳಿಗೆ ಥಾಯ್ಲೆಂಡ್ ಧಮ್ಮ ಅಧ್ಯಯನ ಮತ್ತು ಪ್ರತಿಷ್ಠಾನದ ಅಜಾನ್ ಸುಜಿನ್ ಬೋರಿಹನ್ವಾನಾಕೆಟ್ ಅವರು ಉತ್ತರ ನೀಡಲಿದ್ದಾರೆ. ಪ್ರಪಂಚದ 70 ದೇಶಗಳ 200ಕ್ಕೂ ಹೆಚ್ಚು ಬುದ್ಧ ಧಮ್ಮ ಉಪಾಸಕರು ಭಾಗವಹಿಸಲಿದ್ದಾರೆ’ ಎಂದು ತಿಳಿಸಿದರು.

ತೋಟಗಾರಿಕೆ ಇಲಾಖೆಯಿಂದ ಕೆ. ನಂಜಪ್ಪ ಸ್ಮಾರಕ ತೆರವುಗೊಳಿಸಲು ಚಿಂತನೆ

ಲಾಲ್‌ಬಾಗ್: ಮತ್ಸ್ಯಾಲಯಕ್ಕೆ ಬೇಕಿದೆ ಕಾಯಕಲ್ಪ

• ಖಲೀಲಅಹ್ಮದ ಶೇಖ

ಲಾಲ್‌ಬಾಗ್‌ನಲ್ಲಿರುವ ಕೆ. ನಂಜಪ್ಪ ಸ್ಮಾರಕದ ಕಟ್ಟಡ ಪಾಳು ಬಿದ್ದಿರುವುದು ಪ್ರಜಾವಾಣಿ ಚಿತ್ರ/ರಂಜು ಪಿ

ಬೆಂಗಳೂರು: ಒಂದು ಕಾಲದಲ್ಲಿ ಲಾಲ್‌ಬಾಗ್‌ಗೆ ಭೇಟಿ ನೀಡುವ ಪ್ರವಾಸಿಗರಿಗೆ ‘ಮತ್ಸ್ಯಲೋಕ’ವನ್ನು ಪರಿಚಯಿಸುತ್ತಿದ್ದ ಕೆ. ನಂಜಪ್ಪ ವಸ್ತುಸಂಗ್ರಹಾಲಯ ಈಗ ಪಾಳುಬಿದ್ದ ಕಟ್ಟಡವಾಗಿದ್ದು, ಹುಳುಹುಪ್ಪಟ್ಟೆಗಳ ತಾಣವಾಗಿದೆ.

ಲಾಲ್‌ಬಾಗ್‌ನ ಪಶ್ಚಿಮ ದ್ವಾರದಿಂದ ಮುಖ್ಯದ್ವಾರದ ಕಡೆಗೆ ಹೋಗುವ ಮಾರ್ಗದಲ್ಲಿ ಬಲಭಾಗದಲ್ಲಿ ಹುಲ್ಲು–ಗಿಡಗಳು ಬೆಳೆದುಕೊಂಡಿರುವ ವೃತ್ತಾಕಾರದಲ್ಲಿರುವ ಕಟ್ಟಡವೊಂದು ಕಾಣುತ್ತದೆ. ಅದೇ ಕೆ. ನಂಜಪ್ಪ ವಸ್ತು-ಸಂಗ್ರಹಾಲಯ. ಇದರೊಳಗೆ ಇದ್ದಿದ್ದೇ ಚಂದದ ಮತ್ಸ್ಯಾಲಯ.

ಇದೊಂದು ಪುರಾತನ ಕಟ್ಟಡ. ಹತ್ತು–ಹನ್ನೆರಡು ವರ್ಷಗಳ ಹಿಂದೆ ಲಾಲ್‌ಬಾಗ್‌ನ ಆಕರ್ಷಣೀಯ ಕೇಂದ್ರವಾಗಿತ್ತು. ಮತ್ಸ್ಯಾಲಯದಲ್ಲಿ ವಿವಿಧ ಜಾತಿಯ ಮೀನುಗಳಿದ್ದವು. ಲಾಲ್‌ಬಾಗ್‌ಗೆ ಬಂದವರು, ಈ ಸಂಗ್ರಹಾಲಯಕ್ಕೆ ಭೇಟಿ ನೀಡದೇ ಹೋಗುತ್ತಿರಲಿಲ್ಲ. ಮಕ್ಕಳಿಗಂತೂ ಇದು ಆಕರ್ಷಣೀಯ ತಾಣವಾಗಿತ್ತು. ನಿರ್ವಹಣೆಯ ಕೊರತೆಯ ಕಾರಣ, ಪಾರಂಪರಿಕ ಕಟ್ಟಡವೀಗ ಪಾಳು ಬಿದ್ದಿದೆ ಎಂದು ವಾಯುವಿಹಾರಿ ದಯಾನಂದ್ ಬೇಸರ ವ್ಯಕ್ತಪಡಿಸುತ್ತಾರೆ.

‘ಈ ವಸ್ತುಸಂಗ್ರಹಾಲಯ ಕಟ್ಟಡದ ಜೀರ್ಣೋದ್ಧಾರಕ್ಕೆ ಅನುದಾನದ ಕೊರತೆ ಎದುರಾಗಿದೆ. ಇದೇ ಕಟ್ಟಡದಲ್ಲಿರುವ ಮತ್ಸ್ಯಾಲಯದ ಅಭಿವೃದ್ಧಿಗೆ ಈ ಹಿಂದೆ ಇನ್ಫೊಸಿಸ್ ಪ್ರತಿಷ್ಠಾನ ಅನುದಾನ ನೀಡುವುದಾಗಿ ಭರವಸೆ ನೀಡಿತ್ತು. ಆದರೆ, ಪ್ರಕ್ರಿಯೆ ಮುಂದುವರಿಯಲಿಲ್ಲ’ ಎಂಬುದು ವಾಯುವಿಹಾರಿಗಳ ದೂರು.

ದಶಕದ ಹಿಂದೆ ಲಾಲ್‌ಬಾಗ್‌ಗೆ ಭೇಟಿ ನೀಡಿದ್ದ ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ, ಕೇರಳ ಸೇರಿದಂತೆ ವಿವಿಧ ರಾಜ್ಯಗಳ ಪ್ರವಾಸಿಗರು ಈಗ ಇಲ್ಲಿಗೆ ಬಂದಾಗ, ಮತ್ಸ್ಯಾಲಯದ ಬಗ್ಗೆ ವಿಚಾರಿಸುತ್ತಾರೆ. ಸದ್ಯ ಇದು ಕಾರ್ಯನಿರ್ವಹಿಸುತ್ತಿಲ್ಲ. ಪಾಳು ಬಿದ್ದಿರುವ ಕಟ್ಟಡವನ್ನು ನೋಡಿ ನಿರಾಸೆಯಿಂದಲೇ ಮರಳುತ್ತಿದ್ದಾರೆ’ ಎಂದರು.

‘ಕೆ. ನಂಜಪ್ಪ ಸ್ಮಾರಕ ಭವನ ಪಾರಂಪರಿಕ ಕಟ್ಟಡವಲ್ಲ. ಇದನ್ನು ತೆರವುಗೊಳಿಸಬಹುದು ಎಂದು ಸಿವಿಲ್ ಏಡ್ ಟೆಕ್ನೊಕ್ರಾಟಿಕ್ ಸಂಸ್ಥೆಯು ತಾಂತ್ರಿಕ ವರದಿ ನೀಡಿದೆ. ಈ ಬಗ್ಗೆ ಯಲ್ಲಪ್ಪರೆಡ್ಡಿ ಅವರ ನೇತೃತ್ವದಲ್ಲಿ ನಡೆದ ಲಾಲ್‌ಬಾಗ್ ಮತ್ತು ಕಬ್ಬನ್ ಉದ್ಯಾನ ಸಲಹಾ ಸಮಿತಿಯಲ್ಲಿ ತಾಂತ್ರಿಕ ವರದಿಯಂತೆ ಕ್ರಮ ಕೈಗೊಳ್ಳಲು ನಿರ್ಧರಿಸಲಾಗಿದೆ. ಸುವರ್ಣ ಕರ್ನಾಟಕ ಪ್ರತಿಷ್ಠಾನದ ಸಮಿತಿಯಲ್ಲಿ ಚರ್ಚಿಸಿ ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು’ ಎಂದು ತೋಟಗಾರಿಕೆ ಇಲಾಖೆ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ಸದ್ಯ, ಮಳೆಗೆ ಈ ಕಟ್ಟಡ ಸಂಪೂರ್ಣ ಬಿದ್ದು ಹೋಗಿದೆ. ‘ಈ ಕಟ್ಟಡ ಶಿಥಿಲಾವಸ್ಥೆಗೆ ತಲುಪಿದೆ’ ಎಂಬ ಫಲಕವನ್ನು ಅದಕ್ಕೆ ನೇತುಹಾಕಲಾಗಿದೆ.

ಕಣ್ಮರೆಯಾದ ಮೀನು, ಪ್ರಾಣಿ ಪಕ್ಷಿಗಳ ಕಲರವ

‘ಲಾಲ್‌ಬಾಗ್‌ನ ಕೆ. ನಂಜಪ್ಪ ಸ್ಮಾರಕದಲ್ಲಿದ್ದ ಮತ್ಸ್ಯಾಲಯದಲ್ಲಿದ್ದ ಬಣ್ಣ–ಬಣ್ಣದ ಮೀನುಗಳು, ಹೊರ ಆವರಣದಲ್ಲಿದ್ದ ವಿವಿಧ ಜಾತಿ ಪಕ್ಷಿಗಳು ಪ್ರತಿಯೊಬ್ಬರನ್ನು ಸೆಳೆಯುತ್ತಿದ್ದವು. ಇದು ಕಾರ್ಯನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಲಾಲ್‌ಬಾಗ್‌ಗೆ ಆಗಮಿಸುವವರ ಸಂಖ್ಯೆಯು ಹೆಚ್ಚಿತ್ತು’ ಎಂದು ವಾಯುವಿಹಾರಿ ಜಯಕುಮಾರ್ ತಿಳಿಸಿದ್ದಾರೆ.

‘ಈ ಕಟ್ಟಡದ ನವೀಕರಣ ಮಾಡಿ, ಬಗೆಬಗೆಯ ಮೀನುಗಳು, ಪ್ರಾಣಿ–ಪಕ್ಷಿಗಳನ್ನು ನೋಡುವ ಅವಕಾಶ ತೋಟಗಾರಿಕೆ ಇಲಾಖೆ ಒದಗಿಸಬೇಕು’ ಎಂದು ಒತ್ತಾಯಿಸಿದರು.

ವಾಯುವಿಹಾರಿಗಳ ಅಭಿಪ್ರಾಯ

ಲಾಲ್‌ಬಾಗ್ ಮತ್ತು ಕಬ್ಬನ್ ಉದ್ಯಾನಗಳು ‘ಸಿಲಿಕಾನ್ ಸಿಟಿ’ಯ ಜನರ ಆಮ್ಲಜನಕದ ಟ್ಯಾಂಕ್‌ನಂತೆ ಕಾರ್ಯ ನಿರ್ವಹಿಸುತ್ತಿವೆ. ಆದರೆ, ಸರಿಯಾಗಿ ನಿರ್ವಹಣೆ ಮಾಡದ ಕಾರಣ ಇಲ್ಲಿನ ಹಳೆಯ ಸ್ಮಾರಕಗಳು ಭೂತ ಬಂಗಲೆಗಳಾಗಿ ಮಾರ್ಪಟ್ಟಿವೆ. ಫಲ–ಪುಷ್ಪ ಪ್ರದರ್ಶನ ಸಂದರ್ಭದಲ್ಲಿ ಮಾತ್ರ ಲಾಲ್‌ಬಾಗ್ ಉದ್ಯಾನವನ್ನು ಸರಿಯಾಗಿ ನಿರ್ವಹಣೆ ಮಾಡಲಾಗುತ್ತದೆ. ಉಳಿದ ಸಮಯದಲ್ಲಿ ನಿರ್ವಹಣೆಯ ಕೊರತೆ ಇದೆ.

ಜಯಕುಮಾರ್, ವಾಯುವಿಹಾರಿ

ಮತ್ಸ್ಯಾಲಯ ಕಟ್ಟಡ ಪಾಳು ಬಿದ್ದಿದ್ದರಿಂದ ಹುಳು–ಹುಪ್ಪಟೆಗಳ ಆವಾಸ ಸ್ಥಾನವಾಗಿ ಮಾರ್ಪಟ್ಟಿದೆ. ಜೊತೆಗೆ ಅಕ್ರಮ ಚಟುವಟಿಕೆಗಳ ತಾಣವಾಗಿದೆ. ಕಬ್ಬನ್ ಉದ್ಯಾನದಲ್ಲಿರುವ ಮತ್ಸ್ಯಾಲಯವನ್ನು ಅಭಿವೃದ್ಧಿಗೊಳಿಸಿರುವಂತೆ ಲಾಲ್‌ಬಾಗ್‌ನ ಮತ್ಸ್ಯಾಲಯವನ್ನು ಅಭಿವೃದ್ಧಿಗೊಳಿಸಬೇಕು.

ರವಿಚಂದ್ರ, ರಾಜ್ಯ ನಡಿಗೆದಾರರ ಒಕ್ಕೂಟದ ಅಧ್ಯಕ್ಷ

ಪೌರಕಾರ್ಮಿಕರ ಕಾಯಂಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ನೇರ ವೇತನ ಪೌರಕಾರ್ಮಿಕರು, ಮೇಲ್ವಿಚಾರಕರು ಹಾಗೂ ಗುತ್ತಿಗೆ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರನ್ನು ಕಾಯಂಗೊಳಿಸುವಂತೆ ಒತ್ತಾಯಿಸಿ ಇದೇ 5ರಂದು ಬಿಬಿಎಂಪಿ ಕೇಂದ್ರ ಕಚೇರಿಯ ಮುಂಭಾಗದಲ್ಲಿ ಸಾಂಕೇತಿಕ ಪ್ರತಿಭಟನೆ ನಡೆಸಲಾಗುವುದು ಎಂದು ಪೌರಕಾರ್ಮಿಕರ ಕ್ರಿಯಾ ಸಮಿತಿ ತಿಳಿಸಿದೆ.

ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಸಮಿತಿ ಉಪಾಧ್ಯಕ್ಷ ಎಂ.ಸುಬ್ಬರಾಯುಡು, ‘ ಬಿಬಿಎಂಪಿ ನೇರ ವೇತನ ಪೌರಕಾರ್ಮಿಕರು, ಲಾರಿ, ಆಟೊ ಚಾಲಕರು, ಸಹಾಯಕರು, ಲೋಡರ್ಸ್ ಹಾಗೂ ಕಸ ಸಂಗ್ರಹಗಾರರನ್ನು ಕೂಡಲೇ ಕಾಯಂ ಮಾಡಬೇಕೆಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಮನವಿ ಸಲ್ಲಿಸಲಾಗುವುದು’ ಎಂದು ತಿಳಿಸಿದರು.

‘ಅಕ್ಟೋಬರ್ ತಿಂಗಳಲ್ಲಿ ನಡೆದ ಕಾರ್ಮಿಕರ ಜಾಗೃತಿ ಸಮಾವೇಶದಲ್ಲಿ ಸಚಿವರಾದ ರಾಮಲಿಂಗಾರೆಡ್ಡಿ, ದಿನೇಶ್ ಗುಂಡೂರಾವ್ ಅವರು ನೇರ ವೇತನ ವ್ಯವಸ್ಥೆ ಪೌರಕಾರ್ಮಿಕರು ಹಾಗೂ ಗುತ್ತಿಗೆ ಕಾರ್ಮಿಕರನ್ನು ಕಾಯಂಗೊಳಿಸುವ ಭರವಸೆ ನೀಡಿದ್ದರು. ಆದರೆ, ಇದುವರೆಗೂ ಈ ಬಗ್ಗೆ ಮಾತನಾಡುತ್ತಿಲ್ಲ’ ಎಂದು ಹೇಳಿದರು.

ಕ್ರಿಯಾ ಸಮಿತಿಯ ನರಸಿಂಹ, ಜಿ. ಕೃಷ್ಣಯ್ಯ, ಕೆ.ಬಿ. ನರಸಿಂಹ ಇದ್ದರು.

ಯಲಹಂಕ: ಅಂಗವಿಕಲರ ಹಕ್ಕುಗಳ ಜಾಗೃತಿಗಾಗಿ ವಾಕಥಾನ್

ಪ್ರಜಾವಾಣಿ ವಾರ್ತೆ

ಯಲಹಂಕ ಉಪನಗರದ ಮಾತೃ ಅಂಧರ ಮತ್ತು ಇತರೆ ವಿಶೇಷ ಚೇತನರ ಶಿಕ್ಷಣಸಂಸ್ಥೆಯ ಆಶ್ರಯದಲ್ಲಿ ವಿಶ್ವ ಅಂಗವಿಕಲರ ದಿನಾಚರಣೆ ಪ್ರಯುಕ್ತ ಅಂಗವಿಕಲರ ಹಕ್ಕುಗಳ ಜಾಗೃತಿನಡಿಗೆ ‘ವಾಕಥಾನ್’ ಹಮ್ಮಿಕೊಳ್ಳಲಾಯಿತು

ಯಲಹಂಕ: ಮಾತೃ ಅಂಧರ ಮತ್ತು ಇತರೆ ವಿಶೇಷ ಚೇತನರ ಶಿಕ್ಷಣ ಸಂಸ್ಥೆ ಸಹಯೋಗದಲ್ಲಿ ವಿಶ್ವ ಅಂಗವಿಕಲರ ದಿನ ಪ್ರಯುಕ್ತ ಅಂಗವಿಕಲರ ಹಕ್ಕುಗಳ ಜಾಗೃತಿ ನಡಿಗೆ ‘ವಾಕಥಾನ್’ ಹಮ್ಮಿಕೊಳ್ಳಲಾಯಿತು.

ಸಿಂಗನಾಯಕನಹಳ್ಳಿ ರೈತರಸೇವಾ ಸಹಕಾರ ಬ್ಯಾಂಕಿನ ಅಧ್ಯಕ್ಷೆ ವಾಣಿಶ್ರೀ ವಿಶ್ವನಾಥ್ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ‘ಅಂಗವಿಕಲ ಮಕ್ಕಳ ಬಗ್ಗೆ ಕೇವಲ ಅನುಕಂಪದ ಮಾತುಗಳನ್ನಾಡದೆ ಕೈಲಾದ ಸಹಾಯ ಮಾಡುವ ಮೂಲಕ ಅವರ ಅಭಿವೃದ್ಧಿಗೆ ಸಹಕರಿಸಬೇಕು. ಅವರ ಹಕ್ಕುಗಳ ರಕ್ಷಣೆಗೆ ಸಮಾಜ ಹಾಗೂ ಸರ್ಕಾರ ಕಾರ್ಯನಿರ್ವಹಿಸಬೇಕು’ ಎಂದು ತಿಳಿಸಿದರು.

ಉಪನಗರದ ವಿವೇಕಾನಂದ ಉದ್ಯಾನದಿಂದ ಆರಂಭವಾದ ಜಾಗೃತಿ ಜಾಥಾ, ಉಪನಗರದ ಪ್ರಮುಖ ಬೀದಿಗಳ ಮೂಲಕ ಮದರ್ ಡೈರಿ ವೃತ್ತದವರೆಗೂ ಸಾಗಿತು. ವಿವಿಧ ಕಾಲೇಜುಗಳ ನೂರಾರು ವಿದ್ಯಾರ್ಥಿಗಳೂ ಪಾಲ್ಗೊಂಡಿದ್ದರು. ಮಾತೃ ಶಿಕ್ಷಣ ಸಂಸ್ಥೆಯ ಶಿಕ್ಷಕಿಯರು ಬೀದಿನಾಟಕ ಪ್ರದರ್ಶಿಸಿದರು.

ವ್ಯವಸ್ಥಾಪಕ ಟ್ರಸ್ಟಿ ಗುಬ್ಬಿ ಆರ್. ಮುಕ್ತ ಇದ್ದರು.

ಸಂಕ್ಷಿಪ್ತ ಸುದ್ದಿ

ಮಂಜುನಾಥ್ ಪ್ರಸಾದ್‌ಗೆ ಹೆಚ್ಚುವರಿ ಹೊಣೆ

ಬೆಂಗಳೂರು: ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್ ಅವರಿಗೆ ಹೊಸತಾಗಿ ಸೃಷ್ಟಿಸಿರುವ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

ಇಬ್ಬರ ಅಮಾನತು

ಆನೇಕಲ್ : ತಾಲ್ಲೂಕಿನ ಚಂದಾಪುರ ಪುರಸಭೆಯಲ್ಲಿ ಭಾನುವಾರ ರಾತ್ರಿ ಪುರಸಭೆಯ ಸಿಬ್ಬಂದಿ ಕೆಲವು ಕಡತಗಳನ್ನು ಅಕ್ರಮವಾಗಿ ಸಾಗಿಸುತ್ತಿದ್ದ ಸಿಬ್ಬಂದಿಗಳನ್ನು ಸ್ಥಳೀಯರು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದು, ಈ ಹಿನ್ನೆಲೆಯಲ್ಲಿ ಬೆಂಗಳೂರು ನಗರ ಜಿಲ್ಲಾಧಿಕಾರಿ ಕೆ.ಎ. ದಯಾನಂದ ಅವರು ಇಬ್ಬರು ಸಿಬ್ಬಂದಿಯನ್ನು ಅಮಾನತುಗೊಳಿಸಿ ಆದೇಶ ಹೊರಡಿಸಿದ್ದಾರೆ.

ಮೇಲಾಧಿಕಾರಿಗಳ ಅನುಮತಿಯಿಲ್ಲದೇ ಕಡತಗಳನ್ನು ಹೊರಗಡೆ ಕೊಂಡೊಯ್ಯುತ್ತಿದ್ದ ಆರೋಪದ ಮೇಲೆ ಪುರಸಭೆಯ ಕಿರಿಯ ಆರೋಗ್ಯ ನಿರೀಕ್ಷಕಿ ಅಮೃತ ಮತ್ತು ಹಿರಿಯ ಆರೋಗ್ಯ ನಿರೀಕ್ಷಕ ರಮೇಶ್ ರಾಜು ಅವರನ್ನು ಅಮಾನತುಗೊಳಿಸಿದ್ದಾರೆ.

ಪುರಸಭೆಯ ಮುಖ್ಯಾಧಿಕಾರಿಯಾಗಿದ್ದ ಶ್ವೇತಾ ಬಾಯಿ ಅವರು ಹಲವು ಅಕ್ರಮ ನಡೆಸಿದ್ದಾರೆ ಎಂದು 21 ಮಂದಿ ಪುರಸಭೆ ಸದಸ್ಯರು ಶುಕ್ರವಾರ ಪತ್ರಿಕಾಗೋಷ್ಠಿ ಎಂದು ಆರೋಪಿಸಿದ್ದರು. ಆರೋಪ ಮಾಡಿದ ಎರಡೇ ದಿನದಲ್ಲಿ ಕಚೇರಿಯ ಪ್ರಮುಖ ಕಡತ ಸಾಗಿಸುವ ಯತ್ನ ನಡೆದಿದೆ. ದಾಖಲೆಗಳನ್ನು ತಿದ್ದಲು ಕಡತ ಸಾಗಿಸಲಾಗುತ್ತಿತು ಎಂದು ಶಂಕಿಸಲಾಗಿದೆ.

ಈ ಸಂಬಂಧ ಪುರಸಭೆಯ ಪ್ರಭಾರ ಮುಖ್ಯಾಧಿಕಾರಿ ಸುಧಾಕರ್ ಅವರು ಡಿ.4ರ ಸೋಮವಾರ ಬೆಳಗಿನ ಜಾವ 3ಗಂಟೆಗೆ ಸೂರ್ಯಸಿಟಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

‘50 ಸಾವಿರ ಮನೆ ಬಡವರಿಗೆ ಹಸ್ತಾಂತರಿಸಿ’

ಬೆಂಗಳೂರು: ಬಡ ಫಲಾನುಭವಿಗಳಿಗೆ 50 ಸಾವಿರ ಮನೆಗಳನ್ನು ನಿರ್ಮಿಸಿ, ಉಚಿತವಾಗಿ ನೀಡುವ ಕಾಂಗ್ರೆಸ್‌ನ 6ನೇ ಗ್ಯಾರಂಟಿ ಕೂಡಲೇ ಜಾರಿಗೊಳಿಸುವಂತೆ ಇಂಡಿಯನ್ ಫ್ರೀಡಂ ಪ್ಯಾಂಥರ್ಸ್ ಸಂಘಟನೆ ಆಗ್ರಹಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘಟನೆ ಅಧ್ಯಕ್ಷ ಅರುಣ ಕುಮಾರ್, ‘ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ವಸತಿ ಸಚಿವ ಜಮೀರ್ ಅಹಮದ್ ಖಾನ್ ಅವರು ರಾಜ್ಯ ವಿಧಾನಸಭೆ ಚುನಾವಣೆಗೂ ಮುಂಚಿತವಾಗಿ ಹೊಸಪೇಟೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಬಡವರಿಗೆ, ಮಧ್ಯಮ ವರ್ಗದವರಿಗೆ ಉಚಿತವಾಗಿ ಮನೆಗಳನ್ನು ನಿರ್ಮಿಸಿ ಕೊಡುತ್ತೇವೆ ಎಂದು ಭರವಸೆ ನೀಡಿದ್ದರು. ಆದರೆ, ಸರ್ಕಾರ ಬಂದು ಆರು ತಿಂಗಳಾದರೂ ಈ ಬಗ್ಗೆ ಮಾತನಾಡುತ್ತಿಲ್ಲ’ ಎಂದರು.

‘ಸರ್ಕಾರಕ್ಕೆ ಮನೆಗಳನ್ನು ಉಚಿವಾಗಿ ನೀಡಲು ಸಾಧ್ಯವಾಗದಿದ್ದರೆ, ಕೇಂದ್ರ–ರಾಜ್ಯ ಸರ್ಕಾರಗಳ ಸಬ್ಸಿಡಿ ಹೊರತುಪಡಿಸಿ, ಫಲಾನುಭವಿಗಳ ಪಾಲಿನ ₹3 ಲಕ್ಷ ವಂತಿಗೆಯನ್ನು ಕಡಿಮೆ ಬಡ್ಡಿ ದರದಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲದ ಮೂಲಕ ಒದಗಿಸಿ, ಮನೆಗಳನ್ನು ಹಸ್ತಾಂತರಿಸಬೇಕು. 25 ವರ್ಷಗಳ ಹಿಂದಿನ ಸಬ್ಸಿಡಿ ಪದ್ಧತಿಯನ್ನು ಪರಿಷ್ಕೃತಗೊಳಿಸಿ ₹ 5 ಲಕ್ಷಕ್ಕೆ ಹೆಚ್ಚಿಸಬೇಕು. 2024ರ ಮಾರ್ಚ್ ಒಳಗೆ ಕಾಮಗಾರಿ ಮುಗಿಸಿ ಬಡವರಿಗೆ ಮನೆಗಳನ್ನು ಹಸ್ತಾಂತರ ಮಾಡಬೇಕು’ ಎಂದು ಒತ್ತಾಯಿಸಿದ್ದಾರೆ.

ಪುರಸಭಾ ಕಾರ್ಯಾಲಯ, ಶ್ರೀನಿವಾಸಪುರ

ಕೋಲಾರ ಜಿಲ್ಲೆ–563135

Email id:itstaff_ulb_srinivasapura@yahoo.co.in

web:www.srinivasapuratown.mrc.gov.in, ದೂ.ಸಂ. 08157–245160,246231

ಸಂಖ್ಯೆ:ಮುಸಶ್ರೀ/ತಾಂತ್ರಿಕ/ಸಿಆರ್/57/2023–24 ದಿನಾಂಕ:02.12.2023

ಟೆಂಡರ್ ಪ್ರಕಟಣೆ

(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–1 ಮತ್ತು 2ರ ನಿಬಂಧನೆಗಳಿಗೆ ಒಳಪಟ್ಟು ಇ–ಟೆಂಡರ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ).

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000 ರ ಪ್ರಕಾರ 2022–23 ನೇ ಸಾಲಿನ SBM 2.0 ಯೋಜನೆ ಅನುದಾನದಡಿಯಲ್ಲಿ ಇ–ಪ್ರಕ್ಯೂರ್‌ಮೆಂಟ್ ಏಕ ಲಕೋಟೆ ಪದ್ಧತಿಯಲ್ಲಿ ಶ್ರೀನಿವಾಸಪುರ ಪುರಸಭೆ ವ್ಯಾಪ್ತಿಯಲ್ಲಿನ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರು ರವರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಇ–ಪ್ರಕ್ಯೂರ್‌ಮೆಂಟ್ ಇಲಾಖಾ ವೆಬ್‌ಸೈಟ್ **http://kppp.karnataka.gov.in** ರಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು ಹಾಗೂ ವಿವರಗಳನ್ನು ಪಡೆಯಬಹುದಾಗಿದೆ. (1) ಖಾಲಿ ಟೆಂಡರ್ ಫಾರಂಗಳಿಗೆ ಇ–ಪ್ರಕ್ಯೂರ್‌ಮೆಂಟ್ ಪ್ರಕಾರ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್–ಬಿ ಗಳನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ **ದಿನಾಂಕ: 11.12.2023 ರ ಸಂಜೆ 05.00 ಗಂಟೆವರೆಗೆ.** (2) ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್‌ನ್ನು ತೆರೆಯುವ **ದಿನಾಂಕ: 13.12.2023 ಬೆಳಗ್ಗೆ 11.00 ಗಂಟೆಗೆ. 2022–23 ನೇ ಸಾಲಿನ SBM2.0 ಯೋಜನೆ: ಕಾಮಗಾರಿಗಳ ವಿವರ: (1) DMA/2023-24/BD/WORK_INDENT8371. ಅಂದಾಜು ಮೊತ್ತ: ರೂ. 18.00 ಲಕ್ಷಗಳು,** ಇ.ಎಂ.ಡಿ ಮೊತ್ತ: **ರೂ.45,000/–, ಕಾಲಾವಧಿ: 3 ತಿಂಗಳು. (2) DMA/2023-24/BD/WORK_INDENT8391. ಅಂದಾಜು ಮೊತ್ತ: ರೂ. 10.00 ಲಕ್ಷ**, ಇ.ಎಂ.ಡಿ ಮೊತ್ತ: **ರೂ. 25,000/–, ಕಾಲಾವಧಿ: 3 ತಿಂಗಳು. ಸೂಚನೆ:** ಹೆಚ್ಚಿನ ವಿವರಗಳಿಗಾಗಿ ಪುರಸಭೆ ತಾಂತ್ರಿಕ ವಿಭಾಗದಲ್ಲಿ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/– ಮುಖ್ಯಾಧಿಕಾರಿ, ಪುರಸಭೆ, ಶ್ರೀನಿವಾಸಪುರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:236/ಕೆಎಸ್‌ಎಂಸಿಎ/2023–24

ಇಸ್ರೋ ISRO

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ,
ಎಲೆಕ್ಟ್ರೋ–ಆಪ್ಟಿಕ್ಸ್ ಸಿಸ್ಟಮ್‌ಗಳಿಗಾಗಿ ಪ್ರಯೋಗಾಲಯ (ಎಲ್‌ಇಒಎಸ್)
ಪೀಣ್ಯ, ಬೆಂಗಳೂರು–560058, ಎಲ್‌ಇಒಎಸ್ ನಿರ್ಮಾಣ ಮತ್ತು ನಿರ್ವಹಣಾ ಸಮೂಹ (ಎಲ್‌ಸಿಎಂಜಿ)
(ದೂರವಾಣಿ: (080) 5193, 5093, 5086) (ಫ್ಯಾಕ್ಸ್: (080)–28392310)

ಸಂಕ್ಷಿಪ್ತ ಇ–ಟೆಂಡರ್ (ಎನ್‌ಐಇಟಿ) ಆಹ್ವಾನಿಸುವ ಪ್ರಕಟಣೆ

ಭಾರತದ ರಾಷ್ಟ್ರಪತಿಗಳ ಪರವಾಗಿ, ಈ ಕೆಳಗಿನ ಕೆಲಸಕ್ಕಾಗಿ ಐಟಂ ದರದ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕೆಲಸದ ಹೆಸರು; ಎನ್‌ಐಟಿ ನಂ. & ದಿನಾಂಕ : ಆರ್ಯಭಟ ಕ್ಯಾಂಪಸ್, ಪೀಣ್ಯ, ಬೆಂಗಳೂರು–58 ರಲ್ಲಿ ಉದ್ದೇಶಿತ ಫ್ರಿಸ್ಕಿಂಗ್ ಕೊಠಡಿ. ಎನ್‌ಐಇಟಿ: CMG/LEOS/2023-24/LMN-05 ದಿನಾಂಕ : 30.11.2023, **ಟೆಂಡರ್ ಮತ್ತು ಇಎಂಡಿಗೆ ಇಡಲಾದ ಅಂದಾಜು ವೆಚ್ಚ :** ರೂ. 21.55 ಲಕ್ಷಗಳು ಇಎಂಡಿ ರೂ.43,095/– **ತಿಂಗಳುಗಳಲ್ಲಿ ಪೂರ್ಣಗೊಳಿಸುವ ಅವದಿ:** 04 ತಿಂಗಳುಗಳು, ಟೆಂಡರ್ ಡಾಕ್ಯುಮೆಂಟ್ ಅನ್ನು ಡೌನ್‌ಲೋಡ್ ಮಾಡಬಹುದಾದ ಅವಧಿ : **ತೆರೆಯುವ ದಿನಾಂಕ :** 05.12.2023, **ಮುಕ್ತಾಯವಾಗುವ ದಿನಾಂಕ :** 21.12.2023

ಕೆಲಸದ ಹೆಸರು; ಎನ್‌ಐಟಿ ನಂ. & ದಿನಾಂಕ : ಎಲ್‌ಇಒಎಸ್ ಕ್ಯಾಂಪಸ್, ಪೀಣ್ಯ, ಬೆಂಗಳೂರು–58ನಲ್ಲಿ ಪ್ರಸ್ತಾವಿತ ವಿವಿಧ ನಾಗರಿಕ ಕೆಲಸಗಳು, ಎನ್‌ಐಇಟಿ: CMG/LEOS/2023-24/LMN-08 ದಿನಾಂಕ : 30.11.2023, **ಟೆಂಡರ್ ಮತ್ತು ಇಎಂಡಿಗೆ ಇಡಲಾದ ಅಂದಾಜು ವೆಚ್ಚ :** ರೂ. 24.15 ಲಕ್ಷಗಳು ಇಎಂಡಿ ರೂ.48,301/– **ತಿಂಗಳುಗಳಲ್ಲಿ ಪೂರ್ಣಗೊಳಿಸುವ ಅವದಿ:** 03 ತಿಂಗಳುಗಳು, ಟೆಂಡರ್ ಡಾಕ್ಯುಮೆಂಟ್ ಅನ್ನು ಡೌನ್‌ಲೋಡ್ ಮಾಡಬಹುದಾದ ಅವಧಿ : **ತೆರೆಯುವ ದಿನಾಂಕ :** 05.12.2023, **ಮುಕ್ತಾಯವಾಗುವ ದಿನಾಂಕ :** 21.12.2023

ಕೆಲಸದ ಹೆಸರು; ಎನ್‌ಐಟಿ ನಂ. & ದಿನಾಂಕ : ಎಲ್‌ಇಒಎಸ್ ಕ್ಯಾಂಪಸ್, ಪೀಣ್ಯ, ಬೆಂಗಳೂರು–58ನಲ್ಲಿ ವಿವಿಧ ಸೌಲಭ್ಯಗಳಿಗಾಗಿ ನೇಮ್ ಬೋರ್ಡ್‌ಗಳು/ಸೈನ್ ಬೋರ್ಡ್‌ಗಳು ಮತ್ತು ಭಿತ್ತಿಚಿತ್ರಗಳನ್ನು ಒದಗಿಸಲು ಮತ್ತು ಸರಿಪಡಿಸಲು ದರ ಒಪ್ಪಂದ, ಎನ್‌ಐಇಟಿ: CMG/LEOS/2023-24/LMN-09 ದಿನಾಂಕ : 30.11.2023, **ಟೆಂಡರ್ ಮತ್ತು ಇಎಂಡಿಗೆ ಇಡಲಾದ ಅಂದಾಜು ವೆಚ್ಚ :** ರೂ. 6.37 ಲಕ್ಷಗಳು ಇಎಂಡಿ ರೂ.12,731/– **ತಿಂಗಳುಗಳಲ್ಲಿ ಪೂರ್ಣಗೊಳಿಸುವ ಅವದಿ:** 01 ವರ್ಷ, ಟೆಂಡರ್ ಡಾಕ್ಯುಮೆಂಟ್ ಅನ್ನು ಡೌನ್‌ಲೋಡ್ ಮಾಡಬಹುದಾದ ಅವಧಿ : **ತೆರೆಯುವ ದಿನಾಂಕ :** 05.12.2023, **ಮುಕ್ತಾಯವಾಗುವ ದಿನಾಂಕ :** 21.12.2023

ಆಸಕ್ತ ಟೆಂಡರುದಾರರು ಇ–ಟೆಂಡರ್ (ಎನ್‌ಐಇಟಿ) ಆಹ್ವಾನದ ಪ್ರಕಟಣೆಯ ಅರ್ಹತಾ ಮಾನದಂಡ ಮತ್ತು ಇತರೆ ವಿವರವನ್ನು **www.isro.gov.in** ವೆಬ್‌ಸೈಟ್‌ನಲ್ಲಿ ಪರಿಶೀಲಿಸಬಹುದು ಮತ್ತು ಟೆಂಡರ್ ದಾಖಲೆಗಳನ್ನು **www.tenderwizard.com/ISRO** ನಿಂದ ಡೌನ್‌ಲೋಡ್ ಮಾಡಬಹುದು.

ಸಹಿ/– ಸಮೂಹ ನಿರ್ದೇಶಕ
(ನಿರ್ಮಾಣ ಮತ್ತು ನಿರ್ವಹಣಾ ಸಮೂಹ) (ಸಿ&ಎಚಿಜಿ) ಯುಆರ್‌ಎಸ್‌ಸಿ, ಬೆಂಗಳೂರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ:ಬೆಂಅಪ್ರಾ/ನಯೋಸ/CLU–124/2022–23/1856/2023–24 ದಿನಾಂಕ:04.12.2023

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾ ಯೋಜನೆ 2015ರ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಬಿ.ಗೌತಮ್‌ಕುಮಾರ್ ರೆಡ್ಡಿ ಮತ್ತು ನಾಗಲಕ್ಷ್ಮಿ.ಇ	ಆನೇಕಲ್	ಸರ್ಜಾಪುರ	ತಿಗಳ ಚೌಡದೇನಹಳ್ಳಿ	125/2	1–00	ವ್ಯವಸಾಯ	ವಸತಿ
2	ಪ್ರದೀಪ್ ವೆಂಕಟಪ್ಪ				131/3	1–25		

ಷರಾ: ಈ ಜಮೀನುಗಳನ್ನು ವಸತಿ ಉದ್ದೇಶಕ್ಕೆ ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕರಿಗೆ ಕಡಿಮೆ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ಜಮೀನುಗಳಲ್ಲಿ ವಿನ್ಯಾಸ ಅಭಿವೃದ್ಧಿ ಸಮಯದಲ್ಲಿ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ಸೃಷ್ಟಿಯಾಗುತ್ತವೆ.. ಜಮೀನುಗಳಲ್ಲಿ ವಸತಿ ಉದ್ದೇಶಕ್ಕೆ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶದ ಅಭಿವೃದ್ಧಿ ಹೊಂದುತ್ತವೆ ಮತ್ತು ಜಮೀನುಗಳ ಅಭಿವೃದ್ಧಿಯಿಂದ ಸಾರ್ವಜನಿಕ ಪ್ರದೇಶಗಳು ಲಭ್ಯವಾಗುತ್ತವೆ ಎಂದು ಅರ್ಜಿದಾರರು ತಿಳಿಸುತ್ತಾ, ಸದರಿ ಪ್ರದೇಶವನ್ನು ‘ವ್ಯವಸಾಯ ವಲಯ’ ದಿಂದ ‘ವಸತಿ ಉಪಯೋಗಕ್ಕೆ’ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

BDA/PRO/CLU/65/2023-24 **ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು**

ನಗರಸಭಾ ಕಾರ್ಯಾಲಯ ಮಾದನಾಯಕನಹಳ್ಳಿ

ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರಜಿಲ್ಲೆ – 562123,
E-mail: itstaff_ulb_mnhalli@yahoo.com ದೂರವಾಣಿ ಸಂಖ್ಯೆ: 080–23718487

ಸಂಖ್ಯೆ: ಮಾ.ನ.ಕಾ/ತಾ.ಶಾ/11/2023–24 ದಿನಾಂಕ: 04–12–2023

ಅಲ್ಪಾವಧಿ ಟೆಂಡರ್ ಪ್ರಕಟಣೆ
(Through GOK e-Procurement Portal www.kppp.karnataka.gov.in only)

ಸ್ವಚ್ಛ ಭಾರತ್ ಮಿಷನ್(ನಗರ) 2.0 ಮತ್ತು ನಗರಸಭಾ ಅನುದಾನದ ಅಡಿಯಲ್ಲಿ ಮಾದನಾಯಕನಹಳ್ಳಿ ನಗರಸಭಾ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಪೌರಾಯುಕ್ತರು, ನಗರಸಭೆ ಮಾದನಾಯಕನಹಳ್ಳಿ ಇವರ ಹೆಸರಿನಲ್ಲಿ ಇ–ಪ್ರೊಕ್ಯೂರ್‌ಮೆಂಟ್ ವೇದಿಕೆಯಡಿಯಲ್ಲಿ ಈ ಕೆಳಕಂಡಂತೆ ಐಟಂವಾರು ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದ್ದು, ಕರ್ನಾಟಕ ಲೋಕೋಪಯೋಗಿ ಇಲಾಖೆ/ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಇಲಾಖೆಯಲ್ಲಿ ನೊಂದಾಯಿಸಿದ 3ನೇ ದರ್ಜೆ ಹಾಗೂ ಮೇಲ್ಪಟ್ಟ ಅರ್ಹ ಹಾಗೂ ಅನುಭವವುಳ್ಳ ಸಿವಿಲ್ ಗುತ್ತಿಗೆದಾರರು (ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನಂತೆ) ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳನ್ನು ಕಛೇರಿಯ ವೇಳೆಯಲ್ಲಿ ತಾಂತ್ರಿಕ ಶಾಖೆಯಿಂದ ಪಡೆಯಬಹುದಾಗಿರುತ್ತದೆ.

ಕ್ರಮ. ಸಂ.	ಇಂಡೆಂಟ್	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ (ರೂ.ಗಳಲ್ಲಿ)	ಕಾಲಾವಧಿ	ವರ್ಗ
1.	DMA/2023-24/BD/WORK_INDENT8453	26.36	50,000	03 ತಿಂಗಳು	Others
2.	DMA/2023-24/BD/WORK_INDENT8454	26.36	50,000	03 ತಿಂಗಳು	Others
3.	DMA/2023-24/BD/WORK_INDENT8455	26.36	50,000	03 ತಿಂಗಳು	Others
4.	DMA/2023-24/BD/WORK_INDENT8456	32.16	54,000	03 ತಿಂಗಳು	Others

ಟೆಂಡರ್ ಸಲ್ಲಿಸುವ ವಿವರಗಳು:– (1) ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿ ಸಲ್ಲಿಸಲು, ನಮೂನೆಗಳನ್ನು ಆನ್‌ಲೈನ್ ನಲ್ಲಿ ಪಡೆಯಲು, ಹಾಗೂ ಆನ್‌ಲೈನ್ ಮೂಲಕ ಭರ್ತಿಮಾಡಿದ ನಮೂನೆ ಮತ್ತು ಇ.ಎಂ.ಡಿ ಠೇವಣಿಯನ್ನು ಸ್ವೀಕರಿಸುವ ಅವಧಿ ದಿನಾಂಕ: **11–12–2023** ಸಂಜೆ **5.00** ಗಂಟೆಯವರೆಗೆ (2) ಸಲ್ಲಿಸಿರುವ ಟೆಂಡರ್‌ಗಳನ್ನು ತೆರೆಯುವ ದಿನಾಂಕ: **12–12–2023** ಸಂಜೆ **5.30** ಗಂಟೆಯವರೆಗೆ ಅಥವಾ ಪೌರಾಯುಕ್ತರು ಸೂಚಿಸುವ ದಿನಾಂಕದಂದು.

ಸೂಚನೆ:– ಈ ಕಛೇರಿಯಿಂದ ನೀಡುವ ಇತರೆ ಎಲ್ಲಾ ಷರತ್ತುಗಳಿಗೆ ಬದ್ದರಾಗಿರತಕ್ಕದ್ದು, ಹಾಗೂ ಹೆಚ್ಚಿನ ವಿವರಗಳಿಗೆ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ.

ಸಹಿ/–
ಪೌರಾಯುಕ್ತರು,
ನಗರಸಭೆ, ಮಾದನಾಯಕನಹಳ್ಳಿ

ವಾಸಾಸಂಇ/ವಾಪ್ರಾ/2394/ಸ್ಕ್ಯಾನ್/2023–24

UPCOMING
PARISHRAMA PU COLLEGE
WITH INTEGRATED NEET, JEE MAINS & KCET TRAINING
Presents
ಪ್ರಜಾವಾಣಿ QUIZ CHAMPIONSHIP
Powered by BHIMA GOLD • DIAMONDS • SILVER • PLATINUM SINCE 1925

ಬೆಂಗಳೂರಿನ ವಿದ್ಯಾರ್ಥಿಗಳೇ, ಸ್ಪರ್ಧೆಗೆ ಸಿದ್ಧರಾಗಿ!

ಪ್ರಜಾವಾಣಿಯು ಅತ್ಯುತ್ಸಾಹದಿಂದ ನಿಮ್ಮ ನಗರಕ್ಕೆ ಪ್ರಜಾವಾಣಿ ಕ್ವಿಜ್ ಚಾಂಪಿಯನ್‌ಶಿಪ್‌ಗೆ ಕರೆಯನ್ನು ನೀಡುತ್ತಲಿದೆ.

ಬೆಂಗಳೂರಿನ 8 ರಿಂದ 10 ನೇ ತರಗತಿಯ ವಿದ್ಯಾರ್ಥಿಗಳೇ ಇದು ನಿಮ್ಮ ಸಮಯ.

ನಿಮ್ಮ ವಲಯದ ಅತ್ಯುತ್ತಮ ಪ್ರತಿಭೆಗಳೊಂದಿಗೆ ಸ್ಪರ್ಧಿಸಿ ನಗದು ಬಹುಮಾನವನ್ನು ಗೆಲ್ಲುವುದರ ಜೊತೆಗೆ ಗ್ರ್ಯಾಂಡ್ ಫಿನಾಲೆಗೆ ಆಯ್ಕೆಯಾಗಿ ಅತ್ಯಾಕರ್ಷಕ ಬಹುಮಾನಗಳನ್ನು ನಿಮ್ಮದಾಗಿಸಿಕೊಳ್ಳಿ.

ಬೆಂಗಳೂರು ವಲಯದ ಸುತ್ತಿನ ವಿವರಗಳು

ದಿನಾಂಕ	16.12.2023
ಸ್ಥಳ	ವಿವೇಕ ಸಭಾಂಗಣ (ಯುವಕ ಸಂಘ) ಯುವಪಥ, #4, 31ನೇ ಅಡ್ಡ ರಸ್ತೆ, 4ನೇ T ಬ್ಲಾಕ್ ಪೂರ್ವ, 4ನೇ ಬ್ಲಾಕ್, ಜಯನಗರ, ಬೆಂಗಳೂರು, ಕರ್ನಾಟಕ 560011
ಸಮಯ	ಬೆಳಿಗ್ಗೆ 9 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ

ತಕ್ಷಣವೇ ನೋಂದಾಯಿಸಿಕೊಳ್ಳಿ!

QR ಕೋಡನ್ನು ಸ್ಕ್ಯಾನ್ ಮಾಡಿ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ. ಅಥವಾ www.Prajavani.netಗೆ ಭೇಟಿ ಕೊಡಿ ಇಲ್ಲವೇ, 7338018541 ಈ ನಂಬರ್‌ಗೆ ಸಂಪರ್ಕಿಸಿ.

ಪ್ರವೇಶ ಉಚಿತ

Associate Sponsors Waffy | TV Partner asianet ಸುವರ್ಣ ನ್ಯೂಸ್ | Knowledge Partner QURIOSITY

ಬಿಬಿಎಂಪಿ: ಕೆರೆ ಪರಿಸರ ರಕ್ಷಣೆ, ಒತ್ತುವರಿ ತಡೆ, ದೂರು ವಿಲೇವಾರಿ ಮೇಲುಸ್ತುವಾರಿ

ಪ್ರತಿ ಕೆರೆಗೆ ನೋಡಲ್ ಅಧಿಕಾರಿ

• ಆರ್. ಮಂಜುನಾಥ್

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಕೆರೆಗಳ ರಕ್ಷಣೆ, ಸಮರ್ಪಕ ನಿರ್ವಹಣೆ, ನಾಗರಿಕರ ದೂರು ವಿಲೇವಾರಿ, ಒತ್ತುವರಿ ತಡೆ, ಭದ್ರತಾ ವ್ಯವಸ್ಥೆ ಬಲಪಡಿಸುವ ಜೊತೆಗೆ ಸಂಪೂರ್ಣ ಮೇಲುಸ್ತುವಾರಿಗೆ 140 ಕೆರೆಗಳಿಗೆ ನೋಡಲ್ ಅಧಿಕಾರಿಗಳನ್ನು ನೇಮಿಸಲಾಗಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ 210 ಕೆರೆಗಳಿದ್ದರೂ ಅಭಿವೃದ್ಧಿ, ಪುನಶ್ಚೇತನಗೊಂಡ ಹಾಗೂ ಮೇಲುಸ್ತುವಾರಿ ಅಗತ್ಯವಿರುವ 140 ಕೆರೆಗಳಿಗೆ ಮಾತ್ರ ನೋಡಲ್ ಅಧಿಕಾರಿಗಳನ್ನು ನಿಯೋಜಿಸಲಾಗಿದೆ.

ವಾರ್ಡ್, ಘನತ್ಯಾಜ್ಯ ನಿರ್ವಹಣೆ, ಬೃಹತ್ ನೀರುಗಾಲುವೆ, ಯೋಜನೆ, ಗುಣಮಟ್ಟ ಭರವಸೆ, ನಗರಯೋಜನೆ, ತಾಂತ್ರಿಕ ವೀಕ್ಷಣಾ ಸಮಿತಿ ಕೋಶ (ಟಿವಿಸಿಸಿ), ತಾಂತ್ರಿಕ ಎಂಜಿನಿಯರಿಂಗ್ ಕೋಶ (ಟಿಇಸಿ) ವಿಭಾಗ, ವಲಯ ಎಂಜಿನಿಯರ್‌ಗಳಿಗೆ ನೋಡಲ್ ಅಧಿಕಾರಿಯ ಜವಾಬ್ದಾರಿ ವಹಿಸಲಾಗಿದೆ.

ನೋಡಲ್ ಅಧಿಕಾರಿಗಳ ಜವಾಬ್ದಾರಿ: ಕೆರೆ ನಿರ್ವಹಣೆಗೆ ನೇಮಿಸಿರುವ ಗುತ್ತಿಗೆದಾರರು ನೀರು ನಿಲುಗಡೆ ಪ್ರದೇಶ, ಏರಿಯ ಇಳಿಜಾರಿನಲ್ಲಿ ಬೆಳೆಯುವ ಜೊಂಡು, ಗಿಡ–ಗಂಟೆಗಳನ್ನು ತೆಗೆಯಬೇಕು. ಕೆರೆಯ ಪಾದಚಾರಿ ಮಾರ್ಗವನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು. ಒಳಹರಿವಿನ ಸಿಲ್ಟ್ ಟ್ರ್ಯಾಪ್‌ನಲ್ಲಿ ಹೂಳನ್ನು ತೆಗೆಯಬೇಕು. ಘನತ್ಯಾಜ್ಯವನ್ನು ತೆರವುಗೊಳಿಸಬೇಕು. ಈ ಕಾಮಗಾರಿಗಳನ್ನು ನೋಡಲ್ ಅಧಿಕಾರಿ ಮೇಲುಸ್ತುವಾರಿ ವಹಿಸಬೇಕು.

ಕೆರೆಯ ಭದ್ರತೆಗೆ ನೇಮಿಸಿರುವ ಗೃಹ ರಕ್ಷಕ ದಳದ ಸಿಬ್ಬಂದಿ ನಿಗದಿತ ಪಾಳಿಯಲ್ಲಿ ಕರ್ತವ್ಯ ನಿರ್ವಹಿಸುವುದನ್ನು ದೃಢೀಕರಿಸಬೇಕು. ಸಾರ್ವಜನಿಕರ ವಾಯುವಿಹಾರಕ್ಕೆ ನಿಗದಿತ ಸಮಯದಲ್ಲಿ ಕೆರೆಯ ದ್ವಾರಗಳನ್ನು ತೆರೆಯಬೇಕು. ಒತ್ತುವರಿಯನ್ನು ತಡೆಗಟ್ಟಬೇಕು. ಗಡಿಯಲ್ಲಿ ಹಾಕಿರುವ ತಂತಿಬೇಲಿಯನ್ನು ಕಾಪಾಡಬೇಕು. ಅಹಿತಕರ/ ಕಾನೂನುಬಾಹಿತ ಘಟನೆಗಳು ಸಂಭವಿಸದಂತೆ ನೋಡಿಕೊಳ್ಳಬೇಕು.

ಕೆರೆ ವಿಭಾಗದ ಸಿಬ್ಬಂದಿ ಕೆರೆಯ ಪರಿವೀಕ್ಷಣೆ ಮಾಡಿ ದೂರುಗಳನ್ನು ವಿಲೇವಾರಿ ಮಾಡುತ್ತಿರುವ ಬಗ್ಗೆ ನೋಡಲ್ ಅಧಿಕಾರಿ ಪರಿಶೀಲಿಸಿಕೊಳ್ಳಬೇಕು ಎಂದು ಮುಖ್ಯ ಆಯುಕ್ತರು ಸೂಚಿಸಿದ್ ದಾರೆ.

ಪ್ರತಿ ವಾರ ವರದಿ: 'ನೋಡಲ್ ಅಧಿಕಾರಿಗೆ ವಹಿಸಲಾಗಿರುವ ಜವಾಬ್ದಾರಿ ಹಾಗೂ ಕೆರೆಗಳ ಸಂಬಂಧಿಸಿದ ಮಾಹಿತಿಗಳನ್ನು ಪ್ರತಿ ವಾರ ವರದಿ ರೂಪದಲ್ಲಿ ಮುಖ್ಯ ಆಯುಕ್ತರಿಗೆ ಸಲ್ಲಿಸಬೇಕು. ಸಾರ್ವಜನಿಕರ ದೂರುಗಳನ್ನು ಪರಿಹರಿಸಿರುವ ವಿವರಗಳೂ ಇರಬೇಕು' ಎಂದು ಅಧಿಕಾರಿಗಳು ತಿಳಿಸಿದರು.

ಒಳಚರಂಡಿ ನೀರು, ಗಿಡ–ಗಂಟಿಗಳಿಂದ ಕೂಡಿರುವ ರಾಜರಾಜೇಶ್ವರಿನಗರದ ಪಟ್ಟಣಗೆರೆ– ಕೆಂಚೇನಹಳ್ಳಿ ಕೆರೆ

ಎಲ್ಲಿ, ಎಷ್ಟು ಕೆರೆಗೆ ನೋಡಲ್ ಅಧಿಕಾರಿ?

ವಲಯ	ಕೆರೆಗಳ ಸಂಖ್ಯೆ
ಮಹದೇವಪುರ	46
ಬೊಮ್ಮನಹಳ್ಳಿ	30
ಆರ್.ಆರ್. ನಗರ	28
ಯಲಹಂಕ	21
ದಕ್ಷಿಣ	6
ದಾಸರಹಳ್ಳಿ	3
ಪೂರ್ವ	3
ಪಶ್ಚಿಮ	3

ಅಧಿಕಾರಿಗಳಿಗೆ ಗೊತ್ತೇ ಇಲ್ಲ!

ಕೆರೆಗಳ ಮೇಲುಸ್ತುವಾರಿಗೆ ನೋಡಲ್ ಅಧಿಕಾರಿಯಾಗಿ ನೇಮಕ ಮಾಡಿ ಡಿ.2ರಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಆದೇಶ ಹೊರಡಿಸಿದ್ದರೂ, ಈ ಬಗ್ಗೆ ಅಧಿಕಾರಿಗಳಿಗೆ ಯಾವುದೇ ಮಾಹಿತಿ ಇಲ್ಲ.

'ನಾನು ವಾರ್ಡ್ ಎಂಜಿನಿಯರ್, ನಾನು ಘನತ್ಯಾಜ್ಯ ನಿರ್ವಹಣೆ ಕಾರ್ಯಪಾಲಕ ಎಂಜಿನಿಯರ್, ನಾನು ಅಧೀಕ್ಷಕ ಎಂಜಿನಿಯರ್... ಕೆರೆಗೂ ನನಗೂ ಸಂಬಂಧ ಇಲ್ಲ' ಎಂದು ಹಲವು ಅಧಿಕಾರಿಗಳು ಪ್ರತಿಕ್ರಿಯಿಸಿದರು.

ಮುಖ್ಯ ಆಯುಕ್ತರು ಆದೇಶ ಹೊರಡಿಸಿದ್ದಾರೆ...' ಎಂದಾಗ 'ಅದು ಗಮನಕ್ಕೆ ಬಂದಿಲ್ಲ, ಕೆರೆ ನೋಡಿಕೊಳ್ಳಲು ಬೇರೆಯವರಿದ್ದಾರೆ' ಎಂದು ಅಧಿಕಾರಿಗಳು ಹೇಳಿದರು.

ತಂತ್ರಾಂಶ ಇನ್ನೂ ಸರಿಯಾಗಿಲ್ಲ!

ಕೆರೆ, ಉದ್ಯಾನಗಳ ನಿರ್ವಹಣೆಯನ್ನು ನಾಗರಿಕರಿಗೆ ನೀಡಲಾಗುತ್ತದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು 'ಬ್ರ್ಯಾಂಡ್ ಬೆಂಗಳೂರು ಸಮ್ಮೇಳನ'ದಲ್ಲಿ ಭರವಸೆ ನೀಡಿದ್ದರು. ಅದರಂತೆ 'ಕೆರೆ ಮಿತ್ರ' ಹಾಗೂ 'ಹಸಿರು ಮಿತ್ರ' ಯೋಜನೆಗೆ ವೆಬ್‌ಸೈಟ್‌ನಲ್ಲಿ ನೋಂದಣಿಗೆ ಆಹ್ವಾನಿಸಲಾಗಿತ್ತು. ಆದರೆ, ಬಿಬಿಎಂಪಿ ತಂತ್ರಾಂಶದ ವೈಫಲ್ಯ, ನಾಗರಿಕರ ನಿರಾಸಕ್ತಿಯಿಂದ ಅಂತಿಮ ದಿನವಾಗಿದ್ದ ಅ.31ರ ಅಂತ್ಯಕ್ಕೆ 1,158 ಆಸಕ್ತರು ಮಾತ್ರ ನೋಂದಣಿಯಾಗಿದ್ದರು.

'ಈ ತಂತ್ರಾಂಶವನ್ನು ಸರಿಪಡಿಸಿ ಮತ್ತೆ ನಾಗರಿಕರಿಗೆ ನೋಂದಣಿಗೆ ಅವಕಾಶ ನೀಡಲಾಗುತ್ತದೆ' ಎಂದು ಕೆರೆಗಳ ವಿಭಾಗದ ವಿಶೇಷ ಆಯುಕ್ತೆ ಪ್ರೀತಿ ಗೆಹ್ಲೋಟ್ ಹೇಳಿದ್ದರು. ಆದರೆ, ಈವರೆಗೆ ತಂತ್ರಾಂಶ ಸರಿಹೋಗಿಲ್ಲ.

'ಕೆರೆ ಹಾಗೂ ಉದ್ಯಾನಗಳ ಕಾಮಗಾರಿಗಳ ನಿರ್ವಹಣೆ, ದೂರುಗಳ ವಿಲೇವಾರಿಗೆ ಮೊಬೈಲ್ ಆ್ಯಪ್ ಸಿದ್ಧಪಡಿಸಲು ಬಿಬಿಎಂಪಿ ₹10 ಲಕ್ಷಕ್ಕೂ ಹೆಚ್ಚು ಹಣವನ್ನು ವ್ಯಯ ಮಾಡುತ್ತಿದೆ. ಆದರೆ, ಈವರೆಗೆ ಬಿಬಿಎಂಪಿ ಐಟಿ ವಿಭಾಗದಿಂದ ಈ ಕೆಲಸ ಮುಗಿದಿಲ್ಲ' ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದರು.

ಬಿಬಿಎಂಪಿ ನೌಕರರ ಸಭೆ ಇಂದು

ಬೆಂಗಳೂರು: ಬಿಬಿಎಂಪಿ ಕಂದಾಯ ವಿಭಾಗದ ಅಧಿಕಾರಿ, ಸಿಬ್ಬಂದಿ ತಮ್ಮ ಕಾರ್ಯ ಒತ್ತಡವನ್ನು ಕಡಿಮೆಗೊಳಿಸಬೇಕು ಎಂದು ಆಗ್ರಹಿಸಿ ಹೋರಾಟ ನಡೆಸಲು ಮುಂದಾಗಿದ್ದಾರೆ.

ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ವೇದಿಕೆಯಲ್ಲಿ ನೌಕರರು ಮಂಗಳವಾರ ಸಭೆ ನಡೆಸಲಿದ್ದು, ಹೋರಾಟದ ಹಾದಿಯನ್ನು ನಿರ್ಧರಿಸಲಿದ್ದಾರೆ.

'ಕಂದಾಯ ವಿಭಾಗದ ನೌಕರರಿಗೆ ವಿಶ್ರಾಂತಿ ನೀಡದೆ, ಸರ್ಕಾರಿ ರಜೆ ದಿನಗಳಲ್ಲೂ ಒತ್ತಡದ ಕೆಲಸವನ್ನು ವಹಿಸಲಾಗುತ್ತಿದೆ. ಏಕಕಾಲದಲ್ಲಿ ಚುನಾವಣೆ ಮತದಾರರ ಪಟ್ಟಿ ಕೆಲಸ, ತೆರಿಗೆ ಸಂಗ್ರಹ, ಸರ್ವೆ ನಿರ್ವಹಣೆ ಸೇರಿದಂತೆ ಡಿಜಿಟಲೀಕರಣದ ಕೆಲಸವನ್ನೂ ಮಾಡುವಂತೆ ಮೇಲಧಿಕಾರಿಗಳು ಕಿರುಕುಳ ನೀಡುತ್ತಿದ್ದಾರೆ. ಈ ಸಂಬಂಧ ನೌಕರರೊಂದಿಗೆ ಚರ್ಚೆ ನಡೆಸಿ, ಹೋರಾಟವನ್ನು ನಿರ್ಧರಿಸಲಾಗುವುದು' ಎಂದು ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್ ತಿಳಿಸಿದರು.

'ಪ್ರಜಾವಾಣಿ' ರಸಪ್ರಶ್ನೆ ಸ್ಪರ್ಧೆ ಡಿ. 16ರಂದು

8–10ನೇ ತರಗತಿ ವಿದ್ಯಾರ್ಥಿಗಳ ನೋಂದಣಿ ಆರಂಭ

ಬೆಂಗಳೂರು: ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ 'ಪ್ರಜಾವಾಣಿ' ವತಿಯಿಂದ ಡಿ. 16ರಂದು ರಾಜ್ಯಮಟ್ಟದ ರಸಪ್ರಶ್ನೆ ಸ್ಪರ್ಧೆ ಆಯೋಜಿಸಲಾಗಿದೆ.

ಪರಿಶ್ರಮ ಪಿಯು ಕಾಲೇಜು ಹಾಗೂ ಭೀಮಾ ಗೋಲ್ಡ್ ಸಹಯೋಗದಲ್ಲಿ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ. ಬೆಂಗಳೂರು ಜಯನಗರ 4ನೇ ಹಂತದ ವಿವೇಕ್ ಸಭಾಭವನದಲ್ಲಿ (ಯುವಕ ಸಂಘ) ಸ್ಪರ್ಧೆ ನಡೆಯಲಿದೆ.

ಬೆಂಗಳೂರು ವಲಯದ ಸ್ಪರ್ಧೆಯಲ್ಲಿ 8 ರಿಂದ 10ನೇ ತರಗತಿ ವರೆಗಿನ ವಿದ್ಯಾರ್ಥಿಗಳು–ವಿದ್ಯಾರ್ಥಿನಿಯರು ಸ್ಪರ್ಧೆಯಲ್ಲಿ ಭಾಗವಹಿಸಬಹುದು. ಆಸಕ್ತರು, ಶಾಲೆಯ ಸಮ್ಮತಿಯೊಂದಿಗೆ ಆನ್‌ಲೈನ್ ಮೂಲಕ ಉಚಿತವಾಗಿ ನೋಂದಣಿ ಮಾಡಿಕೊಳ್ಳಬಹುದು.

ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಆಕರ್ಷಕ ಬಹುಮಾನ ನೀಡಲಾಗುವುದು.

UPCOMING PARISHRAMA PU COLLEGE WITH INTEGRATED NEET, JEE MAINS & KCET TRAINING Presents ಪ್ರಜಾವಾಣಿ QUIZ CHAMPIONSHIP Powered By BHIMA GOLD • DIAMONDS • SILVER • PLATINUM SINCE 1925

ನಾಟಕ ಬೆಂಗಳೂರು ರಂಗ ಸಂಭ್ರಮ ನಾಳೆಯಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಟಕ ಬೆಂಗಳೂರು ಸಂಚಲನಾ ಸಮಿತಿಯು 16ನೇ ವರ್ಷದ ರಂಗ ಸಂಭ್ರಮದ ಪ್ರಯುಕ್ತ ವಿವಿಧ ನಾಟಕಗಳ ಪ್ರದರ್ಶನವನ್ನು ಜೆ.ಸಿ. ರಸ್ತೆಯಲ್ಲಿರುವ ರವೀಂದ್ರ ಕಲಾಕ್ಷೇತ್ರದಲ್ಲಿ ಹಮ್ಮಿಕೊಂಡಿದೆ.

ಕರ್ನಾಟಕ ನಾಮಕರಣ ಸುವರ್ಣ ವರ್ಷ ಹಾಗೂ ರವೀಂದ್ರ ಕಲಾಕ್ಷೇತ್ರದ ವಜ್ರ ಮಹೋತ್ಸವದ ಪ್ರಯುಕ್ತವೂ ಈ ರಂಗ ಸಂಭ್ರಮವನ್ನು ಆಯೋಜಿಸಲಾಗಿದೆ. ಡಿ.6ರಂದು ರಂಗಚಿರಂತನ ತಂಡದಿಂದ 'ಅಲೆಮಾರಿ ಭಾರತ', ಡಿ.7ರಂದು ಬೆಂಗಳೂರು ಪ್ಲೇಯರ್ಸ್ ಥಿಯೇಟರ್ ಅಸೋಸಿಯೇಷನ್‌ನಿಂದ 'ಕತ್ತಲೆ ದಾರಿ ದೂರ', ಡಿ.11ರಂದು ನಾಟ್ಯದರ್ಪಣ ತಂಡದಿಂದ 'ನಿನಗೆ ನೀನೇ ಗೆಳತಿ', ಡಿ.12ರಂದು ಜಂಗಮ ಕಲೆಕ್ಟಿವ್‌ನಿಂದ 'ಪಂಚಮ ಪದ', ಡಿ.13ರಂದು ಐಶ್ವರ್ಯ ಕಲಾನಿಕೇತನ ತಂಡದಿಂದ 'ತಾರಕ್ಕ ಬಿಂದಿಗೆ' ನಾಟಕ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ.

ಡಿ.14ರಂದು ರಂಗಸಂಪದ ತಂಡದಿಂದ 'ಲೋಕದ ಒಳಹೊರಗೆ', ಡಿ.15ರಂದು ಸಮಾಜಮುಖಿ ತಂಡದಿಂದ 'ಚಾವುಂಡರಾಯ', ಡಿ.16ರಂದು ಅಭಿನಯ ತರಂಗ ತಂಡದಿಂದ 'ಶಿವರುದ್ರಪ್ಪನ ಆಕಸ್ಮಿಕ ಸಾವು', ಡಿ.18ರಂದು ಥೇಮ ತಂಡದಿಂದ 'ಆ ಇ ಫ್ಯಾಮಿಲಿ', ಡಿ.19ರಂದು ಅನೇಕ ತಂಡದಿಂದ 'ಹನ್ನೆರಡು ಮೈನಸ್ ಒಂದು', ಡಿ.20ರಂದು ಸಂಚಾರಿ ಥಿಯೇಟರ್‌ನಿಂದ 'ಹುತ್ತವ ಬಡಿದರೆ', ಡಿ.21ರಂದು ಬೆಂಗಳೂರು ವಿಶ್ವವಿದ್ಯಾಲಯದ ಪ್ರದರ್ಶನ ಕಲಾವಿಭಾಗದಿಂದ 'ಗೋಕುಲ ನಿರ್ಗಮನ' ಹಾಗೂ ಡಿ.22ರಂದು ಸಾಫಲ್ಯ ತಂಡದಿಂದ 'ಅಡಿಗೆಭಟ್ಟ' ನಾಟಕ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ. ಎಲ್ಲ ದಿನವೂ ಸಂಜೆ 7 ಗಂಟೆಗೆ ನಾಟಕ ಪ್ರದರ್ಶನ ಪ್ರಾರಂಭವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

33 ಕೆರೆಗಳ ಅಭಿವೃದ್ಧಿ ಬಾಕಿ

ಪರಿಸರ ಸಚಿವ ಭೂಪೇಂದ್ರ ಯಾದವ್ ಉತ್ತರ

ಪ್ರಜಾವಾಣಿ ವಾರ್ತೆ

ಭೂಪೇಂದ್ರ ಯಾದವ್

ನವದೆಹಲಿ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ನಿಯಂತ್ರಣದಲ್ಲಿ 204 ಕೆರೆಗಳು ಇದ್ದು, ಈ ಪೈಕಿ 33 ಕೆರೆಗಳು ಅಭಿವೃದ್ಧಿಯಾಗಿಲ್ಲ ಹಾಗೂ 19 ಕೆರೆಗಳು ಬಳಕೆಯಾಗಿಲ್ಲ ಎಂದು ಕೇಂದ್ರ ಅರಣ್ಯ, ಪರಿಸರ ಹಾಗೂ ತಾಪಮಾನ ಬದಲಾವಣೆ ಸಚಿವ ಭೂಪೇಂದ್ರ ಯಾದವ್ ತಿಳಿಸಿದರು.

ಲೋಕಸಭೆಯಲ್ಲಿ ಬೆಂಗಳೂರು ಕೇಂದ್ರ ಸಂಸದ ಪಿ.ಸಿ.ಮೋಹನ್ ಸೋಮವಾರ ಕೇಳಿರುವ ಪ್ರಶ್ನೆಗೆ ಉತ್ತರ ನೀಡಿರುವ ಸಚಿವರು, 'ಬಿಬಿಎಂಪಿಯ 114 ಕೆರೆಗಳನ್ನು ಅಭಿವೃದ್ಧಿಪಡಿಸಲಾಗಿದೆ. 33 ಕೆರೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಕೆರೆಗಳ ವಾರ್ಷಿಕ ನಿರ್ವಹಣೆ ಜತೆಗೆ ಅತಿಕ್ರಮಣ ತಪ್ಪಿಸಲು, ಕೆರೆ ಪ್ರದೇಶದಲ್ಲಿ ಕಸ, ಕಟ್ಟಡ ತ್ಯಾಜ್ಯ ಸುರಿಯುವುದನ್ನು ನಿಯಂತ್ರಿಸಲು ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ' ಎಂದರು.

'ಕೆರೆಗಳ ಅಂಗಳದಲ್ಲಿ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲಾಗಿದೆ. ಅಭಿವೃದ್ಧಿ ಹೊಂದಿದ ಬಹುತೇಕ ಕೆರೆಗಳಲ್ಲಿ ಕೊಳಚೆ ನೀರು ಕೆರೆಗೆ ಸೇರದಂತೆ ಚರಂಡಿಗಳನ್ನು ನಿರ್ಮಿಸಲಾಗಿದೆ. ಮುಖ್ಯ ಜಲಮೂಲಕ್ಕೆ ಹೂಳು ಸೇರುವುದನ್ನು ತಡೆಯಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಕೆಲವು ಕೆರೆಗಳ ಜೈವಿಕ ವೈವಿಧ್ಯವನ್ನು ಹೆಚ್ಚಿಸಲು ಕೃತಕ ದ್ವೀಪಗಳನ್ನು ನಿರ್ಮಿಸಲಾಗಿದೆ' ಎಂದು ಅವರು ಮಾಹಿತಿ ನೀಡಿದರು.

ಬೆಂಗಳೂರಿನಲ್ಲಿ ನವ ನಗರೋತ್ಥಾನ ಯೋಜನೆಯಡಿ 47 ಕೆರೆಗಳು, ಶುಭ್ರ ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ಯೋಜನೆಯಡಿ 5 ಕೆರೆಗಳು ಹಾಗೂ 15ನೇ ಹಣಕಾಸು ಆಯೋಗದ ಅನುದಾನದ ಅಡಿಯಲ್ಲಿ 8 ಕೆರೆಗಳು ಹಾಗೂ ಅಮೃತ ನಗರೋತ್ಥಾನ ಯೋಜನೆಯಡಿ 71 ಕೆರೆಗಳನ್ನು ಅಭಿವೃದ್ಧಿಪಡಿಸಲಾಗಿದೆ. ಇದಕ್ಕಾಗಿ ₹590 ಕೋಟಿ ವೆಚ್ಚ ಮಾಡಲಾಗಿದೆ ಎಂದು ಅವರು ಹೇಳಿದರು.

'ಜೌಗು ಪ್ರದೇಶಗಳ ಸಂರಕ್ಷಣೆ ಹಾಗೂ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರದ ಸಹಯೋಗದಲ್ಲಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ವೆಂಗಯ್ಯಕೆರೆ, ನಾಗವಾರ ಕೆರೆ, ಜರಗನಹಳ್ಳಿ ಕೆರೆ, ಬೆಳ್ಳಂದೂರು ಕೆರೆ, ಮಾಗಡಿ ಕೆರೆ, ಲಾಲ್‌ಬಾಗ್ ಸಂರಕ್ಷಣೆಗಾಗಿ ಒಟ್ಟು ₹ 24.27 ಕೋಟಿ ವೆಚ್ಚದ ಯೋಜನೆಗಳನ್ನು ಮಂಜೂರು ಮಾಡಲಾಗಿತ್ತು. ಇದರಲ್ಲಿ ಕೇಂದ್ರದ ಪಾಲು ₹13.70 ಕೋಟಿ. ಈ ಎಲ್ಲ ಯೋಜನೆಗಳ ಕಾಮಗಾರಿಗಳು ಪೂರ್ಣಗೊಂಡಿವೆ' ಎಂದು ಅವರು ತಿಳಿಸಿದರು.

ಮುಖ್ಯಾಂಶಗಳು

- ಜೈವಿಕ ವೈವಿಧ್ಯ ಹೆಚ್ಚಳಕ್ಕೆ ಕೃತಕ ದ್ವೀಪ ನಿರ್ಮಾಣ
- ತ್ಯಾಜ್ಯ ಕೆರೆಗೆ ಸುರಿಯುವುದನ್ನು ತಡೆಯಲು ಭದ್ರತಾ ಸಿಬ್ಬಂದಿ ನಿಯೋಜನೆ
- ಜೌಗು ಪ್ರದೇಶಗಳ ಸಂರಕ್ಷಣೆ ಹಾಗೂ ಅಭಿವೃದ್ಧಿಗಾಗಿ ಯೋಜನೆ

ಮಕ್ಕಳ ಸಾಹಿತ್ಯ ಕೃತಿಗಳಿಗೆ ಆಹ್ವಾನ

ಬೆಂಗಳೂರು: ಇಂದಿರಾನಗರದ ಎಸ್. ಚನ್ನಪ್ಪ ಪ್ರತಿಷ್ಠಾನವು ಮಕ್ಕಳ ಸಾಹಿತ್ಯ ಕೃತಿಗಳಿಗೆ ಬಹುಮಾನ ನೀಡಲು ನಿರ್ಧರಿಸಿದೆ. ಈ ಸಂಬಂಧ 2023ನೇ ಸಾಲಿನಲ್ಲಿ ಪ್ರಕಟಗೊಂಡ ಮಕ್ಕಳ ಸಾಹಿತ್ಯ ಕೃತಿಗಳನ್ನು ಆಹ್ವಾನಿಸಿದೆ.

ಆಸಕ್ತರು ಪುಸ್ತಕದ ನಾಲ್ಕು ಪ್ರತಿಗಳನ್ನು ಕಾರ್ಯದರ್ಶಿ, ಎಸ್. ಚನ್ನಪ್ಪ ಪ್ರತಿಷ್ಠಾನ, 333, ಅರ್ಕಾವತಿ ಮೊದಲ ಹಂತ, ಇಂದಿರಾನಗರ, ಬೆಂಗಳೂರು–560038 ಈ ವಿಳಾಸಕ್ಕೆ ಇದೇ 15ರೊಳಗೆ ಅಂಚೆ ಅಥವಾ ಕೊರಿಯರ್ ಮೂಲಕ ಕಳುಹಿಸಬೇಕು ಎಂದು ಪ್ರಕಟಣೆ ತಿಳಿಸಿದೆ. ಸಂಪರ್ಕಕ್ಕೆ: 9880848716

ಬೆಂಗಳೂರಿನಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಅಖಿಲ ಕರ್ನಾಟಕ ಗಾಣಿಗರ ಸಂಘದ ಸುವರ್ಣ ಮಹೋತ್ಸವ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸನ್ಮಾನಿಸಲಾಯಿತು. ಪೂರ್ಣಾನಂದಪುರಿ ಸ್ವಾಮೀಜಿ, ಎಂ.ಆರ್.ರಾಜಶೇಖರ್, ವಿ.ಆರ್.ಸುದರ್ಶನ್, ಅನಂತ್ ರಮೇಶ್, ಎಂ.ಎಸ್.ಶ್ರೀನಿವಾಸಮೂರ್ತಿ ಇದ್ದರು.

'ಜಾತಿಗಣತಿ ವೈಜ್ಞಾನಿಕವಾಗಿಯೇ ಸಿದ್ಧ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾತಿ ಗಣತಿಯನ್ನು (ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ವರದಿ) ವೈಜ್ಞಾನಿಕವಾಗಿ ಸಿದ್ಧಪಡಿಸಿದ್ದು, ವರದಿ ಸ್ವೀಕರಿಸಲೆಂದೇ ಆಯೋಗದ ಅವಧಿಯನ್ನು ಎರಡು ತಿಂಗಳು ಮುಂದುವರಿಸಲಾಗಿದೆ. ವರದಿ ಸ್ವೀಕಾರದ ನಂತರ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಬೆಂಗಳೂರಿನ ಆಲಹಳ್ಳಿ ಅಂಜನಾಪುರದಲ್ಲಿ ಅಖಿಲ ಕರ್ನಾಟಕ ಗಾಣಿಗರ ಸಂಘ ಆಯೋಜಿಸಿದ್ದ ಸಂಘದ ಸುವರ್ಣ ಮಹೋತ್ಸವ ಸಮಾರಂಭ, ಗಾಣಿಗ ಜನಾಂಗದ ಸಮಾವೇಶ , ನೂತನ ಕಟ್ಟಡ ಉದ್ಘಾಟನೆ ಹಾಗೂ ಮತ್ತೊಂದು ಕಟ್ಟಡಕ್ಕೆ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು.

ಯಾರೂ ಏನೇ ಹೇಳಿದರೂ ಸಾಮಾಜಿಕ ನ್ಯಾಯದಲ್ಲಿ ರಾಜಿಯಾಗುವ ಪ್ರಶ್ನೆಯೇ ಇಲ್ಲ. ಅವಕಾಶ ವಂಚಿತರು, ಶತಮಾನಗಳಿಂದ ಅಕ್ಷರ, ಸಾಮಾಜಿಕ ನ್ಯಾಯ ವಂಚಿತರಾದವರ ಪರವಾಗಿ ಸರ್ಕಾರ ಇರುತ್ತದೆ ಎಂದರು.

ಕೈಗಾರಿಕೀಕರಣದ ನಂತರ ಗಾಣಿಗರ ಬದುಕು ಸಂಕಷ್ಟಕ್ಕೆ ಸಿಲುಕಿದೆ. ಬಹುತೇಕರು ಎಣ್ಣೆ ತಯಾರಿಸುವ ವೃತ್ತಿ ಬಿಡಬೇಕಾದ ಪರಿಸ್ಥಿತಿ ಇದೆ. ಗಾಣಿಗ ಸಮಾಜದ ಎಷ್ಟೋ ಯುವಕರು ನಿರುದ್ಯೋಗಿಗಳಾಗಿದ್ದಾರೆ. ತಲೆತಲಾಂತರದಿಂದ ವೃತ್ತಿ ನಂಬಿಕೊಂಡ ಅವರಲ್ಲಿ ಜಮೀನು ಹೊಂದಿದವರೂ ಕಡಿಮೆ, ಸಣ್ಣ ರೈತರ ಸಂಖ್ಯೆಯೂ ವಿರಳ ಎಂದರು. ಸಮಾಜದ ಸಾಧಕರಾದ ರಾಜಶೇಖರ್ ಅವರಿಗೆ 'ಸಹಕಾರ ರತ್ನ', ಲಕ್ಷ್ಮೀಪತಿ ಅವರಿಗೆ ರಾಜ್ಯೋತ್ಸವ, ರಾಧಾಕೃಷ್ಣ ಅವರಿಗೆ ರಾಜ್ಯ ರೈತ ಪ್ರಶಸ್ತಿ ನೀಡಲಾಗಿದೆ. ಮುಂದೆಯೂ ಎಲ್ಲ ಸಮಾಜದ ಸಾಧಕರನ್ನು ಗುರುತಿಸಿ ಗೌರವಿಸುವ ಕೆಲಸ ಮಾಡಲಾಗುವುದು ಎಂದು ಹೇಳಿದರು.

ತೈಲೇಶ್ವರ ಗಾಣಿಗರ ಮಹಾಸಂಸ್ಥಾನದ ಪೂರ್ಣಾನಂದಪುರಿ ಸ್ವಾಮೀಜಿ, ಗಾಣಿಗ ಸಂಘದ ಅಧ್ಯಕ್ಷ ಎಂ.ಆರ್.ರಾಜಶೇಖರ್, ವಿಧಾನ ಪರಿಷತ್ ಮಾಜಿ ಸಭಾಪತಿ ವಿ.ಆರ್. ಸುದರ್ಶನ್, ಶಾರದಾ ಮೋಹನ್ ಶೆಟ್ಟಿ, ವಾಸಂತಿ, ಮೈಸೂರಿನ ಮಾಜಿ ಮೇಯರ್ ಅನಂತ್ ರಮೇಶ್, ಎಂ.ಎಸ್.ಶ್ರೀನಿವಾಸಮೂರ್ತಿ ಉಪಸ್ಥಿತರಿದ್ದರು.





ಆರೋಪ ಪಟ್ಟಿ ಸಲ್ಲಿಸಿದ್ದ ಪೊಲೀಸರು • ಮರು ತನಿಖೆಗೆ ಸಜ್ಜಾದ ಎನ್‌ಐಎ ಅಧಿಕಾರಿಗಳು

ಮಂಗಳೂರು ಗೋಡೆ ಬರಹ: 'ಐಎಸ್' ಕೈವಾಡ

• ಸಂತೋಷ ಜಿಗಳಿಕೊಪ್ಪ

ಅರಾಫತ್ ಅಲಿ

ಬೆಂಗಳೂರು: ಮಂಗಳೂರಿನ ಬಿಜೈ ಹಾಗೂ ನ್ಯಾಯಾಲಯ ರಸ್ತೆಯ ಗೋಡೆಗಳ ಮೇಲೆ ಬರೆದಿದ್ದ ಬರಹ ಪ್ರಕರಣದಲ್ಲಿ 'ಇಸ್ಲಾಮಿಕ್ ಸ್ಟೇಟ್' (ಐಎಸ್) ಭಯೋತ್ಪಾದನಾ ಸಂಘಟನೆ ಉಗ್ರರ ಕೈವಾಡವಿರುವ ಸಂಗತಿ ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ತನಿಖೆಯಿಂದ ಗೊತ್ತಾಗಿದೆ.

2020ರ ನವೆಂಬರ್ 27ರಂದು ಲಷ್ಕರ್-ಎ-ತಯಬಾ ಹಾಗೂ ತಾಲಿಬಾನ್ ಪರವಾಗಿ ಗೋಡೆ ಬರಹ ಬರೆಯಲಾಗಿತ್ತು. ಕೃತ್ಯ ಎಸಗಿದ್ದ ಆರೋಪದಡಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯ ಮೊಹಮ್ಮದ್ ಶಾರೀಕ್, ಮಾಝ್ ಮುನೀರ್ ಅಹ್ಮದ್ ಹಾಗೂ ಸಾದತ್‌ನನ್ನು ಬಂಧಿಸಿದ್ದ ಮಂಗಳೂರು ಪೊಲೀಸರು, 'ಪ್ರಚಾರಕ್ಕಾಗಿ ಆರೋಪಿಗಳು ಕೃತ್ಯ ಎಸಗಿದ್ದರು' ಎಂಬುದಾಗಿ ಅಭಿಪ್ರಾಯಪಟ್ಟು ಬೆಂಗಳೂರಿನ ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದ್ದರು.

ಇದರ ನಡುವೆಯೇ ಪ್ರಕರಣದ ಮತ್ತೊಬ್ಬ ಆರೋಪಿ ಅರಾಫತ್ ಅಲಿಯನ್ನು ದೆಹಲಿ ವಿಮಾನ ನಿಲ್ದಾಣದಲ್ಲಿ ಸೆಪ್ಟೆಂಬರ್ 13ರಂದು ಬಂಧಿಸಿದ್ದ ಎನ್‌ಐಎ ಅಧಿಕಾರಿಗಳು ವಿಚಾರಣೆಗೆ ಒಳಪಡಿಸಿದ್ದರು. 'ಐಎಸ್ ಉಗ್ರರ ನಿರ್ದೇಶನದಂತೆ ಗೋಡೆ ಬರಹ ಬರೆದಿದ್ದೇವೆ' ಎಂದು ಅರಾಫತ್ ಹೇಳಿಕೆ ನೀಡಿದ್ದ. ಈ ಸಂಗತಿಯನ್ನು ನ್ಯಾಯಾಲಯದ ಗಮನಕ್ಕೆ ತಂದಿರುವ ಎನ್‌ಐಎ ಅಧಿಕಾರಿಗಳು, ಪ್ರಕರಣದ ಮರು ತನಿಖೆಗೆ ಸಜ್ಜಾಗಿದ್ದಾರೆ. ಈ ಸಂಬಂಧ ಕಾನೂನು ಪ್ರಕ್ರಿಯೆ ಆರಂಭವಾಗಿದೆ.

ಮುಖ್ಯಾಂಶಗಳು

- 'ಪ್ರಚಾರಕ್ಕೆ ಕೃತ್ಯ' ಎಂದಿದ್ದ ಪೊಲೀಸರು
- ಉಗ್ರರ ಶಾಮೀಲು ಪತ್ತೆ ಹಚ್ಚಿದ ಎನ್‌ಐಎ
- ಮತ್ತಷ್ಟು ಮಂದಿ ಭಾಗಿ ಶಂಕೆ

ಮಂಗಳೂರಿನ ನ್ಯಾಯಾಲಯ ಸಂಕೀರ್ಣದ ಆವರಣದಲ್ಲಿನ ಜನರೇಟರ್ ಕೊಠಡಿಯ ಗೋಡೆ ಮೇಲೆ ಭಾನುವಾರ ಕಂಡುಬಂದ ಬರಹ –ಪ್ರಜಾವಾಣಿ ಚಿತ್ರ

ಗೋಡೆ ಬರಹದಲ್ಲಿ ಏನಿತ್ತು ?

ಮಂಗಳೂರಿನ ಬಿಜೈ, ಕದ್ರಿ ಹಾಗೂ ಪಿವಿಎಸ್ ವೃತ್ತ ಬಳಿಯ ನ್ಯಾಯಾಲಯ ಸಂಕೀರ್ಣದ ಆವರಣದಲ್ಲಿ ಪ್ರತ್ಯೇಕವಾಗಿ ಗೋಡೆ ಬರಹ ಬರೆಯಲಾಗಿತ್ತು. ಒಂದು ಕಡೆ, 'ಗಸ್ತಾಕ್ ಎ ರಸೂಲ್ ಎಕ್ ಹಿ ಸಜಾ ಸರ್ ಸಯಾ ಜುದಾ ('ಪ್ರವಾದಿಗೆ ಕೋಪ ಬಂದರೆ ಒಂದೇ ಶಿಕ್ಷೆ; ಅದು ದೇಹದಿಂದ ತಲೆ ಬೇರ್ಪಡಿಸುವುದು') ಎಂದು ಉರ್ದು ಉಕ್ತಿಯನ್ನು ಇಂಗ್ಲಿಷ್ ಅಕ್ಷರಗಳಲ್ಲಿ ಬರೆಯಲಾಗಿತ್ತು. ಇನ್ನೊಂದು ಗೋಡೆಯಲ್ಲಿ, 'ಲಷ್ಕರ್-ಎ-ತಯಬಾ ಹಾಗೂ ತಾಲಿಬಾನ್ ಜಿಂದಾಬಾದ್' ಎಂಬಿತ್ಯಾದಿ ಬರಹ ಬರೆಯಲಾಗಿತ್ತು.

ಗೋಡೆ ಬರಹ ಪ್ರಕರಣದಲ್ಲಿ ಪೊಲೀಸರು ಈಗಾಗಲೇ ಆರೋಪ ಪಟ್ಟಿ ಸಲ್ಲಿಸಿದ್ದಾರೆ. 'ಇದೀಗ ಪ್ರಕರಣದ ಎಲ್ಲ ಕಡತಗಳನ್ನು ಸುಪರ್ದಿಗೆ ಪಡೆಯಲಿರುವ ಎನ್‌ಐಎ ಅಧಿಕಾರಿಗಳು, ಮರು ತನಿಖೆ ನಡೆಸಲಿದ್ದಾರೆ. ಆರೋಪ ಪಟ್ಟಿ ಸಲ್ಲಿಕೆಯಾದ ನಂತರ ಎನ್‌ಐಎ ಅಧಿಕಾರಿಗಳು ಹೊಸದಾಗಿ ತನಿಖೆ ನಡೆಸುತ್ತಿರುವ ರಾಜ್ಯದ ಮೊದಲ ಪ್ರಕರಣ ಇದಾಗಿದೆ' ಎಂದು ಮೂಲಗಳು ಹೇಳಿವೆ.

ಭಯ ಹುಟ್ಟಿಸಿ ವಿಧ್ವಂಸಕ ಕೃತ್ಯ: 'ಎಂಜಿನಿಯರಿಂಗ್ ಪದವೀಧರ ಅರಾಫತ್, ಬೆಂಗಳೂರಿನಲ್ಲಿ ಕೆಲ ವರ್ಷ ವಾಸವಿದ್ದ. ತಮ್ಮೂರಿನ ಬಟ್ಟೆ ವ್ಯಾಪಾರಿ ಮೊಹಮ್ಮದ್ ಶಾರೀಕ್, ಎಂಜಿನಿಯರಿಂಗ್ ವಿದ್ಯಾರ್ಥಿ ಮಾಝ್ ಮುನೀರ್ ಅಹ್ಮದ್ ಹಾಗೂ ಎಂಜಿನಿಯರಿಂಗ್ ಪದವೀಧರ ಸಾದತ್ ಜೊತೆ ಸೇರಿ ಐಎಸ್ ಜೊತೆ ನಂಟು ಬೆಳೆಸಿಕೊಂಡಿದ್ದ. ನಾಲ್ವರು ಸೇರಿಕೊಂಡು ಐಎಸ್ ಉಗ್ರರ ಆಣತಿಯಂತೆ ಗೋಡೆ ಬರಹ ಬರೆದಿದ್ದರು' ಎಂದು ಎನ್‌ಐಎ ಮೂಲಗಳು ತಿಳಿಸಿವೆ.

'ಗೋಡೆ ಬರಹ ಪ್ರಕರಣದಲ್ಲಿ ಮಾಝ್ ಸಿಕ್ಕಿಬೀಳುತ್ತಿದ್ದಂತೆ ಅರಾಫತ್, ದುಬೈಗೆ ಹೋಗಿ ಅಲ್ಲಿಯ ಸುಗಂಧ ದ್ರವ್ಯ ಕಂಪನಿಯೊಂದರಲ್ಲಿ ಕೆಲಸಕ್ಕೆ ಸೇರಿದ್ದ. ಜಾಮೀನು ಪಡೆದಿದ್ದ ಶಾರೀಕ್, ಐಎಸ್ ಜೊತೆ ನಂಟು ಮುಂದುವರಿಸಿ ಕುಕ್ಕರ್ ಬಾಂಬ್ ಸ್ಫೋಟಿಸಲು ಹೋಗಿ ಗಾಯಗೊಂಡಿದ್ದ. ಸದ್ಯ ಈತ ಜೈಲಿನಲ್ಲಿದ್ದಾನೆ' ಎಂದು ಮೂಲಗಳು ಹೇಳಿವೆ.

ಐಎಸ್ ಉಗ್ರರಿಂದ ಹಣ: 'ಆರೋಪಿಗಳಿಗೆ ಐಎಸ್ ಉಗ್ರರು ಹಣ ಕಳುಹಿಸುತ್ತಿದ್ದರೆಂದು ಗೊತ್ತಾಗಿದೆ. ವಿಧ್ವಂಸಕ ಕೃತ್ಯಗಳ ನಂತರ ದೇಶದಿಂದ ಪರಾರಿಯಾಗಲು ಉಗ್ರರು ಸಹಾಯ ಮಾಡಲು ಒಪ್ಪಿಕೊಂಡಿದ್ದರೆಂಬ ಮಾಹಿತಿ ಇದೆ. ಈ ಬಗ್ಗೆ ಪರಿಶೀಲನೆ ನಡೆದಿದೆ. ಮತ್ತಷ್ಟು ಮಂದಿ ಕೃತ್ಯದಲ್ಲಿ ಭಾಗಿಯಾಗಿರುವ ಮಾಹಿತಿಯೂ ಇದೆ' ಎಂದು ಮೂಲಗಳು ತಿಳಿಸಿವೆ.

ಸುದ್ದಿ 2 ನಿಮಿಷ

ಚುನಾವಣೆಯಲ್ಲಿ ಗೆಲ್ಲುವುದಷ್ಟೇ ಗ್ಯಾರಂಟಿ ಉದ್ದೇಶವಲ್ಲ: ಸಿ.ಎಂ

ಬೆಳಗಾವಿ: 'ಚುನಾವಣೆಯಲ್ಲಿ ಗೆಲ್ಲುವ ಉದ್ದೇಶದಿಂದ ನಾವು ಗ್ಯಾರಂಟಿ ಯೋಜನೆಗಳನ್ನು ತಂದಿಲ್ಲ. ಎಲ್ಲ ಧರ್ಮ, ಜಾತಿಯವರಿಗೆ, ಬಡವರಿಗೆ ಆರ್ಥಿಕ ಹಾಗೂ ಸಾಮಾಜಿಕ ಶಕ್ತಿ ತುಂಬುವ ಉದ್ದೇಶದಿಂದ ಜಾರಿಗೊಳಿಸಿ-ದ್ದೇವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸಮೀಪದ ಸಾಂಬ್ರಾ ವಿಮಾನ ನಿಲ್ದಾಣದಲ್ಲಿ ಸೋಮವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಗ್ಯಾರಂಟಿ ಯೋಜನೆಗಳು ಜನರಿಗೆ ಇಷ್ಟವಾಗಿಲ್ಲ ಎಂಬುದು ಸುಳ್ಳು. ಇದೇ ಕಾರಣಕ್ಕೆ ತೆಲಂಗಾಣದಲ್ಲಿ ಗೆದ್ದಿದ್ದೇವೆ. ಮಧ್ಯಪ್ರದೇಶದಲ್ಲಿ ಕೂಡ ಬಿಜೆಪಿಯವರು ಗ್ಯಾರಂಟಿ ಘೋಷಿಸಿದ್ದರಿಂದ ಗೆದ್ದಿದ್ದಾರೆ' ಎಂದರು.

'ಕಾಂಗ್ರೆಸ್ಸಿಗರು ರಾಜ್ಯದ ಹಣ ಬಳಸಿ ತೆಲಂಗಾಣದಲ್ಲಿ ಜಾತ್ರೆ ಮಾಡಿದರು' ಎಂಬ ಬಿಜೆಪಿ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, 'ವಿರೋಧ ಪಕ್ಷದ ನಾಯಕನ ಆಯ್ಕೆ ಮಾಡಲು ಆರು ತಿಂಗಳು ತೆಗೆದುಕೊಂಡ ಬಿಜೆಪಿ ನಾಯಕರಿಗೆ, ಕಾಂಗ್ರೆಸ್ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ' ಎಂದರು.

'ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ– ಜೆಡಿಎಸ್ ಜಂಟಿಯಾಗಿಯಾದರೂ ಹೋರಾಡಲಿ, ಪ್ರತ್ಯೇಕವಾ-ಗಿಯಾದರೂ ಹೋರಾಡಲಿ. ನಾವು ಎಲ್ಲದಕ್ಕೂ ಸಿದ್ಧರಿದ್ದೇವೆ' ಎಂದರು.

ಕಾವೇರಿ ಪ್ರಾಧಿಕಾರದ ಆದೇಶ ಪಾಲಿಸಿದ ರಾಜ್ಯ: ಕೇಂದ್ರ

ನವದೆಹಲಿ: ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಸಂಬಂಧ ಕರ್ನಾಟಕ ಸರ್ಕಾರವು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಎಲ್ಲ ಆದೇಶಗಳನ್ನು ಪಾಲಿಸಿದೆ. ನೀರು ಬಿಟ್ಟಿರುವ ಕುರಿತು ಪ್ರಾಧಿಕಾರಕ್ಕೆ ಪ್ರಮಾಣಪತ್ರವನ್ನೂ ಸಲ್ಲಿಸಿದೆ.

ರಾಜ್ಯಸಭೆಯಲ್ಲಿ ತಮಿಳುನಾಡಿನ ಸದಸ್ಯ ಸಿ.ವಿ.ಷಣ್ಮುಖಂ ಕೇಳಿರುವ ಪ್ರಶ್ನೆಗೆ ಜಲಶಕ್ತಿ ಖಾತೆಯ ರಾಜ್ಯ ಸಚಿವ ಬಿಶ್ವೇಶ್ವರ ತುಡು ಈ ಸಂಬಂಧ ಉತ್ತರ ನೀಡಿದ್ದಾರೆ.

ಸುಪ್ರೀಂ ಕೋರ್ಟ್ ಮಾರ್ಪಡಿಸಿದ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಆದೇಶದ ಪ್ರಕಾರ, ಕರ್ನಾಟಕವು ಪ್ರತಿವರ್ಷ 177.5 ಟಿಎಂಸಿ ಅಡಿ ನೀರನ್ನು ತಮಿಳುನಾಡಿಗೆ ಬಿಡಬೇಕು. ಪ್ರಾಧಿಕಾರದ ಆದೇಶದ ಪ್ರಕಾರ, ಕರ್ನಾಟಕವು ನೀರು ಬಿಡುಗಡೆ ಮಾಡಿಲ್ಲ ಎಂದು ತಮಿಳುನಾಡು ಆಕ್ಷೇಪ ಎತ್ತಿತ್ತು. ಜುಲೈ ತಿಂಗಳಿನಿಂದ ಇಲ್ಲಿಯವರೆಗೆ ಕಾವೇರಿ ನೀರು ನಿಯಂತ್ರಣ ಸಮಿತಿ 11 ಸಭೆಗಳನ್ನು ಹಾಗೂ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಏಳು ಸಭೆಗಳನ್ನು ನಡೆಸಿ ಕಾವೇರಿ ಕಣಿವೆಯ ವಾಸ್ತವಾಂಶದ ಸ್ಥಿತಿ ಅರಿತು ನೀರು ಬಿಡುಗಡೆಗೆ ಸೂಚನೆ ನೀಡಿದೆ. ಪ್ರಾಧಿಕಾರದ ನಿರ್ದೇಶನದ ಪ್ರಕಾರ ನೀರು ಬಿಡುಗಡೆ ಮಾಡಲಾಗಿದೆ ಎಂದು ಕರ್ನಾಟಕವು ಪ್ರಾಧಿಕಾರದ ಅಧ್ಯಕ್ಷರಿಗೆ ನವೆಂಬರ್ 23ರಂದು ಪತ್ರ ಬರೆದಿದೆ ಎಂದು ಸಚಿವರು ತಿಳಿಸಿದ್ದಾರೆ.

ಕರ್ನಾಟಕ ರಾಜ್ಯೋತ್ಸವ

ಕೆಂಗೇರಿ ವಳಗೇರಹಳ್ಳಿ ನಿವಾಸಿಗಳ ಒಕ್ಕೂಟದ ವತಿಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಆಯೋಜಿಸಿದ್ದ 68ನೇ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಕೋಲಾಟ ಪ್ರದರ್ಶಿಸಲಾಯಿತು.

ತಂದೆಯ ಆದಾಯ ಪರಿಗಣನೆ ಅರ್ಜಿ ತಿರಸ್ಕರಿಸಿದ ಕೆಎಟಿ

ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಾಥಮಿಕ ಶಾಲಾ ಶಿಕ್ಷಕರ 13 ಸಾವಿರಕ್ಕೂ ಹೆಚ್ಚು ಹುದ್ದೆಗಳ ನೇಮಕಾತಿಯ ಕೌನ್ಸೆಲಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದಕ್ಕೆ ನಮಗೂ ಅವಕಾಶ ಕಲ್ಪಿಸುವಂತೆ ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಲಾಗಿದ್ದ ಅರ್ಜಿಯನ್ನು ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ (ಕೆಎಸ್‌ಎಟಿ) ತಿರಸ್ಕರಿಸಿದೆ.

ಈ ಸಂಬಂಧ ಬೆಂಗಳೂರಿನ ವಿದ್ಯಾರಣ್ಯಪುರದ ಎಂ.ನಳಿನಾ ಸೇರಿದಂತೆ ಒಟ್ಟು ಐವರು ಮಹಿಳೆಯರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮಂಡಳಿಯ ನ್ಯಾಯಾಂಗ ಸದಸ್ಯ ನಾರಾಯಣ ಮತ್ತು ಆಡಳಿತ ಸದಸ್ಯ ಎನ್.ಸಿವಶೈಲಂ ಅವರಿದ್ದ ಪೀಠವು ಅರ್ಜಿ ವಜಾಗೊಳಿಸಿ ಆದೇಶಿಸಿದೆ.

'ಅರ್ಜಿದಾರರ ಮನವಿಗಳನ್ನು ಮಾನ್ಯ ಮಾಡಲು ಅವರು ಯಾವುದೇ ಅಗತ್ಯ ಕಾನೂನಾತ್ಮಕ ದಾಖಲೆ ಅಥವಾ ಆಧಾರಗಳನ್ನು ನ್ಯಾಯಮಂಡಳಿಗೆ ಒದಗಿಸಿಲ್ಲ. ಅಂತೆಯೇ, ಈ ಪ್ರಕರಣದಲ್ಲಿನ ವಿವಾಹಿತ ಮಹಿಳೆಯರು ಕ್ರಮವಾಗಿ ತಮ್ಮ ಪತಿಯಂದಿರ ಜತೆ ಪ್ರತ್ಯೇಕ ಕುಟುಂಬದೊಂದಿಗೆ ವಾಸ ಮಾಡುತ್ತಿದ್ದು, ಪೋಷಕರ ಜತೆಗಿನ ಕೂಡು ಕುಟುಂಬದಲ್ಲಿ ವಾಸ ಮಾಡುತ್ತಿಲ್ಲ. ಹಾಗಾಗಿ, ಈ ಅಭ್ಯರ್ಥಿಗಳ ಮನವಿ ಪುರಸ್ಕರಿಸಲು ಆಗದು' ಎಂದು ಆದೇಶದಲ್ಲಿ ತಿಳಿಸಿದೆ.

'ಕರ್ನಾಟಕ ರಾಜ್ಯ ಮತ್ತು ಯೋಗೇಶ್ವರಿ ಪ್ರಕರಣದಲ್ಲಿ ಕರ್ನಾಟಕ ಹೈಕೋರ್ಟ್, ಪೋಷಕರ ಆದಾಯ ಪ್ರಮಾಣ ಪತ್ರವನ್ನೇ ಪರಿಗಣಿಸಬೇ-ಕೆಂದು ಆದೇಶಿಸಿದೆ. ಹಾಗಾಗಿ, ಈ ಪ್ರಕರಣದಲ್ಲೂ ತಂದೆಯ ಆದಾಯ ಪ್ರಮಾಣ ಪತ್ರವನ್ನು ಪರಿಗಣಿಸಿ ನಮ್ಮ ಹೆಸರನ್ನು ಆಯ್ಕೆ ಪಟ್ಟಿಯಲ್ಲಿ ಸೇರಿಸಬೇಕು ಮತ್ತು ಕೌನ್ಸೆಲಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಡಬೇಕು' ಎಂದು ಅರ್ಜಿದಾರರು ಕೋರಿದ್ದರು.

ಪ್ರಕರಣವೇನು?: 'ವಿವಾಹಿತ ಮಹಿಳೆಯರು ಪತಿಯ ಆದಾಯದ ಆಧಾರದಡಿ ತಮ್ಮ ಆದಾಯ ಪ್ರಮಾಣ ಪತ್ರವನ್ನು ನೇಮಕಾತಿ ವೇಳೆ ಸಲ್ಲಿಸಬೇಕಿತ್ತು. ಅದರ ಬದಲು, ತಂದೆಯ ಆದಾಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದಾರೆ' ಎಂಬ ಕಾರಣ ನೀಡಿ 451 ಅಭ್ಯರ್ಥಿಗಳನ್ನು ತಾತ್ಕಾಲಿಕ ಆಯ್ಕೆ ಪಟ್ಟಿಯಿಂದ ಕೈಬಿಡಲಾಗಿತ್ತು. ಇದನ್ನು ಪ್ರಶ್ನಿಸಿ, ಅರ್ಜಿದಾರ ಅಭ್ಯರ್ಥಿಗಳು ಹೈಕೋರ್ಟ್ ಮೆಟ್ಟಿಲೇರಿದ್ದರು.

ಈ ಪ್ರಕರಣದಲ್ಲಿನ ಮೇಲ್ಮನವಿ ವಿಚಾರಣೆ ನಡೆಸಿದ್ದ ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ, 'ನೇಮಕಾತಿ ಪ್ರಕ್ರಿಯೆ ಮುಂದುವರಿಸಿ' ಎಂದು ರಾಜ್ಯ ಸರ್ಕಾರಕ್ಕೆ ಆದೇಶಿಸಿತ್ತು. ಅಂತೆಯೇ, 'ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ 451 ಅಭ್ಯರ್ಥಿಗಳನ್ನು ಹೊರಗಿಡಲಾಗಿದೆ. ಈ ಅಭ್ಯರ್ಥಿಗಳು ತಮ್ಮ ತಕರಾರನ್ನು ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿ (ಕೆಎಸ್‌ಎಟಿ) ಮುಂದೆ ಮಂಡಿಸಿ ಸೂಕ್ತ ನ್ಯಾಯ ಪಡೆಯಬಹುದು. ಆದರೆ, ಅದು ಕೆಎಟಿಯ ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ' ಎಂದು ತಿಳಿಸಿತ್ತು.

ಇನ್ಸಿಡೆಂಟ್ ಅಲ್ಲ, ಆಕ್ಸಿಡೆಂಟ್– ಸೂರಜ್

ನಿಂದನೆ: ರೇವಣ್ಣ, ಸೂರಜ್ ಕ್ಷಮೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಕಾರಿಗೆ ಡಿಕ್ಕಿ ಹೊಡೆದ ಬೈಕ್ ಸವಾರನನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದ ಪತ್ನಿ ಭವಾನಿ ಪರ ಜೆಡಿಎಸ್ ಶಾಸಕ ಎಚ್. ಡಿ. ರೇವಣ್ಣ ಮತ್ತು ಅವರ ಮಗ, ವಿಧಾನ ಪರಿಷತ್ ಸದಸ್ಯ ಸೂರಜ್ ರೇವಣ್ಣ ಕ್ಷಮೆ ಕೇಳಿದರು.

ಇಲ್ಲಿನ ಸುವರ್ಣಸೌಧದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ರೇವಣ್ಣ, 'ಪತ್ನಿಯ ವರ್ತನೆಯ ಬಗ್ಗೆ ಯಾರಿಗಾದರೂ ನೋವಾದರೆ ಕ್ಷಮೆ ಕೋರುತ್ತೇನೆ' ಎಂದರು.

'ಬೈಕ್ ಸವಾರ ಕುಡಿದು ಬೈಕ್ ಓಡಿಸಿದ್ದ. ನಾವೇನು ಅವನ ಬಳಿ ಜಖಂ ಆಗಿರುವುದಕ್ಕೆ ಹಣ ಕೊಡಿ ಎಂದು ಕೇಳಲಿಲ್ಲ. ಏನಾದರೂ ಹೆಚ್ಚು ಕಮ್ಮಿ ಆಗುತ್ತಿದ್ದರೆ ಯಾರು ಹೊಣೆ? ಬೇಕಾದರೆ ಭವಾನಿ ರೇವಣ್ಣ ಅವರಿಂದಲೂ ಕ್ಷಮೆ ಕೇಳಿಸುತ್ತೇನೆ' ಎಂದರು.

'ಬೈಕ್ ಸವಾರನೇ ಬಂದು ಕಾರಿಗೆ ಗುದ್ದಿದ್ದಾನೆ. ಹೆಚ್ಚು ಕಡಿಮೆ ಆಗಿದ್ದರೆ ಏನಾಗಾಗುತ್ತಿತ್ತು?, ಅವರು ಏನೂ ಅಹಂಕಾರ ಮಾಡಿಲ್ಲ. ಭವಾನಿ ಅವರು ಯಾರದ್ದೋ ಸ್ನೇಹಿತನ ಕಾರಿನಲ್ಲಿ ಹೋಗಿದ್ದರು. ನಮ್ಮಕುಟುಂಬ ಯಾರಿಗೂ ನೋವು ಆಗುವ ಕೆಲಸ ಮಾಡುವುದಿಲ್ಲ. ಬೇಕಂತಲೇ ಯಾರೋ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿ-ದ್ದಾರೆ' ಎಂದರು.

ಸೂರಜ್ ರೇವಣ್ಣ ಮಾತನಾಡಿ, 'ಅಪಘಾತದಲ್ಲಿ ಬೈಕ್ ಸವಾರನದ್ದೇ ತಪ್ಪಿದೆ. ಇದೊಂದು ಆಕ್ಸಿಡೆಂಟ್. ಇನ್ಸಿಡೆಂಟ್ ಅಲ್ಲ. ಇದನ್ನು ಯಾರೂ ಬೇಕೆಂದೇ ಮಾಡುವುದಿಲ್ಲ. ಈ ವೇಳೆ ನನ್ನ ತಾಯಿ ಬಳಕೆ ಮಾಡಿರುವ ಪದಗಳು ತಪ್ಪಾಗಿವೆ. ತಾಯಿ ಬಳಸಿರುವ ಪದಗಳಿಗಾಗಿ ಕ್ಷಮೆ ಕೇಳುತ್ತೇನೆ' ಎಂದರು.

'ಬೈಕ್ ಸವಾರನನ್ನು ಆಸ್ಪತ್ರೆಗೆ ದಾಖಲು ಮಾಡಿದ್ದೇವೆ. ಇದಕ್ಕಿಂತಲೂ ಹೆಚ್ಚು ಏನು ಮಾಡಬೇಕು? ಇದರಲ್ಲಿ ಬೈಕ್ ಸವಾರನದ್ದೇ ತಪ್ಪಿದೆ' ಎಂದೂ ಸಮರ್ಥಿಸಿದರು.

'ದೇವಸ್ಥಾನ ಅನುದಾನ ದುರ್ಬಳಕೆ: ತನಿಖೆ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ದೇವಸ್ಥಾನಗಳ ಅಭಿವೃದ್ಧಿ ಮತ್ತು ದುರಸ್ತಿಗೆ ಮುಜರಾಯಿ ಇಲಾಖೆ ಬಿಡುಗಡೆ ಮಾಡಿದ ಅನುದಾನ ದುರ್ಬಳಕೆ ಆರೋಪ ಕುರಿತು ತನಿಖೆ ನಡೆಸಲಾಗುವುದು' ಎಂದು ಮುಜರಾಯಿ ಸಚಿವ ರಾಮಲಿಂಗಾ ರೆಡ್ಡಿ ಭರವಸೆ ನೀಡಿದರು.

ವಿಧಾನಸಭೆಯಲ್ಲಿ ಜೆಡಿಎಸ್‌ನ ಕರೆಮ್ಮ ಜಿ ನಾಯಕ ಪ್ರಶ್ನೆಗೆ ಸೋಮವಾರ ಉತ್ತರಿಸಿದ ಅವರು, 'ದೇವಸ್ಥಾನಗಳ ಅಭಿವೃದ್ಧಿ ಮತ್ತು ದುರಸ್ತಿಗೆ ಬಿಡುಗಡೆ ಮಾಡಿರುವ ಅನುದಾನದ ಬಳಕೆ ಕುರಿತು ಪರಿಶೀಲನೆ ನಡೆಸಲಾಗುವುದು. ಅನುದಾನ ದುರ್ಬಳಕೆ ಆರೋಪಕ್ಕೆ ಸಂಬಂಧಿಸಿದ ನಿರ್ದಿಷ್ಟ ಪ್ರಕರಣಗಳಿದ್ದರೆ ದೂರು ಸಲ್ಲಿಸಬಹುದು. ಆ ಕುರಿತು ತನಿಖೆ ನಡೆಸುತ್ತೇವೆ' ಎಂದರು.

'ದೇವದುರ್ಗ ತಾಲ್ಲೂಕಿನ ಹಲವು ದೇವಸ್ಥಾನಗಳ ಅಭಿವೃದ್ಧಿ, ದುರಸ್ತಿಗೆ ಕಳೆದ ವರ್ಷಗಳಲ್ಲಿ ಬಿಡುಗಡೆಯಾಗಿದ್ದ ಅನುದಾನ ದುರ್ಬಳಕೆ ಆಗಿದೆ. ಹಲವೆಡೆ ಕಾಮ-ಗಾರಿಗಳನ್ನು ನಡೆಸದೇ ಬಿಲ್ ಪಾವತಿಸಲಾಗಿದೆ. ಅಧಿಕಾರಿಗಳು ಮತ್ತು ಗುತ್ತಿಗೆದಾರರು ಶಾಮೀಲಾಗಿ ಅಕ್ರಮ ಎಸಗಿದ್ದಾರೆ' ಎಂದು ದಾಖಲೆಗಳನ್ನು ಪ್ರದರ್ಶಿಸಿದರು.

ವಕೀಲರ ವಿರುದ್ಧದ ಎಫ್‌ಐಆರ್‌ಗೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸ್ ಅಧಿಕಾರಿಗೆ ಜೀವ ಬೆದರಿಕೆ ಒಡ್ಡಿ ಅವರ ಕರ್ತವ್ಯ ನಿರ್ವಹಣೆಗೆ ಅಡ್ಡಿಪಡಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಚಿಕ್ಕಮಗಳೂರಿನ ನಾಲ್ವರು ವಕೀಲರ ವಿರುದ್ಧ ದಾಖಲಾಗಿರುವ ಎಫ್‌ಐಆರ್‌ಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

'ನಮ್ಮ ವಿರುದ್ಧದ ಎಫ್‌ಐಆರ್ ರದ್ದುಪಡಿಸಬೇಕು' ಎಂದು ಕೋರಿ ಡಿ.ಬಿ.ಸುಜೇಂದ್ರ, ಎ.ಕೆ.ಭುವನೇಶ್, ಕೆ.ಬಿ.ನಂದೀಶ್ ಮತ್ತು ಎಚ್.ಎಂ.ಸುಧಾಕರ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಸೋಮವಾರ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಹೇಮಂತ್ ಚಂದನ ಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಇದೇ ವೇಳೆ ವಕೀಲ ಎನ್.ಟಿ.ಪ್ರೀತಮ್ ವಿರುದ್ಧ ಪೊಲೀಸರು ದಾಖಲಿಸಿಕೊಂಡಿರುವ ಪ್ರತಿದೂರಿಗೆ ಸಂಬಂಧಿಸಿದಂತೆ ಚಿಕ್ಕಮಗಳೂರು ಟೌನ್ ಠಾಣಾ ಪೊಲೀಸರಿಗೆ ನೋಟಿಸ್ ಜಾರಿಗೊಳಿಸಲು ನ್ಯಾಯಪೀಠ ಆದೇಶಿಸಿದೆ. ಅರ್ಜಿದಾರರ ಪರ ಹಿರಿಯ ವಕೀಲ ವಿವೇಕ್ ರೆಡ್ಡಿ ಮತ್ತು ಕೆ.ಎನ್.ಫಣೀಂದ್ರ ವಾದ ಮಂಡಿಸಿದರು. ಕರ್ನಾಟಕ ವಕೀಲರ ಪರಿಷತ್ ಪರವಾಗಿ ಹಿರಿಯ ವಕೀಲ ಎಸ್. ಬಸವರಾಜು ಹಾಜರಿದ್ದರು.

ಆಗ್ರಹ: 'ಪ್ರಕರಣಕ್ಕೆ ಸಂಬಂಧಿಸಿದಂತೆ ವಕೀಲರ ವಿರುದ್ಧ ಪೊಲೀಸರು ನಡೆಸಿದ ಪ್ರತಿಭಟನೆ ವೇಳೆ ತೊಡೆ ತಟ್ಟಿ ಆಕ್ರೋಶ ವ್ಯಕ್ತಪಡಿಸಿದ ಪೊಲೀಸ್ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು' ಎಂದು ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ್ ರೆಡ್ಡಿ ಆಗ್ರಹಿಸಿದ್ದಾರೆ.

ಅರ್ಜಿಯಲ್ಲಿ ಏನಿದೆ?

'ಅರ್ಜಿದಾರ ವಕೀಲರು ಯಾವುದೇ ರೀತಿ ಕಾನೂನು ಉಲ್ಲಂಘನೆ ಮಾಡಿಲ್ಲ. ಅವರ ವಿರುದ್ಧ ಸುಳ್ಳು ಆರೋಪ ಹೊರಿಸಲಾಗಿದೆ. ಅವರನ್ನು ಪ್ರಕರಣದಲ್ಲಿ ಸಿಲುಕಿಸುವ ದುರುದ್ದೇಶದಿಂದ ನಾಲ್ಕು ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ. ಈ ಪ್ರಕರಣದಲ್ಲಿ ಪೊಲೀಸರೇ ಕಾನೂನು ಉಲ್ಲಂಘಿಸಿದ್ದಾರೆ. ಆದ್ದರಿಂದ, ವಕೀಲರ ವಿರುದ್ಧದ ಎಫ್‌ಐಆರ್ ರದ್ದುಪಡಿಸಬೇಕು' ಎಂದು ಅರ್ಜಿಯಲ್ಲಿ ಕೋರಲಾಗಿದೆ.

'ಮೂರು ರಾಜ್ಯಗಳ ಚುನಾವಣೆ ಮಾದರಿ: ಲೋಕಸಭೆಗೆ ಸಿದ್ಧತೆ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ದೇಶದ ಜನ ಏನನ್ನು ಬಯಸಿದ್ದಾರೆ ಎಂಬುದನ್ನು ಮೂರು ರಾಜ್ಯಗಳ ಚುನಾವಣಾ ಫಲಿತಾಂಶ ತಿಳಿಸಿದೆ. ಅದನ್ನು ಗಮನದಲ್ಲಿ ಇಟ್ಟುಕೊಂಡು ನಾವು ಲೋಕಸಭೆ ಚುನಾವಣೆಗೆ ತಯಾರಿ ನಡೆಸಿದ್ದೇವೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಸಾಂಬ್ರಾ ವಿಮಾನ ನಿಲ್ದಾಣದಲ್ಲಿ ಸೋಮವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ರಾಜಸ್ಥಾನ, ಮಧ್ಯಪ್ರದೇಶ ಮತ್ತು ಛತ್ತೀಸಗಢ ವಿಧಾನಸಭಾ ಚುನಾವಣೆಯ ಫಲಿತಾಂಶ ಬಿಜೆಪಿಯಲ್ಲಿ ಆತ್ಮವಿಶ್ವಾಸ, ಜವಾಬ್ದಾರಿ ಇಮ್ಮಡಿಗೊಳಿಸಿದೆ' ಎಂದರು.

'ಕಾಂಗ್ರೆಸ್‌ನ ಭರವಸೆಗಳನ್ನು ಜನ ತಿರಸ್ಕರಿಸಿದ್ದಾರೆ ಎಂಬುದಕ್ಕೆ ಇದಕ್ಕಿಂತ ದೊಡ್ಡ ಉದಾಹರಣೆ ಬೇಕಿಲ್ಲ. ಮೂರು ರಾಜ್ಯಗಳ ಚುನಾವಣೆ ಗೆಲುವಿಗೆ ದೇಶದ ಭದ್ರತೆ, ಅಂತರರಾಷ್ಟ್ರೀಯ ಮಟ್ಟದಲ್ಲಿ ದೇಶದ ಹಿರಿಮೆ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದ ಮೇಲಿನ ನಂಬಿಕೆಯೇ ಕಾರಣ' ಎಂದರು.

'ಜೆಡಿಎಸ್ ಜತೆಗೆ ಮೈತ್ರಿ ಮಾಡಿಕೊಂಡರೆ ರಾಜ್ಯದಲ್ಲಿ ಗರಿಷ್ಠ ಸ್ಥಾನ ಗೆಲ್ಲಲು ಸಾಧ್ಯವಿದೆ. ಮುಂದಿನ ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಅನ್ನು ದೂಳೀಪಟ ಮಾಡುತ್ತೇವೆ' ಎಂದರು.

'ಉತ್ತರ ಕರ್ನಾಟಕದ ಸಮಸ್ಯೆಗಳ ನಿವಾರಣೆಗೆ ಬೆಳಗಾವಿಯ ಸುವರ್ಣ ವಿಧಾನಸೌಧ ನಿರ್ಮಿಸಲಾಗಿದೆ. ಈಗ ಅಧಿವೇಶನ ಆರಂಭವಾಗಿದೆ. ಇನ್ನೊಂದೆಡೆ ಉತ್ತರ ಕರ್ನಾಟಕವೂ ಸೇರಿ ಇಡೀ ರಾಜ್ಯ ಬರಗಾಲದಿಂದ ತತ್ತರಿಸಿದೆ. ಈ ಅಧಿವೇಶನದಲ್ಲಿ ಸಮಸ್ಯೆಗಳಿಗೆ ಸ್ಪಂದನೆ ಸಿಗಬಹುದು ಎಂಬ ನಿರೀಕ್ಷೆ ಜನರಲ್ಲಿದೆ' ಎಂದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಬೆಂಗಳೂರಿನ ಗಾಂಧಿನಗರ ಉಪ ನೋಂದಣಾಧಿಕಾರಿಗಳ ಕಛೇರಿಯಲ್ಲಿ ದಿನಾಂಕ 7ನೇ ಜುಲೈ 1994ರಂದು ನೋಂದಾಯಿಸಲ್ಪಟ್ಟಿರುವ ಸಂಖ್ಯೆ 1038/94-95, ಬುಕ್-1, ವಾಲ್ಯೂಮ್ : 4062ರ ಪುಟ 12 ರಿಂದ 22ರ ವರೆಗಿನ ಮಾರಾಟ ಪತ್ರವು ನಮ್ಮ ಕಕ್ಷಿದಾರರ ಕೈ ತಪ್ಪಿಹೋಗಿದೆ. ಯಾರಾದರೂ ವ್ಯಕ್ತಿಗಳು ಈ ಮಾರಾಟ ಪತ್ರವನ್ನು ಹೊಂದಿದ್ದರೆ ಈ ಜಾಹೀರಾತನ್ನು ಪ್ರಕಟಿಸಿರುವವರ ವಿಳಾಸಕ್ಕೆ ತಲುಪಿಸುವುದು.

ಆರ್. ಸುನೀತ, ವಕೀಲರು
ಇಂಡಸ್ ಲಾ
#101, 1ನೇ ಮಹಡಿ, ಎಂಬೆಸ್ಸಿ ಕ್ಲಾಸಿಕ್, #11, ವಿಠ್ಠಲ್ ಮಲ್ಯ ರಸ್ತೆ, ಬೆಂಗಳೂರು– 560 001 । ಭಾರತ
ದೂ. : +91 80 4072 6600

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd.
Bengaluru

REAL ESTATE SELLING

Sites

Vishweshwariah Layout

BDA PLOT FOR SALE

Vishweshwaraiah Lyt (BDA) 6th Blk KLE Law College, Direct owner 30x40, west face. Price : 11000/sqft
94529 21937/ 80500 77653

BUSINESS

Business Offers

Finance

NRI'S INVESTMENT
And Finance Available On Low Interest Against Properties, Land& Building,Sites,Flats,Converted& Agriculture Lands
Call:7204995189

PERSONAL

Change of Name

CHANGE OF NAME

I, ARUN KUMAR NAGARAJ., Residing at #174, Vinayaka Lake View, Lakshmipura Village, Behind Kanshiram Nagar, Vidyaranyapura Post, Bangalore-97 have changed my name to ARUN BALAJI NAGARAJ vide affidavit dt: 04-12-2023, before Notary Gangaraju B N, Bangalore. Henceforth I shall be called ARUN BALAJI NAGARAJ only.

I, NAGMA.M, aged 30 years, have changed my name to LISHIKA GAURAV Vide Affidavit dated 02.12.2023 sworn before advocate and notary S.Vijayakumar, Bangalore

OTHERS

For Sale

GEESE, TURKEYS from Organic Farm for sale. Contact- 9845015243

CONNECT

ಅರಣ್ಯ ಸಾಗುವಳಿ ಸಕ್ರಮ ಕೋರಿಕೆ: ಮೇಲ್ಮನವಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರಣ್ಯ ಪ್ರದೇಶಕ್ಕೆ ಸೇರಿದ ಜಾಗದಲ್ಲಿ ಸಾಗುವಳಿ ಮಾಡುತ್ತಿದ್ದ ಜಮೀನನ್ನು ಸಕ್ರಮಗೊಳಿಸು-ವಂತೆ ಕೋರಲಾಗಿದ್ದ ಮೇಲ್ಮನವಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಸಂಬಂಧ ಅಜ್ಜಂಪುರ ತಾಲ್ಲೂಕಿನ ಬುಕ್ಕಾಂಬುದಿ ನಿವಾಸಿಗಳಾದ ಎಸ್.ಶಿವಕುಮಾರ್ ಮತ್ತು ಡಿ.ಮಂಜುನಾಥ್ ಸಲ್ಲಿಸಿದ್ದ ಮೇಲ್ಮನವಿಯ-ನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

'ಯಾವುದೇ ಜಾಗ ಅರಣ್ಯ ಇಲಾಖೆಗೆ ವರ್ಗಾವಣೆಯಾದ ನಂತರ, ಅದನ್ನು ಮತ್ತೆ ಖಾಸಗಿ ವ್ಯಕ್ತಿಗಳ ಹೆಸರಿಗೆ ವರ್ಗಾಯಿಸುವ ಅಥವಾ ಸಕ್ರಮಗೊಳಿಸಲು ಸಾಧ್ಯವಿಲ್ಲ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದ ನ್ಯಾಯಪೀಠ ಮೇಲ್ಮನವಿಯನ್ನು ವಜಾಗೊಳಿಸಿದೆ.

'ನಮ್ಮ ಕಕ್ಷಿದಾರರು ಸಾಗುವಳಿ ಮಾಡುತ್ತಿರುವ 10 ಎಕರೆಯನ್ನಾದರೂ ಸಕ್ರಮಗೊಳಿಸಬೇಕು' ಎಂಬ ಮೇಲ್ಮನವಿದಾರರ ಪರ ವಕೀಲರ ಮನವಿಯನ್ನು ತಿರಸ್ಕರಿಸಿದ ನ್ಯಾಯಪೀಠ, 'ಪ್ರಕರಣದಲ್ಲಿ ವಿವಾದಿತ ಜಮೀನನ್ನು 1998-99ನೇ ಸಾಲಿನಲ್ಲೇ ಅರಣ್ಯ ಇಲಾಖೆ ಸುಪರ್ದಿಗೆ ನೀಡಲಾಗಿದೆ. ಈ ಪ್ರದೇಶವನ್ನು ಅರಣ್ಯ ಜಮೀನು ಎಂದು ಜಿಲ್ಲಾಧಿಕಾರಿಯೂ 1998ರ ನವೆಂಬರ್ 3ರಂದು ಆದೇಶಿಸಿದ್ದಾರೆ. ಆ ಜಾಗವನ್ನು ನೆಡುತೋಪು ಎಂದು ಘೋಷಿಸಲಾಗಿದ್ದು, ಅರಣ್ಯ ಇಲಾಖೆಯು ಇಲ್ಲಿ ಅಕೇಶಿಯಾ ಮತ್ತು ನೀಲಗಿರಿ ಮರಗಳನ್ನು ಬೆಳಸಿದೆ. ಇದು ಅರಣ್ಯ ಇಲಾಖೆಯ ನೆಡುತೋಪು. ಹಾಗಾಗಿ, ಈ ಜಾಗವನ್ನು ಖಾಸಗಿ ವ್ಯಕ್ತಿಗಳ ಹೆಸರಿಗೆ ಸಕ್ರಮಗೊಳಿಸುವ ಪ್ರಶ್ನೆಯೇ ಇಲ್ಲ' ಎಂದು ತಿಳಿಸಿದೆ.

ಪ್ರಕರಣವೇನು?: ಅರ್ಜಿದಾರರು ಸಾಗುವಳಿ ಮಾಡುತ್ತಿದ್ದ ಜಾಗವೂ ಸೇರಿದಂತೆ ಅಂದಾಜು 200 ಎಕರೆಯನ್ನು 1998ರಲ್ಲಿ ಅರಣ್ಯ ಪ್ರದೇಶವೆಂದು ಘೋಷಿಸಿ ಅಧಿಸೂಚನೆ ಹೊರಡಿಸಲಾಗಿತ್ತು. ಅರ್ಜಿದಾರರು, 'ನಾವು ಕಳೆದ 30 ವರ್ಷಗಳಿಂದ ಈ ಜಾಗವನ್ನು ಸಾಗುವಳಿ ಮಾಡುತ್ತಿದ್ದು, ನಮ್ಮ ಜಮೀನನ್ನು ಸಕ್ರಮಗೊಳಿಸಲು ಸರ್ಕಾರಕ್ಕೆ ಆದೇಶಿಸಬೇಕು' ಎಂದು ಕೋರಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಇದನ್ನು ಏಕಸದಸ್ಯ ನ್ಯಾಯಪೀಠ 2023ರ ಆಗಸ್ಟ್‌ನಲ್ಲಿ ವಜಾಗೊಳಿಸಿತ್ತು. ಈ ಆದೇಶ ಪ್ರಶ್ನಿಸಿ ವಿಭಾಗೀಯ ನ್ಯಾಯಪೀಠಕ್ಕೆ ಮೇಲ್ಮನವಿ ಸಲ್ಲಿಸಲಾಗಿತ್ತು.

ಆಯ್ಕೆ ಪಟ್ಟಿ ಬಿಡುಗಡೆ ವಿಳಂಬಕ್ಕೆ ಖಂಡನೆ

ಕೆಪಿಎಸ್‌ಸಿ ಎದುರು ಪತ್ರ ಎಸೆದು ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರದ ಹಲವು ಹುದ್ದೆಗಳ ಭರ್ತಿಗೆ ಪರೀಕ್ಷೆ ನಡೆಸಿ ಹಲವು ವರ್ಷವಾದರೂ ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಅಂತಿಮ ಆಯ್ಕೆ ಪಟ್ಟಿ ಬಿಡುಗಡೆ ಮಾಡಿಲ್ಲ' ಎಂದು ಆರೋಪಿಸಿ ಉದ್ಯೋಗ ಸೌಧದ ಎದುರು ಪತ್ರಗಳನ್ನು ಎಸೆದು ಅಭ್ಯರ್ಥಿಗಳು ಆಕ್ರೋಶ ವ್ಯಕ್ತಪ-ಡಿಸಿದರು.

ಅರಮನೆ ರಸ್ತೆಗೆ ಹೊಂದಿಕೊಂಡಿರುವ ಕೆಪಿಎಸ್‌ಸಿ ಮುಖ್ಯ ಕಚೇರಿ ಉದ್ಯೋಗ ಸೌಧ ಕಟ್ಟಡದ ಎದುರು ಸೋಮವಾರ ಸೇರಿದ್ದ ಅಭ್ಯರ್ಥಿಗಳು ಬೇಡಿಕೆ ಈಡೇರಿಕೆಗೆ ಒತ್ತಾಯಿಸಿದರು.

ಅಭ್ಯರ್ಥಿಗಳ ಮನವಿ ಪತ್ರಗಳು ಹಾಗೂ ಸಚಿವರು-ಅಧಿಕಾರಿಗಳಿಗೆ ಸಲ್ಲಿಸಿದ್ದ ಪತ್ರಗಳನ್ನು ಕಟ್ಟಡದ ಎದುರು ಪ್ರವೇಶ ದ್ವಾರದಲ್ಲಿ ಎಸೆದು ಆಕ್ರೋಶ ಹೊರಹಾಕಿದರು. ಅಖಿಲ ಕರ್ನಾಟಕ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಹಾಗೂ ಇತರರು ಪ್ರತಿಭಟನೆ ನಡೆಸಿದರು.

'ಹಲವು ವರ್ಷಗಳ ಹಿಂದೆ ನಡೆಸಿದ್ದ ನೇಮಕಾತಿ ಪರೀಕ್ಷೆಗಳ ಫಲಿತಾಂಶ ಬಂದಿಲ್ಲ. ಆಯ್ಕೆ ಪಟ್ಟಿಯನ್ನು ಬಿಟ್ಟಿಲ್ಲ. ಇದರಿಂದ ಸಾವಿರಾರು ಅಭ್ಯರ್ಥಿಗಳು ನೋವು ಅನುಭವಿಸುತ್ತಿದ್ದಾರೆ' ಎಂದು ಪ್ರತಿಭಟನಕಾರರು ಅಳಲು ತೋಡಿಕೊಂಡರು.

'ಹಿಂದಿನ ನೇಮಕಾತಿಯ ಪಟ್ಟಿ ಬಿಡುಗಡೆ ಮಾಡದೇ, ಹೊಸ ನೇಮಕಾತಿ ಮಾಡಲಾಗುತ್ತಿದೆ. ಇದು ಯಾವ ಕಾನೂನು. ಕೆಪಿಎಸ್‌ಸಿ ಅಧ್ಯಕ್ಷ ಹಾಗೂ ಅಧಿಕಾರಿಗಳ ವರ್ತನೆಯೇ ಕಾನೂನುಬಾಹಿರ. ಎಲ್ಲರ ವಿರುದ್ಧ ಕ್ರಮ ಕೈಗೊಳ್ಳಬೇಕು. ಹಿಂದಿನ ನೇಮಕಾತಿಗಳ ಪಟ್ಟಿಯನ್ನು ಆದಷ್ಟು ಬೇಗ ಬಿಡುಗಡೆ ಮಾಡಬೇಕು' ಎಂದು ಒತ್ತಾಯಿಸಿದರು.

'ಪಟ್ಟಿ ಬಿಡುಗಡೆಗೆ ಆಗ್ರಹಿಸಿ ಹಲವು ವರ್ಷಗಳಿಂದ ಹೋರಾಟ ಮಾಡುತ್ತಿದ್ದೇವೆ. ಸಾಲು ಸಾಲು ಮನವಿ ಪತ್ರ ಸಲ್ಲಿಸಿದ್ದೇವೆ. ಯಾವುದಕ್ಕೂ ಸ್ಪಂದನೆ ಸಿಕ್ಕಿಲ್ಲ. ಹೀಗಾಗಿ, ಕೆಪಿಎಸ್‌ಸಿ ಕಚೇರಿ ಎದುರು ಪತ್ರಗಳನ್ನು ಬಿಸಾಕಿ ಪ್ರತಿಭಟನೆ ನಡೆಸುತ್ತಿದ್ದೇವೆ' ಎಂದು ಹೇಳಿದರು. ಸ್ಥಳಕ್ಕೆ ಬಂದಿದ್ದ ಪೊಲೀಸರು, ಪ್ರತಿಭಟನನಿರತರನ್ನು ವಶಕ್ಕೆ ಪಡೆದು ಕರೆದೊಯ್ದರು.

ಹಲವು ಹುದ್ದೆಗಳ ಭರ್ತಿಗೆ ಪರೀಕ್ಷೆ ನಡೆಸಿ ಹಲವು ವರ್ಷವಾದರೂ ಕೆಪಿಎಸ್‌ಸಿ ಅಂತಿಮ ಆಯ್ಕೆ ಪಟ್ಟಿ ಬಿಡುಗಡೆ ಮಾಡಿಲ್ಲ ಎಂದು ಆರೋಪಿಸಿ ಅಭ್ಯರ್ಥಿಗಳು ಸೋಮವಾರ ಉದ್ಯೋಗ ಸೌಧದ ಎದುರು ಪತ್ರಗಳನ್ನು ಎಸೆದು ಆಕ್ರೋಶ ವ್ಯಕ್ತಪಡಿಸಿದರು

SSR2024
27 ಅಕ್ಟೋಬರ್ 2023 ರಿಂದ 9 ಡಿಸೆಂಬರ್ 2023
ಭಾರತೀಯ ಚುನಾವಣಾ ಆಯೋಗ

'ದೇಶದ ಫಾರಂ' ಭರ್ತಿ ಮಾಡಿದ್ದೀರಾ?

ಮತದಾರರಾಗಿ ಅಥವಾ ಮತದಾರರ ಪಟ್ಟಿಯಲ್ಲಿ ನೊಂದಾಯಿಸಿಕೊಳ್ಳಿ

ಹೆಚ್ಚಿನ ಮಾಹಿತಿಗಾಗಿ 8929441950 ಗೆ ಮಿಸ್ಡ್ ಕಾಲ್ ಕೊಡಿ

ನಮ್ಮನ್ನು ಅನುಸರಿಸಿ
/ecisveep /eci
/ECIVoterEducation
/Election Commission of India

ಲಾಗಾನ್ ಮಾಡಿ voters.eci.gov.in
ವೋಟರ್ ಫೆಸಿಲಿಟೇಶನ್ ಸೆಂಟರ್‌ನಲ್ಲಿ ಅರ್ಜಿ ಸಲ್ಲಿಸಿ ಅಥವಾ ನಿಮ್ಮ ಬಿಎಲ್‌ಒ ಸಂಪರ್ಕಿಸಿ
ವೋಟರ್ ಹೆಲ್ಪ್‌ಲೈನ್ ಆ್ಯಪ್ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಿ
Play Store Apple Store

ಶ್ರೀ. ಸಚಿನ್ ರಮೇಶ್ ತೆಂಡೂಲ್ಕರ್
ರಾಷ್ಟ್ರೀಯ ಇಸಿಐ ರಾಯಭಾರಿ

CBC 52101/13/0011/2324

ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಬೇಸರ

'ಧರ್ಮದ ಅವಹೇಳನ, ಅಪಪ್ರಚಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗ್ರಂಥಗಳಲ್ಲಿ ಹೇಳದಿದ್ದರೂ ನಡವಳಿಕೆಯಿಂದ ಕೆಲವರನ್ನು ಶ್ರೇಷ್ಠ ಮತ್ತು ಕನಿಷ್ಠವೆಂದು ಕಂಡಿರುವ ಅಮಾನುಷ ನಡೆ ನಮ್ಮ ಸಮಾಜದ ದೌರ್ಭಾಗ್ಯ. ಮೇಲು–ಕೀಳಿನ ಆಚರಣೆಯೇ ಹಿಂದೂ ಧರ್ಮವೆಂದು ಹೇಳುವ ಮೂಲಕ ಅಲ್ಲಲ್ಲಿ ಧರ್ಮದ ಬಗ್ಗೆ ಅವಹೇಳನ, ಅಪಪ್ರಚಾರ ಮಾಡಲಾಗುತ್ತಿದೆ' ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಬೇಸರ ವ್ಯಕ್ತಪಡಿಸಿದರು.

ದಿ ಮಿಥಿಕ್ ಸೊಸೈಟಿ ನಗರದಲ್ಲಿ ಸೋಮವಾರ ಹಮ್ಮಿಕೊಂಡ ನೂರ್ ಅಹಮದ್ ಖಾನ್ ದತ್ತಿ ಉಪನ್ಯಾಸದಲ್ಲಿ 'ಗುರೂಜಿ ಗೋಳ್ವಲ್ಕರ್ ಮತ್ತು ಹಿಂದೂ ಸಮಾಜದಲ್ಲಿ ಸಾಮಾಜಿಕ ಸಾಮರಸ್ಯತೆ' ವಿಷಯದ ಬಗ್ಗೆ ಮಾತನಾಡಿದರು.

'ಶ್ರೇಷ್ಠ ಜೀವನವನ್ನು ಜಗತ್ತಿಗೆ ನೀಡಿ, ನಡವಳಿಕೆಯಲ್ಲಿ ಕೆಲವೊಮ್ಮೆ ಎಡವಿದ್ದು ಏಕೆ ಎನ್ನುವುದರ ಬಗ್ಗೆ ಚಿಂತನೆ ಮಾಡಬೇಕಾಗಿದೆ. ಮೇಲು–ಕೀಳಿನ ಆಚರಣೆ ವೇದದ ನಿರ್ದೇಶನಕ್ಕೆ ವಿರೋಧವಾದದ್ದಾಗಿದೆ. ವಾಸ್ತವವಾಗಿ ಈ ಆಚರಣೆ ಧರ್ಮವಲ್ಲ, ಅಧರ್ಮ. ಋಗ್ವೇದದಲ್ಲಿ ಯಾರೂ ಶ್ರೇಷ್ಠರಲ್ಲ, ಯಾರೂ ಕನಿಷ್ಠರಲ್ಲವೆಂದು ಹೇಳಲಾಗಿದೆ. ವೇದದ ಸೂಕ್ತಿಗಳು ಮತ್ತು ಮಂತ್ರಗಳೂ ಮಾನವನ ಸಮಾನತೆಯನ್ನು ಸ್ಪಷ್ಟವಾಗಿ ಸಾರುತ್ತವೆ' ಎಂದು ಹೇಳಿದರು.

'ಹುಟ್ಟಿನಿಂದ ಯಾರೂ ಮೇಲು–ಕೀಳು ಅಲ್ಲ. ಹಿಂದೂ ಸಮಾಜದಲ್ಲಿನ ದುಷ್ಟ ಪರಂಪರೆ ನಿವಾರಿಸದೆ ರಾಷ್ಟ್ರದ ಏಳ್ಗೆ ಸಾಧ್ಯವಿಲ್ಲವೆಂದು ಗುರೂಜಿ ಗೋಳ್ವಲ್ಕರ್ ಅವರೂ ಹೇಳಿದ್ದರು. ಜಗತ್ತಿನಲ್ಲಿ ಬೇರೆ ಬೇರೆ ಕಾರಣಕ್ಕೆ ದ್ವೇಷ, ದುಃಖ ತುಂಬಿಕೊಂಡಿದೆ. ಇಂತಹ ಸಂದರ್ಭದಲ್ಲಿ ಆದರ್ಶ ಸಮಾಜದ ನಿರ್ಮಾಣದ ಬಗ್ಗೆ ಚಿಂತನೆ ಮಾಡಬೇಕು' ಎಂದು ತಿಳಿಸಿದರು.

'ಹಿಂದೂ ಸಮಾಜದಲ್ಲಿ ಅಸಂಖ್ಯಾತ ಜಾತಿಗಳಿವೆ. ನೂರು ವರ್ಷದ ಹಿಂದೆ ಎಷ್ಟು ಜಾತಿಗಳಿದ್ದವೋ ಈಗ ಆ ಸಂಖ್ಯೆ ಹತ್ತು ಪಟ್ಟು ಜಾಸ್ತಿಯಾಗಿದೆ. ಒಂದೊಂದು ಗಣತಿಯಲ್ಲಿಯೂ ಜಾತಿಗಳ ಸಂಖ್ಯೆ ಹೆಚ್ಚುತ್ತಲೇ ಇದೆ. ಜಾತಿ ಕಡಿಮೆಯಾಗಬೇಕೆಂಬ ಕೂಗು ಒಂದೆಡೆಯಾದರೆ, ಇನ್ನೊಂದೆಡೆ ಸಮಾಜದಲ್ಲಿ ವ್ಯಕ್ತಿಯ ಪರಿಚಯ ಜಾತಿ, ವರ್ಣದಿಂದ ಆಗುತ್ತಿದೆ. ಇದಕ್ಕೆ ಸಾಮಾಜಿಕ, ರಾಜಕೀಯ ಕಾರಣಗಳಿವೆ' ಎಂದರು.

ದತ್ತಿ ಉಪನ್ಯಾಸದಲ್ಲಿ ದತ್ತಾತ್ರೇಯ ಹೊಸಬಾಳೆ ಹಾಗೂ ಮಿಥಿಕ್ ಸೊಸೈಟಿ ಅಧ್ಯಕ್ಷ ಕೃ. ನರಹರಿ ಚರ್ಚಿಸಿದರು. ಗೌರವ ಕಾರ್ಯದರ್ಶಿ ವಿ. ನಾಗರಾಜ್ ಇದ್ದಾರೆ.

'ಅಸ್ಪೃಶ್ಯತೆ ಅಮಾನವೀಯ'

'ಅಸ್ಪೃಶ್ಯತೆ ಅಮಾನವೀಯ ಆಚರಣೆ. ಈ ಆಚರಣೆ ಬಗ್ಗೆ ಧಾರ್ಮಿಕ ಗ್ರಂಥಗಳಲ್ಲಿ ಉಲ್ಲೇಖ ಇರಲಿಲ್ಲ. ಜಾತಿ ಮತ್ತು ಅಸ್ಪೃಷ್ಯತೆಗೆ ಧಾರ್ಮಿಕ ಆಚರಣೆ ಸೇರಿಕೊಂಡಿದ್ದರಿಂದ ಕೆಲವರು ಇದನ್ನೇ ಹಿಂದೂ ಧರ್ಮ ಅಂದುಕೊಂಡರು. ಹಿಂದೂ ಧರ್ಮ ವಿರೋಧಿಸುವವರು ಇದನ್ನೇ ತರ್ಕಕ್ಕೆ ಬಳಸಿಕೊಂಡರು. ಎಲ್ಲರಲ್ಲಿಯೂ ಭಗವಂತ ಇದ್ದಾನೆ ಎಂದು ಪ್ರಾಚೀನ ಕಾಲದಿಂದ ನಾವು ನಂಬಿದ್ದೇವೆ. ಇಷ್ಟಾಗಿಯೂ ನಮ್ಮ ಸಮಾಜ ಏಕೆ ಅಸ್ಪೃಶ್ಯತೆ ಆಚರಣೆ ಮಾಡಿತು ಎನ್ನುವುದು ವಿಶ್ಲೇಷಣೆಗೆ ಮೀರಿದ್ದಾಗಿದೆ' ಎಂದು ದತ್ತಾತ್ರೇಯ ಹೊಸಬಾಳೆ ಹೇಳಿದರು.

2024ರಲ್ಲೇ 87ನೇ ಸಾಹಿತ್ಯ ಸಮ್ಮೇಳನ

ಪ್ರಜಾವಾಣಿ ವಾರ್ತೆ

ಮಹೇಶ ಜೋಶಿ

ಬೆಂಗಳೂರು: ಬರದ ಕಾರಣ ಮುಂದೂಡಲ್ಪಟ್ಟಿದ್ದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು 2024ರಲ್ಲಿಯೇ ನಡೆಸಲು ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನಿರ್ಧರಿಸಿದೆ.

ರಾಜ್ಯದ ವಿವಿಧೆಡೆ ಉತ್ಸವ ಹಾಗೂ ಸಮಾರಂಭಗಳು ನಡೆಯುತ್ತಿರುವುದರಿಂದ ಮುಂದಿನ ವರ್ಷದ ಆರಂಭದಿಂದಲೇ ಅಗತ್ಯ ಸಿದ್ಧತೆಗೆ ಪರಿಷತ್ತು ಮುಂದಾಗಿದೆ. ಈ ಮೊದಲು ಮಂಡ್ಯದಲ್ಲಿ ಇದೇ ವರ್ಷ ಸಾಹಿತ್ಯ ಸಮ್ಮೇಳನ ನಡೆಸಲು ನಿರ್ಧರಿಸಿದ್ದ ಪರಿಷತ್ತು, ₹ 25 ಕೋಟಿ ಅನುದಾನ ನೀಡುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಿತ್ತು. ಮಳೆ ಕೊರತೆ ಕಾರಣ ರಾಜ್ಯ ಸರ್ಕಾರ ವಿವಿಧ ತಾಲ್ಲೂಕುಗಳನ್ನು 'ಬರಪೀಡಿತ' ಎಂದು ಘೋಷಿಸಿದ ಬಳಿಕ ಸಮ್ಮೇಳನವನ್ನು ಮುಂದೂಡುವ ನಿರ್ಧಾರವನ್ನು ಪರಿಷತ್ತು ಕೈಗೊಂಡಿತ್ತು.

'ಮಂಡ್ಯ ಜಿಲ್ಲೆಯ 7 ತಾಲ್ಲೂಕುಗಳಲ್ಲಿ ಬರವಿದೆ. ರೈತರು ಸಂಕಟದಲ್ಲಿರುವಾಗ ಸಂತಸ ಆಚರಿಸುವ ಸಮ್ಮೇಳನಕ್ಕೆ ಅರ್ಥವೇ ಇಲ್ಲ ಎಂದು ತಾತ್ಕಾಲಿಕವಾಗಿ ಸಮ್ಮೇಳನ ಮುಂದೂಡಿದ್ದೇವು. ರಾಜ್ಯ ಸರ್ಕಾರವು ದಸರಾ ಸೇರಿ ವಿವಿಧ ಕಾರ್ಯಕ್ರಮಗಳನ್ನು ಅದ್ದೂರಿಯಾಗಿಯೇ ನಡೆಸಿದೆ. ಆದ್ದರಿಂದ ಸಾಹಿತ್ಯ ಸಮ್ಮೇಳನ ನಡೆಸುವ ಬಗ್ಗೆ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರ ಜತೆಗೆ ಮಾತುಕತೆ ನಡೆಸಲಾಗಿದೆ. ಮುಖ್ಯಮಂತ್ರಿ ಅವರನ್ನೂ ಭೇಟಿ ಮಾಡಲಾಗುವುದು. ಈ ಸಮ್ಮೇಳನ 2024ರಲ್ಲಿ ನಡೆಯಲೇ ಬೇಕು' ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ 'ಪ್ರಜಾವಾಣಿ'ಗೆ ತಿಳಿಸಿದರು.

'ಪರಿಷತ್ತಿಗೆ ಸರ್ಕಾರ ನೀಡುವ ವಾರ್ಷಿಕ ₹ 5 ಕೋಟಿಯಲ್ಲಿ ಪ್ರತಿ ವರ್ಷ ಡಿಸೆಂಬರ್ ಅಂತ್ಯಕ್ಕೆ ಎರಡರಿಂದ ಮೂರು ಕಂತು ಹಣ ಬರುತ್ತಿತ್ತು. ಈ ವರ್ಷ ಒಂದು ಕಂತಿನಲ್ಲಿ ₹ 1.66 ಕೋಟಿ ಅನುದಾನ ಬಿಡುಗಡೆಯಾಗಿದೆ. ಇದರಿಂದ ಸಹಜವಾಗಿ ಕಾರ್ಯ-ಚಟುವಟಿಕೆಗೆ ಹಿನ್ನಡೆಯಾಗಿದೆ. ಬಾಕಿ ಅನುದಾನವನ್ನು ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. ಎರಡು ಹಾಗೂ ಮೂರನೇ ಕಂತಿನಲ್ಲಿ ಹಣ ಬಂದ ಬಳಿಕ ಜಿಲ್ಲಾ ಹಾಗೂ ತಾಲ್ಲೂಕು ಸಮ್ಮೇಳನ ನಡೆಸಲು ಸೂಚಿಸಲಾಗಿದೆ. ಸ್ಥಳೀಯವಾಗಿ ಸಂಪನ್ಮೂಲ ಕ್ರೋಡೀಕರಿಸಿಯೂ ತಾಲ್ಲೂಕು ಸಮ್ಮೇಳನ ನಡೆಸಬಹುದು' ಎಂದು ಹೇಳಿದರು.

ರಂಗಭೂಮಿ ಉಡುಪಿ ಸಂಸ್ಥೆ ಈಚೆಗೆ ಆಯೋಜಿಸಿದ್ದ 44ನೇ ರಾಜ್ಯಮಟ್ಟದ ಕನ್ನಡ ನಾಟಕ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದ ಬೆಂಗಳೂರಿನ ರಂಗಾಸ್ಥೆ ಟ್ರಸ್ಟ್ ತಂಡದ 'ದ್ರೋಪತಿ ಹೇಳ್ತವ್ಳೆ' ನಾಟಕ

ರಾಜ್ಯಮಟ್ಟದ ಕನ್ನಡ ನಾಟಕ ಸ್ಪರ್ಧೆ

'ದ್ರೋಪತಿ ಹೇಳ್ತವ್ಳೆ': ಪ್ರಥಮ ಬಹುಮಾನ

ಪ್ರಜಾವಾಣಿ ವಾರ್ತೆ

ಉಡುಪಿ: 'ರಂಗಭೂಮಿ ಉಡುಪಿ' ಸಂಸ್ಥೆ ಈಚೆಗೆ ಆಯೋಜಿಸಿದ್ದ 44ನೇ ರಾಜ್ಯಮಟ್ಟದ ಕನ್ನಡ ನಾಟಕ ಸ್ಪರ್ಧೆಯ ಫಲಿತಾಂಶವನ್ನು ಸೋಮವಾರ ಪ್ರಕಟಿಸಿದ್ದು, ಬೆಂಗಳೂರಿನ ರಂಗಾಸ್ಥೆ ಟ್ರಸ್ಟ್ ತಂಡದ 'ದ್ರೋಪತಿ ಹೇಳ್ತವ್ಳೆ' ನಾಟಕಕ್ಕೆ ಪ್ರಥಮ ಪ್ರಶಸ್ತಿ ಪಡೆದಿದೆ.

ವಿಜೇತ ತಂಡಕ್ಕೆ ಪಿ.ವಿ.ಎಸ್. ಬೀಡೀಸ್ ಪ್ರಾಯೋಜಿತ ದಿ.ಪುತ್ತು ವೈಕುಂಠ ಶೇಟ್ ಸ್ಮಾರಕ ₹35,000 ನಗದು ಪುರಸ್ಕಾರ ಹಾಗೂ ಡಾ.ಟಿ. ಎಂ.ಎ.ಪೈ ಸ್ಮಾರಕ ಪರ್ಯಾಯ ಫಲಕ ಹಾಗೂ ದಿ.ಎಸ್.ಎಲ್. ನಾರಾಯಣ ಭಟ್ ಸ್ಮಾರಕ ಸ್ಮರಣಿಕೆ ನೀಡಲಾಗುವುದು.

ದಿ.ಮಲ್ಪೆ ಮಧ್ವರಾಜ್ ಸ್ಮಾರಕ ಪ್ರಮೋದ್ ಮಧ್ವರಾಜ್ ಪ್ರಾಯೋಜಿತ ದ್ವಿತೀಯ ಬಹುಮಾನ ಬೆಂಗಳೂರಿನ ರಂಗರಥ ತಂಡದ 'ಕ್ರೌಂಚಗೀತಾ' ನಾಟಕಕ್ಕೆ ಸಂದಿದೆ. ಪ್ರಶಸ್ತಿಯು ₹25,000 ನಗದು ಹಾಗೂ ಡಾ.ಆರ್. ಪಿ.ಕೊಪ್ಪೀಕರ್ ಸ್ಮಾರಕ ಪರ್ಯಾಯ ಫಲಕ ಮತ್ತು ಯು.ಪಿ.ಶೆಣೈ ಸ್ಮಾರಕ ಸ್ಮರಣಿಕೆಯನ್ನು ಒಳಗೊಂಡಿದೆ.

ಬೆಂಗಳೂರಿನ ರಂಗಪಯಣ ತಂಡದ 'ಚಂದ್ರಗಿರಿ ತೀರದಲ್ಲಿ' ನಾಟಕಕ್ಕೆ ತೃತೀಯ ಬಹುಮಾನ ಬಂದಿದೆ. ದಿ.ಪಿ.ವಾಸುದೇವ ರಾವ್ ಸ್ಮರಣಾರ್ಥ ಸೀತಾ ವಾಸುದೇವ ರಾವ್ ಅವರ ಕೊಡುಗೆಯಾಗಿ ₹15,000 ನಗದು ಹಾಗೂ ಸಖೂಬಾಯಿ ಶ್ರೀಧರ ನಾಯಕ್ ಕೊರ್ಕಣೆ ಸ್ಮಾರಕ ಸ್ಮರಣಿಕೆಯನ್ನು ತೃತೀಯ ಬಹುಮಾನ ಒಳಗೊಂಡಿದೆ.

ಜನವರಿ ಕೊನೆಯ ವಾರ ನಡೆಯಲಿರುವ 'ರಂಗಭೂಮಿ ರಂಗೋತ್ಸವ'ದಲ್ಲಿ ವಿಜೇತ ತಂಡಗಳಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ರಂಗಭೂಮಿ ಉಡುಪಿ ಸಂಸ್ಥೆಯ ಅಧ್ಯಕ್ಷ ತಲ್ಲೂರು ಶಿವರಾಮ ಶೆಟ್ಟಿ ತಿಳಿಸಿದ್ದಾರೆ.

ಎಲ್ಲ ಶಾಲೆಗಳಲ್ಲೂ ಎಸ್‌ಒಪಿ ನಿಯಮ ಪಾಲನೆ ಕಡ್ಡಾಯ

'ಬಿಸಿಯೂಟ ಲೋಪ: ಮುಖ್ಯ ಶಿಕ್ಷಕರೇ ಹೊಣೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಲಾ ಮಕ್ಕಳನ್ನು ಸಾಲಾಗಿ ಕೂರಿಸಿ ಮಧ್ಯಾಹ್ನ ಬಿಸಿಯೂಟ ಬಡಿಸಬೇಕು. ಸರದಿಯಲ್ಲಿ ನಿಲ್ಲಿಸಿ ನೀಡಿದರೆ ಮುಖ್ಯ ಶಿಕ್ಷಕರು, ಬಿಸಿಯೂಟ ತಯಾರಕರು ಹಾಗೂ ಸಿಬ್ಬಂದಿ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸೂಚಿಸಿದೆ.

ಕಲಬುರಗಿ ಜಿಲ್ಲೆಯ ಚಿಣಮಗೇರಾ ಶಾಲೆಯಲ್ಲಿ ಬಿಸಿ ಊಟ ತಯಾರಿಸುವ ಕಡಾಯಿಗೆ ಬಿದ್ದು ಎರಡನೇ ತರಗತಿ ಮಗು ಮೃತಪಟ್ಟಿತ್ತು. ಮಕ್ಕಳನ್ನು ಸಾಲಾಗಿ ನಿಲ್ಲಿಸಿ ಊಟ ಬಡಿಸುವಾಗ ಆಗುವ ನೂಕುನುಗ್ಗಲಿನಿಂದ ಇಂತಹ ಅವಘಡ ನಡೆದಿದೆ ಎನ್ನುವುದು ಖಚಿತಪಟ್ಟಿತ್ತು. ಉಳಿದ ಶಾಲೆಗಳೂ ಭವಿಷ್ಯದಲ್ಲಿ ಇಂತಹ ಪ್ರಕರಣಗಳು ನಡೆಯದಂತೆ ಎಚ್ಚರಿಕೆ ವಹಿಸಬೇಕು ಎಂದು ಶಿಕ್ಷಣ ಇಲಾಖೆ ಆಯುಕ್ತೆ ಬಿ.ಬಿ. ಕಾವೇರಿ ಅವರು ಎಲ್ಲ ಶಾಲೆಗಳಿಗೂ ಸೂಚನೆ ನೀಡಿದ್ದಾರೆ.

ಮಕ್ಕಳನ್ನು ಸಾಲಾಗಿ ಕೂರಿಸಿದ ನಂತರ ಊಟ ಬಡಿಸಬೇಕು. ಕಡಾಯಿಯನ್ನು ಅದು ಖಾಲಿಯಾಗುವವರೆಗೂ ಒಲೆಯ ಮೇಲಿಂದ ಇಳಿಸಬಾರದು. ಅಡುಗೆ ಮಾಡುವ ಸಿಬ್ಬಂದಿ ಎಪ್ರನ್, ತಲೆಟೋಪಿ ಧರಿಸಬೇಕು. ಊಟದ ಸ್ಥಳದಲ್ಲಿ ಸ್ವಚ್ಛತೆ ಕಾಪಾಡಬೇಕು. ಅಕ್ಕಿ, ತರಕಾರಿಗಳನ್ನು ಬಿಸಿ ನೀರಿನಿಂದ ತೊಳೆಯಬೇಕು. ಮಕ್ಕಳಿಗೆ ಬಡಿಸುವ ಮೊದಲು, ತಯಾರಿಸಿದ ಆಹಾರವನ್ನು ಶಿಕ್ಷಕರು ತಿಂದು ಪರೀಕ್ಷಿಸಿರಬೇಕು ಎಂಬ ವಿವರಗಳನ್ನು ಒಳಗೊಂಡ ಪ್ರಮಾಣಿತ ಕಾರ್ಯ ವಿಧಾನವನ್ನು (ಎಸ್‌ಒಪಿ) ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಅವರು ತಾಕೀತು ಮಾಡಿದ್ದಾರೆ.

ಚಿಣಮಗೇರಾ ಶಾಲೆಯಲ್ಲಿ ಊಟ ಬಡಿಸುವಾಗ ತಳ್ಳಾಟ ನಡೆದಿತ್ತು. ಆಗ ಮಕ್ಕಳನ್ನು ಜಾಗ್ರತೆಯಿಂದ ನೋಡಿಕೊಳ್ಳಬೇಕಾದ ಶಿಕ್ಷಕಿ ಮೊಬೈಲ್‌ನಲ್ಲಿ ಮಾತನಾಡುವುದರಲ್ಲಿ ಮಗ್ನರಾಗಿದ್ದರು. ಘಟನೆ ಬಳಿಕ ಮುಖ್ಯ ಶಿಕ್ಷಕಿಯನ್ನು ಅಮಾನತು ಮಾಡಲಾಗಿದೆ. ಬಿಸಿಯೂಟದ ಸಿಬ್ಬಂದಿಯನ್ನು ವಜಾಗೊಳಿಸಲಾಗಿದೆ. ಇಲಾಖಾ ವಿಚಾರಣೆಗೂ ಆದೇಶಿಸಲಾಗಿದೆ ಎಂದು ವಿವರ ನೀಡಿದ್ದಾರೆ.

ನಗರದಲ್ಲಿ ಇಂದು

ಜೆಎಸ್‌ಎಸ್ ರಂಗೋತ್ಸವ–2023: ಉದ್ಘಾಟನೆ: ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ: ಎಚ್.ಎಲ್. ಪುಷ್ಪ, ಉದ್ಘಾಟನೆ: ಸಿ. ಸೋಮಶೇಖರ್, 'ಶೂನ್ಯ' ನಾಟಕ ಪ್ರದರ್ಶನ: ರಚನೆ: ಎಸ್. ರಾಮನಾಥ, ನಿರ್ದೇಶನ: ಜೀವನ್ ಕುಮಾರ್ ಬಿ. ಹೆಗ್ಗೋಡು, ಸಂಗೀತ: ಚಂದ್ರಶೇಖರಾಚಾರ್ ಹೆಗ್ಗೋಠಾರ, ಪ್ರಸ್ತುತಿ: ನಂಜನಗೂಡಿನ ಜೆಎಸ್‌ಎಸ್ ಪದವಿ ಕಾಲೇಜಿನ ವಿದ್ಯಾರ್ಥಿಗಳು, ಸ್ಥಳ: ಶಿವರಾತ್ರೀಶ್ವರ ಕೇಂದ್ರ, ಜಯನಗರ, ಬೆಳಿಗ್ಗೆ 10.30

'ಆಧುನಿಕ ಭಾರತದಲ್ಲಿ ಸಂವಿಧಾನ ಮತ್ತು ಯುವಜನತೆ' ಕುರಿತ ಸಂವಾದ: ಅತಿಥಿಗಳು: ಕೆ. ಜೈರಾಜ್, ಅಲೋಕ್ ಪ್ರಸನ್ನ, ಮಾಯಾ ಶರ್ಮಾ, ಹರೀಶ್ ಎನ್., ಆಯೋಜನೆ: ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿ ಮಹಿಳಾ ಕಾಲೇಜಿನ ರಾಜ್ಯಶಾಸ್ತ್ರ ವಿಭಾಗ, ಬಿಪ್ಯಾಕ್, ಸ್ಥಳ: ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿ ಮಹಿಳಾ ಕಾಲೇಜು, ಬೆಳಿಗ್ಗೆ 11

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಕರ್ನಾಟಕ ರಾಜ್ಯೋತ್ಸವ, ಕನಕ ಜಯಂತಿ, ರಂಗದೋಕಳಿ ಉತ್ಸವ: ಅಧ್ಯಕ್ಷತೆ: ಕೆ.ಎಚ್. ಧನಂಜಯ್ಯ, ಅತಿಥಿ: ನಿಡಸಾಲೆ ಪುಟ್ಟಸ್ವಾಮಯ್ಯ, ಉಪನ್ಯಾಸ: ಎಂ. ಪ್ರಕಾಶಮೂರ್ತಿ, 'ಆತ್ಮಲಿಂಗ' ನಾಟಕ ಪ್ರದರ್ಶನ: ರಚನೆ. ಎನ್.ಎಸ್. ರಾವ್, ನಿರ್ದೇಶನ: ವೆಂಕಟರಮಣಯ್ಯ ಡಿ., 'ಸ್ಮಶಾನ ಕುರುಕ್ಷೇತ್ರಂ' ನಾಟಕ ಪ್ರದರ್ಶನ: ರಚನೆ: ಕುವೆಂಪು, ನಿರ್ದೇಶನ: ಎಚ್. ಎನ್. ಆನಂದಮೂರ್ತಿ, ಆಯೋಜನೆ: ನಾಟ್ಯ ಸರಸ್ವತಿ ಶಾಂತಲಾ ಕನ್ನಡ ಕಲಾ ಸಂಘ, ಸ್ಥಳ: ಎಚ್. ತಿಮ್ಮೇಗೌಡ ಸಭಾಂಗಣ, ವಿದ್ಯಾನಿಕೇತನ ಶಾಲೆ, ಸುಂಕದಕಟ್ಟೆ, ಸಂಜೆ 5.30ರಿಂದ

ಧಾರ್ಮಿಕ ಪ್ರವಚನ: 'ಮಹಾಭಾರತ ಶಾಂತಿಪರ್ವ'ದ ಕುರಿತು ಪ್ರವಚನ: ಅಬ್ಬೂರು ಬದರಿ ಆಚಾರ್, ಆಯೋಜನೆ ಮತ್ತು ಸ್ಥಳ: ವಿಜಯನಗರ ಮಾಧ್ವ ಸಂಘ, ಗಂಗಾಧರ ಬಡಾವಣೆ, ವಿಜಯನಗರ, ಸಂಜೆ 6.30

ತೆರಿಗೆದಾರರೆ ಗಮನಿಸಿ

75 Azadi Ka Amrit Mahotsav | G20 भारत 2023 INDIA

ನಿಮ್ಮ ಐಟಿಆರ್ ಫೈಲಿಂಗ್‌ನ ಸಂಪೂರ್ಣ ಪ್ರಯೋಜನಕ್ಕಾಗಿ

ಸದಾಕಾಲ ಪ್ರಾಮಾಣಿಕ ವಿವರ ನೀಡಿರಿ

ನಿಖರ ಮಾಹಿತಿ ನೀಡಿರಿ (ಉದಾಹರಣೆ)

1. ಮನೆ ಬಾಡಿಗೆ ಪಾವತಿಸಿರುವ ಬಗ್ಗೆ
2. ಗೃಹಸಾಲಕ್ಕೆ ಪಾವತಿಸಿರುವ ಅಸಲು ಮತ್ತು ಬಡ್ಡಿ ವಿವರ
3. ಶಿಕ್ಷಣ ಸಾಲಕ್ಕೆ ಪಾವತಿಸಿರುವ ಬಡ್ಡಿ
4. ಸ್ವಂತಕ್ಕಾಗಿ ಮತ್ತು ಕುಟುಂಬಕ್ಕಾಗಿ ಪಾವತಿಸಿರುವ ಆರೋಗ್ಯ ವಿಮೆ ಪ್ರೀಮಿಯಂ ಮಾಹಿತಿ
5. ವಿಕಲಚೇತನ ವ್ಯಕ್ತಿಗಳ ಕಡಿತಕ್ಕೆ ಸಂಬಂಧಿತ ಮಾಹಿತಿ
6. ರಾಜಕೀಯ ಪಕ್ಷಗಳಿಗೆ/ದತ್ತಿ ಸಂಸ್ಥೆಗಳಿಗೆ/ಪ್ರತಿಷ್ಠಾನಗಳಿಗೆ ನೀಡಿರುವ ದೇಣಿಗೆ ಮಾಹಿತಿ

ಯಾವುದೇ ಕಡಿತ/ವಿನಾಯಿತಿ ಕ್ಲೇಮ್ ಮಾಡುವುದಕ್ಕೂ ಮುನ್ನ, ಐಟಿಆರ್ ಸಲ್ಲಿಸುವುದು ಮತ್ತು ಅದರಲ್ಲಿ ಕೆಳಕಂಡ ನಿಖರವಾದ ಅಂಶಗಳನ್ನು ನೀಡುವುದು ನಿಮ್ಮ ಜವಾಬ್ದಾರಿ:

1. ಎಲ್ಲಾ ಕಡಿತಗಳು ಪ್ರಾಮಾಣಿಕವಾಗಿವೆ ಮತ್ತು ಅಸಲಿಯಾಗಿವೆ;
2. ಇದಕ್ಕೆ ಸಂಬಂಧಿತ ಅಸಲಿ ರಸೀದಿಗಳನ್ನು ಮತ್ತು ದಾಖಲಾತಿಗಳನ್ನು ಲಗತ್ತಿಸಲಾಗಿದೆ;
3. ಇದರಲ್ಲಿ ಆದಾಯಕ್ಕೆ ಸಂಬಂಧಿತ ಯಾವುದೇ ತಪ್ಪು ಮಾಹಿತಿಗಳನ್ನು ನೀಡುವುದಿಲ್ಲ.

ಆಗುಹೋಗುಗಳು:
ಆದಾಯಕ್ಕೆ ಸಂಬಂಧಿತ ತಪ್ಪು ಮಾಹಿತಿ ನೀಡಿದಲ್ಲಿ, ಆದಾಯ ತೆರಿಗೆ ಕಾಯ್ದೆ, 1961ರ ನಿಯಮಗಳ ಅಡಿಯಲ್ಲಿ ದಂಡ ಮತ್ತು ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ.

ಸರಿಪಡಿಸುವುದು ಹೇಗೆ:
✓ ಹ.ವ. 2023–24ನೇ ಸಾಲಿಗೆ ಪರಿಷ್ಕೃತ ಐಟಿಆರ್ ಫೈಲ್ ಮಾಡಿರಿ.
✓ ಹ.ವ. 2021–22 ಮತ್ತು ಹ.ವ. 2022–23ನೇ ಸಾಲಿಗೆ ಪರಿಷ್ಕೃತ ಐಟಿಆರ್ ಫೈಲ್ ಮಾಡಿರಿ.

cbc 15401/13/0019/2324

ಇ–ಬ್ರೋಷರ್‌ಗಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿರಿ

INCOME TAX DEPARTMENT

ಆದಾಯ ತೆರಿಗೆ ಇಲಾಖೆ
ಕೇಂದ್ರೀಯ ನೇರ ತೆರಿಗೆಗಳ ಮಂಡಳಿ

ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ಸಂದರ್ಶಿಸಿ: www.incometax.gov.in

@IncomeTaxIndia @incometaxindia.official @incometaxindiaofficial @Income Tax India @Income Tax India Official

ಮಂಗಳವಾರ ● ಡಿಸೆಂಬರ್ 5, 2023 ಪ್ರಜಾವಾಣಿ

2022ರ ಎನ್‌ಸಿಆರ್‌ಬಿ ವರದಿ ಬಿಡುಗಡೆ ● ರಾಜ್ಯದಲ್ಲೂ ಅಪರಾಧಗಳ ಸಂಖ್ಯೆ ಏರಿಕೆ

ಸೈಬರ್ ಕ್ರೈಂ: ದೇಶದಲ್ಲಿ ಬೆಂಗಳೂರಿಗೆ ಅಗ್ರಪಟ್ಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತಿಹೆಚ್ಚು ಸೈಬರ್ ಅಪರಾಧ ಪ್ರಕರಣಗಳು ದಾಖಲಾಗುತ್ತಿರುವ ದೇಶದ ನಗರಗಳ ಪೈಕಿ ಬೆಂಗಳೂರು ಹಾಗೂ ರಾಜ್ಯಗಳ ಪೈಕಿ ಕರ್ನಾಟಕ ಮೊದಲ ಸ್ಥಾನದಲ್ಲಿದೆ.

2022ರ ಜನವರಿಯಿಂದ ಡಿಸೆಂಬರ್‌ವರೆಗಿನ ಅಪರಾಧಗಳ ಅಂಕಿ–ಅಂಶವನ್ನು ರಾಷ್ಟ್ರೀಯ ಅಪರಾಧಗಳ ದಾಖಲೆ ಬ್ಯುರೊ (ಎನ್‌ಸಿಆರ್‌ಬಿ) ಬಿಡುಗಡೆ ಮಾಡಿದೆ.

‘ಅಂತರ್ಜಾಲ ಬಳಕೆ ಪ್ರಮಾಣ ಹೆಚ್ಚಾಗಿದೆ. ಆನ್‌ಲೈನ್ ಮೂಲಕ ನಗದು ವರ್ಗಾವಣೆ ಸುಲಭವಾಗಿದೆ. ಇದೇ ಕಾರಣಕ್ಕೆ ವಂಚಕರು, ಆನ್‌ಲೈನ್ ವ್ಯವಸ್ಥೆ ಬಳಸಿಕೊಂಡು ಜನರಿಂದ ಹಣ ದೋಚುತ್ತಿದ್ದಾರೆ. ಈ ಕಾರಣಕ್ಕೆ ಸೈಬರ್ ಅಪರಾಧಗಳು ಮೇಲಿಂದ ಮೇಲೆ ಹೆಚ್ಚಾಗುತ್ತಿವೆ’ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

‘ದೇಶದ 19 ಮಹಾನಗರಗಳ ಪಟ್ಟಿಯಲ್ಲಿ ಬೆಂಗಳೂರು ಮೊದಲ ಸ್ಥಾನದಲ್ಲಿದೆ. ಲಖನೌ ಹಾಗೂ ಗಾಜಿಯಾಬಾದ್ ಕ್ರಮವಾಗಿ ಎರಡು ಹಾಗೂ ಮೂರನೇ ಸ್ಥಾನದಲ್ಲಿವೆ’ ಎಂಬ ಅಂಶ ವರದಿಯಲ್ಲಿದೆ.

2021ಕ್ಕಿಂತ ಹೆಚ್ಚು ಪ್ರಕರಣ: ‘2021ರಲ್ಲಿ ಬೆಂಗಳೂರಿನಲ್ಲಿ 6,423 ಸೈಬರ್ ಕ್ರೈಂ ಪ್ರಕರಣಗಳು ದಾಖಲಾಗಿದ್ದವು. ಆದರೆ, 2022ರಲ್ಲಿ 9,940 ಪ್ರಕರಣ ದಾಖಲಾಗಿವೆ’ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

‘2019ರಲ್ಲಿ 10,555 ಪ್ರಕರಣ ಹಾಗೂ 2020ರಲ್ಲಿ 8,892 ಪ್ರಕರಣಗಳು ದಾಖಲಾಗಿದ್ದವು’ ಎಂಬ ಮಾಹಿತಿಯೂ ವರದಿಯಲ್ಲಿದೆ.

ಐಟಿ ನಗರ: ‘ಬೆಂಗಳೂರಿನಲ್ಲಿ ಸಾಫ್ಟ್‌ವೇರ್ ಹಾಗೂ ಇತರೆ ಕಂಪನಿಗಳು ಹೆಚ್ಚಾಗಿವೆ. ಜೊತೆಗೆ, ಆರ್ಥಿಕವಾಗಿ ಬೆಂಗಳೂರು ಅತಿ ವೇಗವಾಗಿ ಬೆಳೆಯುತ್ತಿದೆ. ಇಲ್ಲಿಯ ಜನರನ್ನು ಗುರಿಯಾಗಿಸಿಕೊಂಡು ವಂಚಕರು ಹಣ ದೋಚುತ್ತಿದ್ದಾರೆ’ ಎಂಬ ಅಂಶ ವರದಿಯಲ್ಲಿದೆ.

ರಾಜ್ಯದಲ್ಲೂ ಹೆಚ್ಚಳ: ‘ಕರ್ನಾಟಕದಲ್ಲೂ 2022ರಲ್ಲಿ 12,549 ಪ್ರಕರಣಗಳು ದಾಖಲಾಗಿವೆ. ಇತರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕ ಮೊದಲ ಸ್ಥಾನದಲ್ಲಿದೆ’ ಎಂಬುದನ್ನು ವರದಿಯಲ್ಲಿ ಉಲ್ಲೇಖಿಸಲಾಗಿದೆ.





ಡ್ರಗ್ಸ್; ಬೆಂಗಳೂರಿನಲ್ಲಿ 4,027 ಪ್ರಕರಣ

‘ಡ್ರಗ್ಸ್ ಸಾಗಣೆ, ಮಾರಾಟ ಹಾಗೂ ಸೇವನೆಗೆ ಸಂಬಂಧಪಟ್ಟಂತೆ ಮುಂಬೈನಲ್ಲಿ 2022ರಲ್ಲಿ ಅತಿಹೆಚ್ಚು ಪ್ರಕರಣಗಳು (11,046) ದಾಖಲಾಗಿವೆ

- ಬೆಂಗಳೂರಿನಲ್ಲಿ 4,027,
- ದೆಹಲಿಯಲ್ಲಿ 1161,
- ಕೊಚ್ಚಿಯಲ್ಲಿ 2751

ಪ್ರಕರಣಗಳು ವರದಿಯಾಗಿವೆ‘ ಎಂದು ಎನ್‌ಸಿಆರ್‌ಬಿ ತಿಳಿಸಿದೆ.

‘ದೂರು ಸ್ವೀಕಾರ ಸುಲಭ’

‘ಸೈಬರ್ ಅಪರಾಧಗಳ ಬಗ್ಗೆ ದೂರು ನೀಡುವ ವ್ಯವಸ್ಥೆಯನ್ನು ಸುಲಭಗೊಳಿಸಲಾಗಿದೆ. ನಿಯಂತ್ರಣ ಕೊಠಡಿ 112ಕ್ಕೆ ಕರೆ ಮಾಡಿ ಜನರು ಹೆಚ್ಚಿನ ಸಂಖ್ಯೆಯಲ್ಲಿ ದೂರು ದಾಖಲಿಸುತ್ತಿದ್ದಾರೆ. ಜತೆಗೆ, ಜಿಲ್ಲಾವಾರು ಹಾಗೂ ಕಮಿಷನರೇಟ್ ವ್ಯಾಪ್ತಿಯಲ್ಲಿ ಪ್ರತ್ಯೇಕ ಸೈಬರ್ ಕ್ರೈಂ ಠಾಣೆಗಳನ್ನು ತೆರೆಯಲಾಗಿದೆ. ಹೀಗಾಗಿ, ಪ್ರಕರಣಗಳ ದಾಖಲಾತಿ ಪ್ರಮಾಣ ಹೆಚ್ಚಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಜಾಗೃತಿಯೇ ಪರಿಹಾರ

‘ಹಲವು ಆಮಿಷಗಳಿಗೆ ಒಳಗಾಗಿ ಜನರು ಹಣ ಕಳೆದುಕೊಳ್ಳುತ್ತಿದ್ದಾರೆ. ಜನರು ಹೆಚ್ಚು ಜಾಗೃತಿ ವಹಿಸಿದರೆ ಮಾತ್ರ ಸೈಬರ್ ಅಪರಾಧ ನಿಯಂತ್ರಿಸಬಹುದು’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

‘ಬಹುಪಾಲು ಪ್ರಕರಣಗಳಲ್ಲಿ ಜನರೇ ತಮ್ಮ ವೈಯಕ್ತಿಕ ಹಾಗೂ ಬ್ಯಾಂಕ್ ಖಾತೆ ಮಾಹಿತಿಯನ್ನು ವಂಚಕರಿಗೆ ನೀಡುತ್ತಿದ್ದಾರೆ. ಹಲವರು, ಒನ್ ಟೈಂ ಪಾಸ್‌ವರ್ಡ್ (ಒಟಿಪಿ) ಸಹ ಹಂಚಿಕೊಳ್ಳುತ್ತಿದ್ದಾರೆ. ಹೀಗಾಗಿ, ವಂಚಕರು ಸುಲಭವಾಗಿ ಖಾತೆಯಿಂದ ಹಣ ವರ್ಗಾಯಿಸಿಕೊಳ್ಳುತ್ತಿದ್ದಾರೆ. ಜನರು ತಮ್ಮ ವೈಯಕ್ತಿಕ ಮಾಹಿತಿಯನ್ನು ಗೌಪ್ಯವಾಗಿರಿಸಿಕೊಳ್ಳಬೇಕು’ ಎಂದು ಅವರು ಸಲಹೆ ನೀಡಿದರು.

ದೇಶದಲ್ಲಿ ಪ್ರತಿನಿತ್ಯ ಸರಾಸರಿ 78 ಕೊಲೆ



ನವದೆಹಲಿ (ಪಿಟಿಐ): ದೇಶದಲ್ಲಿ ಕಳೆದ ವರ್ಷ(2022) 28,522 ಕೊಲೆ ಪ್ರಕರಣಗಳು ದಾಖಲಾಗಿವೆ. ನಿತ್ಯ ಸರಾಸರಿ 78 ಕೊಲೆಗಳು, ಅಂದರೆ ಪ್ರತಿ ಗಂಟೆಗೆ 3ಕ್ಕೂ ಹೆಚ್ಚು ಕೊಲೆಗಳಾಗಿವೆ!

ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯುರೊ (ಎನ್‌ಸಿಆರ್‌ಬಿ) ಈ ವಿವರ ಬಿಡುಗಡೆ ಮಾಡಿದೆ. ಆ ಪ್ರಕಾರ, ಕೊಲೆ ಪ್ರಮಾಣ ಪ್ರತಿ ಲಕ್ಷ ಜನಸಂಖ್ಯೆಗೆ 2.1ರಷ್ಟಿದೆ. ಆರೋಪಪಟ್ಟಿಯನ್ನು ಸಲ್ಲಿಸುವ ಪ್ರಮಾಣ ಶೇ 81.5 ಆಗಿದೆ.

ಕೊಲೆ ಪ್ರಕರಣಗಳಲ್ಲಿ ಶೇ 95.4ರಷ್ಟು ಬಲಿಪಶುಗಳು ವಯಸ್ಕರು. ಕೊಲೆಯಾದವರಲ್ಲಿ ಶೇ 70ರಷ್ಟು ಮಂದಿ ಪುರುಷರು. ಕೊಲೆಯಾದ ಒಟ್ಟು ಮಹಿಳೆಯರ ಸಂಖ್ಯೆ 8,125 ಎಂದು ವಾರ್ಷಿಕ ವರದಿ ತಿಳಿಸಿದೆ.

ಕರ್ನಾಟಕದಲ್ಲಿ 2022ನೇ ಸಾಲಿನಲ್ಲಿ ಒಟ್ಟು 1,404 ಕೊಲೆ ಪ್ರಕರಣಗಳು ದಾಖಲಾಗಿವೆ. ಅದರ ಹಿಂದಿನ ವರ್ಷಕ್ಕೆ ಹೋಲಿಸಿದರೆ ತುಸು ಹೆಚ್ಚಿದ್ದು, 2021ನೇ ಸಾಲಿನಲ್ಲಿ 1,357 ಪ್ರಕರಣಗಳು ದಾಖಲಾಗಿದ್ದವು. ರಾಜ್ಯವಾರು ಪಟ್ಟಿಯಲ್ಲಿ ಕರ್ನಾಟಕ 8ನೇ ಸ್ಥಾನದಲ್ಲಿದೆ.

ಪ್ರಜಾವಾಣಿ ಗ್ರಾಫಿಕ್ಸ್

ಮೋರಿಯಲ್ಲಿ ತೇಲಿಬಂದ ವ್ಯಕ್ತಿಯ ಕಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಪ್ಪನ ಅಗ್ರಹಾರ ಠಾಣೆ ವ್ಯಾಪ್ತಿಯಲ್ಲಿರುವ ಮೋರಿಯೊಂದರಲ್ಲಿ ವ್ಯಕ್ತಿಯೊಬ್ಬರ ಕಾಲು ಪತ್ತೆಯಾಗಿದ್ದು, ಕೊಲೆ ಶಂಕೆ ವ್ಯಕ್ತವಾಗಿದೆ.

‘ಮೋರಿಯಲ್ಲಿ ಕಾಲು ನೋಡಿದ್ದ ಜನ, ಠಾಣೆಗೆ ಮಾಹಿತಿ ನೀಡಿದ್ದರು. ಗಸ್ತು ವಾಹನದ ಸಿಬ್ಬಂದಿ ಸ್ಥಳಕ್ಕೆ ಹೋಗಿ ಕಾಲು ಹೊರಗೆ ತೆಗೆದು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿದ್ದಾರೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಅಪರಿಚಿತನ ಕಾಲು ಕತ್ತರಿಸಿ ಮೋರಿಗೆ ಎಸೆಯಲಾಗಿದೆ. ಆದರೆ, ಇದು ಕೊಲೆ ಎಂಬುದನ್ನು ಸದ್ಯಕ್ಕೆ ಹೇಳಲಾಗದು. ಆಸ್ಪತ್ರೆಯವರು ಕಾಲು ಕತ್ತರಿಸಿ ಮೋರಿಗೆ ಎಸೆದಿರುವ ಸಾಧ್ಯತೆ ಇದೆ. ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದರು.

‘20 ದಿನಗಳ ಹಿಂದೆಯಷ್ಟೇ ಕಾಲು ಕತ್ತರಿಸಿದಂತೆ ಕಾಣುತ್ತಿದೆ. ಕಾಲು ಆಧರಿಸಿ ವ್ಯಕ್ತಿಯನ್ನು ಪತ್ತೆ ಮಾಡುವುದು ಸುಲಭವಲ್ಲ. ಮೋರಿ ಹಾಗೂ ಅಕ್ಕ–ಪಕ್ಕದ ಸ್ಥಳಗಳಲ್ಲಿ ಶೋಧ ನಡೆಸಲಾಗುತ್ತಿದೆ’ ಎಂದು ಹೇಳಿದರು.

ಹೆಣ್ಣು ಭ್ರೂಣ ಹತ್ಯೆ: ಮತ್ತೊಬ್ಬ ಶುಶ್ರೂಷಕಿ ಸೆರೆ

ಮತ್ತೊಂದು ಜಾಲ ಪತ್ತೆ: ತನಿಖೆ ಆರಂಭ: ಪ್ರತಿ ಕೃತ್ಯಕ್ಕೆ ₹5 ಸಾವಿರ ಪಡೆಯುತ್ತಿದ್ದ ಆರೋಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಣ್ಣು ಭ್ರೂಣ ಹತ್ಯೆ ಪ್ರಕರಣದಲ್ಲಿ ಮತ್ತೊಬ್ಬ ಶುಶ್ರೂಷಕಿ ಉಷಾರಾಣಿ (35) ಅವರನ್ನು ಬೈಯಪ್ಪನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದು, ರಾಜ್ಯದಲ್ಲಿ ಮತ್ತೊಂದು ತಂಡ ಸಕ್ರಿಯವಾಗಿರುವ ಸಂಗತಿ ತನಿಖೆಯಿಂದ ಪತ್ತೆಯಾಗಿದೆ.

‘ಮೈಸೂರಿನ ಆಸ್ಪತ್ರೆಯೊಂದರಲ್ಲಿ ಕೆಲಸ ಮಾಡುತ್ತಿದ್ದ ಉಷಾರಾಣಿ, ಜಾಲದ ಪ್ರಮುಖ ಆರೋಪಿ ಡಾ.ಚಂದನ್ ಬಲ್ಲಾಳ್ ಹಾಗೂ ಚೆನ್ನೈನ ವೈದ್ಯರೊಬ್ಬರ ತಂಡದಲ್ಲಿದ್ದರು. ತಿಂಗಳಿಗೆ 5 ಹೆಣ್ಣು ಭ್ರೂಣ ಹತ್ಯೆ ಮಾಡುತ್ತಿದ್ದರು. ಇದಕ್ಕಾಗಿ ಪ್ರತಿಯೊಬ್ಬರಿಂದ ₹5 ಸಾವಿರ ಪಡೆಯುತ್ತಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಉಷಾರಾಣಿ ಕೆಲಸ ಮಾಡುತ್ತಿದ್ದ ಆಸ್ಪತ್ರೆಯ ವೈದ್ಯರಿಗೆ ನೋಟಿಸ್ ನೀಡಲಾಗಿದೆ. ಪ್ರಕರಣದಲ್ಲಿ ಅವರ ಪಾತ್ರವಿಲ್ಲವೆಂಬುದು ಸದ್ಯಕ್ಕೆ ಗೊತ್ತಾಗಿದೆ. ವಿಚಾರಣೆ ನಡೆಸಿದ ನಂತರ ಮತ್ತಷ್ಟು ಮಾಹಿತಿ ಲಭ್ಯವಾಗಲಿದೆ’ ಎಂದು ಮೂಲಗಳು ಹೇಳಿವೆ.

ಕ್ಯಾಟರಿಂಗ್ ಗುತ್ತಿಗೆದಾರ–ಲ್ಯಾಬ್ ಟೆಕ್ನೀಷಿಯನ್ ತಂಡ: ‘ಆರೋಪಿ ಶಿವನಂಜೇಗೌಡ ಹಾಗೂ ಇತರರು ಒಂದು ತಂಡ ಕಟ್ಟಿಕೊಂಡು ಗರ್ಭಿಣಿಯರನ್ನು ಪ್ರತ್ಯೇಕವಾಗಿ ಸಂಪರ್ಕಿಸಿ ಭ್ರೂಣ ಹತ್ಯೆ ಮಾಡಿಸುತ್ತಿದ್ದರು. ಮತ್ತೊಂದು ಪ್ರತ್ಯೇಕ ತಂಡ ಕಟ್ಟಿದ್ದ ಕ್ಯಾಟರಿಂಗ್ ಗುತ್ತಿಗೆದಾರ ಪುಟ್ಟರಾಜು ಹಾಗೂ ಲ್ಯಾಬ್ ಟೆಕ್ನೀಷಿಯನ್ ಧನಂಜಯ್ ಕೃತ್ಯದಲ್ಲಿ ಭಾಗಿಯಾಗುತ್ತಿದ್ದರು. ಇವರಿಬ್ಬರು ಈಗಾಗಲೇ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದುಕೊಂಡಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಉಷಾರಾಣಿ

‘ಪುಟ್ಟರಾಜುನನ್ನು ವಿಚಾರಣೆ ನಡೆಸಲಾಗಿತ್ತು. ಇದೇ ಸಂದರ್ಭದಲ್ಲಿ ಈತ, ಉಷಾರಾಣಿ ಹೆಸರು ಬಾಯ್ಬಿಟ್ಟಿದ್ದ. ಕೆಲ ಪುರಾವೆಗಳನ್ನು ಆಧರಿಸಿ ಉಷಾರಾಣಿ ಅವರನ್ನು ಬಂಧಿಸಲಾಗಿದೆ. ಸದ್ಯ ಅವರು ನ್ಯಾಯಾಂಗ ಬಂಧನದಲ್ಲಿದ್ದಾರೆ’ ಎಂದು ತಿಳಿಸಿವೆ.

ಸುಳ್ಳು ಹೇಳಿಸಿ ಆಸ್ಪತ್ರೆಗೆ ದಾಖಲು: ‘ಪುಟ್ಟರಾಜು ಹಾಗೂ ಧನಂಜಯ್ ಗರ್ಭಿಣಿಯರನ್ನು ಸ್ಕ್ಯಾನಿಂಗ್‌ಗೆ ಒಳಪಡಿಸುತ್ತಿದ್ದರು. ಹೆಣ್ಣು ಎಂಬುದು ಗೊತ್ತಾಗುತ್ತಿದ್ದಂತೆ ಭ್ರೂಣ ಹತ್ಯೆ ಮಾಡಲು ಉಷಾರಾಣಿ ಬಳಿ ಕಳುಹಿಸುತ್ತಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಆರೋಪಿ ಉಷಾರಾಣಿ ಗರ್ಭಿಣಿಯರನ್ನು ಆಸ್ಪತ್ರೆ ವೈದ್ಯರ ಬಳಿ ಕರೆದೊಯ್ಯುತ್ತಿದ್ದರು. ಸುಳ್ಳು ಹೇಳಿಸಿ ಆಸ್ಪತ್ರೆಗೆ ದಾಖಲು ಮಾಡಿಸಿಕೊಳ್ಳುತ್ತಿದ್ದರು. ನಂತರ, ಗರ್ಭಪಾತ ಮಾಡಿ ಕಳುಹಿಸುತ್ತಿದ್ದರು’ ಎಂದು ತಿಳಿಸಿವೆ.

ತನಿಖೆ ಆರಂಭ: ಪ್ರಕರಣದಲ್ಲಿ ಇದುವರೆಗೂ 11 ಆರೋಪಿಗಳನ್ನು ಬೈಯಪ್ಪನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಇದೀಗ ಪ್ರಕರಣದ ಕಡತಗಳನ್ನು ಸಿಐಡಿ ಅಧಿಕಾರಿಗಳು ಪಡೆದುಕೊಂಡಿದ್ದು, ಅಧಿಕೃತವಾಗಿ ತನಿಖೆ ಆರಂಭಿಸಲಿದ್ದಾರೆ.

ಪ್ರತಿಮೆಗೆ ಬಣ್ಣ

ಡಾ.ಬಿ.ಆರ್. ಅಂಬೇಡ್ಕರ್ ಅವರ ಮಹಾ ಪರಿನಿರ್ವಾಣ ದಿನ ಕಾರ್ಯಕ್ರಮಕ್ಕಾಗಿ ಬೆಂಗಳೂರಿನ ವಿಧಾನಸೌಧ ಮುಂಭಾಗ ಇರುವ ಅಂಬೇಡ್ಕರ್ ಪ್ರತಿಮೆಗೆ ಬಣ್ಣ ಬಳಿಯುತ್ತಿರುವ ದೃಶ್ಯ ಸೋಮವಾರ ಕಂಡುಬಂತು

ಪ್ರಜಾವಾಣಿ ಚಿತ್ರ: ರಂಜು ಪಿ.

ಅಧಿಕಾರಿ ವಿರುದ್ಧ ಅತ್ಯಾಚಾರ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಿವೃತ್ತ ಐಎಎಸ್ ಅಧಿಕಾರಿ ರಾಮಚಂದ್ರ ನನ್ನ ಮೇಲೆ ಅತ್ಯಾಚಾರ ಎಸಗಿದ್ದಾರೆ’ ಎಂದು ಆರೋಪಿಸಿ ಮಹಿಳೆಯೊಬ್ಬರು ತಿಲಕ್‌ನಗರ ಠಾಣೆಗೆ ದೂರು ನೀಡಿದ್ದಾರೆ. ಪ್ರತಿದೂರು ನೀಡಿರುವ ರಾಮಚಂದ್ರ, ‘ಅತ್ಯಾಚಾರದ ಬಗ್ಗೆ ಸುಳ್ಳು ಆರೋಪ ಮಾಡುತ್ತಿರುವ ಮಹಿಳೆ ₹10 ಕೋಟಿ ನೀಡುವಂತೆ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾರೆ’ ಎಂದು ಆರೋಪಿಸಿದ್ದಾರೆ.

ಪ್ರಕರಣದ ಬಗ್ಗೆ ಪ್ರತಿಕ್ರಿಯಿಸಿದ ತಿಲಕ್‌ನಗರ ಪೊಲೀಸರು, ‘ರಾಮಚಂದ್ರ ಹಾಗೂ ಮಹಿಳೆ ಪ್ರತ್ಯೇಕವಾಗಿ ದೂರು ನೀಡಿದ್ದಾರೆ. ಎರಡು ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದರು.

ಆರೈಕೆ ಕೆಲಸದಿಂದ ಪರಿಚಯ: ‘ರಾಮಚಂದ್ರ ಪತ್ನಿ ಆರೋಗ್ಯ ಸಮಸ್ಯೆ ಎದುರಿಸುತ್ತಿದ್ದಾರೆ. ಪತ್ನಿಯ ಆರೈಕೆ ಮಾಡುವ ಕೆಲಸಕ್ಕೆಂದು ಮಹಿಳೆಯೊಬ್ಬರನ್ನು ಕಳುಹಿಸಿದ್ದ ಸಂತ್ರಸ್ತೆ, ರಾಮಚಂದ್ರ ಅವರನ್ನು ಪರಿಚಯ ಮಾಡಿಕೊಂಡಿದ್ದರು. ನಂತರ, ಇಬ್ಬರ ನಡುವೆ ಸಲುಗೆ ಏರ್ಪಟ್ಟಿತ್ತು. ಇಬ್ಬರೂ ಪರಸ್ಪರ ಒಪ್ಪಿ ಸಹಜೀವನ ನಡೆಸುತ್ತಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ರಾಮಚಂದ್ರ ಅವರಿಂದ ₹ 20 ಲಕ್ಷ ಪಡೆದಿದ್ದ ಮಹಿಳೆ, ಅದನ್ನು ವಾಪಸು ಕೊಟ್ಟಿರಲಿಲ್ಲ. ಇತ್ತೀಚೆಗೆ ಲ್ಯಾಬ್ ವರದಿ ತೋರಿಸಿದ್ದ ಸಂತ್ರಸ್ತೆ, ತಾವು ಗರ್ಭಿಣಿ ಎಂಬುದಾಗಿ ಹೇಳಿದ್ದರು. ರಾಮಚಂದ್ರ ಅವರೇ ತಂದೆ ಎಂಬುದಾಗಿ ತಿಳಿಸಿದ್ದರು. ಸಂತ್ರಸ್ತೆ ಹಾಗೂ ಅವರ ಸಂಬಂಧಿಕರು, ರಾಮಚಂದ್ರ ಜೊತೆ ಗಲಾಟೆ ಮಾಡಿದ್ದರು. ಜೀವನಾಂಶಕ್ಕೆ ₹10 ಕೋಟಿ ನೀಡಬೇಕೆಂದು ಬೇಡಿಕೆ ಇರಿಸಿದ್ದರು’ ಎಂದು ಮೂಲಗಳು ತಿಳಿಸಿವೆ.

‘ಹೆದರಿದ್ದ ರಾಮಚಂದ್ರ, ₹ 50 ಲಕ್ಷ ನೀಡಿದ್ದರು. ಅದಾದ ನಂತರವೂ ಸಂತ್ರಸ್ತೆ ಹಾಗೂ ಇತರರು ಹಣ ಕೇಳಿದ್ದರು. ನೊಂದ ರಾಮಚಂದ್ರ ಠಾಣೆಗೆ ದೂರು ನೀಡಿದ್ದಾರೆ. ಪ್ರಕರಣ ದಾಖಲಾಗುತ್ತಿದ್ದಂತೆ ಮಹಿಳೆ ಸಹ ದೂರು ಕೊಟ್ಟಿದ್ದಾರೆ.

‘ಮತ್ತು ಬರುವ ಔಷಧ ಬೆರೆಸಿದ್ದ ಆಹಾರವನ್ನು ತಿನ್ನಿಸಿ ಪ್ರಜ್ಞೆ ತಪ್ಪಿಸಿದ್ದ ರಾಮಚಂದ್ರ ನನ್ನ ಮೇಲೆ ಅತ್ಯಾಚಾರ ಎಸಗಿದ್ದಾರೆ’ ಎಂಬುದಾಗಿ ಆರೋಪಿಸಿದ್ದಾರೆ. ಎರಡೂ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿ, ತನಿಖೆ ಮುಂದುವರಿಸಲಾಗಿದೆ’ ಎಂದು ಮೂಲಗಳು ಹೇಳಿವೆ.

ಪತ್ನಿ ಜತೆ ಸಲುಗೆ: ಟೈಲರ್ ಕೊಲೆ

ಬೆಂಗಳೂರು: ‘ಗಿರಿನಗರ ಠಾಣೆ ವ್ಯಾಪ್ತಿಯಲ್ಲಿ ವೆಂಕಟೇಶ್ (40) ಎಂಬುವರನ್ನು ಕೊಲೆ ಮಾಡಲಾಗಿದ್ದು, ಆರೋಪಿ ಸಿದ್ದರಾಜುನನ್ನು (42) ಬಂಧಿಸಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಆಂಧ್ರಪ್ರದೇಶದ ವೆಂಕಟೇಶ್, ಕೆಲ ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದರು. ಟೈಲರ್ ಕೆಲಸ ಮಾಡುತ್ತಿದ್ದರು. ಆರೋಪಿ ಸಿದ್ದರಾಜು, ಬಾರ್ ಆ್ಯಂಡ್ ರೆಸ್ಟೋರೆಂಟ್ ಕೆಲಸಗಾರ’ ಎಂದು ಪೊಲೀಸರು ಹೇಳಿದರು.

‘ಆರೋಪಿ ಸಿದ್ದರಾಜು, ಪತ್ನಿ ಜೊತೆ ವಾಸವಿದ್ದ. ದಂಪತಿ ನಡುವೆ ಜಗಳವಿತ್ತು. ಸಿದ್ದರಾಜು ಪತ್ನಿಯನ್ನು ಪರಿಚಯ ಮಾಡಿಕೊಂಡಿದ್ದ ವೆಂಕಟೇಶ್, ಸಲುಗೆ ಬೆಳೆಸಿದ್ದ. ಡಿ. 2ರಂದು ವೆಂಕಟೇಶ್ ಹಾಗೂ ಸಿದ್ದರಾಜು ಪತ್ನಿ ಪರಸ್ಪರ ಮಾತನಾಡುತ್ತ ರಸ್ತೆಯಲ್ಲಿ ನಿಂತಿದ್ದರು. ಅದನ್ನು ಗಮನಿಸಿದ್ದ ಸಿದ್ದರಾಜು ಸ್ಥಳಕ್ಕೆ ಹೋಗಿದ್ದ.’

‘ವೆಂಕಟೇಶ್ ಅವರಿಗೆ ಚಪ್ಪಲಿಯಿಂದ ಹೊಡೆದಿದ್ದ ಸಿದ್ದರಾಜು, ತಳ್ಳಿ ಬೀಳಿಸಿದ್ದ. ತಲೆಗೆ ತೀವ್ರ ಪೆಟ್ಟು ಬಿದ್ದು ಪ್ರಜ್ಞೆ ತಪ್ಪಿದ್ದ ವೆಂಕಟೇಶ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿಯೇ ಅವರು ಭಾನುವಾರ ರಾತ್ರಿ ಮೃತಪಟ್ಟಿದ್ದಾರೆ. ಕೊಲೆ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಗಿದೆ’ ಎಂದರು.

ವ್ಯಕ್ತಿಯನ್ನು ತಳ್ಳಿಕೊಂಡು ಹೋದ ಕಾರು ಚಾಲಕ: ಕ್ಯಾಮೆರಾದಲ್ಲಿ ಸೆರೆ

ಬೆಂಗಳೂರು: ರಸ್ತೆಯಲ್ಲಿ ಅಡ್ಡಬಂದ ವ್ಯಕ್ತಿಗೆ ಕಾರು ಗುದ್ದಿಸಿದ್ದ ಚಾಲಕನೊಬ್ಬ ಸ್ವಲ್ಪ ದೂರಕ್ಕೆ ತಳ್ಳಿಕೊಂಡು ಹೋಗಿ ಹಲ್ಲೆ ಮಾಡಿದ್ದು, ಈ ದೃಶ್ಯ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಹೆಬ್ಬಾಳ ಮೇಲ್ಸೇತುವೆಯಲ್ಲಿ ನ. 23ರಂದು ನಡೆದಿರುವ ಅಪಘಾತದ ವಿಡಿಯೊ ಚಿತ್ರೀಕರಿಸಿರುವ ಸಾರ್ವಜನಿಕರೊಬ್ಬರು ಸಾಮಾಜಿಕ ಮಾಧ್ಯಮಗಳಲ್ಲಿ ಹರಿಬಿಟ್ಟಿದ್ದಾರೆ. ತಪ್ಪಿತಸ್ಥ ಕಾರು ಚಾಲಕನ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದ್ದಾರೆ. ಕಾರೊಂದರಲ್ಲಿ ಹೊರಟಿದ್ದ ವ್ಯಕ್ತಿ, ಮಾರ್ಗಮಧ್ಯೆ ಇಳಿದು ಆರೋಪಿ ಚಾಲಕನ ಕಾರಿನ ಮುಂದೆ ನಡೆದುಕೊಂಡು ಹೊರಟಿದ್ದರು. ಕೋಪಗೊಂಡ ಆರೋಪಿ ಚಾಲಕ, ವ್ಯಕ್ತಿಗೆ ಕಾರು ಗುದ್ದಿಸಿ ಸ್ವಲ್ಪ ದೂರಕ್ಕೆ ತಳ್ಳಿಕೊಂಡು ಹೋಗಿದ್ದ. ನಂತರ, ವ್ಯಕ್ತಿ ಮೇಲೆ ಹಲ್ಲೆ ನಡೆಸಿದ್ದ. ಇದೇ ದೃಶ್ಯ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಆರೋಪಿ ಚಾಲಕ ಹಾಗೂ ಹಲ್ಲೆಗೀಡಾದ ವ್ಯಕ್ತಿ ಯಾರು ಎಂಬುದು ಗೊತ್ತಾಗಿಲ್ಲ. ಘಟನೆ ಬಗ್ಗೆ ಯಾವುದೇ ದೂರು ದಾಖಲಾಗಿಲ್ಲ.

ಅಪಘಾತ: ಹೊತ್ತಿ ಉರಿದ ಕಾರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊರವರ್ತುಲ ರಸ್ತೆಯ ಚಂದ್ರಾಲೇಔಟ್ ತಂಗುದಾಣ ಬಳಿ ಕಾರು ಹಾಗೂ ಬಿಎಂಟಿಸಿ ಬಸ್ ನಡುವೆ ಸೋಮವಾರ ಅಪಘಾತ ಸಂಭವಿಸಿದ್ದು, ಬೆಂಕಿ ಹೊತ್ತಿಕೊಂಡು ಕಾರು ಸಂಪೂರ್ಣ ಸುಟ್ಟಿದೆ.

‘ಬೆಳಿಗ್ಗೆ 9 ಗಂಟೆ ಸುಮಾರಿಗೆ ಈ ಅವಘಡ ಸಂಭವಿಸಿದೆ. ಬಸ್ ಚಾಲಕ ಗೌರೀಶ್ ಸಮಯಪ್ರಜ್ಞೆಯಿಂದ ಪ್ರಯಾಣಿಕರು ಪ್ರಾಣಾಪಾಯದಿಂದ ಪಾರಾಗಿದ್ದಾರೆ’ ಎಂದು ಬ್ಯಾಟರಾಯನಪುರ ಸಂಚಾರ ಪೊಲೀಸರು ಹೇಳಿದರು.

‘ಕಾರು ಚಲಾಯಿಸುತ್ತಿದ್ದ ಲೋಕೇಶ್ ಅವರ ನಿರ್ಲಕ್ಷ್ಯ ಹಾಗೂ ಅತಿ ವೇಗದ ಚಾಲನೆಯಿಂದ ಅಪಘಾತ ಸಂಭವಿಸಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಬಿಎಂಟಿಸಿ ಸಿಬ್ಬಂದಿ ನೀಡಿರುವ ದೂರು ಆಧರಿಸಿ ಲೋಕೇಶ್ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ತಿಳಿಸಿದರು.

ಡಿಕ್ಕಿ ನಂತರ ಬೆಂಕಿ: ‘ಬಿಎಂಟಿಸಿ ಘಟಕ 26ಕ್ಕೆ ಸೇರಿದ್ದ ಬಿಎಂಟಿಸಿ ಬಸ್, ಯಶವಂತಪುರದಿಂದ ನಾಯಂಡಹಳ್ಳಿ ಕಡೆಗೆ ಹೊರವರ್ತುಲ ರಸ್ತೆ ಮೂಲಕ ಹೊರಟಿತ್ತು. ಚಂದ್ರಾಲೇಔಟ್ ತಂಗುದಾಣ ಸಮೀಪ ಪ್ರಯಾಣಿಕರನ್ನು ಇಳಿಸಲು ಬಸ್ ನಿಲ್ಲಿಸಲಾಗಿತ್ತು. ಇದೇ ಸಂದರ್ಭದಲ್ಲಿ ಅತಿವೇಗವಾಗಿ ಬಂದಿದ್ದ ಕಾರು, ಬಸ್‌ಗೆ ಡಿಕ್ಕಿ ಹೊಡೆದಿತ್ತು.’

‘ಚಾಲಕ ಲೋಕೇಶ್, ಕಾರಿನಿಂದ ಇಳಿದಿದ್ದರು. ಕೆಲ ನಿಮಿಷಗಳಲ್ಲಿ ಕಾರಿನಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ಕ್ರಮೇಣ ಕೆನ್ನಾಲಗೆ ಹೆಚ್ಚಾಗಿತ್ತು. ಕಾರು ಧಗ ಧಗ ಉರಿಯಲಾರಂಭಿಸಿತ್ತು. ಬಸ್ ಹಿಂಭಾಗಕ್ಕೂ ಬೆಂಕಿ ತಗುಲಿತ್ತು. ಅಪಾಯದ ಮುನ್ಸೂಚನೆ ಅರಿತ ಬಸ್ ಚಾಲಕ, ಕಾರು ಇದ್ದ ಸ್ಥಳದಿಂದ ಸ್ವಲ್ಪ ದೂರಕ್ಕೆ ಬಸ್ ಚಲಾಯಿಸಿಕೊಂಡು ಹೋಗಿದ್ದರು. ನಂತರ, ಪ್ರಯಾಣಿಕರು ಬಸ್‌ನಿಂದ ಸುರಕ್ಷಿತವಾಗಿ ಇಳಿದಿದ್ದಾರೆ. ಬಸ್‌ನ ಹಿಂಬದಿ ಸೀಟುಗಳು ಸುಟ್ಟಿವೆ. ನಿರ್ವಾಹಕ ಹಾಗೂ ಚಾಲಕ, ಸ್ಥಳೀಯರ ಸಹಾಯದಿಂದ ಬಸ್‌ನ ಬೆಂಕಿ ನಂದಿಸಿದ್ದರು’ ಎಂದು ಪೊಲೀಸರು ಹೇಳಿದರು.

‘ಬೊಮ್ಮಸಂದ್ರದ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಲೋಕೇಶ್, ಭಾನುವಾರ ಯಶವಂತಪುರದಲ್ಲಿರುವ ಸ್ನೇಹಿತರೊಬ್ಬರ ಮನೆಯಲ್ಲಿ ಉಳಿದುಕೊಂಡಿದ್ದರು. ಸೋಮವಾರ ಬೆಳಿಗ್ಗೆ ಕಚೇರಿಗೆ ಹೊರಟಿದ್ದಾಗ ಈ ಅವಘಾತ ಸಂಭವಿಸಿದೆ’ ಎಂದು ಮಾಹಿತಿ ನೀಡಿದರು.

ಅಪಘಾತ ಸ್ಥಳದಲ್ಲಿ ಬೆಂಕಿಯಿಂದ ಹೊತ್ತಿ ಉರಿಯುತ್ತಿದ್ದ ಕಾರು

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲೇ ಕಸ್ತೂರಬಾ ವಸತಿ ನಿಲಯದ ವಿದ್ಯಾರ್ಥಿನಿಯರು ವಾಸವಿದ್ದಾರೆ –ಪ್ರಜಾವಾಣಿ ಚಿತ್ರ

ಹೂವಿನಹಡಗಲಿ ವಸತಿ ನಿಲಯಕ್ಕೆ ಸಿಗದ ಸೌಲಭ್ಯ

ನೀರೂ ಇಲ್ಲ, ಸ್ವಂತ ಕಟ್ಟಡವೂ ಇಲ್ಲ

● ಕೆ.ಸೋಮಶೇಖರ್

ಹೂವಿನಹಡಗಲಿ (ವಿಜಯನಗರ ಜಿಲ್ಲೆ): ಶಾಲಾ ಕೋಣೆಗಳಲ್ಲಿ ವಾಸ್ತವ್ಯ, ಎರಡು ದಿನಕ್ಕೊಮ್ಮೆ ಸ್ನಾನ, ಶೌಚಕ್ಕೆ ಸರದಿ ಸಾಲು, ವಿದ್ಯುತ್ ಪೂರೈಕೆ ಕಡಿತಗೊಂಡರೆ ಸೊಳ್ಳೆ ಕಾಟ...

ಪಟ್ಟಣದ ಎಂ.ಪಿ.ಪ್ರಕಾಶ್ ನಗರದಲ್ಲಿನ ಕರ್ನಾಟಕ ಕಸ್ತೂರ್‌ಬಾ ವಸತಿ ನಿಲಯದ ಕಿರು ಚಿತ್ರಣ ಇದು. ಗುಳೆ ಹೋಗುವ ಕುಟುಂಬಗಳ ಬಾಲಕಿಯರು ಮತ್ತು ಪಾಲಕರಿಲ್ಲದ ವಿದ್ಯಾರ್ಥಿನಿಯರು ಇಲ್ಲಿ ಶಿಕ್ಷಣ ಪಡೆಯುತ್ತಾರೆ.

2011ರಲ್ಲಿ ತಾಲ್ಲೂಕಿನ ಮಾಗಳ ಗ್ರಾಮಕ್ಕೆ ಮಂಜೂರಾದ ಕಸ್ತೂರ್‌ಬಾ ವಸತಿ ನಿಲಯಕ್ಕೆ ಈವರೆಗೆ ಸೂಕ್ತ ನಿವೇಶನ, ಕಟ್ಟಡ ಇಲ್ಲ. ಹೀಗಾಗಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲೇ ವಿದ್ಯಾರ್ಥಿನಿಯರು ವಾಸ್ತವ್ಯ ಮಾಡಿಕೊಂಡಿದ್ದಾರೆ. 12 ವರ್ಷವಾದರೂ ಪರಿಸ್ಥಿತಿ ಸುಧಾರಿಸಿಲ್ಲ.

6ರಿಂದ 10ನೇ ತರಗತಿವರೆಗಿನ 100 ವಿದ್ಯಾರ್ಥಿನಿಯರ ಪ್ರವೇಶಕ್ಕೆ ಅವಕಾಶವಿದೆ. ಆದರೆ, ಮೂಲಸೌಲಭ್ಯ ಕೊರತೆ ಕಾರಣ 77 ವಿದ್ಯಾರ್ಥಿನಿಯರು ಮಾತ್ರ ಪ್ರವೇಶ ಪಡೆದಿದ್ದಾರೆ. ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು ಈ ನಿಲಯವನ್ನು ನಿರ್ವಹಿಸುತ್ತಿದೆ.

> ಸ್ವಂತ ಕಟ್ಟಡವಿರದ ಕಾರಣ ಮೂಲಸೌಲಭ್ಯ ಅಭಿವೃದ್ಧಿಗೆ ತೊಡಕಾಗಿದೆ. ಮಾಗಳ ಗ್ರಾಮಸ್ಥರು ಸರ್ಕಾರಿ ಜಮೀನು ಗುರುತಿಸಿದ್ದು, ಜಿಲ್ಲಾಡಳಿತಕ್ಕೆ ಪ್ರಸ್ತಾವ ಸಲ್ಲಿಸುತ್ತೇವೆ
> **ಮಹೇಶ ಪೂಜಾರ್**
> ಕ್ಷೇತ್ರ ಶಿಕ್ಷಣಾಧಿಕಾರಿ, ಹೂವಿನಹಡಗಲಿ

6ರಿಂದ 8ನೇ ತರಗತಿವರೆಗಿನ ವಿದ್ಯಾರ್ಥಿನಿಯರು ಎಂ.ಪಿ. ಪ್ರಕಾಶ್ ನಗರದ ಹಿರಿಯ ಪ್ರಾಥಮಿಕ ಶಾಲೆಗೆ ಹೋದರೆ, 9 ಮತ್ತು 10ನೇ ತರಗತಿಯ ವಿದ್ಯಾರ್ಥಿನಿಯರು ಎರಡು ಕಿ.ಮೀ. ದೂರದ ಸೊಪ್ಪಿನ ಕಾಳಮ್ಮ ಬಾಲಕಿಯರ ಪ್ರೌಢಶಾಲೆಯಲ್ಲಿ ಶಿಕ್ಷಣ ಪಡೆಯುತ್ತಾರೆ. ‘ಶಾಲೆಯ ನಾಲ್ಕು ಕೊಠಡಿಗಳ ಪೈಕಿ ಒಂದು ಕೋಣೆಯಲ್ಲಿ ಕಚೇರಿ ಇದೆ. ಮೂರು ಕೋಣೆಗಳನ್ನು ನಮಗೆ ವಾಸಿಸಲು ಕೊಡಲಾಗಿದೆ. ಒಂದೊಂದರಲ್ಲಿ 20 ಮಂದಿ ಇದ್ದೇವೆ. ಮಳೆಗಾಲದಲ್ಲಿ ಚಾವಣಿ ಸೋರುತ್ತದೆ. ನಾಲ್ಕು ಶೌಚಾಲಯ, ನಾಲ್ಕು ಸ್ನಾನಗೃಹಗಳಿವೆ. ಆದರೆ, ಅವು ಸಾಕಾಗುವುದಿಲ್ಲ. ನಿತ್ಯ ಸರದಿಯಲ್ಲಿ ನಿಲ್ಲಬೇಕು’ ಎಂದು ವಿದ್ಯಾರ್ಥಿನಿಯರು ತಿಳಿಸಿದರು.

‘ಪುರಸಭೆಯಿಂದ ಮೂರು ಅಥವಾ ನಾಲ್ಕು ದಿನಕ್ಕೊಮ್ಮೆ ನೀರು ಪೂರೈಕೆಯಾಗುತ್ತದೆ. ನೀರಿನ ಅಭಾವವಿದೆ. ಪ್ರತಿದಿನ ಸ್ನಾನ ಮಾಡಲು ಆಗಲ್ಲ. ಬಟ್ಟೆ ತೊಳೆದುಕೊಳ್ಳಲೂ ಆಗಲ್ಲ. ಸೌಲಭ್ಯಗಳೂ ಇಲ್ಲ. ಅನಿವಾರ್ಯ ಕಾರಣದಿಂದ ಸಂಕಷ್ಟದ ಮಧ್ಯೆ ಇಲ್ಲಿ ವಾಸವಿದ್ದೇವೆ’ ಎಂದು ‘ಪ್ರಜಾವಾಣಿ’ಗೆ ತಿಳಿಸಿದರು.

‘ವಸತಿ ನಿಲಯದಲ್ಲಿ ಕೆಲಸ ಮಾಡುವ ಮೇಲ್ವಿಚಾರಕಿ, ಕಾವಲುಗಾರರು, ಅಡುಗೆಯವರಿಗೆ ಕನಿಷ್ಠ ವೇತನ ಸಿಗುತ್ತಿಲ್ಲ. ಜನತಾ ದರ್ಶನ ಕಾರ್ಯಕ್ರಮದಲ್ಲಿ ಈ ಸಮಸ್ಯೆ ಹೇಳಿಕೊಳ್ಳಲಾಗಿದೆ. ಆದರೂ ಏನೂ ಪ್ರಯೋಜನವಾಗಿಲ್ಲ’ ಎಂದು ಗ್ರಾಮಸ್ಥರು ತಿಳಿಸಿದರು.

ತೋಟದ ಮನೆಯಿಂದ ಕಾರು ಸಮೇತ ಅಪಹರಿಸಿ ಕೊಲೆಗೈದ ಹಂತಕರು

ತಲ್ಲಣ ಮೂಡಿಸಿದ ಯೋಗೇಶ್ವರ್ ಬಾವನ ಕೊಲೆ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ (ರಾಮನಗರ): ಜಿಲ್ಲೆಯ ಪ್ರಭಾವಿ ರಾಜಕಾರಣಿ ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಅವರ ಬಾವ ಮಹದೇವಯ್ಯ ಪಿ. ಅವರ ನಾಪತ್ತೆ ಪ್ರಕರಣವು ಅಪಹರಣದ ತಿರುವು ಪಡೆದುಕೊಂಡು ಕೊಲೆಯಲ್ಲಿ ಅಂತ್ಯಗೊಂಡಿದೆ.

ಮಹದೇವಯ್ಯ ಅವರು ಕ್ಷೇಮವಾಗಿ ಬರಲಿದ್ದಾರೆ ಎಂಬ ವಿಶ್ವಾಸದೊಂದಿಗೆ ಮೂರು ದಿನಗಳಿಂದ ಉಸಿರು ಬಿಗಿ ಹಿಡಿದು ಕಾಯುತ್ತಿದ್ದ ಅವರ ಕುಟುಂಬದ ನಿರೀಕ್ಷೆ ಹುಸಿಯಾಗಿದೆ. ಬರ ಸಿಡಿಲಿನಂತೆ ಬಂದ ಸಾವಿನ ಸುದ್ದಿಯಿಂದಾಗಿ ಕುಟುಂಬದವರು, ಸಂಬಂಧಿಕರು ಹಾಗೂ ಸ್ನೇಹಿತರು ಆಘಾತಕ್ಕೊಳಗಾಗಿದ್ದಾರೆ.

ಆಗಂತುಕರು ಪ್ರಭಾವಿ ರಾಜಕಾರಣಿಯ ತಂಗಿಯ ಗಂಡನನ್ನು, ಅವರಮನೆಯಿಂದಲೇಅಪಹರಿಸಿ ಕೊಲೆ ಮಾಡಿರುವುದು ಜಿಲ್ಲೆಯಲ್ಲಿ ತಲ್ಲಣ ಮೂಡಿಸಿದೆ. ಕೊಲೆಗೆ ಕಾರಣ ಏನಿರಬಹುದು? ಕೃತ್ಯದ ಹಿಂದೆ ಯಾರಿದ್ದಾರೆ? ಪರಿಚಿತರೇ ಅಥವಾ ಹೊರಗಿನವರೇ? ದುಡ್ಡಿಗಾಗಿ ನಡೆದಿದೆಯೇ ಅಥವಾ ರಿಯಲ್ ಎಸ್ಟೇಟ್ ವ್ಯವಹಾರ ಕಾರಣವೇ? 69 ವರ್ಷದ ಮಹದೇವಯ್ಯ ಅವರ ಕೊಲೆ ಕುರಿತು ಹೀಗೆ ಹತ್ತು ಹಲವು ಆಲೋಚನೆಗಳು ಜನರ ಮನಸ್ಸಿನಲ್ಲಿ ಮೂಡತೊಡಗಿವೆ.

ತೋಟದಲ್ಲಿ ಮನೆ: ಮಹದೇವಯ್ಯ ಅವರು ಪತ್ನಿ ಹಾಗೂ ಇಬ್ಬರು ಪುತ್ರರೊಂದಿಗೆ ಬೆಂಗಳೂರಿನ ಗಿರಿನಗರದಲ್ಲಿ ನೆಲೆಸಿದ್ದರು. ಜೊತೆಗೆ ತಮ್ಮೂರು ವಡ್ಡರದೊಡ್ಡಿಯಲ್ಲಿರುವ ಐದು ಎಕರೆ ಜಾಗದಲ್ಲಿ ತೋಟ ಅಭಿವೃದ್ಧಿಪಡಿಸಿಕೊಂಡು, ಅಲ್ಲಿಯೇ ತಂಗಲು ಮನೆಯೊಂದನ್ನು ನಿರ್ಮಿಸಿಕೊಂಡಿದ್ದರು. ತೆಂಗು, ಸಪೋಟಾ ಬೆಳೆದಿದ್ದ ತೋಟದಲ್ಲಿ ಹಸು ಹಾಗೂ ಕುರಿಗಳನ್ನು ಸಹ ಸಾಕಿದ್ದರು.

ಇತ್ತೀಚೆಗೆ ಬೆಂಗಳೂರಿನ ಮನೆಯ ನವೀಕರಣ ಕಾರ್ಯ ಕೈಗೆತ್ತಿಕೊಂಡಿದ್ದರಿಂದ, ಕುಟುಂಬದವರು ಅಲ್ಲಿಯೇ ಬೇರೆಡೆಗೆ ಸ್ಥಳಾಂತರವಾಗಿದ್ದರು. ತೋಟದ ಬಗ್ಗೆ ಅತೀವ ಪ್ರೀತಿ ಇಟ್ಟುಕೊಂಡಿದ್ದ ಮಹದೇವಯ್ಯ ಅವರು, ತಾವು ತೋಟದ ಮನೆಯಲ್ಲಿ ಹೆಚ್ಚಾಗಿ ಇರುತ್ತಿದ್ದರು. ಓಡಾಡುವುದಕ್ಕೆ ಕಾರು ಹೊಂದಿದ್ದ ಅವರು, ಆಗಾಗ ಬೆಂಗಳೂರಿಗೆ ಹೋಗಿ ಕುಟುಂಬದವರನ್ನು ಮಾತನಾಡಿಸಿಕೊಂಡು ಬರುತ್ತಿದ್ದರು.

ತಮ್ಮ ಪಾಡಿಗೆ ತಾವಿದ್ದರು: ‘ಮಹದೇವಯ್ಯ ಅವರು ತಾವಾಯಿತು, ತಮ್ಮ ಕೆಲಸವಾಯಿತು ಎಂಬಂತಿದ್ದರು. ಯೋಗೇಶ್ವರ್ ಅವರು ರಾಜಕಾರಣಕ್ಕೆ ಬಂದು ನೆಲೆಯೂರುವುದಕ್ಕೆ ಮುಂಚೆಯೇ, ಅವರ ಮೊದಲ ತಂಗಿ ಪುಷ್ಪಾ ಅವರನ್ನು ಮಹದೇವಯ್ಯ ಅವರು ಮದುವೆಯಾಗಿದ್ದರು. ಪದವಿ ಓದಿದ್ದ ಅವರು ಕೃಷಿ ಸೇರಿದಂತೆ ಕೆಲ ವ್ಯವಹಾರಗಳನ್ನು ಮಾಡುತ್ತಿದ್ದರು’ ಎಂದು ಸಂಬಂಧಿಕರೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಯೋಗೇಶ್ವರ್ ಅವರು ಮೊದಲ ಸಲ ಶಾಸಕರಾಗಿ ಆಯ್ಕೆಯಾದ ನಂತರ, ತಮ್ಮ ಬಾವ ವಹಿಸುತ್ತಿದ್ದ ಕೆಲಸ ಮಾಡುತ್ತಿದ್ದರು. ಯೋಗೇಶ್ವರ್ ಅವರ ಮೆಗಾಸಿಟಿ ಡೆವಲಪರ್ಸ್ ನಿರ್ದೇಶಕರೂ ಆಗಿದ್ದ ಮಹದೇವಯ್ಯ, ನಂತರ ತಮ್ಮ ಬಾವನ ಭೂ ವ್ಯವಹಾರಗಳನ್ನು ಸಹ ನೋಡಿಕೊಳ್ಳುತ್ತಿದ್ದರು.

ಬೆಂಗಳೂರಿನದ್ದರೂ, ವ್ಯವಹಾರ ನಿಮಿತ್ತ ಚನ್ನಪಟ್ಟಣಕ್ಕೆ ಬಂದು ಹೋಗುವುದು ಸಾಮಾನ್ಯವಾಗಿತ್ತು. ರಾಜಕೀಯ, ಸಂಘ–ಸಂಸ್ಥೆ, ಸಂಘಟನೆಗಳಲ್ಲಿ ಕಾಣಿಸಿಕೊಳ್ಳದ ಅವರು, ತೆರೆಮರೆಯಲ್ಲೇ ತಮ್ಮ ಬಾವನ ಪರವಾಗಿ ಕೆಲಸ ಮಾಡುತ್ತಿದ್ದರು’ ಎಂದು ಹೇಳಿದರು. ‘ಸಜ್ಜನರಾಗಿದ್ದ ಮಹದೇವಯ್ಯ ಅವರು, ಯೋಗೇಶ್ವರ್ ಅವರ ಬಾವನಾಗಿದ್ದರೂ ಅತಿರೇಕದ ವರ್ತನೆ ತೋರಿ ಅವರಿವರ ಬಳಿ ದ್ವೇಷ ಕಟ್ಟಿಕೊಂಡವರಲ್ಲ. ವ್ಯವಹಾರದ ವಿಷಯದಲ್ಲೂ ಹಾಗೆಯೇ ಇದ್ದರು. ಅಂತಹವರು ಈ ರೀತಿಯ ದುರಂತ ಅಂತ್ಯ ಕಂಡಿರುವುದು ಅರಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ’ ಎಂದರು.

ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನ ರಾಮಾಪುರಕ್ಕೆ ಭೇಟಿ ನೀಡಿದ್ದ ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಅವರು, ತಮ್ಮ ಬಾವನ ಪ್ರಕರಣ ಕುರಿತು ಅಲ್ಲಿದ್ದವರ ಜೊತೆ ಮಾಹಿತಿ ಪಡೆದರು

ಸಕಲೇಶಪುರ ತಾಲ್ಲೂಕಿನಲ್ಲಿ ಆನೆ ಸೆರೆ ಹಿಡಿಯುವ ಕಾರ್ಯಾಚರಣೆ ವೇಳೆ ಘಟನೆ

ಒಂಟಿ ಸಲಗ ದಾಳಿ: 'ಅರ್ಜುನ' ಸಾವು

ಪ್ರಜಾವಾಣಿ ವಾರ್ತೆ

ಹಾಸನ: ಮೈಸೂರು ದಸರಾ ಉತ್ಸವದಲ್ಲಿ 8 ಬಾರಿ ಅಂಬಾರಿ ಹೊತ್ತಿದ್ದ ಸಾಕಾನೆ 'ಅರ್ಜುನ', ಸಕಲೇಶಪುರ ತಾಲ್ಲೂಕಿನ ಯಸಳೂರು ಬಳಿಯ ದಬ್ಬಳಿಕಟ್ಟೆ ಅರಣ್ಯದಲ್ಲಿ ಸೋಮವಾರ ನಡೆದ ಕಾಡಾನೆ ಸೆರೆ ಕಾರ್ಯಾಚರಣೆ ವೇಳೆ, ಒಂಟಿ ಸಲಗದ ದಾಳಿಗೆ ಸಿಲುಕಿ ಸ್ಥಳದಲ್ಲಿಯೇ ಕೊನೆಯುಸಿರೆಳೆಯಿತು.

ಸೋಮವಾರ 'ವಿಕ್ರಾಂತ್' ಎಂಬ ಕಾಡಾನೆ ಸೆರೆಗೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಶಿವಶಂಕರ್ ನೇತೃತ್ವದಲ್ಲಿ 'ಅರ್ಜುನ' ಸೇರಿ ಆರು ಸಾಕಾನೆಗಳನ್ನು ಮತ್ತೂರು ಗ್ರಾಮಕ್ಕೆ ಕರೆತಂದು ಕಾರ್ಯಾಚರಣೆ ಆರಂಭಿಸಲಾಗಿತ್ತು. ಆ ವೇಳೆ ದಬ್ಬಳ್ಳಿ ಗ್ರಾಮ ಸಮೀಪದ ನೀರಕೊಲ್ಲಿ ಮಿನಿಡ್ಯಾಂ ನೀಲಗಿರಿ ತೋಪಿನಲ್ಲಿದ್ದ ಮೂರು ಗಂಡು, ಮೂರು ಹೆಣ್ಣು ಹಾಗೂ ಎರಡು ಮರಿಗಳಿರುವ ಕಾಡಾನೆ ಗುಂಪನ್ನು ಪತ್ತೆ ಹಚ್ಚಿದ ಸಿಬ್ಬಂದಿ, ಕಾರ್ಯಾಚರಣೆ ಆರಂಭಿಸಿದರು.

ಗುಂಪಿನಿಂದ 'ವಿಕ್ರಾಂತ' ಆನೆಯನ್ನು ಬೇರ್ಪಡಿಸಿ ಅರಿವಳಿಕೆ ಚುಚ್ಚುಮದ್ದು ನೀಡಲು ಮುಂದಾಗುತ್ತಿದ್ದಾಗಲೇ ಅದು ದಾಳಿ ಮಾಡಿತು.

ಸಾಕಾನೆಗಳ ಜೊತೆಗೆ ಅದನ್ನು ಹಿಮ್ಮೆಟ್ಟಿಸಲು ಮಾವುತರು ಪ್ರಯತ್ನಿಸಿದರೂ ದಾಳಿ ತೀವ್ರವಾಗುತ್ತಿದ್ದಂತೆಯೇ ಐದು ಸಾಕಾನೆಗಳು ಧೈರ್ಯ ಸಾಲದೆ ಹಿಮ್ಮೆಟ್ಟಿದವು.

'ಅರ್ಜುನ' ಮಾತ್ರ ಎದೆಗುಂದದೆ ಒಂಟಿಯಾಗಿಯೇ ಸೆಣಸಾಡುತ್ತಿತ್ತು. ಆ ಸೆಣಸಾಟದಲ್ಲಿ 'ಅರ್ಜುನ'ನ ಮಾವುತ ವಿನು ಆಯತಪ್ಪಿ ಕೆಳಕ್ಕೆ ಬಿದ್ದರು. ಅದೇ ಕ್ಷಣದಲ್ಲಿ, ಬಲಿಷ್ಠವಾಗಿದ್ದ ಮದವೇರಿದ 'ವಿಕ್ರಾಂತ್' ತನ್ನ ಚೂಪಾದ ಕೋರೆಯಿಂದ 'ಅರ್ಜುನ'ನ ಎಡಬದಿಯ ಕಿಬ್ಬೊಟ್ಟೆ ಭಾಗಕ್ಕೆ ತಿವಿಯಿತು. ತೀವ್ರವಾಗಿ ಗಾಯಗೊಂಡ 'ಅರ್ಜುನ' ಸ್ಥಳದಲ್ಲಿಯೇ ಮೃತಪಟ್ಟಿತು.

ಸುತ್ತುವರಿದ ಕಾಡಾನೆಗಳು: 'ಅರ್ಜುನ' ನೆಲಕ್ಕುರುಳುತ್ತಿದ್ದಂತೆಯೇ ಮಾವುತರು, ಅರಣ್ಯ ಇಲಾಖೆಯ ಸಿಬ್ಬಂದಿ ಧಾವಿಸಿ ಬಂದರು. ಅದೇ ಕ್ಷಣದಲ್ಲಿ, ಕಾಡಾನೆಗಳ ಹಿಂಡು ತಮ್ಮತ್ತಲೇ ನುಗ್ಗಿ ಬರುತ್ತಿದ್ದುದನ್ನು ಗಮನಿಸಿ ಮತ್ತೆ ದೂರ ಹೋದರು. ಆನೆಗಳು 'ಅರ್ಜುನ'ನನ್ನು ಸುತ್ತುವರಿದು ಬಹುಕಾಲ ಅಲ್ಲಿಯೇ ನಿಂತಿದ್ದರಿಂದ ಅಲ್ಲಿಗೆ ಹೋಗಲಾಗದೆ ಅಸಹಾಯಕರಾಗಿ ನಿಂತಿದ್ದರು.

'ಕೊನೆಗೆ, ಗಾಳಿಯಲ್ಲಿ ಗುಂಡು ಹಾರಿಸಿ, ಆನೆಗಳನ್ನು ಚದುರಿಸಿದೆವು. ನಂತರ ಜೆಸಿಬಿ ತರಿಸಿ ಕಳೇಬರವನ್ನು ಸ್ಥಳಾಂತರಿಸಲಾಯಿತು' ಎಂದು ಎಸಿಎಫ್ ಮಹಾದೇವ ತಿಳಿಸಿದರು.

'ಕಾಡಾನೆಗಳ ಹಿಂಡು 'ಅರ್ಜುನ'ನನ್ನು ಸುತ್ತುವರಿದಿದ್ದರಿಂದ ನಮ್ಮ ಸಿಬ್ಬಂದಿಗೆ ಹತ್ತಿರ ಹೋಗಲು ಆಗಲಿಲ್ಲ. ಉಳಿದ ಸಾಕಾನೆಗಳು ಹಾಗೂ ಸಿಬ್ಬಂದಿಗೆ ಯಾವುದೇ ಅಪಾಯವಾಗಿಲ್ಲ' ಎಂದು ಡಿಎಫ್‌ಒ ಮೋಹನ್‌ಕುಮಾರ್ ತಿಳಿಸಿದರು.

ಆಗಸ್ಟ್ 31ರಂದು ಆಲೂರು ತಾಲ್ಲೂಕಿನ ಹಳ್ಳಿಯೂರು ಬಳಿ ನಡೆದಿದ್ದ ಕಾರ್ಯಾಚರಣೆ ವೇಳೆ, ಶಾರ್ಪ್‌ಶೂಟರ್ ವೆಂಕಟೇಶ್ ಆನೆ ದಾಳಿಯಿಂದ ಮೃತಪಟ್ಟಿದ್ದರು.

ಈ ಬಾರಿಯ ಕಾರ್ಯಾಚರಣೆ ವೇಳೆ 'ಅರ್ಜುನ' ಆನೆಯೇ ಮೃತಪಟ್ಟಿದೆ.

ಮುಖ್ಯಾಂಶಗಳು

- ಕಾರ್ಯಾಚರಣೆ ಸ್ಥಳದಲ್ಲೇ ಅರ್ಜುನ ಸಾವು
- ಎಂಟು ಬಾರಿ ದಸರಾ ಅಂಬಾರಿ ಹೊತ್ತಿದ್ದ ಹೆಗ್ಗಳಿಕೆ
- ಕುಸಿದು ಬಿದ್ದ ಮಾವುತ ವಿನು

'ನಮ್ಮನ್ನೆಲ್ಲಾ ಕಾಪಾಡಿ ಮೃತಪಟ್ಟಿತು'

ಅರ್ಜುನನ ಸಾವು ಅರಣ್ಯ ಇಲಾಖೆ ಸಿಬ್ಬಂದಿ ಹಾಗೂ ಮಾವುತರಿಗೆ ತೀವ್ರ ನೋವು ಉಂಟು ಮಾಡಿತ್ತು. 'ನಮ್ಮನ್ನೆಲ್ಲ ಕಾಪಾಡಿ, ಅರ್ಜುನ ಮೃತಪಟ್ಟಿತು' ಎಂದು ಮಾವುತರು ದುಃಖ ತೋಡಿಕೊಳ್ಳುತ್ತಿದ್ದ ದೃಶ್ಯ ಮನಕಲಕುವಂತಿತ್ತು.

ಕುಸಿದು ಬಿದ್ದ ಮಾವುತ: ಅರ್ಜುನನ ಸಾವಿನ ಆಘಾತವನ್ನು ತಡೆಯದೇ ಮಾವುತ ವಿನು ಕುಸಿದು ಬಿದ್ದರು. ಕೂಡಲೇ ಅವರಿಗೆ ನೀರು ಕುಡಿಸಿ ಉಪಚರಿಸಿದ ಸಿಬ್ಬಂದಿ, ಆಂಬುಲೆನ್ಸ್ ಮೂಲಕ ಆಸ್ಪತ್ರೆಗೆ ಕಳುಹಿಸಿದರು.

ಸಕಲೇಶಪುರ ತಾಲ್ಲೂಕಿನ ಯಸಳೂರು ಬಳಿಯ ದಬ್ಬಳಿಕಟ್ಟೆಯಲ್ಲಿ ಸೋಮವಾರ ಮೃತಪಟ್ಟ ಆನೆ 'ಅರ್ಜುನ'ನ ಕಳೇಬರವನ್ನು ತಬ್ಬಿಕೊಂಡು ಮಾವುತರು ರೋದಿಸಿದರು

ವಿರೋಚಿತ ಸಾವು: ಎಚ್‌ಡಿಕೆ

'ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ಯಸಳೂರು ಬಳಿ ಕಾಡಾನೆಗಳ ಸೆರೆಗೆ ನಡೆಸಿದ ಕಾರ್ಯಾಚರಣೆ ವೇಳೆ ಒಂಟಿ ಸಲಗದ ದಾಳಿಗೆ ತುತ್ತಾಗಿ ಸಾಕಾನೆ ಅರ್ಜುನ ವೀರಮರಣ ಹೊಂದಿದ ಘಟನೆ ತಿಳಿದು ಬಹಳ ನೋವುಂಟಾಯಿತು. ದಸರಾ ಅಂಬಾರಿಯನ್ನು ಹೊತ್ತು ಸಾಗಿದ್ದ ಅರ್ಜುನ ಇನ್ನು ನೆನಪಷ್ಟೇ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ 'ಎಕ್ಸ್'ನಲ್ಲಿ ಹೇಳಿದ್ದಾರೆ.

'ಸ್ಥಳಾಂತರ ಕಾರ್ಯಾಚರಣೆ ವೇಳೆ ಸಾಕಾನೆಗಳು-ಕಾಡಾನೆಗಳ ನಡುವಿನ ಭೀಕರ ಕಾಳಗದ ವೇಳೆ ಇತರೆ ಸಾಕಾನೆಗಳು ಪಲಾಯನ ಮಾಡಿದರೆ, ಅರ್ಜುನ ಮಾತ್ರ ಒಂಟಿ ಸಲಗದ ಜತೆ ವಿರೋಚಿತವಾಗಿ ಸೆಣಸಾಡಿತ್ತು. ಇಂಥ ವಿರೋಚಿತ ಆನೆ ಸಾವನ್ನಪ್ಪಿರುವುದು ಅತ್ಯಂತ ದುಃಖದ ಸಂಗತಿ' ಎಂದಿದ್ದಾರೆ.

'ಕಾಡಾನೆಗಳನ್ನು ಸೆರೆ ಹಿಡಿಯುವಾಗ ತಮ್ಮ ಪ್ರಾಣ ರಕ್ಷಣೆಯ ಜತೆಗೆ ವನ್ಯಮೃಗಗಳ ಜೀವಕ್ಕೆ ಹಾನಿ ಆಗದಂತೆ ಅರಣ್ಯ ಸಿಬ್ಬಂದಿ ಮುನ್ನೆಚ್ಚರಿಕೆ ವಹಿಸಲಿ' ಎಂದು ಹೇಳಿದ್ದಾರೆ.

ಇಂದು ಅಂತ್ಯಕ್ರಿಯೆ

'ಅರ್ಜುನ 8 ಬಾರಿ ಅಂಬಾರಿ ಹೊತ್ತಿದ್ದು, ಕಳೆದ ಬಾರಿಯ ದಸರಾ ಸಂದರ್ಭದಲ್ಲಿ ನಿಶಾನೆ ಆನೆಯಾಗಿ ತಂಡವನ್ನು ಮುನ್ನಡೆಸಿತ್ತು. ಈ ಹಿನ್ನೆಲೆಯಲ್ಲಿ ಆನೆಯ ಅಂತ್ಯಸಂಸ್ಕಾರ ನಡೆಸುವ ಕುರಿತು ಮೈಸೂರು ರಾಜಮನೆತನದ ಪುರೋಹಿತ ಪ್ರಹ್ಲಾದ್ ಅವರನ್ನು ಸಂಪರ್ಕಿಸಲಾಗಿದೆ.

ಮಂಗಳವಾರ ಮಧ್ಯಾಹ್ನ 12 ಗಂಟೆಗೆ ದಬ್ಬಳಿಕಟ್ಟೆ ಬಳಿ ಕೆಎಫ್‌ಡಿಸಿ ನೆಡುತೋಪಿನಲ್ಲಿ ಪ್ರಹ್ಲಾದ್ ಅವರ ಉಪಸ್ಥಿತಿಯಲ್ಲಿ ಸಕಲ ವಿಧಿವಿಧಾನ ಹಾಗೂ ಸರ್ಕಾರಿ ಗೌರವದೊಂದಿಗೆ ಅಂತ್ಯಕ್ರಿಯೆ ನಡೆಸಲಾಗುವುದು' ಎಂದು ಡಿಎಫ್‌ಒ ಮೋಹನ್ ಕುಮಾರ್ ತಿಳಿಸಿದ್ದಾರೆ.

ಮುನ್ನೆಚ್ಚರಿಕೆ ವಹಿಸುವಲ್ಲಿ ಲೋಪ?

ಪ್ರಜಾವಾಣಿ ವಾರ್ತೆ

ಮೈಸೂರು: ಹಾಸನದಲ್ಲಿ ಕಾಡಾನೆಗಳನ್ನು ಸೆರೆ ಹಿಡಿಯುವ ಕಾರ್ಯಾಚರಣೆ ನಡೆಸುವ ಮುನ್ನ ಅರಣ್ಯ ಇಲಾಖೆಯ ಅಧಿಕಾರಿಗಳು ಅಗತ್ಯ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವಲ್ಲಿ ನಿರ್ಲಕ್ಷ್ಯ ವಹಿಸಿದರೇ ಎಂಬುದು ತೀವ್ರ ಚರ್ಚೆಗೆ ಗ್ರಾಸವಾಗಿದೆ. 65 ವರ್ಷ ವಯಸ್ಸಿನ 'ಅರ್ಜುನ'ನನ್ನು ಬಳಸಿದ್ದು ಸರಿಯೇ ಎಂಬ ಪ್ರಶ್ನೆಯೂ ಕೇಳಿಬರುತ್ತಿದೆ.

'ಮುನ್ನೆಚ್ಚರಿಕೆಯ ಕೊರತೆ, ರಕ್ಷಣಾತ್ಮಕ ಕ್ರಮಗಳ ಅಜ್ಞಾನ, ವೈಜ್ಞಾನಿಕ ವಿಧಾನಗಳ ಕೊರತೆಯು ಇಂತಹ ಬಲಶಾಲಿ ಪ್ರಾಣಿಗಳ ನಿರ್ದಯ ಹತ್ಯೆಗೆ ಕಾರಣವಾಗುತ್ತವೆ. ಸೂಕ್ತ ವೈಜ್ಞಾನಿಕ ಕ್ರಮಗಳನ್ನು ಅನುಸರಿಸುವುದು ಅಗತ್ಯವಿದೆ' ಎಂದು ಹಲವರು ಸಾಮಾಜಿಕ ಜಾಲತಾಣದಲ್ಲಿ ಅಭಿಪ್ರಾಯ ಹಂಚಿಕೊಂಡಿದ್ದಾರೆ.

'ಅರ್ಜುನನ ಸಾವನ್ನು ಒಂದು ರೀತಿಯಲ್ಲಿ ಕೊಲೆ ಎಂದೇ ಹೇಳಬೇಕಾಗುತ್ತದೆ' ಎಂದೂ ಹೇಳಲಾಗಿದೆ. 'ವನ್ಯಜೀವಿಗಳ ಪ್ರಾಣಕ್ಕೆ ಸಂಚಕಾರ ಆಗದಂತೆ ಕಾರ್ಯಾಚರಣೆಗೆ ಕ್ರಮ ಕೈಗೊಳ್ಳಬೇಕು' ಎಂಬುದೂ ಮುನ್ನೆಲೆಗೆ ಬಂದಿದೆ.

'ಆ ಕಾಡಾನೆಗೆ ಮದವೇರಿತ್ತೇ' ಎಂಬ ಪ್ರಶ್ನೆಯೂ ಕೇಳಿಬರುತ್ತಿದೆ.

'ಅರ್ಜುನನನ್ನು ಕೊಂದಿರುವ ಕಾಡಾನೆಯು ಮದವೇರಿದ್ದರಿಂದ ಈ ದುರ್ಘಟನೆ ನಡೆದಿರಬಹುದು' ಎಂದು ವನ್ಯಜೀವಿ ತಜ್ಞರೊಬ್ಬರು ಅಭಿಪ್ರಾಯಪಟ್ಟಿದ್ದಾರೆ.

'ಮದಕ್ಕೆ ಬರುವ ಒಂಟಿಸಲಗದ ಹಣೆಯಲ್ಲಿ ದ್ರವವೊಂದು ಸೋರು-ತ್ತಿರುತ್ತದೆ. ಅದರ ವಾಸನೆಗೆ ಮದ ಮತ್ತಷ್ಟು ಏರುತ್ತದೆ. ಆಗ, ಅದು ತನಗಿಂತ ದೊಡ್ಡ ವಯಸ್ಸಿನ ಆನೆಯ ಮೇಲೂ ಎರಗಿ ಬರುತ್ತದೆ. ಆದ್ದರಿಂದ ಕಾಡಾನೆಗೆ ಮದವೇರಿದ್ದ ಪಕ್ಷದಲ್ಲಿ, ಸೆರೆ ಕಾರ್ಯಾಚರಣೆ ನಡೆಸಿದ್ದೇ ತಪ್ಪು. 3 ತಿಂಗಳು ಬಿಟ್ಟು ನಡೆಸಬಹುದಿತ್ತು' ಎನ್ನುತ್ತಾರೆ ಅವರು.

'ಕಾಡಾನೆಗಳ ಸೆರೆ ಕಾರ್ಯಾಚರಣೆಯು ಬಹಳ ಕಷ್ಟದ ಕೆಲಸ. ಬಹಳ ವಿಶ್ಲೇಷಣೆ ನಡೆಸಿ ಕೈಗೊಳ್ಳಬೇಕಾಗುತ್ತದೆ. ಈ ದಿಸೆಯಲ್ಲಿ ಅಧಿಕಾರಿಗಳು, ಸಿಬ್ಬಂದಿಗೆ ಜಾಗೃತಿ ಮೂಡಿಸಬೇಕಾಗುತ್ತದೆ. ಆನೆಗಳ ಬಗ್ಗೆ ಅಧಿಕೃತವಾಗಿ ಸಲಹೆ, ತಿಳಿವಳಿಕೆ ನೀಡಬಲ್ಲ ವನ್ಯಜೀವಿ ವಿಜ್ಞಾನಿಗಳ ಕೊರತೆಯೂ ಸದ್ಯ ನಮ್ಮಲ್ಲಿ ಕಾಡುತ್ತಿದೆ. ಒಟ್ಟಾರೆಯಾಗಿ ಸಿದ್ಧತೆಯಲ್ಲೇ ಸಮಸ್ಯೆ ಕಂಡುಬರುತ್ತಿದೆ' ಎಂದು ಅವರು ಅಭಿಪ್ರಾಯಪಟ್ಟರು.

'ಈ ಘಟನೆಯನ್ನು ಇಲಾಖೆಯು ಗಂಭೀರವಾಗಿ ಪರಿಗಣಿಸಬೇಕು. ತಜ್ಞರ ನೆರವು ಪಡೆದುಕೊಳ್ಳಬೇಕು. ವೈಜ್ಞಾನಿಕ ಕ್ರಮಗಳನ್ನು ಕೈಗೊಳ್ಳಬೇಕು' ಎಂದರು.

ಈ ಬಗ್ಗೆ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಮೈಸೂರು ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಸಿಸಿಎಫ್) ಮಾಲತಿ ಪ್ರಿಯಾ, 'ಅರ್ಜುನ ಆನೆಯು ಕಾರ್ಯಾಚರಣೆಯಲ್ಲಿ ಬಹಳ ಅನುಭವಿಯಾಗಿದ್ದರಿಂದ ಬಳಸಲಾಗುತ್ತಿತ್ತು. ನಮ್ಮ ಶಿಬಿರದಲ್ಲಿ ಅದಕ್ಕಿಂತ ಅನುಭವಿ ಯಾವುದೂ ಇಲ್ಲ. ಹಿಂದೆಂದೂ ಅಹಿತಕರ ಘಟನೆಗಳು ನಡೆದಿರಲಿಲ್ಲ. ಮುಂದಿನ ದಿನಗಳಲ್ಲಿ ಮತ್ತಷ್ಟು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲು ಸೂಚಿಸಲಾಗುವುದು' ಎಂದರು.

ಮುಖ್ಯಾಂಶಗಳು

- ಆನೆಗಳ ಬಗ್ಗೆ ಮಾಹಿತಿ ನೀಡುವ ವನ್ಯಜೀವಿ ವಿಜ್ಞಾನಿಗಳ ಕೊರತೆ
- ರಕ್ಷಣಾತ್ಮಕ ಕ್ರಮ ಪಾಲನೆಯಲ್ಲಿ ಅರಣ್ಯ ಸಿಬ್ಬಂದಿ ವೈಫಲ್ಯ

ಹುಲಿಯನ್ನು ಓಡಿಸಿದ್ದ 'ಬಲಶಾಲಿ'

ಪ್ರಜಾವಾಣಿ ವಾರ್ತೆ

ಮೈಸೂರು: ಇದೇ ವರ್ಷದ ಜ.23ರಂದು ಹುಲಿಯನ್ನು ಓಡಿಸಿ, ಜನ ನಿಟ್ಟುಸಿರು ಬಿಡುವಂತೆ ಮಾಡಿ ಗಮನಸೆಳೆದಿದ್ದ. ಎಚ್.ಡಿ.ಕೋಟೆ ತಾಲ್ಲೂಕು ನಾಗರಹೊಳೆ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯ ಬಳ್ಳೆ ಹಾಡಿ ಯುವಕನನ್ನು ಕೊಂದಿದ್ದ ಹುಲಿಯನ್ನು 'ಅರ್ಜುನ' ನೇತೃತ್ವದಲ್ಲಿ ಆನೆಗಳಿಂದ ಕಾಡಿಗೆ ಅಟ್ಟಲಾಗಿತ್ತು. ಜನವಸತಿ ಪ್ರದೇಶದಲ್ಲಿ 4 ಮರಿಗಳೊಂದಿಗೆ ಓಡಾಡುತ್ತಿರುವ 'ಬ್ಯಾಕ್ ವಾಟರ್ ಫೀಮೇಲ್' ಹುಲಿಯು ಗ್ರಾಮಸ್ಥರಲ್ಲಿ ಆತಂಕ ಮೂಡಿಸಿತ್ತು. ಅವರ ಆತಂಕವನ್ನು ನಿವಾರಿಸುವಲ್ಲಿ ಅರ್ಜುನ ನೆರವಾಗಿದ್ದ.

ಅದು ಕೆಲ ವರ್ಷಗಳ ಹಿಂದೆ (2018ಕ್ಕಿಂತ ಹಿಂದೆ) ಮದವೇರಿದ ಸಂದರ್ಭದಲ್ಲಿ ಬಳ್ಳೆ ಶಿಬಿರದಿಂದ ತಪ್ಪಿಸಿಕೊಂಡಿತ್ತು. ನಾಲ್ಕು ದಿನ ಯಾರ ಕಣ್ಣಿಗೂ ಬಿದ್ದಿರಲಿಲ್ಲ. ನಂತರ ಕೇರಳ ಗಡಿ ಭಾಗದಲ್ಲಿ ಪತ್ತೆಯಾಗಿತ್ತು.

'ವಿಶ್ವಾಸಗಳಿಸಿದರೆ ಸುಮ್ಮನಿರುತ್ತಿದ್ದ': ಅರ್ಜುನನಿಗೆ ಆರಂಭದಲ್ಲಿ ದೊಡ್ಡ ಮಾಸ್ತಿ, ಬಳಿಕ ಅವರ ಪುತ್ರ ಮಹೇಶ್, ಬಳಿಕ ವಿನು ಮಾವುತರಾಗಿದ್ದರು.

'ಅರ್ಜುನ ಆನೆಯನ್ನು ಮೊದಲ ಬಾರಿ ಮುನ್ನಡೆಸಲು ಅವಕಾಶ ದೊರೆತಾಗ ಹೆಚ್ಚಿನವರು ಹೆದರಿಸಿದ್ದರು. ಅಪಾಯಕಾರಿ, ಅದರಿಂದ ತೊಂದರೆಯಾಗಬಹುದೆಂದು ಆತ್ಮಸ್ಥೈರ್ಯ ಕುಗ್ಗಿಸಿದ್ದರು. ಅದರ ಭಾವನೆ ಅರಿತಿದ್ದ ನಾನು ಯಾವುದೇ ಬೆದರಿಕೆಗೆ ಜಗ್ಗಲಿಲ್ಲ. ಕಣ್ಣಿನಲ್ಲೇ ಅದರ ಪ್ರೀತಿ ಸಂಪಾದಿಸಿದೆ' ಎಂದು ವಿನು ತಿಳಿಸಿದ್ದರು.

'ಹೊಸಬರನ್ನು ಹತ್ತಿರವೂ ಬಿಟ್ಟು-ಕೊಳ್ಳುವುದಿಲ್ಲ. ಅದಕ್ಕೆ ತುಂಬಾ ಕೋಪ. ಆದರೆ, ಅಷ್ಟೇ ಭಾವುಕ ಜೀವಿ. ವ್ಯಕ್ತಿಯ ಮೇಲೆ ವಿಶ್ವಾಸ ಬಂದರೆ ಸುಮ್ಮನಿರುತ್ತದೆ' ಎಂದು ತಿಳಿಸಿದ್ದರು.

'ಮಕ್ಕಳ ಮೊಬೈಲ್ ಸ್ಕ್ರೀನ್ ಅವಧಿಗೆ ಮಿತಿ ಹೇರಿ'

ಪ್ರಜಾವಾಣಿ ವಾರ್ತೆ

ನವದೆಹಲಿ: ಮೊಬೈಲ್ ಫೋನ್‌ಗಳು ಈಗ ಮನೆಗಳಲ್ಲಿ ಮಕ್ಕಳನ್ನು ನೋಡಿಕೊಳ್ಳುವ ಪಾತ್ರವಹಿಸುತ್ತಿವೆ ಎಂದು ರಾಜ್ಯಸಭೆಯಲ್ಲಿ ಹೇಳಿದ ಎನ್‌ಸಿಪಿ ಸಂಸದೆ ಫೌಜಿಯಾ ಖಾನ್ ಅವರು, ಮಕ್ಕಳ ಸ್ಕ್ರೀನ್ ಸಮಯವನ್ನು ಕಡಿಮೆಗೊಳಿಸಲು ಸಮಗ್ರ ಯೋಜನೆ ರೂಪಿಸಬೇಕು ಎಂದು ಒತ್ತಾಯಿಸಿದರು.

ಅಧಿವೇಶನದ ಶೂನ್ಯ ಅವಧಿಯಲ್ಲಿ ಈ ವಿಷಯ ಪ್ರಸ್ತಾಪಿಸಿದ ಅವರು, 'ತಂತ್ರಜ್ಞಾನವು ನಮ್ಮ ಜೀವನ ಹಲವು ಅಂಶಗಳ ಮೇಲೆ ಪರಿಣಾಮ ಬೀರುತ್ತಿರುವುದನ್ನು ತೆಗೆದುಹಾಕುವಂತಿಲ್ಲ. ಆದರೆ ಮಕ್ಕಳು ಹೆಚ್ಚಿನ ಸಮಯವನ್ನು ಮೊಬೈಲ್ ಮುಂದೆಯೇ ಕಳೆಯುತ್ತಾರೆ. ಇದರಿಂದ ಅವರ ವ್ಯಕ್ತಿತ್ವ ವಿಕಸನದ, ಕಣ್ಣಿನ ದೃಷ್ಟಿ, ಗ್ರಹಿಕೆ ಮತ್ತು ಬೌದ್ಧಿಕ, ಭಾವನಾತ್ಮಕ, ಸಾಮಾಜಿಕ ಹಾಗೂ ದೈಹಿಕ ಬೆಳವಣಿಗೆ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುತ್ತದೆ' ಎಂದು ಹೇಳಿದರು.

ಹೀಗಾಗಿ ಮಕ್ಕಳು ಮೊಬೈಲ್ ಸ್ಕ್ರೀನ್ ನೋಡುವ ಅವಧಿಗೂ ಮಿತಿ ಹೇರಬೇಕು ಎಂದು ಆಗ್ರಹಿಸಿದರು.

ಕರ್ನಾಟಕದ ಬಿಜೆಪಿ ಸಂಸದ ಜಗ್ಗೇಶ್ ಮಾತನಾಡಿ, ಸಂಸ್ಥೆಗಳಲ್ಲಿ ನೋಂದಣಿ ಅಥವಾ ಸ್ವಾಗತಕಾರಿಣಿ ಡೆಸ್ಕ್‌ಗಳಿಗೆ ಸ್ಥಳೀಯರನ್ನೇ ನೇಮಕ ಮಾಡಿ ಎಂದು ಕೇಳಿಕೊಂಡರು.

ಪಿಎಸ್‌ಐ ನೇಮಕ ಪರೀಕ್ಷೆ ಜ.23ಕ್ಕೆ ಮುಂದೂಡಿಕೆ

ಒಂದನೇ ಪುಟದಿಂದ...

ಉತ್ತರ ನೀಡಿದ ಗೃಹ ಸಚಿವರು, 'ಹಿಂದಿನ ಸರ್ಕಾರದ ಅವಧಿಯಲ್ಲಿ ಈ ಪರೀಕ್ಷೆ ನಡೆದಿತ್ತು. ಅಕ್ರಮ ಪತ್ತೆಯಾದ ಕಾರಣದಿಂದ ಹಿಂದಿನ ಸರ್ಕಾರವೇ ಪರೀಕ್ಷೆಯನ್ನು ರದ್ದುಗೊಳಿಸಿ ಆದೇಶ ಹೊರಡಿಸಿತ್ತು. ಹೈಕೋರ್ಟ್ ಆದೇಶದ ಅನುಸಾರ ಈಗ ಮರು ಲಿಖಿತ ಪರೀಕ್ಷೆಯನ್ನು ನಿಗದಿ ಮಾಡಲಾಗಿದೆ' ಎಂದರು.

ರಾಜ್ಯದಲ್ಲಿ 1,500 ಪಿಎಸ್‌ಐ ಹುದ್ದೆಗಳು ಖಾಲಿ ಇವೆ. ಪೊಲೀಸ್ ಠಾಣೆಗಳಲ್ಲಿ ಪಿಎಸ್‌ಐಗಳ ಕೊರತೆ ಇದೆ. ಮೊದಲ ಹಂತದಲ್ಲಿ ಈ 545 ಹುದ್ದೆಗಳ ಭರ್ತಿಗೆ ಪರೀಕ್ಷೆ ನಡೆಸಲಾಗುವುದು. ಎರಡನೇ ಹಂತದಲ್ಲಿ 403 ಹುದ್ದೆಗಳ ಭರ್ತಿಗೆ ಪರೀಕ್ಷೆ ನಡೆಯಲಿದೆ. ಮೂರನೇ ಹಂತದಲ್ಲಿ 600 ಹುದ್ದೆಗಳನ್ನು ಭರ್ತಿ ಮಾಡಲಾಗುವುದು. ಈ ಕಾರಣದಿಂದ ಪರೀಕ್ಷೆ ಮುಂದೂಡುವುದು ಅಸಾಧ್ಯ ಎಂದು ಹೇಳಿದರು.

ಪಿಎಸ್‌ಐ ನೇಮಕಾತಿಯ ಮರು ಲಿಖಿತ ಪರೀಕ್ಷೆಯನ್ನು ಮುಂದೂಡಬೇಕೆಂಬ ಬೇಡಿಕೆಯನ್ನು ಕಾಂಗ್ರೆಸ್ ಶಾಸಕರೂ ಬೆಂಬಲಿಸಿದರು. ಆಡಳಿತ ಪಕ್ಷದ ಹಲವು ಶಾಸಕರು ಎದ್ದು ನಿಂತು, ಪರೀಕ್ಷೆ ಮುಂದೂಡುವಂತೆ ಆಗ್ರಹಿಸಿದರು. ಅವರನ್ನು ಸಮಾಧಾನ-ಪಡಿಸುವ ಪ್ರಯತ್ನ ಫಲಿಸಲಿಲ್ಲ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೂ ಸದನದಲ್ಲಿದ್ದರು. ಅವರ ಆಸನದ ಬಳಿ ಹೋದ ಗೃಹ ಸಚಿವರು ಚರ್ಚೆ ನಡೆಸಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರೂ ಜತೆಯಾದರು. ಚರ್ಚೆಯ ಬಳಿಕ ಮತ್ತೆ ಹೇಳಿಕೆ ನೀಡಿದ ಪರಮೇಶ್ವರ, 'ಡಿ. 23ಕ್ಕೆ ನಿಗದಿಯಾಗಿರುವ ಪರೀಕ್ಷೆಯನ್ನು 2024ರ ಜನವರಿ 23ಕ್ಕೆ ನಡೆಸಲಾಗುವುದು' ಎಂದು ಪ್ರಕಟಿಸಿದರು.

ಸಿಬಿಐ ತನಿಖೆಗೆ ಯತ್ನಾಳ ಆಗ್ರಹ

'ಪಿಎಸ್‌ಐ ನೇಮಕಾತಿ ಪರೀಕ್ಷೆಯಲ್ಲಿನ ಅಕ್ರಮದ ಕುರಿತು ಸಚಿವ ಪ್ರಿಯಾಂಕ್ ಖರ್ಗೆ ಅವರು ವೀರಾವೇಶದ ಮಾತನಾಡು-ತ್ತಿದ್ದರು. ಈಗ ವೀರಾವೇಶ ಕಾಣಿಸುತ್ತಿಲ್ಲ. ಈ ಪ್ರಕರಣದಲ್ಲಿ ಪೊಲೀಸ್ ಅಧಿಕಾರಿಯನ್ನು ಬಂಧಿಸಿದರೆ ಸಾಲದು. ಯಾರ್‍ಯಾರು ಇದರ ಹಿಂದಿದ್ದರೋ ಅವರನ್ನೆಲ್ಲ ಒದ್ದು ಒಳಗೆ ಹಾಕಬೇಕು. ಅದಕ್ಕಾಗಿ ಸಿಬಿಐ ತನಿಖೆಗೆ ಆದೇಶಿಸಿ' ಎಂದು ಬಸನಗೌಡ ಪಾಟೀಲ ಯತ್ನಾಳ ಆಗ್ರಹಿಸಿದರು.

ಆಗ ಪ್ರತಿಕ್ರಿಯಿಸಿದ ಪ್ರಿಯಾಂಕ್ ಖರ್ಗೆ, 'ನಾವು ಬದಲಾಗಿಲ್ಲ. ನಿಮ್ಮ ಮನಸ್ಸಿನಲ್ಲಿ ಏನಿದೆ ಎಂಬುದು ನಮಗೆ ಗೊತ್ತಿದೆ. ನೀವು ಏನು ಬಯಸುತ್ತಿದ್ದೀ-ರೋ ಅದನ್ನು ನಮ್ಮ ಸರ್ಕಾರ ಮಾಡಲಿದೆ' ಎಂದರು.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಗದಗ

ಜಿಲ್ಲಾ: ಗದಗ. ಪಿನ್ ಕೋಡ್ – 582101 ರಾಜ್ಯ : ಕರ್ನಾಟಕ

ಇ–ಮೇಲ್ apmcgadag4@gmail.com ದೂ: 238354, ಫ್ಯಾಕ್ಸ್:(08372) 237897

ಸಂ:ಕೃಉಮಾಸ:ಗ: 897 :2023–24 ದಿನಾಂಕ: 29–11–2023

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ಗದಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ 2023–24 ನೇ ಸಾಲಿಗಾಗಿ, ಭದ್ರತಾ ಮತ್ತು ಸ್ವಚ್ಛತಾ ಹಾಗೂ ಇತರೆ ಕಾರ್ಯಗಳಿಗಾಗ ಇ–ಟೆಂಡರ್‌ನ್ನು ಕರ್ನಾಟಕ ಸರ್ಕಾರದ http://kppp.karnataka.gov.in ಪೋರ್ಟಲ್‌ನಲ್ಲಿ ಇಂಡೆಂಟ್ ನಂ.APMC/2023-24/SE0144 DATE: 01-12-2023 ರ ಮೂಲಕ ಇ–ಟೆಂಡರ್ ಕರೆಯಲಾಗಿದ್ದು, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **18–12–2023** ರ ಅಪರಾಹ್ನ **4–00** ಘಂಟೆಯೊಳಗಾಗಿ ಸಲ್ಲಿಸುವುದು, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **20–12–2023** ರ ಪೂರ್ವಾಹ್ನ: **11–00** ಘಂಟೆ ಹಾಗೂ ಆರ್ಥಿಕ ಬಿಡ್ (ಸಾದ್ಯವಾದಲ್ಲಿ) ತೆರೆಯುವ ದಿನಾಂಕ: **22–12–2023**: ಪೂರ್ವಾಹ್ನ **11–00** ಘಂಟೆಗೆ, ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸರ್ಕಾರದ http://kppp.karnataka.gov.in ಪೋರ್ಟಲ್‌ನಲ್ಲಿ ಮತ್ತು ಕಛೇರಿ ವೇಳೆಯಲ್ಲಿ ಕಾರ್ಯದರ್ಶಿಯವರಿಂದ ಪಡೆಯಬಹುದಾಗಿದೆ.

ಸಹಿ/– ಕಾರ್ಯದರ್ಶಿ, ಕೃ.ಉ.ಮಾ.ಸ.ಗದಗ

ವಾ.ಸಾ.ಇ/ಗದಗ/338/2023–24/ದೇಶಪಾಂಡೆಪಬ್ಲಿಸಿಟಿ

ಸಹಿ/– ಆಡಳಿತಾಧಿಕಾರಿಗಳು ಗದಗ ಜಿಲ್ಲೆ ಗದಗ.

ಕರ್ನಾಟಕ ಸರ್ಕಾರ

ಗಣಿ ಮತ್ತು ಭೂವಿಜ್ಞಾನ ಇಲಾಖೆ

#49, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560 001.

ಇ–ಮೇಲ್: dir-mines@karnataka.gov.in

ಸಂ: ಡಿಎಂಜಿ–17012/2/2023-24 ದಿನಾಂಕ : 04.12.2023

ಅಧಿಸೂಚನೆ ಮತ್ತು ಟೆಂಡರ್ ಆಹ್ವಾನಿಸುವ ಪ್ರಕಟಣೆ

ಚಿನ್ನದ ಬ್ಲಾಕ್‌ಗಳಿಗೆ ಸಂಯುಕ್ತ ಪರವಾನಗಿ ನೀಡಲು ಬಿಡ್‌ಗಳ ಆಹ್ವಾನ

Mines and Minerals (Development and Regulation) Act 1957ರ ಸೆಕ್ಷನ್ 11 ಅಡಿಯಲ್ಲಿ ಪ್ರದತ್ತ ವಾದ ಅಧಿಕಾರದಂತೆ ಮತ್ತು **the Minerals (Evidence of Mineral Contents) Rules, 2015 and the Mineral (Auction) Rules,** 2015 ರ ಪ್ರಕಾರ ಮತ್ತು ಅದರಡಿಯಾದ ತಿದ್ದುಪಡಿಗಳ ಅನುಗುಣವಾಗಿ ಕರ್ನಾಟಕ ಸರಕಾರವು ಹರಾಜಿನ ಮೂಲಕ ಸಂಯುಕ್ತ ಪರವಾನಗಿ ನೀಡಲು ಈ ಕೆಳಗಿನ ಚಿನ್ನದ ಬ್ಲಾಕ್‌ಗಳ "ಎರಡನೇ ಪ್ರಯತ್ನ" ವನ್ನು ನಡೆಸಲು ಈ ಮೂಲಕ ವಿದ್ಯುನ್ಮಾನ ಹರಾಜಿಗೆ ಟೆಂಡರ್ ಗಳನ್ನು ಆಹ್ವಾನಿಸಿದೆ.

ಹರಾಜಿನ ಮೂಲಕ ಸಂಯುಕ್ತ ಪರವಾನಗಿಗಾಗಿ ಖನಿಜ ಬ್ಲಾಕ್‌ಗಳ ಪಟ್ಟಿ:

Sl. No.	Name of the block	District	Mineral	Concession Area (in Sq. Km)	Estimated Resources (in MMT)	Tender fee
1.	Bhagavati Gold Block	Bagalkote	Gold	14.85	-	INR 2,00,000/- + 18% GST
2.	Kenchanahalli Gold Block	Chikmagalur	Gold & Associated Minerals	40.80	-	INR 2,00,000/- + 18% GST

ಟೆಂಡರ್ ದಾಖಲೆಯಲ್ಲಿ ನಮೂದಿಸಿರುವ ಅರ್ಹತೆಗಳನ್ನು ಹೊಂದಿರುವ ಯಾವುದೇ ವ್ಯಕ್ತಿ, ಸಂಸ್ಥೆ, ಕಂಪನಿಯು ಹರಾಜಿನಲ್ಲಿ ಭಾಗವಹಿಸಬಹುದಾಗಿರುತ್ತದೆ. ಮೇಲಿನ ಪಟ್ಟಿಯಲ್ಲಿ ತಿಳಿಸಿರುವ ಬ್ಲಾಕ್‌ಗಳಿಗೆ ಸಂಬಂಧಿಸಿದಂತೆ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಆಹ್ವಾನಿಸಲಾಗಿದೆ. ಆನ್‌ಲೈನ್‌ನಲ್ಲಿ ಸಲ್ಲಿಸಬೇಕಾದ ತಾಂತ್ರಿಕ ಬಿಡ್‌ಗಳ ಹೊರತಾಗಿ, ಬಿಡ್ಡುದಾರರು ತಮ್ಮ ತಾಂತ್ರಿಕ ಬಿಡ್‌ಗಳ ಮೂಲ ಭೌತಿಕ ಪ್ರತಿಗಳನ್ನು ಟೆಂಡರ್ ಆಹ್ವಾನಿಸುವ ಪ್ರಾಧಿಕಾರಕ್ಕೆ ಅಂದರೆ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರಿಗೆ ಸಲ್ಲಿಸಬೇಕಾಗುತ್ತದೆ.

ಅರ್ಹತಾ ನಿಬಂಧನೆಗಳು, ನಿಯಮ ಹಾಗೂ ನಿಬಂಧನೆಗಳು, ಎಲೆಕ್ಟ್ರಾನಿಕ್ ಹರಾಜಿನಲ್ಲಿ ಭಾಗವಹಿಸಬೇಕಾದ ದಿನಾಂಕ ಮತ್ತು ಸಮಯಗಳ ವಿವರಗಳನ್ನು ಟೆಂಡರ್ ದಸ್ತಾವೇಜಿನಲ್ಲಿ ನೀಡಲಾಗಿರುತ್ತದೆ. ಟೆಂಡರ್ ದಸ್ತಾವೇಜುಗಳು, ಪ್ರಕಟಣೆಗಳು, ನವೀಕರಣಗಳು ಮತ್ತು ಇ–ಹರಾಜು ಪ್ರಕ್ರಿಯೆಗೆ ಸಂಬಂಧಿಸಿದ ಇತರೆ ವಿವರಗಳು ಎಂಎಸ್‌ಟಿಸಿ ನಿಯಮಿತದ ವೆಬ್‌ಸೈಟ್ (https://www.mstcecommerce.com/auctionhome/mlcl/index.jsp) ನಲ್ಲಿ ಮಾತ್ರ ಎಲೆಕ್ಟ್ರಾನಿಕ್ ರೂಪದಲ್ಲಿ ಲಭ್ಯವಾಗುವುದು.

ಆಸಕ್ತಿಯುಳ್ಳ ಮತ್ತು ಅರ್ಹ ಬಿಡ್ಡುದಾರರು ಮೇಲ್ಕಂಡ ವೆಬ್‌ಸೈಟ್‌ನಲ್ಲಿ ನೊಂದಣಿ ಮಾಡಿಕೊಳ್ಳಬೇಕು. ಇ–ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ನೊಂದಣಿ ಮಾಡಿಕೊಂಡ ಬಿಡ್ಡುದಾರರು ಲಾಗಿನ್ ಐಡಿ ಮತ್ತು ಪಾಸ್‌ವರ್ಡ್‌ಗಳನ್ನು ಪಡೆಯಬಹುದು. ಟೆಂಡರ್ ದಸ್ತಾವೇಜು ಮಾದರಿ ಮತ್ತು ಬ್ಲಾಕ್‌ನ ಕುರಿತಾದ ಸಾರಾಂಶಗಳು ಎಂಎಸ್‌ಟಿಸಿ ನಿಯಮಿತದ ವೆಬ್‌ಸೈಟ್ (https://www.mstcecommerce.com/auctionhome/mlcl/index.jsp) ನಲ್ಲಿ ಉಚಿತವಾಗಿ ಲಭ್ಯವಿದೆ. ಬಿಡ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ನೊಂದಣಿ ಮಾಡಿಕೊಂಡ ಬಿಡ್ಡುದಾರರು ಟೆಂಡರ್ ದಸ್ತಾವೇಜಿನಲ್ಲಿ ಸೂಚಿಸಿರುವ ಹಣ ಪಾವತಿಸುವ ಮೂಲಕ ಸಂಬಂಧಪಟ್ಟ ಗಣಿ ಬ್ಲಾಕ್‌ನ ಟೆಂಡರ್ ದಸ್ತಾವೇಜುಗಳನ್ನು ಎಂಎಸ್‌ಟಿಸಿ ನಿಯಮಿತದ ವೆಬ್‌ಸೈಟ್‌ನಿಂದ ಪಡೆಯಬಹುದು.

ಟೆಂಡರ್ ದಸ್ತಾವೇಜನ್ನು ಖರೀದಿಸುವಲ್ಲಿ ಶೇಕಡ 18 ರಷ್ಟು ಜಿಎಸ್‌ಟಿ ಅನ್ವಯಿಸುತ್ತದೆ. ಅನ್ವಯಿಸುವ ಜಿ.ಎಸ್.ಟಿಯನ್ನು ಟೆಂಡರ್ ನಲ್ಲಿ ಭಾಗವಹಿಸಲು ಇಚ್ಛಿಸುವ ಬಿಡ್ಡುದಾರರು ಪಾವತಿಸತಕ್ಕದ್ದು. ಅನ್ವಯವಾಗುವ ಜಿಎಸ್‌ಟಿಯನ್ನು ರಿವರ್ಸ್ ಚಾರ್ಜ್ ಕಾರ್ಯ ವಿಧಾನದಡಿಯಲ್ಲಿ ಸಂಭಾವ್ಯ ಬಿಡ್ಡರ್ ಸ್ವತಃ ಪಾವತಿಸಬೇಕಾಗುತ್ತದೆ. ಅನ್ವಯವಾಗುವ ಜಿ.ಎಸ್.ಟಿಯನ್ನು ಪಾವತಿಸುವುದು ಬಿಡ್ಡುದಾರರದ್ದೇ ಕಾನೂನಾತ್ಮಕ ಮತ್ತು ಶಾಸನಬದ್ಧ ಹೊಣೆಯಾಗಿರುತ್ತದೆ. ಈ ಸಂಬಂಧ ಇಲಾಖೆ ಅಥವಾ ಎಂ.ಎಸ್.ಟಿ.ಸಿ ಯು ಭಾದ್ಯರಾಗುವುದಿಲ್ಲ.

ಟೆಂಡರ್ ದಸ್ತಾವೇಜುಗಳ ಮಾರಾಟವು ದಿನಾಂಕ: 05.12.2023 ರಿಂದ ಪ್ರಾರಂಭವಾಗುತ್ತದೆ. ದಿನಾಂಕ: 08.01.2024 ಟೆಂಡರ್ ಮಾರಾಟದ ಕೊನೆಯ ದಿನವಾಗಿರುತ್ತದೆ. ತಾಂತ್ರಿಕ ಹಾಗೂ ಬಿಡ್ ಮೊತ್ತ ನಮೂದಿಸಿದ ಪ್ರಸ್ತಾವನೆಯನ್ನು ಎಂ.ಎಸ್.ಟಿ.ಸಿ ವೆಬ್‌ಸೈಟ್‌ನಲ್ಲಿ ದಿನಾಂಕ: 16.01.2024 ರ 17.00 ಗಂಟೆಗೆ ಅಥವಾ ಅದಕ್ಕೂ ಮುಂಚಿತವಾಗಿ ಸಲ್ಲಿಸಬಹುದಾಗಿದೆ. ತಾಂತ್ರಿಕ ಬಿಡ್‌ಗಳ ಮೂಲ ಭೌತಿಕ ಪ್ರತಿಗಳನ್ನು ಟೆಂಡರ್ ಆಹ್ವಾನಿಸುವ ಪ್ರಾಧಿಕಾರಕ್ಕೆ ಅಂದರೆ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ ಇವರಿಗೆ ದಿನಾಂಕ: 16.01.2024 ರ 17.00 ಗಂಟೆಗೆ ಅಥವಾ ಅದಕ್ಕೂ ಮುಂಚಿತವಾಗಿ ಸಲ್ಲಿಸಬೇಕಾಗುತ್ತದೆ.

ಸಹಿ/– ನಿರ್ದೇಶಕರು,

DIPR/CP/2398/Zenkar/2022-23

ಕಂದಾಯ ಇಲಾಖೆ

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ, (ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)

3 ಮತ್ತು 4ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು–560001. E-Mail: splocaima21@gmail.com ದೂರವಾಣಿ ಸಂಖ್ಯೆ : 080–29565353, 29604556

No. SPLOCA/ADM/06/2022 Date: 02.12.2023

ಪ್ರಕಟಣೆ

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ (ಐಎಂಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು) ಗಳವರ ಕಛೇರಿಗೆ ಮಂಜೂರಾಗಿ ನೇಮಕವಾಗದೇ ಖಾಲಿ ಇರುವ ಈ ಕೆಳಕಂಡ ವಿವಿಧ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಆಸಕ್ತ ಏಜೆನ್ಸಿಗಳಿಂದ / ಆಸಕ್ತ ವೈಯಕ್ತಿಕ ವ್ಯಕ್ತಿಗಳಿಂದ **Resume / quotation** ಅನ್ನು ಆಹ್ವಾನಿಸಲಾಗಿದ್ದು, ಸದರಿ ಪ್ರಸ್ತಾವನೆಯನ್ನು ಈ ಕಛೇರಿಗೆ ಸಲ್ಲಿಸುವಂತೆ ಸೂಚಿಸಿದೆ. **Last date of submission of Resume: 12th December 2023.**

ಹುದ್ದೆಗಳ ವಿವರ:

Sl. No	Post / Designation	Qualification		Relevant Experience	No. of Post	Contract wage per Month
		Basic	Preference	Basic		
1	Legal FDA	Graduation +LLB & 1 Year at Bar	LLM & 2 Years at Bar	5 Years of Office experience in Accounting Firm / Bank/ Law firm/ Government Agencies. Good knowledge of computers including Excel. Age not to exceed 40 years, knowledge of Kannada is must.	1	Rs. 25,000 + sitting fees in court (as per rules)

Sl. No.	Post/ Designation	Qualification/ Requirements	Experience	No. of Post	Contract wage per month
1.	CA	Individuals with CA Certificate in forensic audit & Experience in the field of financial analysis and forensic audit of related Companies/Banks/Cooperatives. Job Profile: 1. Identifying Fund Trail, Tracking of banking transactions. 2. Conducting audit, Transactional forensic 3. Analysis of payer beneficiary details for bank transactions and identifying assets created out of the same. 4. Collecting information from various Government agencies such as RBI, SEBI, ED, CBI, IT etc. 5.Tracking fund transfers, analyzing cash transactions 6. Creating & validating database. 7. Analyzing and vetting claims. 8.Providing expert evidence in legal fora on payment of Rs.2000 per appearance/effective hearing and Rs 200 per ineffective hearing	Minimum- 5Years as CA and 1Year as Forensic Auditor. Preferred-10 Years as CA and 2 years as Forensic Auditor & Knowledge of Audit Software like IDEA Data Analysis, CaseWare Analytics AI. Age should not exceed 55 Years.	1	Rs:1,25,000/- to 1,75,000/- per month depending upon qualification and experience and Rs25,000/- per month for Experience in forensic audit.

Sl. No	Post Designation	Qualification		Relevant Experience	No. of Post	Contract wage per Month
		Basic	Preference	Basic		
1	PRO/Operations Manager	MBA	MBA with proficiency in Kannada, Hindi, English.	Relevant experience of at least 5 years of working as PRO and / or Management operations in Government projects, preferably in multiple States	1	80,000/- to1,10,000/- depending qualification and experience

Sl. No	Post/Post/ Designation	Qualification		Relevant Experience		No. of Post	Contract wage per Month
		Basic	Preference	Basic	Preference		
1	Law Officer [To work in the offices of the CAs in Regional commissioner's office, Bangalore.]	LLB, LLM Registered at Bar council of Karnataka	LLM	Minimum 5 years' experience in High court	10 years' experience in High court & other courts	1	75,000/- to 85,000/- depending on experience

Sl. No	Post/Post/ Designation	Qualification		Relevant Experience		No. of Post	Contract wage per Month
		Basic	Preference	Basic	Preference		
1	Legal Shirastedar	LLB, Registered at Bar Council of Karnataka	Postgraduation LLM with English Typing and computer Knowledge	Minimum 1 year in legal research in a legal firm	1 Year experience as Paralegal	1	45000/-

The Position to be filled is a post created in the office of Special officer & Competent Authority, Financial Frauds Revenue Department Government of Karnataka vide Government Order No. RD45GRC2020(PIII) dated:25-08-2022 and is renewable year on year. It is a post on contract renewable on satisfactory performance with periodic enhancement of salary scales, **not permanent government service.**

ಸಹಿ/–
ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ
ಐ.ಎಂ.ಎ ಮತ್ತು ಇತರೆ ವಂಚನೆ ಪ್ರಕರಣಗಳು, ಬೆಂಗಳೂರು

DIPR/CP/2397/Zenkar/2023-24

ಕ್ಷೇಮ ಕುಶಲ

ಬೆಳೆಯುವ ಸಿರಿ ಮೊಳಕೆಯಲ್ಲೇ ಬಾಡದಿರಲಿ!

ಡಾ. ಕುಶ್ವಂತ್ ಕೋಳಿಬೈಲು

ಮಕ್ಕಳ ಮಾನಸಿಕ ಮತ್ತು ದೈಹಿಕ ಬೆಳವಣಿಗೆಯಲ್ಲಿ ಅವರು ಹೆತ್ತವರಿಂದ ಪಡೆದುಕೊಂಡು ಬಂದ ವಂಶವಾಹಿಗಳ ಜೊತೆಗೆ ಸೇವಿಸುವ ಆಹಾರ ಮತ್ತು ಸುತ್ತಮುತ್ತಲಿನ ಪರಿಸರ ಕೂಡ ಪ್ರಮುಖ ಪಾತ್ರ ವಹಿಸುತ್ತದೆ. ಮಾನವಜನಾಂಗವು ಪ್ರಗತಿ ಸಾಧಿಸುತ್ತಿದ್ದಂತೆ ಕಳೆದ ಕೆಲವು ದಶಕಗಳಲ್ಲಿ ಒಂದು ಬೆಳೆಯುವ ಮಗುವಿನ ಸುತ್ತಮುತ್ತವಿರುವ ಪರಿಸರವು ಬಹಳಷ್ಟು ಬದಲಾಗಿದೆ. ಹಿಂದಿನ ತಲೆಮಾರಿನಲ್ಲಿ ಅವಿಭಕ್ತ ಕುಟುಂಬದೊಳಗೆ ಬೆಳೆಯುವ ಮಗುವಿನ ಸುತ್ತಲಿದ್ದ ಪರಿಸರವು ಮಗುವಿನ ಮಾನಸಿಕ ವಿಕಸನದಲ್ಲಿ ಬಹಳ ದೊಡ್ಡ ಪಾತ್ರ ವಹಿಸುತ್ತಿತ್ತು. ಮನೆಯಲ್ಲಿ ಹತ್ತಾರು ಜನರಿದ್ದರು ಮತ್ತು ವಿವಿಧ ವಯಸ್ಸಿನ ಇತರೆ ಮಕ್ಕಳ ಜೊತೆಗೆ ಒಡನಾಡಿಕೊಂಡು ಬೆಳೆಯುವ ಅವಕಾಶ ಮಗುವಿಗಿತ್ತು. ಅಂತಹ ಪರಿಸ್ಥಿತಿಯಲ್ಲಿ ಬೆಳೆದ ಮಕ್ಕಳ ಭಾಷೆಯ ಕೌಶಲ ಮತ್ತು ಭಾವನಾತ್ಮಕ ಬುದ್ಧಿವಂತಿಕೆ ಉನ್ನತ ಮಟ್ಟದಲ್ಲಿರುತ್ತಿತ್ತು. ಬೆಳೆಯುವ ಮಗುವಿನ ಸುತ್ತಮುತ್ತ ಮಾತನಾಡುವವರು ಹೆಚ್ಚು ಜನರಿದ್ದಷ್ಟು ವೇಗವಾಗಿ ಒಂದು ಮಗು ತನ್ನ ಶಬ್ದಭಂಡಾರವನ್ನು ಹೆಚ್ಚಿಸಿಕೊಂಡು ತನ್ನ ಮಾತೃಭಾಷೆಯನ್ನು ಸುಲಭವಾಗಿ ಕಲಿತುಬಿಡುತ್ತಿತ್ತು. ತನಗಿಂತ ಸ್ವಲ್ಪ ಹಿರಿಯ ಮತ್ತು ಕಿರಿಯ ಮಕ್ಕಳ ಜೊತೆಯಲ್ಲಿ ಆಟವಾಡುವ ಮಗುವು ಆಯಾ ವಯಸ್ಸಿನಲ್ಲಿ ತಾನು ಸಾಧಿಸಬೇಕಾದ ಸಾಮಾಜಿಕ ಮೈಲುಗಲ್ಲುಗಳನ್ನು ತಲುಪಿಬಿಡುತ್ತಿತ್ತು. ಆಟಿಕೆಗಳನ್ನು ಹಂಚಿಕೊಳ್ಳುವುದು, ಗೊಂಬೆಯ ಜೊತೆಗೆ ಮಾತನಾಡುವುದು ಮತ್ತು ಹಿರಿಯರನ್ನು ಅನುಕರಣೆ ಮಾಡಲು ಪ್ರಯತ್ನಿಸುವುದು ಮುಂತಾದ ಬೆಳವಣಿಗೆಗಳನ್ನು ಒಂದು ಮಗುವು ಸೂಕ್ತ ಸಮಯದಲ್ಲಿ ಮಾಡುವುದು ಅದರ ಮಾನಸಿಕ ಬೆಳವಣಿಗೆಗೆ ಅನಿವಾರ್ಯ!

ಮಗುವಿನ ಮನೋವಿಕಾಸದಲ್ಲಿ ಸುತ್ತಮುತ್ತಲಿನ ಪರಿಸರವು ಪೂರಕವಾಗಿರದಿದ್ದರೆ ಅದು ಆ ಮಗುವಿನ ವ್ಯಕ್ತಿತ್ವದ ಮೇಲೆ ಜೀವನಪರ್ಯಂತ ವ್ಯತಿರಿಕ್ತವಾದ ಪರಿಣಾಮವನ್ನು ಬೀರುತ್ತದೆ. ಹುಟ್ಟಿದ ಸಮಯದಿಂದ ಮೊದಲ ಹದಿನೆಂಟು ತಿಂಗಳುಗಳ ತನಕ ಮಗುವಿನ ತಾಯಿ ಮತ್ತು ಮನೆಯವರು ಮಗುವಿನ ಅಳುವಿಗೆ ಸೂಕ್ತ ಸಮಯದಲ್ಲಿ ಸ್ಪಂದಿಸುತ್ತಾ ಸರಿಯಾದ ಸಮಯದಲ್ಲಿ ಹಾಲುಣಿಸುವುದು ಕೂಡ ಅತ್ಯಗತ್ಯ. ಇದರಿಂದ ಮಗುವಿನ ಮನದಲ್ಲಿ ತಾನು ಸುರಕ್ಷಿತ ವಾತಾವರಣದಲ್ಲಿ ಬೆಳೆಯುತ್ತಿದ್ದೇನೆ ಎಂಬ ಆತ್ಮವಿಶ್ವಾಸದ ಭಾವನೆಯು ಮೂಡುತ್ತದೆ ಮತ್ತು ಅದು ತನ್ನ ಸುತ್ತಮುತ್ತಲಿರುವ ಪ್ರಪಂಚ ಮತ್ತು ಜನರ ಮೇಲೆ ನಂಬಿಕೆ ಮತ್ತು ವಿಶ್ವಾಸವನ್ನು ಬೆಳೆಸಿಕೊಳ್ಳುತ್ತದೆ. ಒಂದು ವೇಳೆ ಮಗುವಿನ ಅಳುವಿಗೆ ಮತ್ತು ಅಗತ್ಯತೆಗಳಿಗೆ ಸ್ಪಂದನೆಯು ದೊರೆಯದಿದ್ದರೆ ಮಗುವು ಅಳುಕು ಮತ್ತು ಅನುಮಾನದೊಂದಿಗೆ ಬೆಳೆಯುತ್ತದೆ. ಇದು ಮುಂದೆ ಆ ಮಗುವಿನ ವ್ಯಕ್ತಿತ್ವದ ಮೇಲೆ ವ್ಯತಿರಿಕ್ತವಾದ ಪರಿಣಾಮವನ್ನು ಬೀರುತ್ತದೆ.

ಎರಡರಿಂದ ಮೂರು ವರ್ಷದ ಮಗುವು ತಾನು ಸ್ವಾವಲಂಬಿಯಾಗುವತ್ತ ಮತ್ತು ತನ್ನ ಆಹಾರ ಮತ್ತು ಆಟಿಕೆಗಳ ಆಯ್ಕೆಯಲ್ಲಿ ತನ್ನದೇ ನಿರ್ಧಾರಗಳನ್ನು ತೆಗೆದುಕೊಳ್ಳುವ ಮನಃಸ್ಥಿತಿಯನ್ನು ರೂಪಿಸಿಕೊಳ್ಳಲು ಪ್ರಯತ್ನ ಮಾಡುತ್ತದೆ. ಸುತ್ತಮುತ್ತಲಿನ ಪರಿಸರವು ಮಗುವಿಗೆ ಉತ್ತೇಜನ ನೀಡಿದರೆ ಮಗುವು ಸ್ವಂತ ನಿರ್ಧಾರ ತೆಗೆದುಕೊಳ್ಳುವ ಆತ್ಮವಿಶ್ವಾಸ ಬೆಳೆಸಿಕೊಳ್ಳುತ್ತದೆ. ಮುಂದಿನ ಕೆಲವು ವರ್ಷಗಳಲ್ಲಿ ಮಗುವು ಇತರ ಮಕ್ಕಳ ಜೊತೆಗೆ ಆಟವಾಡಲು, ಮಾತನಾಡಲು ಮತ್ತು ವಿವಿಧ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಪ್ರಾರಂಭಿಸುತ್ತದೆ. ಯಾವುದೇ ಹೊಸ ಕಲೆಯನ್ನು ಕಲಿಯುವಾಗ ಮಗುವು ಮೊದಲ ಬಾರಿಗೆ ಸೋತರೆ ಅದರ ಆತ್ಮವಿಶ್ವಾಸವನ್ನು ಕುಗ್ಗಿಸುವ ಮಾತುಗಳನ್ನು ಆಡಬಾರದು. ಮಗುವಿನ ಸುತ್ತಮುತ್ತ ಬೆದರಿಸುವ (ಬುಲ್ಲಿಯಿಂಗ್) ವಾತಾವರಣ ಇರಬಾರದು. ಸುತ್ತಲಿನ ವಾತಾವರಣವು ಉತ್ತೇಜನಕಾರಿಯಿದ್ದರೆ ಮಗುವು ಆತ್ಮವಿಶ್ವಾಸವನ್ನು ಬೆಳೆಸಿಕೊಂಡು ಹೊಸ ಮೈಲುಗಳನ್ನು ದಾಟುತ್ತ ತನ್ನ ಕೌಶಲವನ್ನು ಹೆಚ್ಚಿಸಿಕೊಳ್ಳುತ್ತದೆ. 'ಗುಮ್ಮ ಬರುತ್ತದೆ' ಎಂದು ಹೆದರಿಸುವುದು ಮತ್ತು ಮಗುವಿನ ಕಣ್ಣುಗಳನ್ನು ದಿಟ್ಟಿಸಿ ನೋಡುವಂತಹ ನಡವಳಿಕೆಗಳೂ ಮಗುವಿನ ಮಾನಸಿಕ ಬೆಳವಣಿಗೆಯ ಮೇಲೆ ವ್ಯತಿರಿಕ್ತವಾದ ಪರಿಣಾಮವನ್ನು ಬೀರಿಬಹುದು. ವಿದೇಶಗಳಲ್ಲಿ ಇಂತಹ ನಡವಳಿಕೆಗಳು ಅಪಾಯಕಾರಿ ಎಂಬ ಅರಿವಿದೆ. ಆದರೆ ನಮ್ಮ ದೇಶದ ಗ್ರಾಮೀಣ ಭಾಗಗಳಲ್ಲಿ ಇಂದಿಗೂ ಇಂತಹ ನಡವಳಿಕೆಗಳು ಚಾಲ್ತಿಯಲ್ಲಿದೆ.

ಬೆಳೆಯುವ ಮಗುವಿಗೆ ಯಾವುದೇ ನಿರ್ಧಾರಗಳನ್ನು ತೆಗೆದುಕೊಳ್ಳುವ ಧೈರ್ಯವನ್ನು ತುಂಬದೆ ಅದು ತೆಗೆದುಕೊಳ್ಳಬಹುದಾದ ಪ್ರತಿಯೊಂದು ನಿರ್ಧಾರದಲ್ಲಿಯೂ ಹೆತ್ತವರು ಮತ್ತು ಮನೆಯ ಹಿರಿಯರು ಮಧ್ಯೆ ಪ್ರವೇಶಿಸಿದರೆ ಆ ಮಗುವಿನಲ್ಲಿ ಆತ್ಮವಿಶ್ವಾಸವು ಬೆಳೆಯುವುದಿಲ್ಲ. ಅಂತಹ ಮಕ್ಕಳು ಹೊಸ ಕೌಶಲಗಳನ್ನು ಕಲಿಯುವ ಆಸಕ್ತಿಯನ್ನೂ ಕ್ರಮೇಣವಾಗಿ ಕಳೆದುಕೊಳ್ಳುತ್ತಾರೆ. ಮಗುವಿನ ಅಗತ್ಯತೆಗಳನ್ನು ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಿದರೆ ಮತ್ತು ಮಗುವಿನ ಬೆಳವಣಿಗೆಯ ಬಗ್ಗೆ ಗಮನಹರಿಸಲು ಯಾರೂ ಇಲ್ಲದಿದ್ದಾಗ ಮಗುವಿನ ಮನಸ್ಸಿನಲ್ಲಿ ಅಭದ್ರತೆ ಮತ್ತು ಅಸುರಕ್ಷತೆ ಕಾಡುತ್ತದೆ. ಅಂತಹ ಮಕ್ಕಳು ಕೂಡ ಆತಂಕದಲ್ಲಿ ಬೆಳೆಯುತ್ತವೆ. ದೈಹಿಕವಾದ ದಂಡನೆಯೂ ಮಕ್ಕಳ ಮನಸ್ಸಿನಲ್ಲಿ ಆತಂಕ ಮತ್ತು ಅಭದ್ರತೆಗೆ ಕಾರಣವಾಗುತ್ತದೆಯೆಂದು ವೈಜ್ಞಾನಿಕವಾಗಿ ದೃಢಪಟ್ಟಿದೆ. ಹೀಗಾಗಿ ಮಕ್ಕಳಿಗೆ ಹೊಡೆಯುವುದಾಗಲಿ, ಬೈಯುವುದಾಗಲಿ ಸೂಕ್ತವಲ್ಲ. ಮಗು ಮಾತು ಕೇಳದಿದ್ದಾಗ ಅಥವಾ ಅತಿಯಾದ ತುಂಟತನ ಮಾಡಿದಾಗ ಮಗುವಿಗೆ ದೃಢವಾಗಿ ಮತ್ತು ಶಾಂತವಾಗಿ ತಿಳಿಹೇಳಲು ಪ್ರಯತ್ನಿಸಬೇಕು. ಮಗುವು ಆಗಲೂ ಸುಧಾರಿಸದಿದ್ದರೆ ಮಗುವಿನ ಜೊತೆಗೆ ಮೂರು-ನಾಲ್ಕು ನಿಮಿಷಗಳ ಕಾಲ ಮಾತನಾಡದಿರುವ ಮೂಲಕ (Time out technique) ಮಗುವಿನ ತಪ್ಪು ನಡವಳಿಕೆಗೆ ನಿಮ್ಮ ಆಕ್ಷೇಪಣೆಯನ್ನು ಸಲ್ಲಿಸಬೇಕು. ಸೂಕ್ಷ್ಮ ಮನಸ್ಸುಗಳನ್ನು ಸೂಕ್ಷ್ಮ ರೀತಿಯಲ್ಲಿಯೂ ಸೂಕ್ತರೀತಿಯಲ್ಲೂ ನಿಭಾಯಿಸುವ ಕಲೆಯನ್ನು ಹೆತ್ತವರು ಮತ್ತು ಮನೆಯವರು ಕಲಿತುಕೊಂಡಾಗ ಬೆಳೆಯುವ ಸಿರಿ, ಮೊಳಕೆಯಲ್ಲಿ ಬಾಡುವುದಿಲ್ಲ!

❖

ಚಳಿಗಾಲಕ್ಕೆ ಸಿದ್ಧರಾಗಿ

ಡಾ. ಕಿರಣ್ ವಿ. ಎಸ್.

ಚಳಿಗಾಲದಲ್ಲಿ ಸಮಸ್ತ ಜೀವಪ್ರಭೇದಗಳೂ ತಮ್ಮ ಆಕ್ರಮಣಶೀಲತೆಯನ್ನು ಬದಿಗಿಟ್ಟು ವಿಶ್ರಾಂತಿಯನ್ನು ಪಡೆಯುತ್ತವೆ. ಕೆಲವು ಪ್ರಾಣಿಗಳಂತೂ 'ಹೈಬರ್ನೇಶನ್' ಎಂಬ ದೀರ್ಘ ನಿದ್ರೆಗೆ ಜಾರುತ್ತವೆ. ಆದರೆ ನಾಗರಿಕತೆಯ ಸುಳಿಗೆ ಸಿಲುಕಿರುವ ಮನುಷ್ಯರಿಗೆ ಅಂತಹ ಐಷಾರಾಮದ ಅನುಕೂಲವಿಲ್ಲ! ಚಳಿಗಾಲದಲ್ಲಿ ಚರ್ಮದ ಸಮಸ್ಯೆಗಳು, ಉಸಿರಾಟದ ತೊಂದರೆ, ಸ್ನಾಯು-ಕೀಲುಗಳ ನೋವು, ಮಾನಸಿಕ ಒತ್ತಡ ಹೆಚ್ಚಾಗುತ್ತವೆ. ಶರೀರವನ್ನು ಬೆಚ್ಚಗೆ ಇರಿಸಲು ಹೆಚ್ಚು ಕ್ಯಾಲರಿಗಳ ಆವಶ್ಯಕತೆ ಇರುತ್ತದೆ. ಇದರಿಂದ ಮಧುಮೇಹದ ನಿಯಂತ್ರಣ ಕಷ್ಟವಾಗುತ್ತದೆ. ಮೈತೂಕದಲ್ಲಿ ಏರುಪೇರಾಗುತ್ತದೆ. ಹೀಗಾಗಿ, ಆರೋಗ್ಯವನ್ನು ಕಾಪಾಡಿಕೊಳ್ಳಲು ಚಳಿಗಾಲದಲ್ಲಿ ವಿಶೇಷ ಪ್ರಯತ್ನಗಳ ಅಗತ್ಯವಿದೆ. ಈ ನಿಟ್ಟಿನಲ್ಲಿ ಕಾರ್ಯರೂಪಕ್ಕೆ ತರಬಲ್ಲ ಕೆಲವು ಸಲಹೆಗಳನ್ನು ಪರಿಗಣಿಸಬಹುದು.

ನಿಯಮಿತ ವ್ಯಾಯಾಮವನ್ನು ತಪ್ಪಿಸಬಾರದು. ಚಳಿಗಾಲದಲ್ಲಿ ಹಾಸಿಗೆ ಬಿಟ್ಟು ಏಳುವುದು ಶ್ರಮದ ಕೆಲಸ. ಬೆಚ್ಚಗೆ ಇನ್ನೊಂದಷ್ಟು ಕಾಲ ಮಲಗಿರುವ ಬಯಕೆ ಸಾಮಾನ್ಯ. ಆದರೆ ಈ ಮನೋವಾಂಛೆ ಆರೋಗ್ಯದ ಅವನತಿಗೆ ಕಾರಣವಾಗಬಾರದು. ಉಸಿರಾಟದ ಸಮಸ್ಯೆ ಇರುವವರು ಚಳಿಗಾಳಿಗೆ ಹೋಗದೆ, ಮನೆಯ ಬೆಚ್ಚಗಿನ ವಾತವರಣದಲ್ಲಿ ವ್ಯಾಯಾಮ ಮಾಡುವುದು ಸೂಕ್ತ. ಇಂತಹ ಸಮಸ್ಯೆ ಇಲ್ಲದವರು ತಮ್ಮ ನಿಯಮಿತ ವ್ಯಾಯಾಮವನ್ನು ಜಾರಿಯಿಡಬೇಕು. ಪ್ರತಿದಿನವೂ ಸುಮಾರು 30 ನಿಮಿಷಗಳ ಕಾಲ ವ್ಯಾಯಾಮ ಮಾಡುವುದು ದೇಹವನ್ನು ಮತ್ತು ಮನಸ್ಸನ್ನು ಆರೋಗ್ಯವಾಗಿಡುತ್ತದೆ. ಸೂರ್ಯನ ಬೆಳಕಿಗೆ ಮೈಯೊಡ್ಡುವುದು ಆರೋಗ್ಯಕ್ಕೆ ಬೇಕಾದ ವಿಟಮಿನ್-ಡಿ ತಯಾರಿಕೆಗೆ ನೆರವಾಗುತ್ತದೆ.

ಆಹಾರಸೇವನೆಯಲ್ಲಿ ಶಿಸ್ತನ್ನು ಅನುಸರಿಸಬೇಕು. ಶರೀರದ ಶಾಖವನ್ನು ಕಾಪಾಡಿಕೊಳ್ಳಲು ಹೆಚ್ಚಿನ ಆಹಾರದ ಅಗತ್ಯ ಇರುತ್ತದೆ. ಚಳಿಗಾಳಿಯಿಂದ ಚರ್ಮದ ಮೇಲ್ಪದರಗಳ ತೈಲಾಂಶ ಕಡಿಮೆಯಾಗುತ್ತದೆ. ಚರ್ಮದ ಅಡಿಯ ಕೊಬ್ಬಿನ ಪದರ ಹೆಚ್ಚಾದಷ್ಟೂ ದೇಹದ ತಾಪಮಾನವನ್ನು ನಿಯಂತ್ರಿಸುವುದು ಸುಲಭ. ಈ ಕಾರಣಗಳಿಗೆ ಮಿದುಳು ತೈಲಯುಕ್ತ ಆಹಾರವನ್ನು ಬಯಸಿ, ನಾಲಿಗೆಗೆ ಸಂಕೇತಗಳನ್ನು ಕಳಿಸುತ್ತದೆ. ಈ ಪ್ರಲೋಭನೆಯ ಹಿನ್ನೆಲೆಯಲ್ಲಿ ಎಣ್ಣೆಯಲ್ಲಿ ಕರಿದ ಆಹಾರಗಳನ್ನು ಸೇವಿಸುವ ಬಯಕೆಯಾಗುತ್ತದೆ. ಇದನ್ನು ನಿಯಂತ್ರಣದಲ್ಲಿ ಇಡಬೇಕು. ಆಹಾರದಲ್ಲಿ ಪ್ರೊಟೀನ್ ಅಂಶವನ್ನು ಹೆಚ್ಚಿಸುವುದು ಮಾಂಸಖಂಡಗಳನ್ನು ಸುಸ್ಥಿತಿಯಲ್ಲಿಟ್ಟು, ದೇಹದ ಉಷ್ಣತೆಯನ್ನು ಕಾಯ್ದುಕೊಳ್ಳಲು ನೆರವಾಗುತ್ತದೆ. ಇಡೀ ಧಾನ್ಯಗಳು, ಬೇಳೆ-ಕಾಳುಗಳು, ಮೊಟ್ಟೆ, ಮೀನುಗಳ ಬಿಸಿಯಾದ ತಾಜಾ ಆಹಾರ ಒಳ್ಳೆಯದು. ಚಳಿಗಾಲದ ಹಣ್ಣುಗಳು ಮತ್ತು ತರಕಾರಿಗಳ ಬಳಕೆ ಶರೀರಕ್ಕೆ ಅಗತ್ಯವಾದ ಪೋಷಕಾಂಶಗಳು ಮತ್ತು ನಾರಿನ ಅಂಶಗಳನ್ನು ನೀಡಿ, ಮಲಬದ್ಧತೆಯ ಸಮಸ್ಯೆಯನ್ನು ನಿವಾರಿಸುತ್ತವೆ. ವಿಟಮಿನ್-ಸಿ ಇರುವ ಆಹಾರಪದಾರ್ಥಗಳು ಶರೀರದ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತವೆ.

ಚಳಿಗಾಲದಲ್ಲಿ ದೇಹವು ಹೆಚ್ಚು ನಿದ್ರೆಯನ್ನು ಬಯಸುತ್ತದೆ. ಪ್ರತಿ ರಾತ್ರಿ 7-8 ಗಂಟೆಗಳ ಕಾಲದ ನಿದ್ರೆ ದೇಹಕ್ಕೆ ಒಳಿತು. ಆದರೆ ರಾತ್ರಿವೇಳೆಯಲ್ಲಿ ತಾಪಮಾನ ಕಡಿಮೆಯಾಗುವುದರಿಂದ ಉಸಿರಾಡುವ ಗಾಳಿ ತಂಪಾಗಿರುತ್ತದೆ. ಇದು ಶ್ವಾಸಸಂಬಂಧಿ ಕಾಯಿಲೆಗಳನ್ನು ಹೆಚ್ಚಿಸುತ್ತದೆ. ಅಸ್ಮಾ (ಆಸ್ತಮಾ) ಮಾದರಿಯ ಉಸಿರಾಟದ ಸಮಸ್ಯೆಗಳು ಚಳಿಗಾಲದಲ್ಲಿ ಉಲ್ಬಣಗೊಳ್ಳುತ್ತವೆ. ಶ್ವಾಸನಾಳಗಳ ಗಾತ್ರ ಕಿರಿದಾಗಿ ಕಫ ಹೊರಬರುವುದು ಕಷ್ಟವಾಗುತ್ತದೆ. ರಾತಿಯ ವೇಳೆ ಮಲಗುವ ಕೋಣೆಯನ್ನು ಬೆಚ್ಚಗೆ ಇಟ್ಟುಕೊಳ್ಳುವುದು ಸೂಕ್ತ. ಉಸಿರಾಟದ ಸಮಸ್ಯೆ ಇರುವವರು ರಾತ್ರಿ ವೇಳೆಯ ತಾಪಮಾನವನ್ನು ಅಳೆದು, ಅದು ಒಂದು ಹಂತಕ್ಕಿಂತ ಕಡಿಮೆಯಾದಾಗ 'ರೂಮ್-ಹೀಟರ್' ಅಥವಾ ಉಷ್ಣತೆಯನ್ನು ಏರಿಸಬಲ್ಲ ಹವಾನಿಯಂತ್ರಕಗಳನ್ನು ಬಳಸಬಹುದು. ನಡುರಾತ್ರಿಯಲ್ಲಿ ಉಲ್ಬಣವಾಗುವ ಅಸ್ಮಾ ಸಮಸ್ಯೆಗೆ ವೈದ್ಯರ ಸಲಹೆ ಪಡೆದು ರಾತ್ರಿ ಮಲಗುವ ಮುನ್ನ ಇನ್‌ಹೇಲರ್ ಬಳಸಬಹುದು. ಧೂಮಪಾನದ ಅಭ್ಯಾಸವನ್ನು ಶಾಶ್ವತವಾಗಿ ನಿಲ್ಲಿಸಲು ಚಳಿಗಾಲ ಬಹಳ ಸೂಕ್ತ. ದೀರ್ಘಕಾಲಿಕ ಉಸಿರಾಟದ ಸಮಸ್ಯೆ ಇರುವವರು ತಮ್ಮ ವೈದ್ಯರ ಅಭಿಪ್ರಾಯವನ್ನು ಪಡೆದು ಫ್ಲೂ-ನಿರೋಧಕ ಲಸಿಕೆಯನ್ನು ಹಾಕಿಸಿಕೊಳ್ಳಬಹುದು.

ವಾತಾವರಣದ ತಾಪಮಾನ ಕಡಿಮೆಯಾದಂತೆ ರಕ್ತನಾಳಗಳು ಸಂಕುಚಿಸುತ್ತವೆ. ಹೃದಯಾಘಾತದ ಸಾಧ್ಯತೆಗಳು ಚಳಿಗಾಲದಲ್ಲಿ ಹೆಚ್ಚು. ಹೃದಯಸಂಬಂಧಿ ಸಮಸ್ಯೆಗಳು ಇರುವವರಿಗೆ ಶರೀರಕ್ಕೆ ಹೆಚ್ಚು ಚಳಿ ತಾಕದಂತಹ ವಸ್ತ್ರಸಂಹಿತೆ ಇರಬೇಕು. ಚಳಿಯಲ್ಲಿ ಓಡಾಡುವ ಅಗತ್ಯ ಇರುವಾಗ ತುಂಬು ತೋಳಿನ ಅಂಗಿ, ಕಿವಿಗಳನ್ನು ಮುಚ್ಚುವಂತಹ ಟೋಪಿ ಅಥವಾ ಮೇಲ್ವಸ್ತ್ರ, ಬೆಚ್ಚಗಿನ ಉಣ್ಣೆಬಟ್ಟೆಗಳ ಬಳಕೆ, ಪಾದಗಳನ್ನು ಮುಚ್ಚುವಂತಹ ಪಾದರಕ್ಷೆಗಳು, ಪ್ರಯಾಣದ ವೇಳೆ ವಾಹನದ ಕಿಟಕಿಗಳನ್ನು ಮುಚ್ಚುವುದು, ಸಾಧ್ಯವಾದರೆ ವಾಹನದ ಹೀಟರ್ ಚಲಾವಣೆ ಮೊದಲಾದುವು ಸಮಸ್ಯೆಯನ್ನು ತಡೆಗಟ್ಟುವಲ್ಲಿ ಪರಿಣಾಮಕಾರಿ. ಯಾವುದೇ ಆರೋಗ್ಯಸಮಸ್ಯೆ ನಿಯಂತ್ರಣಕ್ಕೆ ಬರುತ್ತಿಲ್ಲ ಎನಿಸಿದರೆ ಕೂಡಲೇ ವೈದ್ಯರ ಸಲಹೆ ಪಡೆಯುವುದು ಅತ್ಯಗತ್ಯ. ಈ ವಿಷಯದಲ್ಲಿ ರಾಜಿಯಾಗಬಾರದು.

ಚಳಿಗಾಳಿ ಹೆಚ್ಚಾದಂತೆ ಚರ್ಮದ ಸಮಸ್ಯೆಗಳೂ ಏರುತ್ತವೆ. ಚರ್ಮ ಒಣದಾಗಿ, ಬಿರುಕುಗಳಾಗುತ್ತವೆ. ಇದರ ಮೂಲಕ ಸೋಂಕು ಸುಲಭವಾಗಿ ಒಳಗೆ ನುಗ್ಗಬಹುದು. ಚರ್ಮದ ಸ್ವಾಸ್ಥ್ಯಕ್ಕೆ ಬೆಚ್ಚಗಿನ ನೀರನ್ನು ಸಾಕಷ್ಟು ಪ್ರಮಾಣದಲ್ಲಿ ಸೇವಿಸಬೇಕು. ಚರ್ಮದಿಂದ ದೂರವಾಗಿರುವ ನೀರು ಮತ್ತು ತೈಲವನ್ನು ಮರಳಿ ನೀಡಲು ಗಾಢವಾದ ಎಣ್ಣೆ ಅಥವಾ ಜಿಡ್ಡಿನ ಅಂಶವಿರುವ ದಪ್ಪದ ಲೇಪನಗಳನ್ನು ಬಳಸಬಹುದು. ಬಿರುಕುಗಳು ಮೂಡಿದ ತುಟಿಗಳ ಮತ್ತು ಒಡೆದ ಹಿಮ್ಮಡಿಗಳ ರಕ್ಷಣೆ ಬಹಳ ಮುಖ್ಯ. ಅಂಗೈ ಮತ್ತು ಪಾದಗಳನ್ನು ನಿಯಮಿತವಾಗಿ ಮಾಲೀಷು ಮಾಡುವುದು ರಕ್ತಸಂಚಾರವನ್ನು ಹೆಚ್ಚಿಸಿ, ಚರ್ಮದ ರಕ್ಷಣೆಗೆ ನೆರವಾಗುತ್ತದೆ. ಅಂತೆಯೇ ಕೂದಲಿನ ಬುಡಕ್ಕೂ ಎಣ್ಣೆ ಮಾಲೀಷು ಮಾಡುವುದು ಕೂದಲು ಉದುರುವುದನ್ನು ತಡೆಯುತ್ತದೆ. ಮೈಗೆ ಹಿತವೆನಿಸಿದರೂ ಬಹಳ ಬಿಸಿಯಾದ ನೀರಿನಲ್ಲಿ ಸ್ನಾನ ಮಾಡುವುದು ಚರ್ಮಕ್ಕೆ ಗಾಸಿ ಮಾಡಬಹುದು ಎನ್ನುವ ಎಚ್ಚರ ಇರಬೇಕು.

ಚಳಿಗಾಲವನ್ನು ಆನಂದಿಸುವುದರ ಜೊತೆಗೆ ಜಾಗರೂಕತೆಯೂ ಮುಖ್ಯ. ಜೀವನಶೈಲಿಯಲ್ಲಿ ಮಾಡುವ ಸರಳ ಬದಲಾವಣೆಗಳು ಚಳಿಗಾಲವನ್ನು ಸುರಕ್ಷಿತವಾಗಿಸುತ್ತವೆ.

❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಅಧ್ಯಾಯ–1 ಸಮಾಂತರ ಶ್ರೇಢಿ

ಅಭ್ಯಾಸ – 1.3

11) ಒಂದು ಸಮಾಂತರ ಶ್ರೇಢಿಯ ಮೊದಲ n ಪದಗಳವರೆಗಿನ ಮೊತ್ತ $4n - n^2$ ಆದರೆ ಮೊದಲ ಪದ (S_1) ಎಷ್ಟು? ಮೊದಲ ಎರಡು ಪದಗಳ ಮೊತ್ತವೇನು? ಎರಡನೇ ಪದ ಎಷ್ಟು? ಅದೇ ರೀತಿ 3ನೇ ಪದ, 10ನೇ ಪದ ಮತ್ತು nನೇ ಪದಗಳನ್ನು ಕಂಡುಹಿಡಿಯಿರಿ.

ಪರಿಹಾರ:– ಒಂದು ಸಮಾಂತರ ಶ್ರೇಢಿಯ ಮೊದಲ n ಪದಗಳವರೆಗಿನ ಮೊತ್ತ $4n - n^2$

$S_n = 4n - n^2$

n = 1 ಹಾಕಿದಾಗ

$S_1 = 4(1) - (1)^2$

$= 4 - 1 = 3$

$a_1 = 3$

ಮೊದಲ ಪದ = 3

ಮೊದಲೆರಡು ಪದಗಳ ಮೊತ್ತ=

n = 2 ಹಾಕಿದಾಗ

$S_2 = 4(2) - (2)^2$

$= 8 - 4 = 4$

ಮೊದಲೆರಡು ಪದಗಳ ಮೊತ್ತ= 4

ಎರಡನೇ ಪದ = $S_2 - S_1 = 4 - 3 = 1$

n =3 ಹಾಕಿದಾಗ

$S_3 = 4(3) - (3)^2$

$= 12 - 9 = 3$

ಮೂರನೇ ಪದ = $a_3 = S_3 - S_2 = 3 - 4 = -1$

n = 9, 10 ಹಾಕಿದಾಗ

$S_9 = 4(9) - (9)^2 = 36 - 81 = -45$

$S_{10} = 4(10) - (10)^2 = 40 - 100 = -60$

∴ 10^{th} ಪದ = $a_{10} = S_{10} - S_9$

$= -60 - (-45)$

$= -60 + 45 = -15$

$S_{n-1} = 4(n-1)(n-1)^2$

$4n - 4 - (n^2 - 2n + 1)$

$4n - 4 - n^2 + 2n - 1 = 6n - n^2 - 5$

nನೇ ಪದ = a_n

$S_n - S_{n-1}$

$(4n - n^2)(6n - n^2 - 5)$

$= 5 - 2n$

12) 6 ರಿಂದ ಭಾಗಿಸಲ್ಪಡುವ ಮೊದಲ 40 ಧನಾತ್ಮಕ ಪೂರ್ಣಾಂಕಗಳ ಮೊತ್ತವೇನು?

ಪರಿಹಾರ: 6ರಿಂದ ಭಾಗಿಸಲ್ಪಡುವ ಮೊದಲ 40 ಧನಾತ್ಮಕ ಪೂರ್ಣಾಂಕಗಳು 6, 12, 18, 24

ಇಲ್ಲಿ

$\Rightarrow a_2 - a_1 = 12 - 6 = 6$

$\Rightarrow a_3 - a_2 = 18 - 12 = 6$

$\Rightarrow a_4 - a_3 = 24 - 18 = 6$

ಪ್ರತಿಯೊಂದು ಹಂತದಲ್ಲಿಯೂ $a_{n+1} - a_n$ ಒಂದೇ ಆಗಿದೆ ಮೇಲೆ ತಿಳಿಸಿದ ಸಂಖ್ಯೆಗಳು ಸಾಮಾನ್ಯ ವ್ಯತ್ಯಾಸ d =6 ಹೊಂದಿದ್ದು, ಸಮಾಂತರ ಶ್ರೇಢಿಗೆ ಸೇರಿದೆ.

a = 6 d = 6 n = 40

∴ ಮೊದಲ 40 ಧನಾತ್ಮಕ ಪೂರ್ಣಾಂಕಗಳ ಮೊತ್ತ

$$S_n = \frac{n}{2}[2a + (n-1)d]$$

$S_{40} =$

$$S_n = \frac{40}{2}[2xa + (40-1)d]$$

$= 20\,(2a + 39d)$

$= (20)\,(2x6 + 39 x 6)$

$= (20)\,(12 + 234)$

$= (20)\,(246)$

$= 4920$

13) ಮೊದಲ 15, 8ರ ಅಪವರ್ತ್ಯಗಳ ಮೊತ್ತವೇನು?

ಪರಿಹಾರ: ಮೊದಲ 15, 8ರ ಅಪವರ್ತ್ಯಗಳು 8, 16, 24, 32....

ಇಲ್ಲಿ

$\Rightarrow a_2 - a_1 = 16 - 8 = 8$

$\Rightarrow a_3 - a_2 = 24 - 16 = 8$

$\Rightarrow a_4 - a_3 = 32 - 24 = 8$

ಪ್ರತಿಯೊಂದು ಹಂತದಲ್ಲಿಯೂ $a_{n+1} - a_n$ ಒಂದೇ ಆಗಿದೆ ಮೇಲೆ ತಿಳಿಸಿದ ಸಂಖ್ಯೆಗಳು ಸಾಮಾನ್ಯ ವ್ಯತ್ಯಾಸ d =8 ಹೊಂದಿದ್ದು, ಸಮಾಂತರ ಶ್ರೇಢಿಗೆ ಸೇರಿದೆ.

ಇಲ್ಲಿ a = 8 d = 8 n = 15

∴ ಮೊದಲ 15, 8ರ ಅಪವರ್ತ್ಯಗಳ ಮೊತ್ತ

$$S_n = \frac{n}{2}[2a + (n-1)d]$$

$S_{15} =$

$$S_n = \frac{15}{2}[2xa + (15-1)d]$$

$$= \frac{15}{2}[2a + 14d]$$

$= 15(a + 7d)$

$= 15\,(8 + 7x8)$

$= (15)\,(8 + 56) \Rightarrow = (15)\,(64) = 960$

14) 0 ಮತ್ತು 50ರ ನಡುವಿನ ಬೆಸ ಸಂಖ್ಯೆಗಳ ಮೊತ್ತವೇನು?

ಪರಿಹಾರ: 0 ಮತ್ತು 50 ರ ನಡುವಿನ ಬೆಸ ಸಂಖ್ಯೆಗಳು 1, 3, 5, 7..........49

ಇಲ್ಲಿ

$\Rightarrow a_2 - a_1 = 3 - 1 = 2$

$\Rightarrow a_3 - a_2 = 5 - 3 = 2$

$\Rightarrow a_4 - a_3 = 7 - 5 = 2$

ಪ್ರತಿಯೊಂದು ಹಂತದಲ್ಲಿಯೂ $a_{n+1} - a_n$ ಒಂದೇ ಆಗಿದೆ ಮೇಲೆ ತಿಳಿಸಿದ ಸಂಖ್ಯೆಗಳು ಸಾಮಾನ್ಯ ವ್ಯತ್ಯಾಸ d =2 ಹೊಂದಿದ್ದು, ಸಮಾಂತರ ಶ್ರೇಢಿಗೆ ಸೇರಿದೆ.

ಇಲ್ಲಿ a = 1 d = 2 l = 49

$l = a + (n-1)d \Rightarrow 49 = 1 + (n-1)2$

$49 - 1 = (n-1)2 \Rightarrow (n-1)2 = 48$

$n - 1 = 48/2 \Rightarrow n - 1 = 24 \Rightarrow n = 24 + 1 \Rightarrow n = 25$

: 0 ಮತ್ತು 50 ರ ನಡುವಿನ ಒಟ್ಟು ಬೆಸ ಸಂಖ್ಯೆಗಳು 25

∴ 0 ಮತ್ತು 50 ರ ನಡುವಿನ ಬೆಸ ಸಂಖ್ಯೆಗಳ ಮೊತ್ತ = S_{25}

$$Sn = \frac{n}{2}(a + 1)$$

$$= \frac{25}{2}(1 + 49)$$

$$= \frac{25}{2}(50)$$

$= 25(25)$

$= 625$

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC PHYSICS

Chapter – 1

ELECTRIC CHARGES AND FIELDS

c) At a point inside a solid sphere

Let P be the point inside a solid sphere at a distance r (r < R) from the centre O.

(……Contd)

Draw a *Gaussian surface* in the form of a sphere of radius r with O as the centre.



Charge enclosed by the Gaussian surface,

q' = volume charge density ρ x volume of Gaussian sphere

$$(or)\ q' = \frac{q}{\frac{4}{3}\pi R^3} = \frac{4}{3}\pi r^3 = \frac{qr^3}{R^3}$$

According to Gauss' theorem,

$$\oint_S \vec{E}.d\vec{S} = \frac{q'}{\epsilon_0} = \frac{qr^3}{\epsilon_0 R^3}$$

(or)

$$\oint_S E\,ds\cos\theta = \frac{qr^3}{\epsilon_0 R^3} \quad ....(i)$$

Since $\vec{E}$ and $d\vec{S}$ are in the same direction,

so $\theta = 0^0$

$$\therefore \oint_S E\,ds\cos 0^0 = \frac{qr^3}{\epsilon_0 R^3}\ (or)$$

$$\oint_S E\,ds = \frac{qr^3}{\epsilon_0 R^3}$$

$$\therefore E\oint_S ds = \frac{qr^3}{\epsilon_0 R^3} \quad ....(ii)$$

(Since E is constant at every point on the Gaussian surface)

But $\oint_S ds = 4\pi r^2$

(Surface area of a spherical Gaussian surface)

$$\therefore E \times 4\pi r^2 = \frac{qr^3}{\epsilon_0 R^3}$$

$$(or)\ E = \frac{1}{4\pi\epsilon_0}\left(\frac{qr}{R^3}\right)$$

$\Rightarrow E \propto r$

Thus, electric field intensity at a point inside the solid sphere in directly proportional to the distance of the point form the centre of the sphere.

d) At the centre of the solid sphere.

Here, r = 0, therefore, from eqn.

$$E \times 4\pi r^2 = \frac{qr^3}{\epsilon_0 R^3}$$

$E = 0$

Thus, electric field intensity at the centre of a solid sphere is zero.

Variation of Electric Field Intensity (E) with the distance (r) from the centre (O) of the solid sphere.



(i) Electric field intensity at the centre of the charged solid sphere is **zero.**

(ii) As the distance(r) from the centre of solid sphere increases, electric field intensity also increases along OA (∵ E ∝ r) and becomes **maximum** at the surface of the solid sphere.

(iii) As the distance (r) further increases beyond the surface of the solid sphere, electric field intensity varies inversely with r^2 and hence decreases.

Problems:-

1. A sphere of radius 10 cm has an unknown charge. If the electric field 20 cm from the centre of the sphere is $2.0 \times 10^4\ NC^{-1}$ and points radially inward. What is the net charge on the sphere?



Soln:- Given, radius of Gaussian sphere,

r = 20 cm = 0.20 m

Electric field, $E = 2.0 \times 10^4\ NC^{-1}$

$$But\ E = \frac{1}{4\pi\epsilon_0}\frac{q}{r^2}\ (for\ a\ sphere)$$

$$(or)\ q = E \times 4\pi\epsilon_0 \times r^2$$

$$= 2.0 \times 10^4 \frac{1}{9 \times 10^9} \times (0.2)^2$$

$$= \frac{2.0 \times 0.04 \times 10^{-5}}{9}$$

$= 8.89 \times 10^{-8}\ C$

Since the field points radially inward so the charge is negative.

Hence, $q = -8.89 \times 10^{-8}\ C = -88.9\ n\ C$

2. The electric field intensity at a distance of 4 cm due to infinite line charge is $18 \times 10^4\ NC^{-1}$. Calculate the linear charge density. *(Contd)*

ಸಂಸತ್ತಿನ ಚಳಿಗಾಲದ ಅಧಿವೇಶನ ಆರಂಭ • ಬಿಧೂಢಿ ವಿರುದ್ಧ ಕ್ರಮಕ್ಕೆ ಬಿಎಸ್‌ಪಿ ಸದಸ್ಯ ಡ್ಯಾನಿಶ್ ಅಲಿ ಒತ್ತಾಯ

ನಾಟಕೀಯ ಸನ್ನಿವೇಶಗಳಿಗೆ ಕಲಾಪ ಸಾಕ್ಷಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಂಸತ್ತಿನ ಚಳಿಗಾಲದ ಅಧಿವೇಶನದ ಮೊದಲ ದಿನವಾದ ಸೋಮವಾರ ಲೋಕಸಭೆಯು ಕೆಲವು ನಾಟಕೀಯ ಸನ್ನಿವೇಶಗಳಿಗೆ ಸಾಕ್ಷಿಯಾಯಿತು. ಆಡಳಿತಾರೂಢ ಪಕ್ಷದ ಸಂಸದರು 'ತೀಸ್ರಿ ಬಾರ್ ಮೋದಿ ಸರ್ಕಾರ್' (ಮೂರನೇ ಬಾರಿ ಮೋದಿ ಸರ್ಕಾರ) ಎಂದು ಘೋಷಣೆ ಕೂಗಿದರೆ, ಬಿಎಸ್‌ಪಿ ಸಂಸದ ಡ್ಯಾನಿಷ್ ಅಲಿ ಅವರು ಸ್ಪೀಕರ್ ಪೀಠದೆದುರು ಬಂದು ನ್ಯಾಯಕ್ಕಾಗಿ ಆಗ್ರಹಿಸಿದರು.

ಲೋಕಸಭೆಯಲ್ಲಿ ಕಲಾಪ ಆರಂಭವಾಗುತ್ತಿದ್ದಂತೆ, ವಿಧಾನಸಭೆ ಚುನಾವಣೆಯಲ್ಲಿ ಪಕ್ಷ ಭರ್ಜರಿ ಗೆಲುವು ಸಾಧಿಸಿದ ಕುರಿತು ಬಿಜೆಪಿ ಸಂಸದರು ಹರ್ಷ ವ್ಯಕ್ತಪಡಿಸಿ ಕರತಾಡನ ಮಾಡಿದರು. ಅಲ್ಲದೆ 'ಬಾರ್ ಬಾರ್ ಮೋದಿ ಸರ್ಕಾರ್' (ಪದೇ ಪದೇ ಮೋದಿ ಸರ್ಕಾರ) ಎಂದು ಘೋಷಣೆ ಕೂಗಿದರು. ಎದ್ದು ನಿಂತು ಚಪ್ಪಾಳೆಯೊಂದಿಗೆ ಮೋದಿ ಅವರನ್ನು ಶ್ಲಾಘಿಸಿದರು.

ಪ್ರಶ್ನೋತ್ತರ ಅವಧಿ ಆರಂಭವಾಗುತ್ತಿದ್ದಂತೆಯೇ ಡ್ಯಾನಿಷ್ ಅಲಿ ಅವರು, ಬಿಜೆಪಿ ಸಂಸದ ರಮೇಶ್ ಬಿಧೂಢಿ ಅವರ ವಿರುದ್ಧ ನೀಡಿದ್ದ ದೂರಿನ ವಿಷಯವನ್ನು ಪ್ರಸ್ತಾಪಿಸಿದರು.

'ಬಿಧೂಢಿ ಅವರನ್ನು ಶಿಕ್ಷಿಸಿ, ಪ್ರಜಾಪ್ರಭುತ್ವ ಉಳಿಸಿ' ಎಂಬ ಘೋಷಣೆಯ ಭಿತ್ತಿಫಲಕವನ್ನು ಕುತ್ತಿಗೆಯಲ್ಲಿ ಹಾಕಿಕೊಂಡಿದ್ದರು. ಅಲಿ ಅವರು ಭಿತ್ತಿಫಲಕದೊಂದಿಗೆ ಸದನದೊಳಗೆ ಬರಲು ಅವಕಾಶ ನೀಡಬಾರದು ಎಂದು ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಸ್ಪೀಕರ್ ಅವರನ್ನು ಒತ್ತಾಯಿಸಿದರು. ಅಂತೆಯೇ ಸ್ಪೀಕರ್ ಬಿರ್ಲಾ ಅವರು, ಸದನದ ಹೊರಗೆ ಹೋಗಿ ಫಲಕ ತೆಗೆದಿಟ್ಟು ಬರಲು ಸೂಚಿಸಿದರು. ಅಲಿ ಅವರು ಇದನ್ನು ನಿರಾಕರಿಸಿ ನ್ಯಾಯಕ್ಕಾಗಿ ಒತ್ತಾಯಿಸಿದರು.

ಪ್ರಧಾನಿ ನರೇಂದ್ರ ಮೋದಿ, ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ, ಕೇಂದ್ರ ಸಚಿವರುಗಳಾದ ರಾಜನಾಥ್ ಸಿಂಗ್ ಮತ್ತು ಅಮಿತ್ ಶಾ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಈ ಘಟನೆ ಬಳಿಕ ಮೋದಿ ಅವರು ಸದನದಿಂದ ಹೊರನಡೆದರು. ತಕ್ಷಣವೇ ಕಲಾಪವನ್ನೂ ಒಂದು ತಾಸಿನವರೆಗೆ ಮುಂದೂಡಲಾಯಿತು.

ವಕೀಲ ವೃತ್ತಿಯಲ್ಲಿ ದಲ್ಲಾಳಿಗಳ ಪಾತ್ರವನ್ನು ತಗ್ಗಿಸುವ ಉದ್ದೇಶದ ವಕೀಲರ (ತಿದ್ದುಪಡಿ) ಮಸೂದೆ 2023ಕ್ಕೆ ಕೊನೆಯಲ್ಲಿ ಅಂಗೀಕಾರ ನೀಡಲಾಯಿತು.

'ಯುಸಿಸಿ ಹೇರಲು ಕೇಂದ್ರದ ಯತ್ನ': ಆಡಳಿತಾರೂಢ ಬಿಜೆಪಿಯು ಏಕರೂಪ ನಾಗರಿಕ ಸಂಹಿತೆಯನ್ನು (ಯುಸಿಸಿ) ಹೇರಲು ಯತ್ನಿಸುತ್ತಿದೆ, ಇದು ಭಿನ್ನ ಆಚರಣೆಗಳನ್ನು ನಾಶಪಡಿಸುತ್ತದೆ ಎಂದು ಡಿಎಂಕೆ ಸದಸ್ಯ ಪಿ. ವಿಲ್ಸನ್ ಅವರು ರಾಜ್ಯಸಭೆಯಲ್ಲಿ ಸೋಮವಾರ ದೂರಿದರು.

ಸ್ವೀಕಾರಾರ್ಹ ಅಲ್ಲದ ಆಚರಣೆಗಳನ್ನು ಇಲ್ಲವಾಗಿಸಲು ಸುಧಾರಣೆಗಳನ್ನು ಸಮುದಾಯಗಳ ನಡುವೆ ನಿಧಾನವಾಗಿ ತರಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರನ್ನು ಒತ್ತಾಯಿಸಿದರು.

ಶೂನ್ಯವೇಳೆಯಲ್ಲಿ ಮಾತನಾಡಿದ ಅವರು, 'ವಿವಾಹ, ವಿಚ್ಛೇದನ, ಆಸ್ತಿ ಹಕ್ಕು ಮತ್ತು ದತ್ತು ಸ್ವೀಕಾರಕ್ಕೆ ಸಂಬಂಧಿಸಿದಂತೆ ಏಕರೂಪಿ ಕಾನೂನು ತರುವ ಪ್ರಸ್ತಾವವನ್ನು ಯುಸಿಸಿ ಹೊಂದಿದೆ' ಎಂದರು.

ಸಂಸತ್ತಿನ ಚಳಿಗಾಲದ ಅಧಿವೇಶನದ ಮೊದಲ ದಿನವಾದ ಸೋಮವಾರದಂದು ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ, ಜಿತೇಂದ್ರ ಸಿಂಗ್, ಅರ್ಜುನ್ ರಾಮ್ ಮೇಘ್ವಾಲ್ ಮತ್ತು ವಿ. ಮುರುಳೀಧರನ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸ್ವಾಗತ ಕೋರಿದರು —ಪಿಟಿಐ ಚಿತ್ರ

ಹತಾಶೆ ತೋರಿಸಬೇಡಿ: ಮೋದಿ

ವಿಧಾನಸಭಾ ಚುನಾವಣೆಯಲ್ಲಿ ಆಗಿರುವ ಸೋಲಿನ ಹತಾಶೆಯನ್ನು ಸಂಸತ್ತಿನಲ್ಲಿ ತೋರಿಸಬಾರದು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ವಿರೋಧ ಪಕ್ಷಗಳಲ್ಲಿ ಮನವಿ ಮಾಡಿದ್ದಾರೆ. ನಕಾರಾತ್ಮಕತೆಯನ್ನು ಬಿಟ್ಟು ಮುಂದಕ್ಕೆ ಸಾಗಬೇಕು, ಆಗ ವಿರೋಧ ಪಕ್ಷಗಳ ಬಗ್ಗೆ ಜನರು ಹೊಂದಿರುವ ಭಾವನೆಯು ಬದಲಾಗಬಹುದು ಎಂದು ಹೇಳಿದ್ದಾರೆ.

ಸಂಸತ್ ಭವನದ ಹೊರಗಡೆ ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದ ಮೋದಿ ಅವರು, 'ಈ ಅಧಿವೇಶನವು ವಿರೋಧ ಪಕ್ಷಗಳ ಪಾಲಿಗೆ ಸುವರ್ಣಾವಕಾಶ' ಎಂದರು. 'ನಕಾರಾತ್ಮಕತೆಯನ್ನು ದೇಶವು ತಿರಸ್ಕರಿಸಿದೆ. ಅಧಿವೇಶನದ ಆರಂಭದಲ್ಲಿ ನಾವು ವಿರೋಧ ಪಕ್ಷಗಳ ಸ್ನೇಹಿತರ ಜೊತೆ ಯಾವಾಗಲೂ ಮಾತುಕತೆ ನಡೆಸುತ್ತೇವೆ, ಎಲ್ಲರ ಸಹಕಾರ ಕೋರುತ್ತೇವೆ. ಈ ಬಾರಿಯೂ ಆ ಕೆಲಸ ಮಾಡಲಾಗಿದೆ' ಎಂದರು.

'ವಿಧಾನಸಭಾ ಚುನಾವಣೆಯ ಫಲಿತಾಂಶಗಳ ಆಧಾರದಲ್ಲಿ ಮಾತನಾಡುವುದಾದರೆ, ಇದು ವಿರೋಧ ಪಕ್ಷಗಳಲ್ಲಿನ ಸ್ನೇಹಿತರಿಗೆ ಸುವರ್ಣಾವಕಾಶ. ಸೋಲಿನ ಹತಾಶೆಯನ್ನು ತೋರಿಸಿಕೊಳ್ಳುವ ಆಲೋಚನೆ ಮಾಡುವುದರ ಬದಲು, ಅವರು ಸೋಲಿನಿಂದ ಪಾಠ ಕಲಿಯಬೇಕು. ಕಳೆದ ಒಂಬತ್ತು ವರ್ಷಗಳ ನಕಾರಾತ್ಮಕತೆಯನ್ನು ಹಿಂದಕ್ಕೆ ಬಿಡಬೇಕು. ಅವರು ಧನಾತ್ಮಕ ಭಾವನೆಯಿಂದ ಮುಂದೆ ಸಾಗಿದರೆ ದೇಶವು ಅವರ ಬಗ್ಗೆ ಹೊಂದಿರುವ ಧೋರಣೆಯನ್ನು ಬದಲಿಸಿಕೊಳ್ಳುತ್ತದೆ' ಎಂದು ಹೇಳಿದರು.

ಅಂಚೆ ಕಚೇರಿ ಕಾಯ್ದೆಗೆ ತಿದ್ದುಪಡಿ

ಅಂಚೆ ಕಚೇರಿ ಮಸೂದೆ 2023ಕ್ಕೆ ರಾಜ್ಯಸಭೆಯು ಅಂಗೀಕಾರ ನೀಡಿದೆ. ಈ ಮಸೂದೆಯು 125 ವರ್ಷಗಳಷ್ಟು ಹಳೆಯದಾದ ಭಾರತೀಯ ಅಂಚೆ ಕಚೇರಿ ಕಾಯ್ದೆಯನ್ನು ರದ್ದುಗೊಳಿಸುವ, ದೇಶದಲ್ಲಿನ ಅಂಚೆ ಕಚೇರಿಗಳಿಗೆ ಸಂಬಂಧಿಸಿದ ಕಾನೂನುಗಳನ್ನು ಒಗ್ಗೂಡಿಸಿ, ತಿದ್ದುಪಡಿ ಮಾಡುವ ಉದ್ದೇಶ ಹೊಂದಿದೆ.

'ದೇಶದ ಭದ್ರತೆಯ ಹಿತದೃಷ್ಟಿಯಿಂದ, ವಿದೇಶಗಳ ಜೊತೆಗಿನ ಸ್ನೇಹ ಸಂಬಂಧದ ದೃಷ್ಟಿಯಿಂದ, ಸಾರ್ವಜನಿಕ ಸುವ್ಯವಸ್ಥೆ, ತುರ್ತು ಸಂದರ್ಭ ಅಥವಾ ಸಾರ್ವಜನಿಕರ ಸುರಕ್ಷತೆಯ ದೃಷ್ಟಿಯಿಂದ, ಯಾವುದೇ ಕಾನೂನಿನ ಉಲ್ಲಂಘನೆಯಾದ ಸಂದರ್ಭದಲ್ಲಿ ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ಯಾವುದೇ ಅಧಿಕಾರಿಗೆ ಯಾವುದೇ ವಸ್ತುವನ್ನು ಪರೀಕ್ಷಿಸುವ, ಅದನ್ನು ತೆರೆದು ನೋಡುವ ಅಥವಾ ಅದನ್ನು ವಶಕ್ಕೆ ತೆಗೆದುಕೊಳ್ಳುವ ಅಧಿಕಾರ ನೀಡಬಹುದು' ಎಂದು ಮಸೂದೆಯಲ್ಲಿ ಹೇಳಲಾಗಿದೆ.

ವಿಮಾನ ಅಪಘಾತ ಪೈಲಟ್‌ಗಳಿಬ್ಬರ ಸಾವು

ನವದೆಹಲಿ (ಪಿಟಿಐ): ಭಾರತೀಯ ವಾಯುಪಡೆಯ (ಐಎಎಫ್) ತರಬೇತಿ ವಿಮಾನವೊಂದು ಸೋಮವಾರ ಬೆಳಿಗ್ಗೆ ಹೈದರಾಬಾದ್ ಬಳಿ ಅಪಘಾತಕ್ಕೀಡಾಗಿದ್ದು, ಇಬ್ಬರು ಪೈಲಟ್‌ಗಳು ಸಾವಿಗೀಡಾಗಿದ್ದಾರೆ.

ಸ್ವಿಸ್ ಮೂಲದ ತರಬೇತಿ ಜೆಟ್‌ನ ಮೊದಲ ಅಪಘಾತ ಇದಾಗಿದ್ದು, ಘಟನೆಯ ಬಗ್ಗೆ ತನಿಖೆ ನಡೆಸಲು ಐಎಎಫ್ ಆದೇಶಿಸಿದೆ. ತೆಲಂಗಾಣದ ಮೆದಕ್ ಜಿಲ್ಲೆಯ ತೂಪ್ರಾನ್ ಮಂಡಲ್ ಬಳಿ ಈ ಅಪಘಾತ ನಡೆದಿದೆ. 'ಹೈದರಾಬಾದ್‌ನಲ್ಲಿರುವ ಏರ್‌ಫೋರ್ಸ್ ಅಕಾಡೆಮಿಯಿಂದ ಸೋಮವಾರ ಬೆಳಿಗ್ಗೆ ವಾಡಿಕೆಯಂತೆ ತರಬೇತಿ ಹಾರಾಟಕ್ಕೆ ತೆರಳಿದ್ದ ಪಿಲಾಟಸ್ ಪಿಸಿ 7 ಎಂಕೆ 2 ತರಬೇತಿ ವಿಮಾನ ಅಪಘಾತಕ್ಕೀಡಾಗಿದ್ದರಿಂದ ಇಬ್ಬರು ಪೈಲಟ್‌ಗಳು ಮೃತಪಟ್ಟಿದ್ದಾರೆ' ಎಂದು ಐಎಎಫ್‌ನ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಇಂಧನ ತೆರಿಗೆ: 6 ತಿಂಗಳಲ್ಲಿ ₹3.41 ಲಕ್ಷ ಕೋಟಿ ಸಂಗ್ರಹ

ನವದೆಹಲಿ: ಪೆಟ್ರೋಲ್ ಹಾಗೂ ಡೀಸೆಲ್ ಮೇಲಿನ ತೆರಿಗೆ ಮೂಲಕ ಪ್ರಸಕ್ತ ಆರ್ಥಿಕ ಸಾಲಿನ ಮೊದಲಾರ್ಧದ ಆರು ತಿಂಗಳ ಅವಧಿಯಲ್ಲಿ ₹3.41 ಲಕ್ಷ ಕೋಟಿ ವರಮಾನ ಸಂಗ್ರಹವಾಗಿದೆ.

ಇದರಲ್ಲಿ ಕೇಂದ್ರ ಸರ್ಕಾರದ ಖಜಾನೆಗೆ ₹1.85 ಲಕ್ಷ ಕೋಟಿ ಆದಾಯ ಲಭಿಸಿದರೆ, ರಾಜ್ಯಗಳು ₹1.55 ಲಕ್ಷ ಕೋಟಿ ತೆರಿಗೆ ವರಮಾನ ಸಂಗ್ರಹಿಸಿವೆ ಎಂದು ಕೇಂದ್ರ ಪೆಟ್ರೋಲಿಯಂ ಹಾಗೂ ನೈಸರ್ಗಿಕ ಅನಿಲ ಸಚಿವಾಲಯ ಹೇಳಿದೆ.

ಮೇಲ್ಮನೆಯಲ್ಲಿ ಸೋಮವಾರ ರಾಜ್ಯಸಭಾ ಸದಸ್ಯ ಜಾನ್ ಬ್ರಿಟಾಸ್ ಅವರು ಕೇಳಿದ ಪ್ರಶ್ನೆಗೆ ಕೇಂದ್ರ ಪೆಟ್ರೋಲಿಯಂ ಖಾತೆಯ ರಾಜ್ಯ ಸಚಿವ ರಾಮೇಶ್ವರ ತೇಲಿ ನೀಡಿರುವ ಉತ್ತರದಲ್ಲಿ, ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ಕೇಂದ್ರವು ಪ್ರತಿವರ್ಷ ಸೆಸ್ ಹೆಚ್ಚಿಸುತ್ತಿರುವುದು ಬಹಿರಂಗವಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಕಚ್ಚಾ ತೈಲದ ಮೇಲೆ ವಿಧಿಸುವ ಸೆಸ್ ಗಣನೀಯವಾಗಿ ಏರಿಕೆಯಾಗಿದೆ. 2020–21ರಲ್ಲಿ ₹10,676 ಕೋಟಿ ಇದ್ದ ಸೆಸ್ ಮೊತ್ತವು 2022–23ನೇ ಸಾಲಿನಲ್ಲಿ ₹21,455 ಕೋಟಿಗೆ ಹೆಚ್ಚಳವಾಗಿದೆ ಎಂದು ಸಚಿವ ರಾಮೇಶ್ವರ ತೇಲಿ ಅವರು, ರಾಜ್ಯಸಭೆಗೆ ಮಾಹಿತಿ ನೀಡಿದ್ದಾರೆ.

ಸರ್ಕಾರಕ್ಕೆ ಬಂದ ಆದಾಯ ಎಷ್ಟು?: 2023ರ ಮಾರ್ಚ್ ಅಂತ್ಯದ ಆರ್ಥಿಕ ವರ್ಷದಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ತೆರಿಗೆಯ ಮೂಲಕ ₹7.48 ಲಕ್ಷ ಕೋಟಿ ವರಮಾನ ಸಂಗ್ರಹವಾಗಿದೆ. ಇದರಲ್ಲಿ ಕೇಂದ್ರಕ್ಕೆ ₹4.28 ಲಕ್ಷ ಕೋಟಿ ಲಭಿಸಿದರೆ, ರಾಜ್ಯಗಳ ಬೊಕ್ಕಸಕ್ಕೆ ₹3.20 ಲಕ್ಷ ಕೋಟಿ ಆದಾಯ ಬಂದಿದೆ.

ಮಣಿಪುರದಲ್ಲಿ ಗುಂಡಿನ ಚಕಮಕಿ 13 ಜನರ ಸಾವು

ಇಂಫಾಲ (ಪಿಟಿಐ): 'ಮಣಿಪುರದ ತೆಂಗ್ನೋಪಾಲ್ ಜಿಲ್ಲೆಯಲ್ಲಿ ಸೋಮವಾರ ಎರಡು ಬಂಡುಕೋರ ಗುಂಪುಗಳ ಮಧ್ಯೆ ಗುಂಡಿನ ಚಕಮಕಿ ನಡೆದಿದ್ದು, ಕನಿಷ್ಠ 13 ಮಂದಿ ಸಾವಿಗೀಡಾಗಿದ್ದಾರೆ' ಎಂದು ಅಧಿಕಾರಿಗಳು ಹೇಳಿದ್ದಾರೆ.

'ಲೀಥು ಎಂಬ ಗ್ರಾಮದಲ್ಲಿ ಈ ಘಟನೆ ನಡೆದಿದೆ.

ಮಣಿಪುರದಿಂದ ಮ್ಯಾನ್ಮಾರ್‌ಗೆ ತೆರಳುತ್ತಿದ್ದ ಬಂಡುಕೋರರ ಗುಂಪೊಂದರ ಮೇಲೆ ಈ ಪ್ರದೇಶದಲ್ಲಿ ಪ್ರಬಲವಾಗಿರುವ ಮತ್ತೊಂದು ಗುಂಪು ಹೊಂಚುಹಾಕಿ ದಾಳಿ ನಡೆಸಿದೆ. ಘಟನಾ ಸ್ಥಳಕ್ಕೆ ಧಾವಿಸಿದ ಭದ್ರತಾ ಪಡೆಗಳು ತೆರಳಿ ಪರಿಶೀಲನೆ ನಡೆಸಿವೆ. ಮೃತ ಬಂಡುಕೋರರ ಗುರುತನ್ನು ಪತ್ತೆ ಮಾಡಬೇಕಿದ್ದು, ಅವರು ಸ್ಥಳೀಯ ನಾಗರಿಕರಂತೆ ತೋರುತ್ತಿಲ್ಲ' ಎಂದು ಮಾಹಿತಿ ನೀಡಿದ್ದಾರೆ.

ತೆಂಗ್ನೋಪಾಲ್ ಜಿಲ್ಲೆಯು ಮ್ಯಾನ್ಮಾರ್‌ನೊಂದಿಗೆ ಗಡಿ ಹಂಚಿಕೊಂಡಿದೆ.

ರಾಜ್ಯಸಭೆ: ಛಡ್ಡಾ ಅಮಾನತು ರದ್ದು

ಪ್ರಜಾವಾಣಿ ವಾರ್ತೆ

ರಾಘವ್ ಛಡ್ಡಾ

ನವದೆಹಲಿ: ಎಎಪಿಯ ರಾಘವ್ ಛಡ್ಡಾ ಅವರಿಗೆ ರಾಜ್ಯಸಭೆಯಿಂದ ಅಮಾನತು ಶಿಕ್ಷೆ ವಿಧಿಸಿದ್ದನ್ನು ಕೊನೆಗೊಳಿಸುವ ನಿರ್ಣಯವನ್ನು ಸದನವು ಕೈಗೊಂಡಿತು. ಇದರ ಪರಿಣಾಮವಾಗಿ, ಅವರ ಅಮಾನತು ಕೊನೆಗೊಂಡಿದೆ.

ಛಡ್ಡಾ ಅವರು ಮಾಧ್ಯಮಗಳಿಗೆ ತಪ್ಪು ಮಾಹಿತಿ ನೀಡುವ ಹಾಗೂ ಆಯ್ಕೆ ಸಮಿತಿಯೊಂದಕ್ಕೆ ಕೆಲವು ಸದಸ್ಯರ ಹೆಸರನ್ನು ಅವರ ಒಪ್ಪಿಗೆ ಇಲ್ಲದೆಯೇ ನೀಡುವ ತಪ್ಪೆಸಗಿದ್ದಾರೆ ಎಂದು ನಿರ್ಣಯದಲ್ಲಿ ಹೇಳಲಾಗಿದೆ.

ರಾಜ್ಯಸಭೆಯ ಹಕ್ಕುಬಾಧ್ಯತಾ ಸಮಿತಿಯು ಛಡ್ಡಾ ಅವರಿಗೆ ಸಂಬಂಧಿಸಿದಂತೆ ಸಲ್ಲಿಸಿದ ವರದಿಯನ್ನು ಸಿಪಿಎಂ ಸದಸ್ಯ ಇ. ಕರೀಂ ಅವರು ಸದನದಲ್ಲಿ ಮಂಡಿಸಿದರು. ನಂತರ ಬಿಜೆಪಿಯ ಜಿ.ವಿ.ಎಲ್. ನರಸಿಂಹ ರೆಡ್ಡಿ ಅವರು, ಈಗಿನ ಶಿಕ್ಷೆಯು ಸಾಕು, ಅಮಾನತನ್ನು ಕೊನೆಗೊಳಿಸಬಹುದು ಎಂಬ ಗೊತ್ತುವಳಿಯನ್ನು ಮಂಡಿಸಿದರು.

ಅಮಾನತು ರದ್ದುಗೊಳ್ಳುತ್ತಿದ್ದಂತೆಯೇ ಛಡ್ಡಾ ಅವರು ಅಂಚೆ ಕಚೇರಿ ಮಸೂದೆ–2023 ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಸೂದೆಯನ್ನು ವಿರೋಧಿಸಿದರು.

ಛಡ್ಡಾ ಅವರನ್ನು ಆಗಸ್ಟ್ 11ರಂದು ರಾಜ್ಯಸಭೆಯಿಂದ ಅಮಾನತು ಮಾಡಲಾಗಿತ್ತು. ನಂತರ ಅವರು ಇದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.

'ಸುಪ್ರೀಂಕೋರ್ಟ್ ಮಧ್ಯಪ್ರವೇಶದ ಬಳಿಕ ನನ್ನ ಅಮಾನತನ್ನು ರದ್ದುಗೊಳಿಸಲಾಗಿದೆ. ಕನಿಷ್ಠ 115 ದಿನಗಳವರೆಗೆ ನಾನು ಅಮಾನತುಗೊಂಡಿದ್ದೆ. ಅಮಾನತು ಕೊನೆಗೊಂಡಿರುವುದಕ್ಕೆ ಸಂತೋಷವಾಗಿದೆ' ಎಂದು ಛಡ್ಡಾ ಹೇಳಿದರು.

ಬಿಕ್ಕಟ್ಟು ಕೊನೆಗೊಳಿಸಲು ಸಭಾಪತಿ ಅವರನ್ನು ಸಂಪರ್ಕಿಸಲು ಸುಪ್ರೀಂಕೋರ್ಟ್ ಛಡ್ಡಾ ಅವರಿಗೆ ಸೂಚಿಸಿತ್ತು.

ರಸ್ತೆ ಅಪಘಾತ: ನಗದು ರಹಿತ ಚಿಕಿತ್ಸೆ

ನವದೆಹಲಿ (ಪಿಟಿಐ): ರಸ್ತೆ ಅಪಘಾತಕ್ಕೆ ತುತ್ತಾಗುವವರಿಗೆ ನಗದು ರಹಿತವಾಗಿ ಚಿಕಿತ್ಸೆ ಒದಗಿಸುವ ಸೌಲಭ್ಯವನ್ನು ಇನ್ನು ಮೂರರಿಂದ ನಾಲ್ಕು ತಿಂಗಳಲ್ಲಿ ದೇಶದಾದ್ಯಂತ ಜಾರಿಗೆ ತರುವ ಆಲೋಚನೆಯನ್ನು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಹೊಂದಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ರಸ್ತೆ ಸಂಚಾರ ಶಿಕ್ಷಣ ಸಂಸ್ಥೆ (ಐಆರ್‌ಟಿಇ) ಆಯೋಜಿಸಿದ್ದ ಕಾರ್ಯಕ್ರಮವೊಂದರ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಕಾರ್ಯದರ್ಶಿ ಅನುರಾಗ್ ಜೈನ್ ಅವರು, 'ಭಾರತದಲ್ಲಿ ರಸ್ತೆ ಅಪಘಾತಗಳಲ್ಲಿ ಸಾಯುವವರ ಸಂಖ್ಯೆಯು ವಿಶ್ವದಲ್ಲಿಯೇ ಅತಿಹೆಚ್ಚು' ಎಂದು ಹೇಳಿದರು.

'ಅಪಘಾತದಲ್ಲಿ ಗಾಯಗೊಂಡವರಿಗೆ ಉಚಿತವಾಗಿ ಮತ್ತು ನಗದು ರಹಿತವಾಗಿ ಚಿಕಿತ್ಸೆ ಒದಗಿಸುವುದು ತಿದ್ದುಪಡಿ ಆಗಿರುವ ಮೋಟಾರು ವಾಹನ ಕಾಯ್ದೆ 2019ರ ಭಾಗ. ಇದನ್ನು ಕೆಲವು ರಾಜ್ಯಗಳು ಅನುಷ್ಠಾನಕ್ಕೆ ತಂದಿವೆ. ಆದರೆ ಈಗ ರಸ್ತೆ ಸಾರಿಗೆ ಸಚಿವಾಲಯವು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಜೊತೆ ಸೇರಿ ದೇಶದಾದ್ಯಂತ ಅನುಷ್ಠಾನಕ್ಕೆ ತರುತ್ತಿದೆ' ಎಂದು ಜೈನ್ ತಿಳಿಸಿದರು.

ಮಿಚಾಂಗ್ ಅಬ್ಬರ, 5 ಸಾವು

ಒಂದನೇ ಪುಟದಿಂದ...

ಚೆನ್ನೈನಲ್ಲಿ ಹಲವು ಪ್ರದೇಶಗಳು ಜಲಾವೃತಗೊಂಡಿವೆ.ರಕ್ಷಣೆಗಾಗಿ ಜನರು ಸ್ಥಳೀಯ ಸಿಬ್ಬಂದಿ ಮತ್ತು ಕಾರ್ಯಕರ್ತರ ನೆರವಿಗಾಗಿ ಹಾತೊರೆಯುತ್ತಿದ್ದಾರೆ. ಮಳೆಯಿಂದಾಗಿ ಚೆನ್ನೈ ಅಕ್ಷರಶಃ ರಾಜ್ಯದ ಇತರೆ ಭಾಗದಿಂದ ಸಂಪರ್ಕವನ್ನು ಕಡಿದುಕೊಂಡಿದೆ. ಕರ್ನಾಟಕ, ಆಂಧ್ರಪ್ರದೇಶಕ್ಕೆ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿಯೂ ಪೂರ್ತಿ ಮುಳುಗಡೆಯಾಗಿದೆ.

ರಜೆ ಘೋಷಣೆ: ತಮಿಳುನಾಡು ಸರ್ಕಾರ, ಚೆನ್ನೈ ಹಾಗೂ ತಿರುವಲ್ಲೂರು, ಕಾಂಚೀಪುರಂ, ಚೆಂಗಲಪಟ್ಟು ಜಿಲ್ಲೆಗಳಲ್ಲಿ ಡಿ.5ರಂದು ರಜೆಘೋಷಿಸಿದೆ. ಅಗ್ನಿಶಾಮಕ ಸೇವೆ, ಆಸ್ಪತ್ರೆ, ಪೆಟ್ರೋಲ್ ಬಂಕ್, ಹೋಟೆಲ್‌ಗಳು ಎಂದಿನಂತೆ ಕಾರ್ಯನಿರ್ವಹಿಸಲಿವೆ ಎಂದು ತಿಳಿಸಿದೆ. ಸಾರ್ವಜನಿಕರು ಅನಗತ್ಯವಾಗಿ ಹೊರಗೆ ಬರಬಾರದು, ಸುರಕ್ಷತೆ ದೃಷ್ಟಿಯಿಂದ ಮನೆಯಲ್ಲಿಯೇ ಉಳಿಯಬೇಕು ಎಂದು ಮನವಿ ಮಾಡಿದೆ. ಚೆನ್ನೈ ಸೇರಿ ನಾಲ್ಕು ಜಿಲ್ಲೆಗಳಲ್ಲಿ ಸೋಮವಾರ ಶಾಲೆ–ಕಾಲೇಜು, ಸರ್ಕಾರಿ ಕಚೇರಿಗಳು ಬಹುತೇಕ ಕಾರ್ಯನಿರ್ವಹಿಸಲಿಲ್ಲ.

ಚೆನ್ನೈ ವಿಮಾನನಿಲ್ದಾಣ ರನ್‌ವೇ ಜಲಾವೃತಗೊಂಡಿದ್ದರಿಂದ ಅಧಿಕಾರಿಗಳು ಬೆಳಿಗ್ಗೆ 11 ಗಂಟೆವರೆಗೆ 70 ವಿಮಾನಗಳ ಯಾನ ರದ್ದುಪಡಿಸಿದರು. ರೈಲು, ಬಸ್ಸುಗಳ ಸಂಚಾರವೂ ವಿಳಂಬ ಅಥವಾ ರದ್ದತಿ ಕಾರಣದಿಂದಾಗಿ ವ್ಯತ್ಯಯಗೊಂಡಿತು.ಕೊಯಮತ್ತೂರು, ಮೈಸೂರು ಕಡೆಗೆ ತೆರಳಬೇಕಿದ್ದ ರೈಲುಗಳ ಸಂಚಾರ ರದ್ದಾಗಿದೆ ಎಂದು ರೈಲ್ವೆ ಇಲಾಖೆಯು ತಿಳಿಸಿದೆ. ಅಲ್ಲದೆ, ಚೆನ್ನೈನಲ್ಲಿ 14 ಸಬ್‌ವೇಗಳು ಜಲಾವೃತವಾಗಿದ್ದು,ಸಂಚಾರ ಸ್ಥಗಿತವಾಗಿತ್ತು.

'ಆಂಧ್ರಕ್ಕೆ ಮಿಚಾಂಗ್': ಚಂಡಮಾರುತ ಮಂಗಳವಾರ ಬೆಳಿಗ್ಗೆ ಆಂಧ್ರದ ಕರಾವಳಿಗೆ ಅಪ್ಪಳಿಸುವ ಸಂಭವವಿದೆ. ಇದರ ವೇಗ ಗಂಟೆಗೆ 90–100 ಕಿ.ಮೀ ಇರಲಿದ್ದು, ಕ್ರಮೇಣ 110 ಕಿ.ಮೀ.ಗೆ ಏರಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಆದರೆ, ಆಂಧ್ರದ ವಿವಿಧೆಡೆ ಸೋಮವಾರವೇ ಭಾರಿ ಮಳೆಯಾಗಿದೆ. 'ಮುಂದಿನ 24 ಗಂಟೆಗಳ ಅವಧಿಯಲ್ಲಿ 200 ಮಿ.ಮೀವರೆಗೂ ಮಳೆಯಾಗಬಹುದು ಎಂದು ಹವಾಮಾನ ಇಲಾಖೆ ಎಚ್ಚರಿಸಿದೆ' ಎಂದು ರಾಯಿಟರ್ಸ್ ವರದಿ ಮಾಡಿದೆ.

ಚೆನ್ನೈನಲ್ಲಿ ಜಲಾವೃತಗೊಂಡ ರಸ್ತೆಯಲ್ಲೇ ಸಾಗುತ್ತಿರುವ ನಾಗರಿಕರು –ಪಿಟಿಐ ಚಿತ್ರ

30ಕ್ಕೂ ಹೆಚ್ಚು ವಿಮಾನ ಮಾರ್ಗ ಬದಲು

ದೇವನಹಳ್ಳಿ (ಬೆಂಗಳೂರು ಗ್ರಾಮಾಂತರ ಜಿಲ್ಲೆ): ಮಿಚಾಂಗ್ ಚಂಡಮಾರುತದಿಂದಾಗಿ ಚೆನ್ನೈ ಹಾಗೂ ಸುತ್ತಮುತ್ತ ಭಾರಿ ಮಳೆ ಸುರಿಯುತ್ತಿರುವುದರಿಂದ ಚೆನ್ನೈ, ತಿರುಪತಿ ಹಾಗೂ ವಿಶಾಖಪಟ್ಟಣದಲ್ಲಿ ಇಳಿಯಬೇಕಿದ್ದ 30ಕ್ಕೂ ಹೆಚ್ಚು ವಿಮಾನಗಳ ಮಾರ್ಗಗಳನ್ನು ಬದಲಾಯಿಸಲಾಗಿದೆ.

ಚೆನ್ನೈನಲ್ಲಿ ಇಳಿಯಬೇಕಿದ್ದ ದೇಶೀಯ ಹಾಗೂ ಅಂತರರಾಷ್ಟ್ರೀಯ ವಿಮಾನಗಳು ಸೋಮವಾರ ಇಲ್ಲಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದಿವೆ. ಇದರಿಂದ ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರ ದಟ್ಟಣೆ ಉಂಟಾಗಿತ್ತು.

ತೇಲಿದ ಕಾರುಗಳು, ರಸ್ತೆಗೆ ದೋಣಿಗಳು

ಮಳೆಯಿಂದಾಗಿ ರಸ್ತೆಗಳಲ್ಲಿ ಮಂಡಿಯುದ್ದಕ್ಕೂ ನೀರು ನಿಂತಿದ್ದು, ಕೆಲವೆಡೆ ಪ್ರವಾಹ ಪರಿಸ್ಥಿತಿಯೇ ಎದುರಾಯಿತು. ವಸತಿ ಸಮುಚ್ಚಯದ ನಿವಾಸಿಗಳು ಕೆಳಗೆ ನಿಲುಗಡೆ ಮಾಡಿದ್ದ ಸಾಲು ಕಾರುಗಳು ಪ್ರವಾಹದ ಸೆಳೆತಕ್ಕೆ ಸಿಕ್ಕು ತೇಲುತ್ತಿರುವ ವಿಡಿಯೊ ಜಾಲತಾಣದಲ್ಲಿ ಸಾಕಷ್ಟು ಹಂಚಿಕೆಯಾಯಿತು.

ರಸ್ತೆಗೆ ಬಂದ ಮೊಸಳೆ: ಆತಂಕ

ಚೆನ್ನೈ: ಹೊರವಲಯಯದ ಪೆರುಂಗುಳತ್ತೂರ್ ವಲಯದಲ್ಲಿ ಭಾರಿ ಮಳೆ ನಡುವೆಯೇ ರಸ್ತೆಯನ್ನು ಮೊಸಳೆ ದಾಟುತ್ತಿರುವುದು ಕಂಡು ಬಂದಿದ್ದು, ಈ ಕುರಿತ ವಿಡಿಯೊ ಸಾಕಷ್ಟು ಹಂಚಿಕೆಯಾಗಿದೆ.

ಈ ಬಗ್ಗೆ 'ಎಕ್ಸ್'ನಲ್ಲಿ ಸಂದೇಶ ಪೋಸ್ಟ್ ಮಾಡಿರುವ ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಸುಪ್ರಿಯಾ ಸಾಹು, 'ಚೆನ್ನೈನ ಜಲ ಮೂಲಗಳಲ್ಲಿ ಕೆಲ ಮೊಸಳೆಗಳಿವೆ. ನೀರಿನ ರಭಸದಿಂದಾಗಿ ಮೊಸಳೆ ರಸ್ತೆಗೆ ಬಂದಿರಬಹುದು' ಎಂದಿದ್ದಾರೆ.

ಬಿಜೆಪಿ ಮುಖಂಡನ ಮೇಲೆ ಹಲ್ಲೆ: ದೂರು

ಒಂದನೇ ಪುಟದಿಂದ...



ಪೃಥ್ವಿ ಸಿಂಗ್

ಘಟನೆ ವಿವರಣೆ ನೀಡಿದ ಪೃಥ್ವಿ ಸಿಂಗ್ ಪುತ್ರ ಜಸ್ವೀರ್ ಸಿಂಗ್, 'ಸಂಜೆ 4.50ರ ಸುಮಾರಿಗೆ ನಮ್ಮ ಮನೆಗೆ ಬಂದ ಚನ್ನರಾಜ ಹಟ್ಟಿಹೊಳಿ ಅವರ ಆಪ್ತ ಸಹಾಯಕರು ಮತ್ತು ಅಂಗರಕ್ಷಕರು ತಂದೆಯನ್ನು ಹೊರಗೆ ಕರೆದೊಯ್ದರು. ಆಗ ಫೋನ್ ಮಾಡಿ ಚನ್ನರಾಜ ಬೈಯುತ್ತಿದ್ದರು. 'ಹೊರಗೆ ಬಾ' ಎಂದು ಧಮ್ಕಿ ಹಾಕಿದರು. ತಂದೆಯವರು ಹೊರಬರುತ್ತಿದ್ದಂತೆ ಹಲ್ಲೆ ಮಾಡಲಾಗಿದೆ' ಎಂದರು.

ವಿಡಿಯೊ ಹೇಳಿಕೆ ಬಿಡುಗಡೆ ಮಾಡಿರುವ ಪೃಥ್ವಿ ಸಿಂಗ್, 'ನನ್ನ ಮನೆಗೆ ಬಂದ ಚನ್ನರಾಜ ಹಟ್ಟಿಹೊಳಿ ಬೆಂಬಲಿಗರು ಚಾಕುವಿನಿಂದ ಹಲ್ಲೆ ಮಾಡಿದ್ದಾರೆ' ಎಂದು ಆರೋಪಿಸಿದ್ದಾರೆ.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಮಹಾನಗರ ಘಟಕದ ಅಧ್ಯಕ್ಷ ಅನಿಲ ಬೆನಕೆ, ಗ್ರಾಮೀಣ ಜಿಲ್ಲಾ ಘಟಕದ ಅಧ್ಯಕ್ಷ ಸಂಜಯ ಪಾಟೀಲ, ವಿಧಾನ ಪರಿಷತ್ ಮಾಜಿ ಸದಸ್ಯ ಮಹಾಂತೇಶ ಕವಟಗಿಮಠ, ಎಂ.ಬಿ.ಝಿರಲಿ ಭೇಟಿ ನೀಡಿದರು.

> **ಪೃಥ್ವಿಸಿಂಗ್ ಮೇಲೆ ನಡೆದಿರುವ ಹಲ್ಲೆ ಘಟನೆಗೂ ನಮಗೂ ಸಂಬಂಧವಿಲ್ಲ. ತನಿಖೆ ನಡೆಸಿ ಈ ಕೃತ್ಯದ ಹಿಂದೆ ಯಾರಿದ್ದಾರೆ ಎಂಬುದು ಪತ್ತೆ ಮಾಡಬೇಕು.**
> **ಲಕ್ಷ್ಮಿ ಹೆಬ್ಬಾಳಕರ,** ಸಚಿವೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

> **ಆರೋಪಿಗಳನ್ನು ರಾತ್ರಿಯೇ ಬಂಧಿಸಬೇಕು. ಇಲ್ಲದಿದ್ದರೆ ರಾಜ್ಯದಾದ್ಯಂತ ಬಿಜೆಪಿಯ ಪ್ರತಿಯೊಬ್ಬ ಕಾರ್ಯಕರ್ತ ಬೀದಿಗೆ ಇಳಿಯಬೇಕಾಗುತ್ತದೆ ಬಿ.ವೈ. ವಿಜಯೇಂದ್ರ,**
> ಅಧ್ಯಕ್ಷ, ಬಿಜೆಪಿ ರಾಜ್ಯ ಘಟಕ

ನೆತನ್ಯಾಹು ವಿರುದ್ಧ ವಿಚಾರಣೆ ಆರಂಭ

ಜೆರುಸಲೆಂ (ಎಎಫ್‌ಪಿ/ಎಪಿ): ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರ ವಿರುದ್ಧದ ಭ್ರಷ್ಟಾಚಾರ ಪ್ರಕರಣದ ವಿಚಾರಣೆ ಸೋಮವಾರದಿಂದ ಅರಂಭವಾಗಿದೆ.

ಹಮಾಸ್ ಉಗ್ರರು ಅ.7ರಂದು ಇಸ್ರೇಲ್ ಮೇಲೆ ದಾಳಿ ನಡೆಸಿದ ಬಳಿಕ ನೆತನ್ಯಾಹು ಅವರ ವಿರುದ್ಧದ ವಿಚಾರಣೆಯನ್ನು ತಡೆಹಿಡಿಯಲಾಗಿತ್ತು.

ಇಸ್ರೇಲ್‌ನ ಲಿಕುಡ್ ಪಾರ್ಟಿಯ ವರಿಷ್ಠರೂ ಆಗಿರುವ ನೆತನ್ಯಾಹು ವಿರುದ್ಧ ಲಂಚ, ವಂಚನೆ ಮತ್ತು ನಂಬಿಕೆ ದ್ರೋಹದ ಆರೋಪಗಳಿವೆ. ಅದರೆ ಅವುಗಳನ್ನು ನೆತನ್ಯಾಹು ನಿರಾಕರಿಸಿದ್ದಾರೆ.

ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ
2ನೇ ಮಹಡಿ, ಚಾಲುಕ್ಯ ಬ್ಲಾಕ್, ಕನ್ನಡ ಭವನ, ಜೆ. ಸಿ. ರಸ್ತೆ, ಬೆಂಗಳೂರು-560 002.
ಕರ್ನಾಟಕ ರಾಜ್ಯ, ಭಾರತ ದೂರವಾಣಿ: 080-22111147.
E-mail kanakaresearchcentre@gmail.com

ಇ-ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಂಗಸಂಸ್ಥೆಯಾದ ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ವತಿಯಿಂದ ಕರ್ನಾಟಕ ತತ್ವಪದಕಾರರ ಸಮಗ್ರ ಸಾಹಿತ್ಯ ಸಂಪುಟಗಳ ಮುದ್ರಣಕ್ಕಾಗಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಲಾಗಿದ್ದು, ಟೆಂಡರ್ ಅಂದಾಜು **ಮೊತ್ತ ರೂ.25.00ಲಕ್ಷ (ರೂಪಾಯಿ ಇಪ್ಪತ್ತೈದು ಲಕ್ಷ ಮಾತ್ರ)** ಗಳಾಗಿದ್ದು ಇಎಂಡಿ **ಮೊತ್ತ ರೂ.62,500/- (ರೂಪಾಯಿ ಅರವತ್ತೆರಡು ಸಾವಿರದ ಐದುನೂರು ಮಾತ್ರ)** ಗಳಾಗಿದೆ. ಟೆಂಡರ್ ನಿಬಂಧನೆ, ಷರತ್ತು ಹಾಗೂ ಟೆಂಡರ್ ದಾಖಲೆಗಳಿಗಾಗಿ ಇ- ಪ್ರೊಕ್ಯೂರ್‌ಮೆಂಟ್ ಜಾಲತಾಣ **https://kppp.karnataka.gov.in** ಗೆ ಭೇಟಿ ನೀಡಲು ಕೋರಲಾಗಿದೆ. ಟೆಂಡರ್ ಡಾಕ್ಯುಮೆಂಟ್ ಅನ್ನು ಅಂತರ್ಜಾಲದಲ್ಲಿ ಅಪ್‌ಲೋಡ್ ಮಾಡಲು **ದಿನಾಂಕ: 19-12-2023** ಕೊನೆಯ ದಿನಾಂಕವಾಗಿರುತ್ತದೆ.

ಸಹಿ/- ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಬೆಂಗಳೂರು

DIPR/CP/RO2392/AAPL/2023-24

ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಕಾರ್ಯಪಾಲಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಮೊದಲನೇ ಮಹಡಿ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು – 560070.

ಸಂಖ್ಯೆ:ಕಾಅ/ಗ್ರಾಕುನೀ&ನೈವಿ/ಬೆಂನ/ತಾಂಸ/ಟೆಂಡರ್/14/2023-24 ದಿನಾಂಕ: 04-12-2023

ಅಲ್ಪಾವಧಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಟೆಂಡರ್ ಪ್ರಕಟಣೆ

2022-23 ನೇ ಸಾಲಿನ JJM ಲೆಕ್ಕಶೀರ್ಷಿಕೆ ಅನುದಾನದಡಿ ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಮೂಲಕ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: **12-12-2023 ರಂದು ಸಂಜೆ 4.00 ಗಂಟೆಯವರೆಗೆ** ಸಲ್ಲಿಸಬಹುದಾಗಿರುತ್ತದೆ.

ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್: **https://kppp.karnataka.gov.in** ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/- ಕಾರ್ಯಪಾಲಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.

ವಾಸಾಸಂಇ/ವಾ.ಪ್ರ/2391/ಅಡ್ವರ್ಟೋರ್/2023-24

ನಗರಸಭಾ ಕಾರ್ಯಾಲಯ, ಹಿರಿಯೂರು–577598
ಫೋನ್ ನಂ. 08193–263220, ಸಹಾಯವಾಣಿ: 08193–260020,
E-mail:tmchiriyur@yahoo.in Webist: hiriyurcity.gov.in

ನಂ.ನಸಹಿ/ತಾ.ವಿ/15ನೇ ಹ.ಕಾ/ಟೆಂಡರ್:ಸಿಆರ್–05/2023–24 ದಿ:02.12.2023

ಟೆಂಡರ್ ಪ್ರಕಟಣೆ

(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–1 ಮತ್ತು ಕೆ.ಡಬ್ಲ್ಯೂ–2 ರ ನಿಬಂಧನೆಗಳಿಗೊಳಪಟ್ಟು ಟೆಂಡರ್ ಆಹ್ವಾನಿಸಲಾಗಿದೆ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಹಿರಿಯೂರು ನಗರಸಭೆ ವಾಪ್ತಿಯಲ್ಲಿ 2023–24ನೇ ಸಾಲಿನ 15ನೇ ಹಣಕಾಸು ಅನುದಾನದಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://kppp.karantaka.gov.in ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ:16/12/2023 ರ ಸಂಜೆ 5:00ರ ವರೆಗೆ, ಬಿಡ್‌ಗಳನ್ನು ತೆರೆಯುವ ದಿನಾಂಕ:18/12/2023ರ ಬೆಳಿಗ್ಗೆ 10:30ರ ನಂತರ.

ಕ್ರ. ಸಂ	ಕಾಮಗಾರಿಗಳ ಇಂಡೆಂಟ್ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ ಮೊತ್ತ (ರೂ.ಗಳಲ್ಲಿ)
1	DMA/2023-24/OW/WORK INDENT8096	12.50	26390.00
2	DMA/2023-24/OW/WORK INDENT8102	23.20	50000.00
3	DMA/2023-24/OW/WORK INDENT8116	35.15	59240.00
4	DMA/2023-24/OW/WORK INDENT8118 (SC)	24.84	25000.00
5	DMA/2023-24/OW/WORK INDENT8120 (ST)	15.80	16670.00
6	DMA/2023-24/RD/WORK INDENT8121	14.91	31505.00

ಹೆಚ್ಚಿನ ವಿವರಗಳಿಗಾಗಿ ನಗರಸಭೆಯ ತಾಂತ್ರಿಕ ವಿಭಾಗದಲ್ಲಿ ಅಭಿಯಂತರರನ್ನು ಸಂಪರ್ಕಿಸಬಹುದು

ಸಹಿ/- ಆಡಳಿತಾಧಿಕಾರಿಗಳು, ನಗರಸಭೆ, ಹಿರಿಯೂರು. ಸಹಿ/- ಪೌರಾಯುಕ್ತರು, ನಗರಸಭೆ, ಹಿರಿಯೂರು.

DIPR/CTA/KSMCA/372/2023-24

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ
7ನೇ ಮಹಡಿ, 1ನೇ ಹಂತ, ಬಹುಮಹಡಿ ಕಟ್ಟಡ,
ಬೆಂಗಳೂರು–560001, ದೂರವಾಣಿ ಸಂಖ್ಯೆ: 080–22353849,
ಇ–ಮೇಲ್: desadmkar@gmail.com

ಟೆಂಡರ್ ಪ್ರಕಟಣೆ ಸಂಖ್ಯೆ: ಆಸಾಂನಿ/13/ಲೆಕ್ಕ–ವಾಹನ/2023–24
ವಾರ್ಷಿಕ ದರ ಒಪ್ಪಂದದ ಮೂಲಕ ಮಾಸಿಕ ಬಾಡಿಗೆ ಆಧಾರದ ಮೇಲೆ ಹವಾನಿಯಂತ್ರಿತ ವಾಹನವನ್ನು ಒದಗಿಸಲು ಕರೆಯಲಾದ ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ–ಲಕೋಟೆ ಪದ್ಧತಿ)

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಕೇಂದ್ರ ಕಛೇರಿ, ಬೆಂಗಳೂರು ಇಲ್ಲಿಗೆ ವಾರ್ಷಿಕ ದರ ಒಪ್ಪಂದದ ಮೂಲಕ ಮಾಸಿಕ ಬಾಡಿಗೆ ಆಧಾರದ ಮೇಲೆ 08 ಸಂಖ್ಯೆ ಹವಾನಿಯಂತ್ರಿತ ವಾಹನವನ್ನು ಒದಗಿಸಲು ಹೆಸರಾಂತ ಮತ್ತು ನೊಂದಾಯಿತ ಪ್ರಯಾಣ ಏಜೆನ್ಸಿಗಳಿಂದ ಅಥವಾ ಸರಬರಾಜುದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ. ಟೆಂಡರ್ ವಿವರಗಳು ಕೆ.ಪಿ.ಪಿ.ಪಿ ಪೋರ್ಟಲ್ **kppp.karnataka.gov.in** ನಲ್ಲಿ ಲಭ್ಯವಿದ್ದು, ಟೆಂಡರ್‌ಗಳನ್ನು ವಿದ್ಯುನ್ಮಾನವಾಗಿ **kppp.karnataka.gov.in** ಇಲ್ಲಿ **ದಿನಾಂಕ: 15.12.2023 ರಂದು ಸಂಜೆ 5.30**ಗೊಳಗಾಗಿ ಸಲ್ಲಿಸಬಹುದು.

ಸಹಿ/–
ನಿರ್ದೇಶಕರು

DIPR/CP/RO/2393/2023-24

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ದಾವಣಗೆರೆ,
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ, ದಾವಣಗೆರೆ ಜಿಲ್ಲೆ, ಎಸ್. ಎಸ್.ಹೈಟೆಕ್ ಆಸ್ಪತ್ರೆ ಹತ್ತಿರ, ಶ್ರೀರಾಮನಗರ ರಸ್ತೆ, ಎನ್.ಸಿ.ಸಿ ಕ್ಯಾಂಪ್ ಪಕ್ಕ ದಾವಣಗೆರೆ–577005
ದೂರವಾಣಿ : 08192 237833 email : dhodavangere@gmail.com

ಸಂಖ್ಯೆ:ಜಿಆದಾ/ಸಿಶಾ(1)/ಗು.ವೈ/54/2023–24 ದಿನಾಂಕ : 02–12–2023

: ಅಧಿಸೂಚನೆ :

ದಾವಣಗೆರೆ ಜಿಲ್ಲೆಯ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇರುವ ತಜ್ಞ ವೈದ್ಯರು ಮತ್ತು ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳನ್ನು ಗುತ್ತಿಗೆ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ನೇಮಕಾತಿ ಮಾಡಲು ದಿನಾಂಕ : **16–12–2023**ರಂದು ಬೆಳಗ್ಗೆ **11:00** ಗಂಟೆಗೆ ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ, ಜಿಲ್ಲಾಧಿಕಾರಿಗಳ ಕಛೇರಿ, ದಾವಣಗೆರೆ ಇಲ್ಲಿ ಅರ್ಹ ಅಭ್ಯರ್ಥಿಗಳಿಂದ ನೇರ ಸಂದರ್ಶನ (Walk in Interview) ಕರೆಯಲಾಗಿದೆ. ಪ್ರಯುಕ್ತ ಅಭ್ಯರ್ಥಿಗಳು ದಿನಾಂಕ : **15–12–2023** ರಂದು ಬೆಳಗ್ಗೆ **10:30** ರಿಂದ ಮಧ್ಯಾಹ್ನ **01–30**ರೊಳಗೆ ಈ ಕಛೇರಿ (ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ, ದಾವಣಗೆರೆ)ಗೆ ಹಾಜರಾಗಿ ನಿಗದಿತ ಅರ್ಜಿ ನಮೂನೆಯನ್ನು ಪಡೆದು ವಿದ್ಯಾರ್ಹತೆ ಮತ್ತು ಮೀಸಲಾತಿಯ ಅರ್ಹತಾ ಮೂಲ ದಾಖಲೆಗಳ ಪರಿಶೀಲನೆ ಮಾಡಿಸಿ, ಅರ್ಹತಾ ದಾಖಲೆಗಳ ಒಂದು ಸೆಟ್ ದೃಢೀಕೃತ ಜೆ–ರಾಕ್ಸ್ ಪ್ರತಿಗಳೊಂದಿಗೆ ಅರ್ಜಿ ಸಲ್ಲಿಸಲು ಸೂಚಿಸಿದೆ. ಮಾಹಿತಿಯನ್ನು ಈ ಕಛೇರಿ ಸೂಚನಾ ಫಲಕದಲ್ಲಿ ಪಡೆಯುವುದು ಮತ್ತು ಹೆಚ್ಚಿನ ಮಾಹಿತಿಯನ್ನು ಮಾನ್ಯ ಜಿಲ್ಲಾಧಿಕಾರಿಗಳ ಅಂತರ್ಜಾಲವನ್ನು ಸಂಪರ್ಕಿಸಲು ಸೂಚಿಸಿದೆ. **(davanagere.nic.in)**

: ಹುದ್ದೆ ಖಾಲಿ ಇರುವ ಸ್ಥಳಗಳು :

ಕ್ರಸಂ	ಹುದ್ದೆ ವಿವರ	ಖಾಲಿ ಇರುವ ಹುದ್ದೆಗಳು
01.	ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ	05
02.	ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ (ಸ್ನಾತಕೋತ್ತರ ವ್ಯಾಸಂಗಕ್ಕೆ ತೆರಳಲಿರುವ ಹುದ್ದೆಗಳಿಗೆ)	05
03.	ಮಕ್ಕಳ ತಜ್ಞರು	01
04.	ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರು	01
05.	ಅರವಳಿಕೆ ತಜ್ಞರು	02

: ನಿಭಂದನೆಗಳು :

1) ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು ಮತ್ತು ತಜ್ಞ ವೈದ್ಯರ ಸೇವೆಯನ್ನು ಸಕ್ರಮಗೊಳಿಸುವ ಬೇಡಿಕೆಗೆ ಆಸ್ಪದ ಇರುವುದಿಲ್ಲ.
2) ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಖಾಯಂ ವೈದ್ಯರನ್ನು ನೇಮಿಸಿಕೊಳ್ಳುವವರೆಗೆ, ವರ್ಗಾವಣೆ ಮುಖಾಂತರ ಖಾಯಂ ವೈದ್ಯರು ಸ್ಥಳ ಆಯ್ಕೆ ಮಾಡಿಕೊಂಡಲ್ಲಿ ಅಥವಾ ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ಒಂದು ವರ್ಷದ ಅವಧಿಗೆ ಇವುಗಳಲ್ಲಿ ಯಾವುದು ಮೊದಲೋ ಆ ಅವಧಿಯವರೆಗೆ ಗುತ್ತಿಗೆ ವೈದ್ಯರಾಗಿ ನೇಮಿಸಿಕೊಳ್ಳಲಾಗುವುದು.
3) ಅನಧಿಕೃತ ಗೈರು ಹಾಜರಿ, ಕರ್ತವ್ಯ ನಿರ್ಲಕ್ಷ್ಯತೆ ಮತ್ತು ದುರ್ನಡತೆ ಕಂಡುಬಂದಲ್ಲಿ ಯಾವುದೇ ಮುನ್ಸೂಚನೆ ನೀಡದೆ ಸೇವೆಯಿಂದ ವಜಾಗೊಳಿಸಲಾಗುವುದು.
4) ಸರ್ಕಾರಿ ಸೇವೆಯಿಂದ ವಯೋನಿವೃತ್ತಿ ಹೊಂದಿರುವಂತ ವೈದ್ಯರನ್ನೂ ಸಹ 65 ವರ್ಷ ವಯಸ್ಸು ಅಥವಾ 3 ವರ್ಷ ಗುತ್ತಿಗೆ ಸೇವೆ ಇವುಗಳಲ್ಲಿ ಯಾವುದು ಮೊದಲೋ ಆ ಅವಧಿಯವರೆಗೆ ಮಾತ್ರ ಗುತ್ತಿಗೆ ವೈದ್ಯರಾಗಿ ನೇಮಿಸಿಕೊಳ್ಳಲಾಗುವುದು.
5) ಒಂದು ವೇಳೆ ಒಂದು ವರ್ಷ ಕಡ್ಡಾಯ ಗ್ರಾಮೀಣ ವೈದ್ಯರು ಸ್ಥಳ ಆಯ್ಕೆ ಮಾಡಿಕೊಂಡಲ್ಲಿ ಗುತ್ತಿಗೆ ವೈದ್ಯರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಲಾಗುವುದು.

ಅರ್ಹತೆ : ಅಂಗೀಕೃತ ವಿಶ್ವವಿದ್ಯಾಲಯದಿಂದ ಎಂ.ಬಿ.ಬಿ.ಎಸ್ ಪದವಿ ಪಡೆದಿರಬೇಕು ಹಾಗೂ ತಜ್ಞ ವೈದ್ಯರು ಸಂಬಂಧಿಸಿದ ವಿಷಯದಲ್ಲಿ ಪದವಿ ಪಡೆದಿರಬೇಕು ಮತ್ತು ಕಡ್ಡಾಯವಾಗಿ ನೊಂದಣಿ ಪ್ರಾಧಿಕಾರದಲ್ಲಿ ನೊಂದಣಿ ಆಗಿರಬೇಕು.

ಗರಿಷ್ಠ ವಯೋಮಿತಿ :
ಸಾಮಾನ್ಯ ಅಭ್ಯರ್ಥಿ : 42 ವರ್ಷ
ಪ.ಜಾತಿ/ಪ.ಪಂ/ಪ್ರ–1 : 47 ವರ್ಷ
ಪ್ರ.ವ–11 ಎ/ 11ಬಿ : 45 ವರ್ಷ
ಪ್ರ.ವ–111ಎ/ 111ಬಿ : 45 ವರ್ಷ

ಸೂಚನೆ : ಮೀಸಲಾತಿ ಅಭ್ಯರ್ಥಿಗಳು ಸಂದರ್ಶನಕ್ಕೆ ಹಾಜರಾಗದಿದ್ದಲ್ಲಿ ಸಾಮಾನ್ಯ ಅಭ್ಯರ್ಥಿಗಳನ್ನು ಆಯ್ಕೆಗೆ ಪರಿಗಣಿಸಲಾಗುವುದು.

ಸಹಿ/–
ಜಿಲ್ಲಾ ಆರೋಗ್ಯ ಮತ್ತು ಕು.ಕ.ಅಧಿಕಾರಿಗಳು,
ದಾವಣಗೆರೆ ಜಿಲ್ಲೆ, ದಾವಣಗೆರೆ,

ವಾ.ಸಾ.ಇ./ದಾವಣಗೆರೆ/393/2023–24/ದೇಶಪಾಂಡೆಪಬ್ಲಿಸಿಟಿ

ಗೌರವಾನ್ವಿತ ನ್ಯಾಯಮೂರ್ತಿ ಹೆಚ್.ಎನ್. ನಾಗಮೋಹನ ದಾಸ್ ವಿಚಾರಣಾ ಆಯೋಗ
3ನೇ ಮಹಡಿ, ಲೋಕೋಪಯೋಗಿ ಇಲಾಖೆ ಮುಖ್ಯ ಕಟ್ಟಡ, ಕೆ.ಆರ್. ವೃತ್ತ, ಬೆಂಗಳೂರು–560001.

ಅಧಿಸೂಚನೆ ಪ್ರಕಟಣೆಗೆ ಸಾರ್ವಜನಿಕ ಅಹವಾಲು ಸಲ್ಲಿಸಲು ಅವಧಿ ವಿಸ್ತರಣೆ

ಘನ ಕರ್ನಾಟಕ ಸರ್ಕಾರವು ಗೌರವಾನ್ವಿತ ನ್ಯಾಯಮೂರ್ತಿ ಹೆಚ್.ಎನ್. ನಾಗಮೋಹನ ದಾಸ್ ವಿಚಾರಣಾ ಆಯೋಗಕ್ಕೆ ಸಂಬಂಧಿಸಿದಂತೆ ಅಧಿಸೂಚನೆಗಳ ಸಂಖ್ಯೆ: ಓಇ 98 ಪಿಸಿಇ 2023, ದಿನಾಂಕ: 25.08.2023 ಮತ್ತು 06.10.2023ರಲ್ಲಿ ಅಧಿಸೂಚನೆ ಹೊರಡಿಸಿರುತ್ತದೆ.

ಈ ಹಿನ್ನೆಲೆಯಲ್ಲಿ ಮಾನ್ಯ ವಿಚಾರಣಾ ಆಯೋಗವು ದಿನಾಂಕ: 14.11.2023ರಂದು ಇದೇ ದಿನಪತ್ರಿಕೆಯಲ್ಲಿ ಪ್ರಕಟವಾದ ಅಧಿಸೂಚನೆಯಲ್ಲಿ ಸಾರ್ವಜನಿಕರು ಯಾವುದೇ ರೀತಿಯ ಸಲಹೆ / ಆಕ್ಷೇಪಣೆ / ಅಹವಾಲು / ಹೇಳಿಕೆಗಳು / ದಾಖಲೆಗಳು ಇದ್ದಲ್ಲಿ ಕ್ರಮವಾಗಿ ದಿನಾಂಕ: 29.11.2023 ರೊಳಗಾಗಿ ಕಛೇರಿಯ ವೇಳೆಯಲ್ಲಿ (ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 5.30 ರವರೆಗೆ) ಈ ಕೆಳಸಹಿದಾರರ ಕಛೇರಿಗೆ ಖುದ್ದಾಗಿ ಅಥವಾ ಅಂಚೆಯ ಮೂಲಕ ಅಥವಾ ಇ–ಮೇಲ್ ಮೂಲಕ ಸಲ್ಲಿಸಲು ಕೋರಲಾಗಿತ್ತು.

ಮುಂದುವರಿದು, ವಿಚಾರಣೆ ಪ್ರಕ್ರಿಯೆಯಲ್ಲಿ ಸಾರ್ವಜನಿಕರ ಗರಿಷ್ಠ ಭಾಗವಹಿಸುವಿಕೆಗೆ ಅವಕಾಶ ಕಲ್ಪಿಸಲು ಮೇಲ್ಕಂಡ ಅವಧಿಯನ್ನು ದಿನಾಂಕ: 30.12.2023 ರವರೆಗೆ ವಿಸ್ತರಿಸಲಾಗಿದೆಯೆಂದು ಈ ಮೂಲಕ ತಿಳಿಸಲಾಗಿದೆ.

ಸಹಿ/– ಸದಸ್ಯ ಕಾರ್ಯದರ್ಶಿಗಳು
ಗೌರವಾನ್ವಿತ ನ್ಯಾಯಮೂರ್ತಿ ಹೆಚ್.ಎನ್. ನಾಗಮೋಹನ ದಾಸ್ ವಿಚಾರಣಾ ಆಯೋಗ
3ನೇ ಮಹಡಿ, ಲೋಕೋಪಯೋಗಿ ಇಲಾಖೆ ಮುಖ್ಯ ಕಟ್ಟಡ, ಕೆ.ಆರ್. ವೃತ್ತ, ಬೆಂಗಳೂರು–560001.
ಇಮೇಲ್: **justicenmdasinquirycommission@gmail.com**

DIPR/CP/YC/2397/2023-24

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

❦ ಸುಭಾಷಿತ ❦

ಎಲ್ಲ ಧರ್ಮಗಳಲ್ಲೂ ಪ್ರೀತಿ ಇರುತ್ತದೆ, ಅಷ್ಟಾದರೂ ಪ್ರೀತಿಗೆ ಧರ್ಮ ಎಂಬುದಿಲ್ಲ.

-ರೂಮಿ

ಬೀದಿಬದಿ ವ್ಯಾಪಾರಿಗಳ ಎತ್ತಂಗಡಿ ಬಿಬಿಎಂಪಿ ಕ್ರಮ ಕಾನೂನುಬಾಹಿರ

ನಗರವೊಂದರ ಸೌಂದರ್ಯವನ್ನು ಹೆಚ್ಚಿಸುವ ಯೋಜನೆಗಳನ್ನು ಕೈಗೆತ್ತಿಕೊಂಡಾಗ, ಅಲ್ಲಿನ ಬಡ ವರ್ಗದವರು ಸಾಮಾನ್ಯವಾಗಿ ಒಂದಿಷ್ಟು ತೊಂದರೆಗಳನ್ನು ಅನುಭವಿಸುತ್ತಾರೆ. ಅದರಲ್ಲೂ ಮುಖ್ಯವಾಗಿ, ಬೀದಿಬದಿ ವ್ಯಾಪಾರಿಗಳು ತೊಂದರೆಗೆ ಒಳಗಾಗುತ್ತಾರೆ. ಆದರೆ ದೊಡ್ಡವರನ್ನು ಮುಟ್ಟುವ ಗೊಡವೆಗೆ ಅಧಿಕಾರಸ್ಥರು ಹೋಗುವುದಿಲ್ಲ. ಬೆಂಗಳೂರಿನಲ್ಲಿಯೂ ಇದೇ ಆಗುತ್ತಿದೆ. ನಗರದ ಸೌಂದರ್ಯವನ್ನು ಹೆಚ್ಚಿಸುವ ಕಾರ್ಯದ ಭಾಗವಾಗಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು (ಬಿಬಿಎಂಪಿ) ಬೀದಿಬದಿ ವ್ಯಾಪಾರಿಗಳನ್ನು ಇದ್ದಕ್ಕಿದ್ದಂತೆ ತೆರವು ಮಾಡುತ್ತಿದೆ. ಈ ಪ್ರಕ್ರಿಯೆಯಲ್ಲಿ ಕಾನೂನು ಸರಿಯಾಗಿ ಪಾಲನೆ ಆಗುತ್ತಿಲ್ಲ. ಈಚಿನ ದಿನಗಳಲ್ಲಿ ಈ ರೀತಿ ತೆರವು ಮಾಡುವುದು ಹೆಚ್ಚಾಗಿದೆ. ಇದು ಈ ನಗರದ ಒಳಗೊಳ್ಳುವಿಕೆಯ ಕುರಿತಾಗಿ ಹಲವು ಪ್ರಶ್ನೆಗಳನ್ನು ಮೂಡಿಸಿದೆ. ದಶಕಗಳಿಂದಲೂ ಈ ನಗರದ ಅವಿಭಾಜ್ಯ ಅಂಗವಾಗಿರುವ ವ್ಯಾಪಾರಿಗಳನ್ನು ಮಹದೇವಪುರ, ಜಯನಗರ, ಬನಶಂಕರಿ ಮತ್ತು ಇತರ ಹಲವು ಪ್ರದೇಶಗಳಿಂದ ಎತ್ತಂಗಡಿ ಮಾಡಲಾಗಿದೆ. ಆದರೆ ಪಾದಚಾರಿ ಮಾರ್ಗಗಳನ್ನು ಒತ್ತುವರಿ ಮಾಡಿಕೊಂಡಿರುವ ಅಂಗಡಿ ಮಾಲೀಕರು ಮತ್ತು ಕೆಲವು ಬಿಲ್ಡರ್‌ಗಳ ವಿರುದ್ಧ ಕ್ರಮ ಕೈಗೊಂಡ ನಿದರ್ಶನಗಳು ವಿರಳ. ಕೋವಿಡ್ ಸಾಂಕ್ರಾಮಿಕ ತೀವ್ರಗೊಂಡಿದ್ದ ಸಂದರ್ಭದಲ್ಲಿ ಬೀದಿಬದಿ ವ್ಯಾಪಾರಿಗಳಿಗೆ ವ್ಯಾಪಾರವೇ ಇಲ್ಲದಂತಾಗಿತ್ತು. ಅವರು ಇನ್ನೂ ಪೂರ್ತಿಯಾಗಿ ಚೇತರಿಸಿಕೊಂಡಿಲ್ಲ. ಅವರ ಜೀವನವು ಇನ್ನೂ ಹಳಿಗೆ ಬಂದಿಲ್ಲ. ಬೀದಿಬದಿ ವ್ಯಾಪಾರಿಗಳನ್ನು ಅಲ್ಲಿಂದ ಎಬ್ಬಿಸುವ ಅಭಿಯಾನ ಶುರುಮಾಡುವ ಮೊದಲು ಬಿಬಿಎಂಪಿ ನೋಟಿಸ್ ಸಹ ನೀಡಿಲ್ಲ. ಪರವಾನಗಿ ಹೊಂದಿರುವ ಬೀದಿಬದಿ ವ್ಯಾಪಾರಿಗಳನ್ನು ಕೂಡ ಗುರಿಯಾಗಿಸಿಕೊಳ್ಳಲಾಗಿದೆ.

ಬಿಬಿಎಂಪಿ ಕ್ರಮವು ಬೀದಿಬದಿ ವ್ಯಾಪಾರಿಗಳಿಗೆ ಸಂಬಂಧಿಸಿದ ಕಾಯ್ದೆಯ ಆಶಯಗಳಿಗೆ ವಿರುದ್ಧವಾಗಿದೆ

ಬಿಬಿಎಂಪಿ ಕೃತ್ಯವು ಸಂಪೂರ್ಣವಾಗಿ ಕಾನೂನುಬಾಹಿರ. ಏಕೆಂದರೆ ಇದು, ಬೀದಿಬದಿ ವ್ಯಾಪಾರಿಗಳ (ಜೀವನೋಪಾಯದ ರಕ್ಷಣೆ ಮತ್ತು ಬೀದಿಬದಿ ವ್ಯಾಪಾರದ ನಿಯಂತ್ರಣ) ಕಾಯ್ದೆ-2014ರ ಉಲ್ಲಂಘನೆ. ನಗರದ ಬೀದಿಬದಿ ವ್ಯಾಪಾರಿಗಳ ಹಕ್ಕುಗಳನ್ನು ರಕ್ಷಿಸುವ ಹಾಗೂ ಬೀದಿಬದಿ ವ್ಯಾಪಾರ ಚಟುವಟಿಕೆಗಳನ್ನು ಕಾನೂನಿನ ಚೌಕಟ್ಟಿಗೆ ತರುವ ಉದ್ದೇಶದಿಂದ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಈ ಕಾಯ್ದೆಯು ಪ್ರತಿ ನಗರ ಸ್ಥಳೀಯ ಸಂಸ್ಥೆ ಕೂಡ ವ್ಯಾಪಾರ ಸಮಿತಿಯನ್ನು ರಚಿಸಬೇಕು ಎಂದು ಹೇಳುತ್ತದೆ. ಈ ಸಮಿತಿಯು ಸಮೀಕ್ಷೆ ಕೈಗೊಂಡು, ಬೀದಿಬದಿ ವ್ಯಾಪಾರಿಗಳನ್ನು ಗುರುತಿಸುವ ಕೆಲಸ ಮಾಡಬೇಕು. ಬೀದಿಬದಿ ವ್ಯಾಪಾರಿಗಳ ಸಂಖ್ಯೆಯು ವಾರ್ಡ್, ಪಟ್ಟಣ ಅಥವಾ ನಗರದ ಒಟ್ಟು ಜನಸಂಖ್ಯೆಯ ಶೇಕಡ 2.5ರಷ್ಟಕ್ಕಿಂತ ಹೆಚ್ಚಿರಬಾರದು ಎಂದು ಕಾಯ್ದೆ ಹೇಳುತ್ತದೆ. ವಲಯವೊಂದರಲ್ಲಿ ನಿಗದಿತ ಪ್ರಮಾಣಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಬೀದಿಬದಿ ವ್ಯಾಪಾರಿಗಳು ಇದ್ದರೆ, ಸಮಿತಿಯು ಹೆಚ್ಚುವರಿ ಬೀದಿಬದಿ ವ್ಯಾಪಾರಿಗಳಿಗೆ ಲಾಟರಿ ಮೂಲಕ ಅಕ್ಕಪಕ್ಕದ ವಲಯಗಳಲ್ಲಿ ನೆಲೆ ಕಲ್ಪಿಸಿಕೊಡಬೇಕು. ಸಮೀಕ್ಷೆಯು ಪೂರ್ಣಗೊಳ್ಳುವ ಮೊದಲು ಯಾರನ್ನೂ ತೆರವು ಮಾಡುವಂತೆ ಇಲ್ಲ.

ಒಮ್ಮೆ ಸಮೀಕ್ಷೆ ನಡೆದ ನಂತರದಲ್ಲಿ, ಕನಿಷ್ಠ ಐದು ವರ್ಷಕ್ಕೆ ಒಮ್ಮೆಯಾದರೂ ಸಮೀಕ್ಷೆ ನಡೆಸಬೇಕು. ಸಮಿತಿಯು ಕೈಗೊಂಡ ತೀರ್ಮಾನವು ಯಾರಿಗಾದರೂ ತೃಪ್ತಿ ತರದಿದ್ದಲ್ಲಿ, ಅದಕ್ಕೆ ಮೇಲ್ಮನವಿ ಸಲ್ಲಿಸುವ ವ್ಯವಸ್ಥೆಯ ಬಗ್ಗೆ ಕೂಡ ಕಾಯ್ದೆಯು ಹೇಳಿದೆ. ಮೇಲ್ಮನವಿ ಸಲ್ಲಿಸಿದ ವ್ಯಕ್ತಿಯ ವಾದವನ್ನು ಆಲಿಸದೆ, ಆತನ ಅರ್ಜಿಯನ್ನು ಇತ್ಯರ್ಥಪಡಿಸಲು ಅವಕಾಶವಿಲ್ಲ. ಬೀದಿಬದಿ ವ್ಯಾಪಾರಿಗಳು ಮತ್ತು ಇತರರು ಸಾರ್ವಜನಿಕ ಸ್ಥಳಗಳನ್ನು ಒತ್ತುವರಿ ಮಾಡಿಕೊಳ್ಳುವುದು ಒಂದು ಪಿಡುಗು, ಇದು ಪಾದಚಾರಿಗಳನ್ನು ತೊಂದರೆಗೆ ಸಿಲುಕಿಸುತ್ತದೆ ಎಂಬುದು ನಿಜ. ಆದರೆ ಬಿಬಿಎಂಪಿ ಕೈಗೊಂಡಿರುವ ಕ್ರಮವು ಕಾಯ್ದೆಯ ಆಶಯಗಳಿಗೆ ವಿರುದ್ಧವಾಗಿರುವುದಷ್ಟೇ ಅಲ್ಲದೆ, ಮನಸೋಇಚ್ಛೆ ವರ್ತನೆಗೆ ಸಮನಾಗಿದೆ. ಈ ಕ್ರಮಕ್ಕೆ ವಿರೋಧಗಳು ಬಂದಾಗ ಅಭಿಯಾನಕ್ಕೆ ತಾತ್ಕಾಲಿಕ ತಡೆ ಬೀಳುತ್ತದೆ. ಆದರೆ ಇಷ್ಟೇ ಸಾಕಾಗುವುದಿಲ್ಲ. ಕಾಯ್ದೆಯನ್ನು ಸಂಪೂರ್ಣವಾಗಿ ಅನುಷ್ಠಾನಕ್ಕೆ ತರಬೇಕು. ಬೀದಿಬದಿ ವ್ಯಾಪಾರಿಗಳು ಮತ್ತು ಹಾಕರ್‌ಗಳು ಸಮಾಜದ ದುರ್ಬಲ ವರ್ಗಕ್ಕೆ ಸೇರಿದವರು. ಅವರಿಗೆ ಕೂಡ ಜೀವನೋಪಾಯ ಕಂಡುಕೊಳ್ಳುವ ಹಕ್ಕು ಇದೆ.

ದಿನದ ಟ್ವೀಟ್

ಸೂಕ್ತ ಕಾರಣ ಪತ್ತೆಯಾಗಲಿ

ದೇಶದಾದ್ಯಂತ ವರದಿಯಾಗುವ 'ದಿಢೀರ್ ಸಾವು'ಗಳ ಪ್ರಮಾಣದಲ್ಲಿ ಶೇ 11.6ರಷ್ಟು ಏರಿಕೆ ಕಂಡುಬಂದಿರುವುದಾಗಿ ರಾಷ್ಟ್ರೀಯ ಅಪರಾಧ ದಾಖಲೆ ಬ್ಯೂರೊದ (ಎನ್‌ಸಿಆರ್‌ಬಿ) 'ಭಾರತದಲ್ಲಿ ಆಕಸ್ಮಿಕ ಸಾವು ಮತ್ತು ಆತ್ಮಹತ್ಯೆಗಳು' ಕುರಿತ ವರದಿ ಹೇಳಿದೆ. 2022ರಲ್ಲಿ 56,653 ದಿಢೀರ್ ಸಾವುಗಳು ವರದಿಯಾಗಿವೆ. ಇವುಗಳಲ್ಲಿ 32,410 ಸಾವುಗಳಿಗೆ 'ಹೃದಯಾಘಾತ' ಕಾರಣ ಎಂದು ಹೇಳಲಾಗಿದೆ. 24,243 ಸಾವುಗಳು 'ಇತರ' ಕಾರಣಗಳಿಂದ ಸಂಭವಿಸಿವೆ. 45- 60 ವರ್ಷದವರಲ್ಲಿ ಹೆಚ್ಚಿನ ಸಾವುಗಳು (19,456) ಕಂಡುಬಂದಿವೆ.

ವಿಜೇತಾ ಸಿಂಗ್, ಪತ್ರಕರ್ತೆ

ಕಿಡಿನುಡಿ

ಇದು, ಕರ್ನಾಟಕಕ್ಕೆ ಆಗಿರುವ ಅತಿದೊಡ್ಡ ನಷ್ಟ. ಅರ್ಜುನ ಕನ್ನಡಿಗರ ನೆಚ್ಚಿನ ಆನೆಯಾಗಿತ್ತು. ವನ್ಯಜೀವಿಗಳು ನಗರ ಪ್ರವೇಶಿಸುವುದನ್ನು ತಡೆಯಲು ಯಾವುದೇ ಪರಿಹಾರಸೂತ್ರ ಕಂಡುಕೊಳ್ಳದ ಅರಣ್ಯಾಧಿಕಾರಿಗಳಿಗೆ ನಾಚಿಕೆಯಾಗಬೇಕು. ಕಾಡಿಲ್ಲ, ಆಹಾರವಿಲ್ಲ, ಪ್ರಾಣಿಗಳು ಏನು ಮಾಡಬೇಕು? ಅರಣ್ಯಗಳನ್ನು ರೆಸಾರ್ಟ್‌ಗಳನ್ನಾಗಿ ಬದಲಿಸಲಾಗಿದೆ!

ಡಾ. ಐಶ್ವರ್ಯಾ ಎಸ್.

25 ವರ್ಷಗಳ ಹಿಂದೆ

ಶನಿವಾರ, 5-12-1998

• **ಗ್ರಾಮೀಣರ ಕೃಪಾಂಕ ರದ್ದು ಆಜ್ಞೆಗೆ ತಡೆ**

ಬೆಂಗಳೂರು, ಡಿ. 4- ನೇಮಕಾತಿ ಮತ್ತು ಶಿಕ್ಷಣದಲ್ಲಿ ಗ್ರಾಮಾಂತರ ಅಭ್ಯರ್ಥಿಗಳಿಗೆ ಶೇಕಡ 10ರಷ್ಟು ಕೃಪಾಂಕ ನೀಡುವ ಸರ್ಕಾರದ ಆಜ್ಞೆಯನ್ನು ರದ್ದುಗೊಳಿಸಿದ ಏಕ ನ್ಯಾಯಮೂರ್ತಿಯವರ ತೀರ್ಪಿನ ಜಾರಿಗೆ ಹೈಕೋರ್ಟ್‌ನ ವಿಭಾಗೀಯ ನ್ಯಾಯಪೀಠ ಇಂದು ತಡೆಯಾಜ್ಞೆ ನೀಡಿತು.

ಏಕ ನ್ಯಾಯಮೂರ್ತಿಯವರ ತೀರ್ಪಿನ ಕ್ರಮಬದ್ಧತೆಯನ್ನು ಪ್ರಶ್ನಿಸಿ ಸರ್ಕಾರ ಮೇಲ್ಮನವಿ ಸಲ್ಲಿಸಿದ್ದು, ನ್ಯಾಯಮೂರ್ತಿ ಅಶೋಕ್ ಭಾನ್ ಮತ್ತು ನ್ಯಾಯಮೂರ್ತಿ ಎಸ್.ಆರ್.ಬನ್ನೂರ್ ಮಠ ಅವರಿರುವ ವಿಭಾಗೀಯ ನ್ಯಾಯಪೀಠದ ಮುಂದೆ ಅದು ವಿಚಾರಣೆಗೆ ಬಂದಿತ್ತು. ಮೇಲ್ಮನವಿಯನ್ನು ವಿಚಾರಣೆಗೆ ಅಂಗೀಕರಿಸಿದ ನ್ಯಾಯಪೀಠ, ಸದ್ಯಕ್ಕೆ ಕೃಪಾಂಕ ಸೌಲಭ್ಯದೊಂದಿಗೆ ನೇಮಕಾತಿ ಮಾಡಿಕೊಳ್ಳಲು ಆದೇಶಿಸಿತು.

ಆದರೆ ಈ ನೇಮಕಾತಿ, ಮೇಲ್ಮನವಿಯ ಅಂತಿಮ ತೀರ್ಮಾನಕ್ಕೆ ಒಳಪಟ್ಟಿರುತ್ತದೆ. ಒಂದುಪಕ್ಷ ಏಕ ನ್ಯಾಯಮೂರ್ತಿಯವರ ತೀರ್ಪು ಎತ್ತಿಹಿಡಿಯಲ್ಪಟ್ಟರೆ, ಕೃಪಾಂಕದ ನೆರವಿನಿಂದ ನೇಮಕಾತಿ ಹೊಂದುವವರು ಆ ಸ್ಥಾನ ತೆರವು ಮಾಡುವುದಕ್ಕೆ ಸಂಬಂಧಿಸಿದಂತೆ ಹಾಗೂ ಆ ಹುದ್ದೆ ಮೇಲೆ ತಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದು ಅಭ್ಯರ್ಥಿಗಳಿಂದ ಮುಚ್ಚಳಿಕೆ ಪಡೆದುಕೊಳ್ಳಬೇಕು ಎಂದು ಆದೇಶಿಸಿತು.

• **ತರಕಾರಿಗೆ ಸಬ್ಸಿಡಿ ನೀಡಲು ಕೇಂದ್ರ ಸಿದ್ಧ**

ನವದೆಹಲಿ, ಡಿ. 4 (ಪಿಟಿಐ)- ಗ್ರಾಹಕರಿಗೆ ತರಕಾರಿಗಳನ್ನು ಅಗ್ಗದ ದರದಲ್ಲಿ ಪೂರೈಸಲು ರಾಜ್ಯ ಸರ್ಕಾರಗಳು ಬಯಸಿದರೆ ಅವುಗಳು ಈ ಉದ್ದೇಶಕ್ಕಾಗಿ ಪೇಟೆಯಲ್ಲಿ ವ್ಯವಹರಿಸಲು ತಗಲುವ ವೆಚ್ಚದ ಅರ್ಧಾಂಶವನ್ನು ತುಂಬಿಕೊಡಲು ಕೇಂದ್ರ ಸಿದ್ಧವಿದೆ ಎಂದು ಆಹಾರ ಮತ್ತು ಗ್ರಾಹಕ ವ್ಯವಹಾರ ಸಚಿವ ಸುರ್ಜಿತ್ ಸಿಂಗ್ ಬರ್ನಾಲಾ ಅವರು ಇಂದು ರಾಜ್ಯಸಭೆಯಲ್ಲಿ ಪ್ರಕಟಿಸಿದರು.

ಯಾವುದೇ ರಾಜ್ಯ ಸರ್ಕಾರ ಯಾವುದೇ ತರಕಾರಿಗೆ ಸಹಾಯಧನ ನೀಡಲು ಬಯಸಿದರೆ ಅದರಲ್ಲಿ ಅರ್ಧ ಭಾಗವನ್ನು ಕೇಂದ್ರ ಭರಿಸುವುದು ಎಂದು ಪ್ರಶ್ನೋತ್ತರ ಕಾಲದಲ್ಲಿ ಪೂರಕ ಪ್ರಶ್ನೆಗೆ ಉತ್ತರಿಸುತ್ತಾ ಬರ್ನಾಲಾ ತಿಳಿಸಿದರು.

50 ವರ್ಷಗಳ ಹಿಂದೆ

ಬುಧವಾರ, 5-12-1973

• **ಕಾಂಟ್ರ್ಯಾಕ್ಟ್ ಕ್ಯಾರೇಜ್ ಕುರಿತ ಹೈಕೋರ್ಟ್ ತೀರ್ಪಿಗೆ ತಡೆಯಾಜ್ಞೆ**

ನವದೆಹಲಿ, ಡಿ. 4- 1972ರ ಮೋಟಾರು ವಾಹನ (ಕಾಂಟ್ರ್ಯಾಕ್ಟ್ ಕ್ಯಾರೇಜ್) ತಿದ್ದುಪಡಿ ಶಾಸನವನ್ನು ರದ್ದು ಮಾಡಿ ಕರ್ನಾಟಕ ಹೈಕೋರ್ಟ್ ನೀಡಿದ್ದ ತೀರ್ಪನ್ನು ಕಾರ್ಯಗತಗೊಳಿಸದಂತೆ ಸುಪ್ರೀಂ ಕೋರ್ಟ್ ಇಂದು ತಡೆಯಾಜ್ಞೆ ನೀಡಿತು.

ಕಾಂಟ್ರ್ಯಾಕ್ಟ್ ಕ್ಯಾರೇಜುಗಳ ಮೇಲೆ ಚಾಲಕನೂ ಸೇರಿದಂತೆ ಪ್ರತಿ ಪ್ರಯಾಣಿಕರ ಸೀಟಿಗೆ 65 ರೂ.ಗಳಿಂದ 100 ರೂ.ಗಳಿಗೆ ತೆರಿಗೆಯನ್ನು ರಾಜ್ಯ ಸರ್ಕಾರ ಹೆಚ್ಚಿಸಿತ್ತು.

• **ಬೆಳಗಾವಿ ಬಂದ್‌ಗೆ ಎಂಇಎಸ್ ಕರೆ ವಿಫಲ**

ಬೆಳಗಾವಿ, ಡಿ. 4- ಇಂದು ಬೆಳಗಾವಿ ಬಂದ್‌ಗೆ ಮಹಾರಾಷ್ಟ್ರ ಏಕೀಕರಣ ಸಮಿತಿ ಇತ್ತಿದ್ದ ಕರೆಗೆ ಜನರಿಂದ ಬಹುಮಟ್ಟಿಗೆ ಅಲಕ್ಷ್ಯದ ಪ್ರತಿಕ್ರಿಯೆ ದೊರಕಿತು.

'ಮಂಗಳವಾರ ರಜಾ' ಇರುವ ಅಂಗಡಿಗಳ ವಿನಾ ಉಳಿದ ಅಂಗಡಿಗಳು ತೆರೆದಿದ್ದವು.

ಸಿನಿಮಾಗಳು, ಹೋಟೆಲುಗಳು, ಶಿಕ್ಷಣ ಸಂಸ್ಥೆಗಳು ಎಂದಿನಂತೆ ಕೆಲಸ ಮಾಡಿದವು. ಟ್ಯಾಕ್ಸಿಗಳು, ಆಟೋರಿಕ್ಷಾಗಳು ಮಾಮೂಲಿನಂತೆ ಓಡಾಡಿದವು.

ನಮ್ಮ ಮೇಲಿನ ದಾಳಿಕೋರರ ಬೆನ್ನುಹತ್ತಬಲ್ಲೆವು ಎಂಬ ಸಂದೇಶವನ್ನು ಭಾರತ ನೀಡುತ್ತಿದೆಯೇ?

ಉಗ್ರರ ಹತ್ಯೆ, ಉತ್ತರ ಸುಲಭವಿಲ್ಲ

ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

ಕೆನಡಾದ ಬಳಿಕ ಇದೀಗ ಅಮೆರಿಕ ಅಂತಹದೇ ಪ್ರಶ್ನೆಯನ್ನು ಭಾರತದ ಮುಂದಿರಿಸಿದೆ. ಖಾಲಿಸ್ತಾನಿ ಉಗ್ರ ಗುರುಪತ್ವಂತ್ ಸಿಂಗ್ ಪನ್ನೂ ಹತ್ಯೆಗೆ ರೂಪಿಸಲಾಗಿದ್ದ ಸಂಚಿನಲ್ಲಿ ಭಾರತ ಮೂಲದ ನಿಖಿಲ್ ಗುಪ್ತಾ ಎಂಬ ವ್ಯಕ್ತಿಯ ಜೊತೆಗೆ ಭಾರತ ಸರ್ಕಾರದ ಅಧಿಕಾರಿಯೊಬ್ಬರು ಭಾಗಿಯಾಗಿದ್ದಾರೆ ಎಂದು ಅಮೆರಿಕದ ನ್ಯಾಯಾಲಯದಲ್ಲಿ ಮೊಕದ್ದಮೆ ದಾಖಲಾಗಿದೆ. ಈ ವಿಷಯವನ್ನು ಪ್ರಸ್ತಾಪಿಸಿರುವ ಅಮೆರಿಕ ಕಳವಳ ವ್ಯಕ್ತಪಡಿಸಿದೆ. ಅಮೆರಿಕಕ್ಕೆ ಸ್ಪಷ್ಟನೆ ನೀಡಿರುವ ಭಾರತ, 'ಇದು ಸರ್ಕಾರದ ನೀತಿಗೆ ವಿರುದ್ಧವಾಗಿದೆ' ಎಂದಿದೆ.

ಕೆಲವು ವಾರಗಳ ಹಿಂದೆ ಕೆನಡಾದ ಪ್ರಧಾನಿ ಜಸ್ಟಿನ್ ಟ್ರುಡೊ ಅವರು, ಹರ್ದೀಪ್ ಸಿಂಗ್ ನಿಜ್ಜರ್ ಹತ್ಯೆಗೆ ಸಂಬಂಧಿಸಿದಂತೆ ಭಾರತದ ವಿರುದ್ಧ ಇಂತಹದೇ ಆರೋಪ ಮಾಡಿದ್ದರು. ಭಾರತ ತೀಕ್ಷ್ಣವಾಗಿ ಪ್ರತಿಕ್ರಿಯಿಸಿತ್ತು. ಇದೀಗ ಅಮೆರಿಕದ ಕಳವಳಕ್ಕೆ ಭಾರತದ ಪ್ರತಿಕ್ರಿಯೆ ಬೇರೆಯದೇ ರೀತಿ ಇದೆ. ಉನ್ನತ ಮಟ್ಟದ ತನಿಖಾ ಆಯೋಗ ರಚಿಸುವುದಾಗಿ ಭಾರತ ಹೇಳಿದೆ. ಹಾಗಾದರೆ ಕೆನಡಾದ ಪ್ರಧಾನಿಯ ಆರೋಪಕ್ಕೆ ಭಾರತ ಬರೀ ನಿರಾಕರಣೆಯ ಗುರಾಣಿ ಹಿಡಿದದ್ದು ಏಕೆ?

ವಿಷಯ ಒಂದೇ ಬಗೆಯದ್ದಾದರೂ, ಅಮೆರಿಕ ಮತ್ತು ಕೆನಡಾ ಈ ವಿಷಯವಾಗಿ ನಡೆದುಕೊಂಡ ರೀತಿಯಲ್ಲಿ ವ್ಯತ್ಯಾಸವಿದೆ. ಪನ್ನೂ ಹತ್ಯೆಯ ಸಂಚಿನ ಕುರಿತ ತನಿಖಾ ವರದಿಯನ್ನು ಅಮೆರಿಕ ಮುಕ್ತವಾಗಿ ಇರಿಸಿದೆ. ಭಾರತದ ಅಧಿಕಾರಿಯ ಹೆಸರನ್ನು ನೇರವಾಗಿ ಹೇಳದೆ CC-1 ಎಂದು ಕರೆದಿದೆ. ಸಂಚಿನ ಕೇಂದ್ರಬಿಂದುವಾಗಿರುವ ನಿಖಿಲ್ ಗುಪ್ತಾ ಹೆಸರನ್ನು ಬಹಿರಂಗವಾಗಿ ಹೇಳಿದೆ.

ಆದರೆ ಕೆನಡಾ ತನ್ನ ತನಿಖೆಯ ಕುರಿತು ಅಥವಾ ಹೊಂದಿರುವ ಸಾಕ್ಷ್ಯದ ಕುರಿತು ಪಾರದರ್ಶಕತೆ ಪ್ರದರ್ಶಿಸಲಿಲ್ಲ. ಮಿಗಿಲಾಗಿ, ಕೆನಡಾದಲ್ಲಿ ಖಾಲಿಸ್ತಾನಿ ಉಗ್ರರ ಚಟುವಟಿಕೆಯನ್ನು ನಿಗ್ರಹಿಸಿ ಎಂದು ಭಾರತ ಈ ಹಿಂದೆ ಹಲವು ಬಾರಿ ಕೆನಡಾ ಸರ್ಕಾರವನ್ನು ಆಗ್ರಹಿಸಿತ್ತು. ಆದರೆ ಕೆನಡಾದ ಆಡಳಿತ ಅಲ್ಲಿನ ಸಿಖ್ ಸಮುದಾಯವನ್ನು ಮತಬ್ಯಾಂಕ್ ದೃಷ್ಟಿಯಿಂದ ನೋಡಿ, ಭಾರತದ ಆಗ್ರಹವನ್ನು ಉಪೇಕ್ಷಿಸಿತು. ಹಾಗಾಗಿ, ಕೆನಡಾದ ಆರೋಪಕ್ಕೆ ಭಾರತದ ಪ್ರತಿಕ್ರಿಯೆ ಭಿನ್ನವಾಗಿತ್ತು.

ಅದೇನೇ ಇದ್ದರೂ, ಈ ಎರಡೂ ಪ್ರಕರಣಗಳ ಆಚೆಗೆ ಮುಖ್ಯವಾದ ಪ್ರಶ್ನೆ ಬೇರೆಯದೇ ಇದೆ. ಕೆನಡಾದಲ್ಲಿ ನಡೆದ ನಿಜ್ಜರ್ ಹತ್ಯೆ ಹೆಚ್ಚು ಚರ್ಚೆಗೆ ಒಳಪಟ್ಟಿದೆ ನಿಜ, ಆದರೆ ಭಾರತದಲ್ಲಿ ಭಯೋತ್ಪಾದಕ ದಾಳಿಗಳನ್ನು ನಡೆಸಿದ್ದ, ಭಾರತದ ಮೋಸ್ಟ್ ವಾಂಟೆಡ್ ಪಟ್ಟಿಯಲ್ಲಿದ್ದ ಹತ್ತಕ್ಕೂ ಹೆಚ್ಚು ಭಯೋತ್ಪಾದಕರು ಹಿಂದಿನ ಎರಡು ವರ್ಷಗಳಲ್ಲಿ ಪಾಕಿಸ್ತಾನದ ವಿವಿಧ ನಗರಗಳಲ್ಲಿ ನಿಗೂಢ ರೀತಿಯಲ್ಲಿ ಹತರಾಗಿದ್ದಾರೆ! ಹಾಗಾದರೆ ಭಾರತದ ಭದ್ರತಾ ನೀತಿಯಲ್ಲಿ 'ಗುರಿಯಾಗಿಸಿಕೊಂಡು ನಡೆಸುವ ಹತ್ಯೆ' ಪ್ರಾಮುಖ್ಯ ಪಡೆದುಕೊಂಡಿದೆಯೇ ಅಥವಾ ಈ ಹತ್ಯೆಗಳು ಆಕಸ್ಮಿಕವೇ?

ಇತ್ತೀಚಿನ ಕೆಲವು ಸುದ್ದಿಗಳನ್ನೇ ಗಮನಿಸಿ. ನವೆಂಬರ್ 5ರಂದು ಖ್ವಾಜಾ ಶಾಹಿದ್‌ನನ್ನು ಪಾಕಿಸ್ತಾನ ಆಕ್ರಮಿತ ಕಾಶ್ಮೀರದ ಗಡಿರೇಖೆಯ ಬಳಿ ಕೊಲ್ಲಲಾಗಿದೆ ಎಂಬ ಸುದ್ದಿ ಬಂತು. ಈತ 2018ರಲ್ಲಿ ಭಾರತೀಯ ಸೇನಾ ಶಿಬಿರದ ಮೇಲೆ ನಡೆದ ಭಯೋತ್ಪಾದಕ ದಾಳಿಯ ಸೂತ್ರಧಾರನಾಗಿದ್ದ. ನವೆಂಬರ್ 9ರಂದು, ಎಲ್‌ಇಟಿ ಭಯೋತ್ಪಾದಕ ಸಂಘಟನೆಯ ನೇಮಕಾತಿ ವಿಭಾಗದ ಮುಖ್ಯಸ್ಥನಾಗಿದ್ದ ಅಕ್ರಮ್ ಘಾಜಿ ಹತನಾದ ಸುದ್ದಿ ವರದಿಯಾಯಿತು. ನವೆಂಬರ್ 13ರಂದು, ಜೆಇಎಂ ನಾಯಕ ಮತ್ತು ಘೋಷಿತ ಉಗ್ರ ಮೌಲಾನಾ ಮಸೂದ್ ಅಜರ್ ನಿಕಟವರ್ತಿಯಾಗಿದ್ದ ಮೌಲಾನಾ ರಹೀಂಉಲ್ಲಾ ತಾರಿಕ್ ಕರಾಚಿಯಲ್ಲಿ ಗುಂಡಿನ ದಾಳಿಯಿಂದ ಮೃತಪಟ್ಟ.

2016ರ ಪಠಾಣ್‌ಕೋಟ್ ಭಯೋತ್ಪಾದಕ ದಾಳಿಯ ಹಿಂದಿದ್ದ ಜೆಇಎಂ ಸಂಘಟನೆಯ ಶಹೀದ್ ಲತೀಫ್‌ನನ್ನು ಅಕ್ಟೋಬರ್‌ನಲ್ಲಿ ಅಪರಿಚಿತ ಹಂತಕರು ಗುಂಡಿಕ್ಕಿ ಕೊಂದಿದ್ದರು. ಆ ಮೊದಲು ಅಬು ಖಾಸಿಮ್, ಮೌಲಾನ ಜಿಯಾವುರ್ ರೆಹಮಾನ್, ಮುಫ್ತಿ ಖೈಸರ್ ಫಾರೂಕಿ, ಮುಲ್ಲಾ ಸರ್ದಾರ್ ಹುಸೇನ್, ಇಮ್ತಿಯಾಜ್ ಆಲಂ, ಸೈಯದ್ ನೂರ್ ರಜಾ, ಮಿಸ್ತ್ರಿ ಜಹೂರ್ ಇಬ್ರಾಹಿಂ ಹತ್ಯೆಯಾಗಿದ್ದು ವರದಿಯಾಗಿತ್ತು. ಹೀಗೆ ನಿಗೂಢವಾಗಿ ಹತರಾದವರೆಲ್ಲರೂ ಒಂದಿಲ್ಲೊಂದು ಕುಖ್ಯಾತ ಉಗ್ರಗಾಮಿ ಸಂಘಟನೆಯೊಂದಿಗೆ ಗುರುತಿಸಿಕೊಂಡವರು. ಭಾರತದ ಮೇಲೆ ನಡೆದ ಭಯೋತ್ಪಾದಕ ದಾಳಿಗಳಲ್ಲಿ ಭಾಗಿಯಾಗಿದ್ದವರು!

ಆದರೆ ಈ ಯಾವ ಹತ್ಯೆಯ ಕುರಿತೂ ಪಾಕಿಸ್ತಾನದ ಸರ್ಕಾರ ಮಾತನಾಡಲಿಲ್ಲ. ಅದಕ್ಕೆ ಕಾರಣ ಇರಬಹುದು. ಪಾಕಿಸ್ತಾನವು ಉಗ್ರರ ಆಶ್ರಯ ತಾಣ ಎಂಬುದು ಜಗತ್ತಿಗೆ ತಿಳಿದಿರುವ ಸಂಗತಿಯೇ. ಎರಡು ವರ್ಷಗಳ ಹಿಂದೆ ಪಾಕಿಸ್ತಾನ ಆರ್ಥಿಕವಾಗಿ ದಿವಾಳಿಯ ಅಂಚಿಗೆ ಬಂದಾಗ, ಅದಕ್ಕೆ ಹಣಕಾಸಿನ ನೆರವು ನೀಡುವುದಕ್ಕೆ ಷರತ್ತು ವಿಧಿಸಿದ್ದ ಅಂತರರಾಷ್ಟ್ರೀಯ ವಿತ್ತೀಯ ಕಾರ್ಯಪಡೆ (ಫೈನಾನ್ಷಿಯಲ್ ಆ್ಯಕ್ಷನ್ ಟಾಸ್ಕ್‌ಫೋರ್ಸ್), ಭಯೋತ್ಪಾದನಾ ಚಟುವಟಿಕೆಗಳಿಗೆ ಕಡಿವಾಣ ಹಾಕಬೇಕು, ಅಕ್ರಮ ಹಣ ವರ್ಗಾವಣೆ ಮತ್ತು ಭಯೋತ್ಪಾದಕ ಸಂಘಟನೆಗಳಿಗೆ ಆರ್ಥಿಕ ನೆರವು ನೀಡುವುದರ ಕುರಿತು ಕ್ರಮ ಕೈಗೊಳ್ಳಬೇಕು ಎಂಬ ಸ್ಪಷ್ಟ ಕರಾರು ವಿಧಿಸಿತ್ತು.



ಒಂದೊಮ್ಮೆ ಹತರಾದವರನ್ನು ಗುರುತಿಸಿದರೆ ಅವರ ಹಿನ್ನೆಲೆ ಬೆಳಕಿಗೆ ಬರುತ್ತದೆ, ಪಾಕಿಸ್ತಾನ ಉಗ್ರರಿಗೆ ಆಶ್ರಯ ತಾಣ ಎಂಬುದನ್ನು ಪರೋಕ್ಷವಾಗಿ ಒಪ್ಪಿಕೊಂಡಂತೆ ಆಗುತ್ತದೆ ಎಂಬ ತಳಮಳ ಪಾಕಿಸ್ತಾನವನ್ನು ಕಾಡಿರಬಹುದು. 2008ರ ಮುಂಬೈ ಭಯೋತ್ಪಾದಕ ದಾಳಿಯ ಮುಖ್ಯ ಸೂತ್ರಧಾರನಾಗಿದ್ದ ಖಲೀದ್ ಬಷೀರ್ 2013ರ ಮೇ 19ರಂದು ಹತ್ಯೆಗೀಡಾಗಿದ್ದ. ಬಷೀರ್ ಹತ್ಯೆಯ ಕುರಿತು ಪಾಕಿಸ್ತಾನ ತನಿಖೆ ನಡೆಸಿತ್ತು. ಆಗ ಅದು ಭಾರತದ ಕೈವಾಡದ ಬಗ್ಗೆ ಮಾತನಾಡಿತ್ತಾದರೂ, ಆ ಆರೋಪಕ್ಕೆ ಪೂರಕವಾಗಿ ಯಾವುದೇ ಪುರಾವೆ ಒದಗಿಸುವುದು ಸಾಧ್ಯವಾಗಿರಲಿಲ್ಲ.

ಹಾಗೆ ನೋಡಿದರೆ, ಯಾವುದೇ ದೇಶ ನಡೆಸುವ ರಹಸ್ಯ ಕಾರ್ಯಾಚರಣೆ ಕುರಿತ ಮಾಹಿತಿ ಸುಲಭಕ್ಕೆ ಬಹಿರಂಗಗೊಳ್ಳುವುದಿಲ್ಲ. ಒಂದು ದೇಶ ಮತ್ತೊಂದು ದೇಶದ ಮೇಲೆ ಆರೋಪ ಮಾಡಿದರೂ ಅದನ್ನು ಸಾಬೀತು ಮಾಡುವುದು ಕಷ್ಟ.

ನಿಜ, ಅಂತರರಾಷ್ಟ್ರೀಯ ಸಹಕಾರ ಮತ್ತು ಹಸ್ತಾಂತರ ಸೇರಿದಂತೆ ಕಾನೂನಿನ ಚೌಕಟ್ಟಿನೊಳಗೆ ಭಯೋತ್ಪಾದಕರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂಬುದು ವಿಶ್ವಸಂಸ್ಥೆಯ ಮೂಲಕ ಸದಸ್ಯ ರಾಷ್ಟ್ರಗಳು ಒಪ್ಪಿಕೊಂಡಿರುವ ನಿಯಮ. ಆದರೆ ಅದು ದೀರ್ಘಾವಧಿಯ ಪ್ರಕ್ರಿಯೆ ಮತ್ತು ಫಲ ನೀಡಿದ ಉದಾಹರಣೆ ವಿರಳ.

ಕೆಲವೊಮ್ಮೆ ಗುರಿಯಾಗಿಸಿಕೊಂಡು ನಡೆಸುವ ಹತ್ಯೆಗಳು ದೇಶದ ಭದ್ರತೆಯ ದೃಷ್ಟಿಯಿಂದ ಅನಿವಾರ್ಯ ಎನಿಸುವ ಸಂದರ್ಭಗಳೂ ಇರುತ್ತವೆ. ದೊಡ್ಡ ಪ್ರಮಾಣದ ಅವಘಡವನ್ನು ತಪ್ಪಿಸಲು ಸಹಾಯಕವಾಗುತ್ತವೆ. ಆದರೆ ಅಡ್ಡಪರಿಣಾಮವನ್ನೂ ಉಂಟು ಮಾಡುತ್ತವೆ. ಯಾವುದೇ ದೇಶದಲ್ಲಿ, ಗುರಿಯಾಗಿಸಿಕೊಂಡು ನಡೆಸಿದ ಹತ್ಯೆಯಲ್ಲಿ ಮತ್ತೊಂದು ದೇಶ ಭಾಗಿಯಾಗಿರುವುದು ಪುರಾವೆಗಳಿಂದ ಸಾಬೀತಾದರೆ, ಅದು ಹತ್ಯೆ ಜರುಗಿದ ದೇಶದ ಸಾರ್ವಭೌಮತೆಯ ಉಲ್ಲಂಘನೆ ಎನಿಸಿಕೊಳ್ಳುತ್ತದೆ. ಅಂತಹ ಆರೋಪಗಳಿಗೆ ನಿರಾಕರಣೆಯ ವಿನಾ ಉತ್ತರ ಸುಲಭವಿಲ್ಲ. ಕೃತ್ಯ ಎಸಗಿದ ದೇಶದ ವಿಶ್ವಾಸಾರ್ಹತೆಗೆ ಗಾಸಿಯಾಗುತ್ತದೆ.

ಹಾಗಾದರೆ ಮುಂದೇನು? ಈ ಹತ್ಯೆಗಳ ಹಿಂದೆ ತನ್ನ ಪಾತ್ರ ಇಲ್ಲ ಎಂದು ಭಾರತ ಹೇಳಿದೆ. ಸದ್ಯದ ಮಟ್ಟಿಗೆ ಚೀನಾದ ಪ್ರಾಬಲ್ಯಕ್ಕೆ ಕಡಿವಾಣ ಹಾಕಲು ಭಾರತದ ಸಖ್ಯವನ್ನು ಅಮೆರಿಕ ಬಯಸುತ್ತಿದೆ. ಜಾಗತಿಕ ಸನ್ನಿವೇಶವೂ ಭಾರತದ ಪರವಾಗಿ ಇರುವುದರಿಂದ, ನಡೆಯಬಹುದಾದ ಯಾವುದೇ ತನಿಖೆ ಭಾರತವನ್ನು ಕಟಕಟೆಯಲ್ಲಿ ನಿಲ್ಲಿಸುವ, ದಿಗ್ಬಂಧನದಂತಹ ಕ್ರಮಕ್ಕೆ ಎಡೆಮಾಡಿಕೊಡುವ ಸಾಧ್ಯತೆ ಕಡಿಮೆ.

ಅದೇನೇ ಇರಲಿ, ಭಾರತ ಪ್ರಬಲ ರಾಷ್ಟ್ರವಾಗಿ ಹೊರಹೊಮ್ಮುತ್ತಿರುವ ಕಾಲಘಟ್ಟ ಇದು. ನಮ್ಮ ಮೇಲಿನ ದಾಳಿಗಳನ್ನು ಜಾಗತಿಕ ವೇದಿಕೆಗಳಲ್ಲಿ ಪ್ರಸ್ತಾಪಿಸಿ, ಕ್ರಮಕ್ಕೆ ಅಲವತ್ತುಕೊಳ್ಳುತ್ತಿದ್ದ ಕಾಲವನ್ನು ನಾವು ಮೀರಿದಂತೆ ಕಾಣುತ್ತಿದೆ. ಅಮೆರಿಕ, ರಷ್ಯಾ ಹಾಗೂ ಇಸ್ರೇಲಿನಂತೆ, ಭಾರತದ ಮೇಲೆ ದಾಳಿ ಎಸಗಿದವರು, ದೇಶದ ವಿರುದ್ಧ ಸಂಚು ರೂಪಿಸುತ್ತಿರುವವರು ಎಲ್ಲೇ ಇದ್ದರೂ ಬೆನ್ನುಹತ್ತಬಲ್ಲೆವು ಎಂಬ ಸಂದೇಶವನ್ನು ಮೇಲ್ನೋಟಕ್ಕೆ ಈ ಪ್ರಕರಣಗಳು ರವಾನಿಸುತ್ತಿರಬಹುದು. ಆದರೆ ಈ ಕೃತ್ಯಗಳ ಹಿಂದೆ ಭಾರತದ ನೇರ ಪಾತ್ರವಿದೆಯೇ ಎನ್ನುವ ಪ್ರಶ್ನೆಗೆ ನಿಖರ ಉತ್ತರ ಸಿಗುವುದು ಕಷ್ಟ.

ಚುರುಮುರಿ



ಏನೀ ಅವ್ವೆವಸ್ಥೆ!

• ಲಿಂಗರಾಜು ಡಿ.ಎಸ್.

'**ಬೆಳಗಾವಿಯಗೆ** ಇದಾನಸಭೆ ಅಧಿವೇಶನ ಸುರುವಾಗಿದದಂತೆ. ನಾವೆಲ್ಲಾ ಹೋಗಮೇನಾ?' ತುರೇಮಣೆ ಕೇಳಿದರು.

'ಸಾ, ಎಲ್ಲಾ ಹೋಟೆಲು, ರೆಸಾರ್ಟುಗಳು ಫುಲ್ಲಾಗ್ಯವಂತೆ. ಫುಟ್‌ಪಾತಿನಗೆ ಮಕ್ಕಳದಾ?' ಅಂತ ಕೇಳಿದೆ.

'ಅಲ್ಲ ಕಲಾ, ಬೆಳಗಾವಿ ಜನ ಶಾಸಕರಿಗೆ, ಮಂತ್ರಿಗಳಿಗೆ 'ಬರ್ರಿ ಸಾ, ಅಧಿವೇಶನದ ಟೇಮಲ್ಲಿ ಹೋಟೆಲ್ಲು, ರೆಸಾರ್ಟಿಗೆ ಹೋಗಿ ಯಾಕೆ ಕಾಸು ಕಳೀತೀರಿ. ನಮ್ಮನೇಲೆ ಉಳುಕಂಡು ನಮ್ಮ ಕಷ್ಟ ನೋಡಿ ಪರಿಹಾರ ಮಾಡಿ' ಅಂತ ಇನ್ನಿಲ್ಲದಂಗೆ ಕೇಳಿಕ್ಯಂಡುದ್ರು. ಆದ್ರೂ ಜನನಾಯಕರು ಅಸೆಂಬ್ಲಿಯಲ್ಲಿ ಗಲಾಟೆ ಮಾಡದು ಹ್ಯಂಗೆ ಅಂತ ಕಾರಸ್ಥಾನ ಮಾಡಕ್ಕೆ ರೆಸಾರ್ಟಿಗೆ ಹೊಂಟವ್ರೆ' ಯಂಟಪ್ಪಣ್ಣ ಸಿಡಿಯಿತು.

'ಅದೀಯೆ, ಮಾಡೋ ಕೆಲಸ ಬುಟ್ಟು, 'ಪಕ್ಷಕ್ಕೆ ಬರೋರೆಲ್ಲಾ ಬರ್ರಿ' ಅಂತ ಕೈನವು, ಕಮಲದವು ಅನೌನ್ಸ್ ಮಾಡ್ತಾ ಕುಂತವೆ' ಚಂದ್ರು ಸಿಟುಗಂಡ.

'ಹ್ಞೂಂಕನೇಳಪ್ಪ, ಕೈ ಸರ್ಕಾರದ 60 ತಪ್ಪು ಪಟ್ಟಿ ಮಾಡ್ಯವುರಂತೆ. ಕಮಲದ್ದು ಇನ್ನೇಟದೋ? ಭ್ರೂಣಹತ್ಯೆ 4-5 ವರ್ಸದಿಂದ ನಡೀತ್ಲೇ ಇತ್ತಂತೆ' ತುರೇಮಣೆ ದೂರಿದರು.

'ಡಯಾಲಿಸಿಸ್ ಸಿಬ್ಬಂದಿ, ಅಂಗನವಾಡಿ ಸಿಬ್ಬಂದಿ ಸಂಬಳಕ್ಕೆ ಪರದಾಡತಾವ್ರೆ. ಎತ್ತಿನ ಹೊಳೆ ರೋಡಲ್ಲಿ ಹರೀತಾ ಅದೆ, ಉತ್ತರಕನ್ನಡ ದೇಲಿ ನದಿ ದಾಟಕ್ಕೆ ಅಪ್ಪಂತಾ ಸೇತುವೆಗಳಿಲ್ಲ. ಸರ್ಕಾರಿ ಶಾಲೆಗಳೆಲ್ಲ ಕುಸಿದು ಬೀಳ್ತಾವೆ! ಇವು ನಾಯಕರ ಕಣ್ಣಿಗೆ ಕಾಣ್ತಿಲ್ವಾ?' ನಾನು ಸೇರಿಸಿದೆ.

'ಇವು ಕಲಿತಿದ್ದು ಬುಡೀಕಿಲ್ಲ ಕಯ್ಯ. 'ರಾಜ್ಯದ ಜನರಿಗೆ ಗುಣಮಟ್ಟದ ಆರೋಗ್ಯ ಸೇವೆ ನೀಡೋಕ್ಕೆ ನಾವು ಬದ್ಧ' ಅಂದದ್ದೆ ಸಿದ್ದರಾಮಣ್ಣ, ಆದರೆ ವಾಣಿವಿಲಾಸ ಆಸ್ಪತ್ರೇಲಿ ಜಿರಳೆ ಸಂತೆಯಂತೆ ಕಲಾ. ಇವು ಯಾವ ಪಕ್ಷದ ಜಿರಳೆಗಳೋ ನಾನು ಕಾಣೆ!' ಅಂದರು ತುರೇಮಣೆ.

'ಸಿಮೆಂಟು ರೋಡು ಹತ್ತೊರ್ಸ ಬಾಳಿಕೆ ಬತ್ತದೆ ಅಂತ ಹೋದೊರ್ಸ ಪುಂಗಿದ್ರಲ್ಲಾ, ಅವು ಒಂದೊಂದಾಗಿ ಕಿತ್ಕಂಡು ಬೀಳ್ತಾ ಅವೆ. ಯಾವ ಪಕ್ಷವೂ ಇದರ ಬಗ್ಗೆ ಉಸಿರೆತ್ತಿದ್ದೇ ಕಾಣೆ. ಏನೀ ಅವ್ವೆವಸ್ಥೆ!' ಯಂಟಪ್ಪಣ್ಣ ಕೊರಗಿತು.

ಸಂಗತ

ಸಮರಸ ಕಾಣದ ಸಮರೋತ್ಸಾಹ

ಸೈದ್ಧಾಂತಿಕ ನೆಲೆಗಟ್ಟಿನ ಮೂಲಕ ಯುದ್ಧಗಳನ್ನು ಅರ್ಥೈಸಿದರೆ, ಮುಂದಾಗುವ ಅವಘಡಗಳಿಗೆ ನಾವೇ ಜವಾಬ್ದಾರರಾಗಬೇಕಾಗುತ್ತದೆ ಎಂಬುದನ್ನು ನಾವು ಅರಿಯಬೇಕು

• ಶಿವಲಿಂಗಸ್ವಾಮಿ ಎಚ್.ಕೆ.

ಪುನೀತ್ ರಾಜ್‌ಕುಮಾರ್ ಅವರ ಎರಡನೇ ಪುಣ್ಯತಿಥಿಯ ಪ್ರಯುಕ್ತ, ಕನ್ನಡ ಚಿತ್ರರಸಿಕರ ವಾಟ್ಸ್‌ಆ್ಯಪ್ ಸ್ಟೇಟಸ್‌ನಲ್ಲಿ ಇತ್ತೀಚೆಗೆ ಅವರ ಭಾವಚಿತ್ರ ರಾರಾಜಿಸಿತು. ಅಮೆರಿಕದ 'ಫ್ರೆಂಡ್ಸ್' ಎಂಬ ಟಿ.ವಿ. ಷೋನಲ್ಲಿನ ಪ್ರಮುಖ ನಟರಲ್ಲಿ ಒಬ್ಬರಾಗಿದ್ದ ಮ್ಯಾಥ್ಯು ಪೆರ್ರಿ ಅವರು ಅದೇ ಸಮಯದಲ್ಲಿ ನಿಧನರಾಗಿದ್ದು, ಕೋಟ್ಯಂತರ ಅಭಿಮಾನಿಗಳು ಆಘಾತಕ್ಕೆ ಒಳಗಾದರು. ಮೃತರಾದಾಗ ಪುನೀತ್ ಅವರಿಗೆ ಬರೀ 46 ವರ್ಷ ಮತ್ತು ಪೆರ್ರಿ ಅವರಿಗೆ 54 ವರ್ಷ. ಇಬ್ಬರೂ ನಟರು ತಮ್ಮ ತಮ್ಮ ವಲಯದಲ್ಲಿ ಬಹಳಷ್ಟು ಯಶಸ್ಸು ಪಡೆದಿದ್ದರು ಮತ್ತು ಅಭಿಮಾನಿಗಳನ್ನು ಗಳಿಸಿದ್ದರು. ಆದರೆ ಅವರ ಜೀವಿತಾವಧಿ ಕುರಿತಂತೆ ವಿಧಿಲಿಖಿತ ಬೇರೆಯೇ ಇತ್ತು.

ಸಾವಿನ ಕುರಿತಂತೆ ಏನೇ ವ್ಯಾಖ್ಯಾನಗಳಿದ್ದರೂ ಕಡೆಗೆ ನಮಗೆ ಅತ್ಯಂತ ಆಪ್ಯಾಯಮಾನ ಎನಿಸುವುದು, 'ನಮ್ಮ ಜೀವನವನ್ನು ಆವರಿಸಿರುವುದು ಒಂದು ರೀತಿಯ ಅಸಂಬದ್ಧತೆ' ಎಂಬ ಅಸ್ತಿತ್ವವಾದಿಗಳ ಮಾತು. ಹಾಗೆಯೇ, ಇದರೊಟ್ಟಿಗೆ ನಮ್ಮನ್ನು ಕಾಡುವುದು ಆತಂಕ ಮತ್ತು ಅನಿಶ್ಚಿತತೆ. ಇದನ್ನು ಮಾಸ್ಟರ್ ಹಿರಣ್ಣಯ್ಯ ಬಹಳ ಸರಳವಾಗಿ ವಿವರಿಸಿದ್ದಾರೆ. ಹಿರಣ್ಣಯ್ಯನವರು ಯಾವುದೋ ವಿಚಾರಕ್ಕೆ ದುಃಖಿತರಾಗಿ, ಆತ್ಮಹತ್ಯೆಗೆ ಶರಣಾಗಲು ಮಾಡಿದ ಪ್ರಯತ್ನ ವಿಫಲವಾಯಿತಂತೆ. ಆಗ ಅವರು ತಮ್ಮ ಮಗನಿಗೆ ಹೀಗೆ ಹೇಳಿದರಂತೆ, 'ವ್ಯಾಧಿಗೆ ಅವಧಿ ಮತ್ತು ಸಾವಿಗೆ ಸ್ವರೂಪ ಎರಡೂ ದೈವನಿರ್ಣಯ'. ಇದು ನೂರಕ್ಕೆ ನೂರರಷ್ಟು ಸತ್ಯ. ಏಕೆಂದರೆ, ಕರ್ನಾಟಕದ 'ಫಿಟ್ನೆಸ್ ಐಕಾನ್' ಎನಿಸಿಕೊಂಡಿದ್ದ ಪುನೀತ್ ಹೃದಯಾಘಾತದಿಂದ ಮತ್ತು ಪೆರ್ರಿ ಸ್ನಾನ ಮಾಡುತ್ತಾ ತಮ್ಮ ಬಾತ್ ಟಬ್ಬಿನಲ್ಲಿ ಸಾವಿಗೆ ಜಾರುತ್ತಾರೆ ಎಂದು ಯಾರೂ ಅಂದುಕೊಂಡಿರಲಿಲ್ಲ.

ಇದೇ ಕಾರಣಕ್ಕೆ ಇರಬೇಕು, 'ಕ್ಷಣಿಕವಾದ ಈ ಬದುಕು ಲೊಳಲೊಟ್ಟೆ ಇದ್ದಂತೆ. ಆದ್ದರಿಂದ ಮನುಷ್ಯರ ನಡುವೆ ಸಮರಸವಿರಲಿ' ಎಂದು ಜಗತ್ತಿನಾದ್ಯಂತ ತತ್ವಜ್ಞಾನಿಗಳು ಸಾರಿ ಸಾರಿ ಹೇಳಿರುವುದು. ಹಾಗೆಯೇ, 'ಇರುವಷ್ಟು ದಿನ ಸಮಾಜಕ್ಕೆ ನಾವು ಕೊಟ್ಟದ್ದು ಹೆಚ್ಚಿರಬೇಕು ಮತ್ತು ನಾವು ಗತಿಸಿದ ನಂತರ ಸಮಾಜವು ನಮ್ಮನ್ನು ಹೇಗೆ ನೆನೆಯುತ್ತದೆ ಎಂಬುದು ಮುಖ್ಯ' ಎಂದು ಶಿವರಾಮ ಕಾರಂತರು ತಮ್ಮ 'ಅಳಿದ ಮೇಲೆ' ಕಾದಂಬರಿಯಲ್ಲಿ ಸುಂದರವಾಗಿ ವಿವರಿಸುತ್ತಾರೆ. ಇಲ್ಲಿ ನಮಗೆ ಥಟ್ಟನೆ ಗೋಚರಿಸುವ ವೈರುಧ್ಯವೆಂದರೆ, ಇಷ್ಟೆಲ್ಲಾ ಸಾಹಿತಿಗಳು ಮತ್ತು ತತ್ವಜ್ಞಾನಿಗಳ ಮಾತುಗಳ ಹೊರತಾಗಿಯೂ ನಮಗೆ ಸಮರವೇ ಹೆಚ್ಚು ಪ್ರಿಯ ಎನಿಸುವುದು!

ವಿಶ್ವವನ್ನೇ ತಲ್ಲಣಗೊಳಿಸಿದ ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧದ ಕಾವು ಆರುವ ಮುನ್ನವೇ ಇಸ್ರೇಲ್ ಮತ್ತು ಹಮಾಸ್ ನಡುವೆ ಯುದ್ಧ ಶುರುವಾಯಿತು. ಪ್ರತಿಬಾರಿ ಯುದ್ಧ ಸಂಭವಿಸಿದಾಗ ಆ ಯುದ್ಧಕ್ಕೆ ಕಾರಣಗಳು ಆಯಾ ದೇಶದ ಮೂಗಿನ ನೇರಕ್ಕೆ ನ್ಯಾಯಬದ್ಧವಾಗಿಯೇ ಇರುತ್ತವೆ. ಇದೇ ಸಮಯದಲ್ಲಿ, ಯುದ್ಧಗಳಿಂದ ಹೊರಗಿರುವ ಜನರು ತಮ್ಮ ತಮ್ಮ ಸೈದ್ಧಾಂತಿಕ ದೃಷ್ಟಿಕೋನಗಳಿಂದ ಈ ಯುದ್ಧಗಳನ್ನು ಅರ್ಥೈಸುತ್ತಾರೆ. ಈ ಅರ್ಥೈಸುವಿಕೆಗಳು ಸಾಮಾನ್ಯವಾಗಿ ಇಡೀ ಮಾನವಸಂಕುಲದ ಒಳಿತನ್ನು ಬಯಸುವ ಪ್ರಯತ್ನ ಮಾಡಬೇಕು. ಅದನ್ನು ಬಿಟ್ಟು ತಮ್ಮ ಸೈದ್ಧಾಂತಿಕ ನೆಲೆಗಟ್ಟಿನ ಮೂಲಕ ಯುದ್ಧಗಳನ್ನು ಅರ್ಥೈಸಿದರೆ, ಮುಂದಾಗುವ ಅವಘಡಗಳಿಗೆ ನಾವೇ ಜವಾಬ್ದಾರರು.

ಒಟ್ಟಿನಲ್ಲಿ ಶತಶತಮಾನಗಳಿಂದ ಮನುಷ್ಯರಿಗೆ ಯುದ್ಧವೇ ಒಂದು ಧರ್ಮವಾಗಿದೆ. ಈ ನಡುವೆ ಸೊರಗುವುದು ನಮ್ಮನ್ನು ನಂಬಿರುವ ಕುಟುಂಬಗಳು ಎಂಬುದನ್ನು ಯುದ್ಧದ ಮದದಲ್ಲಿ ನಾವು ಮರೆಯುತ್ತೇವೆ. ನಮ್ಮ ನೆಲವನ್ನು ಬೃಹತ್ ಸ್ಮಶಾನವನ್ನಾಗಿ ಪರಿವರ್ತಿಸುತ್ತಿದ್ದೇವೆ ಎಂಬ ಅರಿವು ನಮಗೆ ಇರುವುದಿಲ್ಲ.

ಈಗಿನ ಸಂದರ್ಭದಲ್ಲಿ ನ್ಯಾಯವು ಇಸ್ರೇಲಿಯರ ಪರವಾಗಿದೆಯೋ ಅಥವಾ ಪ್ಯಾಲೆಸ್ಟೀನಿಯನ್ನರ ಪರವಾಗಿದೆಯೋ ಎಂದು ಹೇಳುವುದು ಬಹಳ ಕ್ಲಿಷ್ಟಕರ. ಆದರೆ, ಸರ್ವಾಧಿಕಾರಿ ಹಿಟ್ಲರ್‌ನ ಆಡಳಿತದಲ್ಲಿ ಅತ್ಯಂತ ಹೀನಾಯವಾದ ದೌರ್ಜನ್ಯಕ್ಕೆ ಒಳಗಾದ ಯಹೂದಿಯರು, ಈಗ ತಮಗೆ ಅನುಕೂಲಕರವಾದ ರಾಜಕೀಯ ವಾತಾವರಣ ಸೃಷ್ಟಿಯಾದಾಗ ತಾವೇ ದೌರ್ಜನ್ಯ ನಡೆಸುತ್ತಾ ಸಮರಪ್ರೇಮಿಗಳಾಗಿರುವುದು, ಮನುಷ್ಯರು ಮೂಲತಃ ಸಮರೋತ್ಸಾಹಿಗಳೇ ಎಂಬ ಪ್ರಶ್ನೆಯನ್ನು ಕೇಳಿಕೊಳ್ಳುವಂತೆ ಮಾಡಿದೆ.

ಸಿಂಗಪುರದ ನ್ಯಾಷನಲ್ ಯೂನಿವರ್ಸಿಟಿಯ ಪ್ರಾಧ್ಯಾಪಕಿ ಲೀ ಝು ಫೆಂಗ್ ಅವರ ಕವಿತೆಯೊಂದು ಬದುಕಿನ ಅನಿಶ್ಚಿತತೆ ಕುರಿತು ಬಹಳ ಸುಂದರವಾಗಿ ತಿಳಿ ಹೇಳುತ್ತದೆ. ಅದರ ಸಾರ ಹೀಗಿದೆ: 'ನಿಮ್ಮ ಚಹಾವನ್ನು ನಿಧಾನವಾಗಿ ಸವಿಯಿರಿ. ಇಲ್ಲಿಂದ ತೆರಳುವ ಕಾಲ ಬಲ್ಲವರು ಯಾರು? ಈ ಬದುಕು ಎಷ್ಟು ಅಮೂಲ್ಯವೋ ಅಷ್ಟೇ ಕ್ಷಣಿಕ. ಕೆಲವರು ಉಳಿಯುತ್ತಾರೆ, ಕೆಲವರು ಮರೆಯಾಗುತ್ತಾರೆ. ಕಡೆಯಲ್ಲಿ ನಮಗೆ ಮುಖ್ಯವಾಗುವುದು ನಾವು ಕೊಟ್ಟ ಮತ್ತು ಪಡೆದ ಪ್ರೀತಿಯಷ್ಟೇ!'

ಯುದ್ಧವೇ ಎಲ್ಲಕ್ಕೂ ಪರಿಹಾರ ಎಂದಾದರೆ, ನಾಗರಿಕತೆ ಎಂಬ ಪದಕ್ಕೆ ಅರ್ಥವೇ ಇರುವುದಿಲ್ಲ. ಇದೇ ಕಾರಣಕ್ಕಿರಬೇಕು, ಮನುಷ್ಯನ ಪ್ರತಿ ಹೊಸ ನಾಗರಿಕತೆ ತನ್ನ ಹಿಂದಿನ ನಾಗರಿಕತೆಯನ್ನು ಅಳಿಸಿ ತನ್ನ ಹುಟ್ಟನ್ನು ಸಾಧಿಸಿಕೊಳ್ಳುತ್ತದೆ. ತುಳಿದು ಬಾಳುವುದೊಂದನ್ನೇ ಗುರಿಯಾಗಿಸದೆ ತಿಳಿದು ಬಾಳಬೇಕು ಎಂದು ಅರಿತುಕೊಂಡರೆ, ಬೇಂದ್ರೆ ಅವರ ಈ ಸಾಲುಗಳು ಬಹಳ ಆಸಕ್ತಿಕರ ಎನಿಸುತ್ತವೆ: 'ನಮ್ಮದು ನಿಮ್ಮದು ಅವರದು ಈ ಆಸ್ತಿ ಪಾಸ್ತಿ... ಇದನೊಪ್ಪದ ಹೆರವರು ಅವರಿದ್ದರು ಒಂದೆ ಇರದಿದ್ದರು ಒಂದೇ!'

ವಾಚಕರ ವಾಣಿ

ಗೆದ್ದವರಲ್ಲಿ ಮಹಿಳೆಯರೆಷ್ಟು?

ನಾಲ್ಕು ರಾಜ್ಯಗಳ ವಿಧಾನಸಭಾ ಚುನಾವಣಾ ಫಲಿತಾಂಶವು ಭಾನುವಾರ ಹೊರಬಿದ್ದಿದೆ. ಈ ಸಂದರ್ಭದಲ್ಲಿ ಎಲ್ಲ ರಾಜಕೀಯ ಪಕ್ಷಗಳೂ ಎಷ್ಟು ಸ್ಥಾನಗಳನ್ನು ಮಹಿಳೆಯರಿಗಾಗಿ ಕೊಟ್ಟಿದ್ದವು, ಎಷ್ಟು ಮಂದಿ ಶಾಸಕಿಯರನ್ನು ಗೆಲ್ಲಿಸಿವೆ ಎಂಬ ಪ್ರಶ್ನೆ ಮೂಡುತ್ತದೆ. ಪಕ್ಷಗಳು ತಮಗೆ ತಾವೇ ಈ ಪ್ರಶ್ನೆಗಳನ್ನು ಹಾಕಿಕೊಂಡು ಉತ್ತರ ಕಂಡುಕೊಳ್ಳಲಿ. ಚುನಾವಣೆ ಎದುರಿಸಿದ ಪ್ರತಿ ರಾಜ್ಯದಲ್ಲೂ ಎಲ್ಲ ಮತಕ್ಷೇತ್ರಗಳಲ್ಲೂ ಅರ್ಧದಷ್ಟು ಮಹಿಳಾ ಮತದಾರರಿದ್ದಾರೆ. ಆದರೆ ಅಲ್ಲಿ ಶಾಸಕಿಯರಾಗಿ ಗೆದ್ದಿರುವವರ ಸಂಖ್ಯೆ ಬಹಳ ಕಡಿಮೆ. ಏಕೆಂದರೆ, ಮಹಿಳೆಯರಿಗೆ ಹೇಳಿಕೊಳ್ಳುವಷ್ಟು ಟಿಕೆಟ್‌ಗಳನ್ನು ಯಾವ ಪಕ್ಷವೂ ಕೊಟ್ಟಿರಲಿಲ್ಲ. ಇತ್ತೀಚೆಗೆ ಮಹಿಳಾ ಮೀಸಲಾತಿ ಮಸೂದೆಯನ್ನು ಮಂಡಿಸಿ, ದೊಡ್ಡ ಕಾರ್ಯಕ್ಕೆ ಕೈ ಹಾಕಿದ್ದಾಗಿ ಹೇಳುವ ಬಿಜೆಪಿಯು ಈ ರಾಜ್ಯಗಳಲ್ಲಿ ಎಷ್ಟು ಮಹಿಳೆಯರಿಗೆ ಟಿಕೆಟ್ ನೀಡಿತ್ತು ಎಂಬ ಪ್ರಶ್ನೆಗೆ ನೀರಸವಾದ ಉತ್ತರವೇ ದೊರೆಯುತ್ತದೆ. ಸರ್ಕಾರಗಳು ಮಹಿಳಾಪರ ಎಂದು ನಾಮಮಾತ್ರಕ್ಕೆ ಹೇಳಿಕೊಳ್ಳುತ್ತವೆ, ವಾಸ್ತವದಲ್ಲಿ ಮಹಿಳೆಯರಿಗೆ ಕೊಡಬೇಕಾದ ಸೂಕ್ತ ಸ್ಥಾನಮಾನಗಳನ್ನು ಕೊಡುತ್ತಿಲ್ಲ ಎಂಬುದಕ್ಕೆ ಇದೇ ನಿದರ್ಶನ.

ಹನಮಂತರೆಡ್ಡಿ ಕೆ. ಸೊರಂಗಾವಿ, ಜಮಖಂಡಿ

ಭ್ರಮೆ ಬೇಡ, ವಾಸ್ತವಾಂಶ ಗ್ರಹಿಸಿ

'ವಿರೋಧ ಪಕ್ಷಗಳನ್ನು ಒಗ್ಗೂಡಿಸಲು ವಿಫಲವಾದದ್ದೇ ವಿಧಾನಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ ಸೋಲಿಗೆ ಕಾರಣ' ಎಂದಿದ್ದಾರೆ ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ (ಕಿಡಿನುಡಿ, ಡಿ. 4). ಈ ಚುನಾವಣಾ ಫಲಿತಾಂಶವು ಅವರ ಮಾತಿನಲ್ಲಿನ ಸತ್ಯಾಂಶವನ್ನು ಕಾಂಗ್ರೆಸ್‌ಗೆ ಮನವರಿಕೆ ಮಾಡಿಕೊಡುವಂತಿದೆ. ಬಿಜೆಪಿ, ನಮ್ಮ ರಾಜ್ಯದಲ್ಲಿ ಸೋತು ಸುಣ್ಣವಾದ ಜೆಡಿಎಸ್ ಪಕ್ಷವನ್ನು ಸಹ ಕಡೆಗಣಿಸದೆ, ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಗೆಲ್ಲುವ ಅವಕಾಶಕ್ಕಾಗಿ ಅದರೊಂದಿಗೆ ಮೈತ್ರಿ ಮಾಡಿಕೊಂಡಿದೆ. ಅಂದರೆ ಅಷ್ಟರಮಟ್ಟಿಗೆ ಬಿಜೆಪಿ ವಾಸ್ತವಾಂಶವನ್ನು ಗ್ರಹಿಸಿ, ಅಹಂಕಾರ ಪ್ರದರ್ಶಿಸದೆ ಹೆಜ್ಜೆ ಇಟ್ಟಿದೆ. ಆದರೆ ಕಾಂಗ್ರೆಸ್ ಈ ವಿಷಯದಲ್ಲಿ ಇನ್ನೂ ಪಾಠ ಕಲಿತಿಲ್ಲ ಎನಿಸುತ್ತಿದೆ.

'ಬಿಜೆಪಿ ವಿರುದ್ಧ ಏಕಾಂಗಿಯಾಗಿ ಹೋರಾಡಲು ಕಾಂಗ್ರೆಸ್‌ಗೆ ಸಾಧ್ಯವಿಲ್ಲ' ಎಂದಿರುವ ಪಿಣರಾಯಿ ಅವರ ಮಾತು ಮುಂಬರುವ ಲೋಕಸಭಾ ಚುನಾವಣೆಯ ದೃಷ್ಟಿಯಿಂದಲಾದರೂ ಕಾಂಗ್ರೆಸ್‌ಗೆ ಒಂದು ಮುನ್ನೆಚ್ಚರಿಕೆಯ ಪಾಠದಂತಿದೆ. ಕಾಂಗ್ರೆಸ್ ತನ್ನ ಭ್ರಮೆಯಿಂದ ಹೊರಬಂದರೆ ಮಾತ್ರ ಅದಕ್ಕೆ ಮುಂಬರುವ ಚುನಾವಣೆಯಲ್ಲಿ ಗೆಲುವು ಸಾಧ್ಯ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಸರ್ಕಾರದ ಚಳಿ ಬಿಡಿಸಲಿ

ರಾಜ್ಯದಲ್ಲಿ ವಿರೋಧ ಪಕ್ಷದ ನಾಯಕ ಇಲ್ಲದೆ ಈ ಹಿಂದೆ ವಿಧಾನಮಂಡಲದ ಅಧಿವೇಶನ ನಡೆದಿದೆ. ಇದೀಗ ನಡೆಯುತ್ತಿರುವ ಚಳಿಗಾಲದ ಅಧಿವೇಶನವು ಬಿಜೆಪಿ, ಜೆಡಿಎಸ್ ಮೈತ್ರಿಯ ನಂತರ ನಡೆಯುತ್ತಿರುವ ಮೊದಲ ಅಧಿವೇಶನವಾಗಿದೆ. ಜನಪ್ರತಿನಿಧಿಗಳು ವೈಯಕ್ತಿಕ ಆರೋಪ, ಪ್ರತ್ಯಾರೋಪ, ಕೆಸರೆರಚಾಟವನ್ನು ಬದಿಗೊತ್ತಿ, ರಾಜ್ಯದ ಜನ ಸದ್ಯ ಎದುರಿಸುತ್ತಿರುವ ಗಂಭೀರ ಸಮಸ್ಯೆಗಳ ಕುರಿತು ಚಿಂತನ ಮಂಥನ ನಡೆಸಲಿ. ಪ್ರತಿಪಕ್ಷಗಳು ಒಗ್ಗೂಡಿ, ಆಡಳಿತ ವೈಫಲ್ಯದ ವಿರುದ್ಧ ಧ್ವನಿ ಎತ್ತಲಿ, ಸರ್ಕಾರದ ಚಳಿ ಬಿಡಿಸುವ ಕೆಲಸ ಮಾಡಲಿ.

ಜಯವೀರ ಎ.ಕೆ., ಖೇಮಲಾಪುರ, ರಾಯಬಾಗ

ಅದ್ದೂರಿಯಲ್ಲಿ ಅದ್ದೂರಿ ದಸರಾ!

ರಾಜ್ಯದಲ್ಲಿ ಈ ವರ್ಷ ಬರಗಾಲ ಕಾಣಿಸಿಕೊಂಡಿದ್ದರಿಂದ, ಸಾರ್ವಜನಿಕರ ಒತ್ತಾಯದ ಮೇರೆಗೆ ಈ ಬಾರಿಯ ದಸರಾ ಉತ್ಸವವನ್ನು ಸರಳವಾಗಿ ಮತ್ತು ಸಾಂಪ್ರದಾಯಿಕವಾಗಿ ಆಚರಿಸುವುದಾಗಿ ಸರ್ಕಾರ ಹೇಳಿತ್ತು. ಆದರೆ ದಸರಾ ಮಹೋತ್ಸವದ ವಿಶೇಷಾಧಿಕಾರಿಯಾಗಿದ್ದ, ಜಿಲ್ಲಾಧಿಕಾರಿ ಕೆ.ವಿ. ರಾಜೇಂದ್ರ ಅವರು ಇತ್ತೀಚೆಗೆ ಬಿಡುಗಡೆ ಮಾಡಿರುವ ದಸರಾ ಖರ್ಚು ವೆಚ್ಚದ ಮಾಹಿತಿಯನ್ನು ನೋಡಿದರೆ, ಇದೇನು ಸರಳ ದಸರಾವೋ ಅದ್ದೂರಿಯಲ್ಲಿ ಅದ್ದೂರಿ ದಸರಾವೋ ಎಂಬ ಸಂದೇಹ ಮೂಡುತ್ತದೆ. ದಸರಾ ಮೇಲ್ವಿಚಾರಣೆಗೆ ನಿಯೋಜನೆಗೊಂಡಿದ್ದ ಅಧಿಕಾರಿಯೊಬ್ಬರು ಹೇಳುವಂತೆ, ಈ ವರ್ಷದ ದಸರಾಕ್ಕೆ ಖರ್ಚು ಮಾಡಿರುವ ಒಟ್ಟು ಹಣ ₹ 50 ಕೋಟಿಯನ್ನು ಮೀರಿರಬಹುದು.

ಹಿಂದಿನ 25 ವರ್ಷಗಳ ಇತಿಹಾಸದಲ್ಲೇ ಇಷ್ಟು ದೊಡ್ಡ ಪ್ರಮಾಣದಲ್ಲಿ ಹಣ ಖರ್ಚು ಮಾಡಿದ ಉದಾಹರಣೆ ಇಲ್ಲ. ಕೆಲವು ಕಾರ್ಯಕ್ರಮಗಳಿಗೆ ಖರ್ಚು ತೋರಿಸಿರುವುದನ್ನು ನೋಡಿದರೆ ಸಾರ್ವಜನಿಕರಿಗೆ ದಿಗ್ಭ್ರಮೆಯಾಗುತ್ತದೆ. ಉದಾಹರಣೆಗೆ, ಬರೀ ಮೂರು ದಿನ ನಡೆದ ಯುವ ದಸರಾಕ್ಕೆ ₹ 5.88 ಕೋಟಿ ಖರ್ಚು ತೋರಿಸಲಾಗಿದೆ. ಇದನ್ನು ನೋಡಿದರೆ, ಇದರಲ್ಲಿ ರಾಮನ ಲೆಕ್ಕ ಎಷ್ಟು, ಕೃಷ್ಣನ ಲೆಕ್ಕ ಎಷ್ಟು ಎಂದು ಕೇಳುವಂತಾಗಿದೆ.

ಬೂಕನಕೆರೆ ವಿಜೇಂದ್ರ, ಮೈಸೂರು

ಈ ಕಪ್ ಯಾರಿಗೆ?!

ಅರರೆ ಇದ್ಯಾವ ಕಪ್
ಎಂದು ಅಚ್ಚರಿಪಡದಿರಿ,
ದಿನದಲ್ಲಿ ಮೊದಲಿಗರಾಗಿ
ಹಾಜರಾಗುವ ಶಾಸಕರಿಗೆ
ಬೆಳಗಾವಿ ಅಧಿವೇಶನದಲ್ಲಿ
ಸಭಾಧ್ಯಕ್ಷರು ನೀಡಲಿಹರಂತೆ
ಬಹುಮಾನವಾಗಿ ಕಪ್!

ಮ.ಗು.ಬಸವಣ್ಣ, ನಂಜನಗೂಡು

ಚೆಸ್: ಮಹಿಳೆಯರಿಗೆ ಸಿಗಲಿ ಪ್ರೋತ್ಸಾಹ

ತಮಿಳುನಾಡಿನ ಆರ್.ವೈಶಾಲಿ ಅವರು ದೇಶದ ಮೂರನೇ ಮಹಿಳಾ ಗ್ರ್ಯಾಂಡ್‌ಮಾಸ್ಟರ್ ಆಗಿ ಹೊರಹೊಮ್ಮಿದ್ದಾರೆ. ಇವರ ಸಹೋದರ ಆರ್.ಪ್ರಜ್ಞಾನಂದ ಕೂಡ ಗ್ರ್ಯಾಂಡ್‌ಮಾಸ್ಟರ್ ಆಗಿದ್ದು, ಸೋದರ- ಸೋದರಿ ಗ್ರ್ಯಾಂಡ್‌ಮಾಸ್ಟರ್‌ಗಳಾಗಿರುವುದು ವಿಶೇಷ. ವೈಶಾಲಿಯವರ ಈ ಸಾಧನೆ ಹಲವು ಆಯಾಮಗಳಿಂದ ಮುಖ್ಯವಾದುದು. ಒಂದು, ಭಾರತದ 84 ಗ್ರ್ಯಾಂಡ್‌ಮಾಸ್ಟರ್‌ಗಳ ಪೈಕಿ ಮಹಿಳೆಯರ ಸಂಖ್ಯೆ ಅತ್ಯಂತ ಕಡಿಮೆ. ಈ ದಿಸೆಯಲ್ಲಿ ಚೆಸ್‌ನಲ್ಲಿ ಮಹಿಳಾ ಪ್ರಾತಿನಿಧ್ಯ ಮತ್ತು ಸಾಧನೆ ಹೆಚ್ಚಾಗಬೇಕು.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಚೆಸ್‌ನಲ್ಲಿ ಮಹಿಳೆಯರು ಇನ್ನಷ್ಟು ಸಾಧನೆ ಮಾಡಲು ಪ್ರೋತ್ಸಾಹಿಸಬೇಕು. ಪೋಷಕರು ಕೂಡ ಹೆಣ್ಣುಮಕ್ಕಳು ಎಲ್ಲಾ ರಂಗಗಳಲ್ಲಿ ಸಾಧನೆ ಮಾಡಲು ಬೆಂಬಲ ನೀಡಬೇಕು. ವೈಶಾಲಿಯವರ ಈ ಸಾಧನೆ ಇನ್ನಷ್ಟು ಮಹಿಳಾ ಚೆಸ್ ಪಟುಗಳು ಮತ್ತಷ್ಟು ಸಾಧನೆ ಮಾಡಲು ಪ್ರೇರಣೆಯಾಗಲಿ.

ಪ್ರಸಾದ್ ಜಿ.ಎಂ., ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಅತ್ಯಾಚಾರ ಶಿಕ್ಷೆ ಕನಿಷ್ಠ, ಖುಲಾಸೆ ಗರಿಷ್ಠ

ಕರ್ನಾಟಕದಲ್ಲಿ ಶಿಕ್ಷೆ ಪ್ರಮಾಣ ತೀರಾ ಕಡಿಮೆ

ಪ್ರಜಾವಾಣಿ ವಾರ್ತೆ

ದೇಶದ ನ್ಯಾಯಾಲಯಗಳಲ್ಲಿ ವಿಲೇವಾರಿ ಮಾಡಲಾಗುವ ಅತ್ಯಾಚಾರ ಪ್ರಕರಣಗಳಲ್ಲಿ, ಶಿಕ್ಷೆಯಾದ ಪ್ರಕರಣಗಳ ಸಂಖ್ಯೆ ತೀರಾ ಕಡಿಮೆ ಇದೆ. 2022ರಲ್ಲಿ ದೇಶದಾದ್ಯಂತ ವಿವಿಧ ನ್ಯಾಯಾಲಯಗಳಲ್ಲಿ ವಿಲೇವಾರಿಯಾದ ಅತ್ಯಾಚಾರ ಪ್ರಕರಣಗಳಲ್ಲಿ, ಶಿಕ್ಷೆಯಾಗಿದ್ದು ಶೇ 21ರಷ್ಟು ಪ್ರಕರಣಗಳಲ್ಲಿ ಮಾತ್ರ. ದೇಶದ ಸ್ಥಿತಿ ಹೀಗಿದ್ದರೆ, ಕರ್ನಾಟಕದ ಸ್ಥಿತಿ ಇದಕ್ಕಿಂತ ಕಳವಳಕಾರಿಯಾಗಿದೆ. ಇದೇ ಅವಧಿಯಲ್ಲಿ ರಾಜ್ಯದ ವಿವಿಧ ನ್ಯಾಯಾಲಯಗಳಲ್ಲಿ ವಿಲೇವಾರಿಯಾದ ಅತ್ಯಾಚಾರ ಪ್ರಕರಣಗಳಲ್ಲಿ, ಶಿಕ್ಷೆಯಾಗಿದ್ದು ಶೇ 5.21ರಷ್ಟರಲ್ಲಿ ಮಾತ್ರ. ಅತ್ಯಾಚಾರ ಪ್ರಕರಣಗಳಲ್ಲಿ ಶಿಕ್ಷೆ ಪ್ರಮಾಣ ಅತ್ಯಂತ ಕಡಿಮೆ ಇರುವ ರಾಜ್ಯಗಳಲ್ಲಿ ಕರ್ನಾಟಕವು ಮೂರನೇ ಸ್ಥಾನದಲ್ಲಿದೆ. ಮೊದಲ ಎರಡು ಸ್ಥಾನಗಳಲ್ಲಿ ಆಂಧ್ರಪ್ರದೇಶ (4.5 %) ಮತ್ತು ಗುಜರಾತ್ ಇವೆ (5.1 %).

2022ರಲ್ಲಿ ದೇಶದ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಎಲ್ಲಾ ನ್ಯಾಯಾಲಯಗಳಲ್ಲಿ ಒಟ್ಟು 1.81 ಲಕ್ಷ ಅತ್ಯಾಚಾರ ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿದೆ. ಆದರೆ, ಇವುಗಳಲ್ಲಿ ಶಿಕ್ಷೆಯಾಗಿದ್ದು 38,136 ಪ್ರಕರಣಗಳಲ್ಲಿ ಮಾತ್ರ. ಇದೇ ಅವಧಿಯಲ್ಲಿ ಕರ್ನಾಟಕದ ವಿವಿಧ ನ್ಯಾಯಾಲಯಗಳು 10,351 ಅತ್ಯಾಚಾರ ಪ್ರಕರಣಗಳನ್ನು ವಿಲೇವಾರಿ ಮಾಡಿದ್ದು, 540 ಪ್ರಕರಣಗಳಲ್ಲಿ ಮಾತ್ರ ಶಿಕ್ಷೆಯಾಗಿದೆ.

ವಿಲೇವಾರಿ ಆದ ಪ್ರಕರಣಗಳಲ್ಲಿ ವಿಚಾರಣೆಗೂ ಮುನ್ನ, ವಿಚಾರಣೆ ಹಂತದಲ್ಲಿ ವಜಾ ಆದ ಮತ್ತು ಆರೋಪಿಗಳು ಖುಲಾಸೆ ಆದ ಪ್ರಕರಣಗಳ ಪ್ರಮಾಣವೇ ಹೆಚ್ಚು. ಅದರಲ್ಲೂ ಆರೋಪಿಗಳು ಖುಲಾಸೆ ಆಗುತ್ತಿರುವ ಪ್ರಕರಣಗಳ ಪ್ರಮಾಣ ಶೇ 50ಕ್ಕಿಂತಲೂ ಹೆಚ್ಚು ಇದೆ.

2022ರಲ್ಲಿ ದೇಶದ ವಿವಿಧ ನ್ಯಾಯಾಲಯಗಳಲ್ಲಿ ವಿಲೇವಾರಿ ಆದ ಒಟ್ಟು ಪ್ರಕರಣಗಳಲ್ಲಿ ಶೇ 58ರಷ್ಟು ಪ್ರಕರಣಗಳಲ್ಲಿ (1.05 ಲಕ್ಷ ಪ್ರಕರಣಗಳು) ಆರೋಪಿಗಳನ್ನು ಖುಲಾಸೆ ಮಾಡಲಾಗಿದೆ. ಕರ್ನಾಟಕದಲ್ಲಿ ಈ ಪ್ರಮಾಣ ಇನ್ನೂ ಹೆಚ್ಚು. ಈ ಅವಧಿಯಲ್ಲಿ ರಾಜ್ಯದ ವಿವಿಧ ನ್ಯಾಯಾಲಯಗಳಲ್ಲಿ ವಿಲೇವಾರಿಯಾದ ಒಟ್ಟು ಪ್ರಕರಣಗಳಲ್ಲಿ ಖುಲಾಸೆ ಆದ ಪ್ರಕರಣಗಳ ಪ್ರಮಾಣ ಶೇ 88.3ರಷ್ಟು (9,139 ಪ್ರಕರಣಗಳು).

ಅತ್ಯಾಚಾರ ಪ್ರಕರಣಗಳ ಸಂಖ್ಯೆ ಏರಿಕೆ

2021ರಲ್ಲಿ ದೇಶದಾದ್ಯಂತ ದಾಖಲಾಗಿದ್ದ ಅತ್ಯಾಚಾರ ಪ್ರಕರಣಗಳ ಸಂಖ್ಯೆಗಳಿಗೆ ಹೋಲಿಸಿದರೆ, 2022ರಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆಯಲ್ಲಿ ಏರಿಕೆಯಾಗಿದೆ. 2021ರಲ್ಲಿ ಒಟ್ಟು 64,863 ಅತ್ಯಾಚಾರ ಪ್ರಕರಣಗಳು ದಾಖಲಾಗಿದ್ದವು. 2022ರಲ್ಲಿ ಒಟ್ಟು 69,546 ಅತ್ಯಾಚಾರ ಪ್ರಕರಣಗಳು ದಾಖಲಾಗಿವೆ. ಇವುಗಳಲ್ಲಿ ಮಕ್ಕಳ ಮೇಲೆ ನಡೆದ ಅತ್ಯಾಚಾರ ಪ್ರಕರಣಗಳೇ ಹೆಚ್ಚು



ದೇಶದಾದ್ಯಂತ ಶಿಕ್ಷೆ ಪ್ರಮಾಣ 21%



ರಾಜ್ಯದಲ್ಲಿ ಶಿಕ್ಷೆ ಪ್ರಮಾಣ ಕೇವಲ 5.21%



ನ್ಯಾಯದಾನ ವಿಳಂಬ

21.84 ಲಕ್ಷ
ದೇಶದ ಎಲ್ಲಾ ನ್ಯಾಯಾಲಯಗಳಲ್ಲಿ ವಿಚಾರಣೆ ಹಂತದಲ್ಲೇ ಇರುವ ಪ್ರಕರಣಗಳ ಸಂಖ್ಯೆ (2022ರ ಡಿಸೆಂಬರ್ ಅಂತ್ಯಕ್ಕೆ)

ದೇಶದ ಎಲ್ಲೆಡೆ ಅತ್ಯಾಚಾರ ಪ್ರಕರಣಗಳಲ್ಲಿ ನ್ಯಾಯದಾನವು ತೀರಾ ವಿಳಂಬವಾಗುತ್ತಿದೆ ಎಂಬುದನ್ನು ದತ್ತಾಂಶಗಳು ಹೇಳುತ್ತವೆ. ಅತ್ಯಾಚಾರ ಪ್ರಕರಣಗಳನ್ನು ಸಾಮಾನ್ಯ ನ್ಯಾಯಾಲಯಗಳು ನಿರ್ವಹಣೆ ಮಾಡುತ್ತಿದ್ದು, ಪೋಕ್ಸೊ ಪ್ರಕರಣಗಳನ್ನು ವಿಶೇಷ ನ್ಯಾಯಾಲಯಗಳು ನಿರ್ವಹಣೆ ಮಾಡುತ್ತಿವೆ. ಹೀಗಿದ್ದೂ, ಅತ್ಯಾಚಾರ ಪ್ರಕರಣಗಳು ತ್ವರಿತವಾಗಿ ವಿಲೇವಾರಿಯಾಗುತ್ತಿಲ್ಲ. ಇದರಿಂದ ಅತ್ಯಾಚಾರ ಸಂತ್ರಸ್ತೆಯರಿಗೆ ಮತ್ತು ಬಂಧನದಲ್ಲಿರುವ ಆರೋಪಿಗಳಿಗೆ ತ್ವರಿತವಾಗಿ ನ್ಯಾಯ ದೊರೆಯುತ್ತಿಲ್ಲ ಎಂಬುದನ್ನು ಈ ದತ್ತಾಂಶಗಳು ವಿವರಿಸುತ್ತವೆ.

2022ರ ಡಿಸೆಂಬರ್ ಅಂತ್ಯಕ್ಕೆ ದೇಶದ ಎಲ್ಲಾ ನ್ಯಾಯಾಲಯಗಳಲ್ಲಿ ವಿಚಾರಣೆ ಹಂತದಲ್ಲಿ ಉಳಿದಿರುವ ಪ್ರಕರಣಗಳ ಸಂಖ್ಯೆ 21.84 ಲಕ್ಷ. 2022ರಲ್ಲಿ ಎಲ್ಲಾ ನ್ಯಾಯಾಲಯಗಳು 1.81 ಲಕ್ಷದಷ್ಟು ಪ್ರಕರಣಗಳನ್ನು ವಿಲೇವಾರಿ ಮಾಡಿದ್ದರೂ, ಇಷ್ಟೊಂದು ಪ್ರಕರಣಗಳು ಇನ್ನೂ ವಿಚಾರಣೆಯ ಹಂತದಲ್ಲಿಯೇ ಉಳಿದಿವೆ. ಹತ್ತಾರು ವರ್ಷಗಳಿಂದ ಪ್ರಕರಣಗಳು ತ್ವರಿತವಾಗಿ ವಿಲೇವಾರಿಯಾಗದೇ ಉಳಿದಿರುವುದರಿಂದ, ಇಷ್ಟೆಲ್ಲಾ ಪ್ರಕರಣಗಳಲ್ಲಿ ನ್ಯಾಯದಾನ ವಿಳಂಬವಾಗಿದೆ. ಕರ್ನಾಟಕದಲ್ಲೂ 2022ರ ಡಿಸೆಂಬರ್ ಅಂತ್ಯಕ್ಕೆ 72,455 ಅತ್ಯಾಚಾರ ಪ್ರಕರಣಗಳು ವಿಚಾರಣೆ ಹಂತದಲ್ಲೇ ಉಳಿದಿವೆ.

2022ರ ಡಿಸೆಂಬರ್ ಅಂತ್ಯಕ್ಕೆ ವಿಚಾರಣೆ ಹಂತದಲ್ಲೇ ಉಳಿದ ಅತಿಹೆಚ್ಚು ಪ್ರಕರಣಗಳು ಇದ್ದದ್ದು ಪಶ್ಚಿಮ ಬಂಗಾಳದಲ್ಲಿ. ಅಲ್ಲಿ ಅಂತಹ 3.56 ಲಕ್ಷ ಪ್ರಕರಣಗಳು ಇದ್ದವು. ನಂತರದಲ್ಲಿ ಅತಿಹೆಚ್ಚು ಪ್ರಕರಣಗಳು ವಿಚಾರಣೆ ಹಂತದಲ್ಲೇ ಉಳಿದದ್ದು ಉತ್ತರ ಪ್ರದೇಶ (2.72 ಲಕ್ಷ), ಮಹಾರಾಷ್ಟ್ರ (2.71 ಲಕ್ಷ), ಒಡಿಶಾ (1.69 ಲಕ್ಷ) ಮತ್ತು ಮಧ್ಯಪ್ರದೇಶದಲ್ಲಿ (1.21 ಲಕ್ಷ). ಪ್ರತಿ ವರ್ಷ ಅತಿಹೆಚ್ಚು ಅತ್ಯಾಚಾರ ಪ್ರಕರಣಗಳು ದಾಖಲಾಗುವ ರಾಜಸ್ಥಾನದಲ್ಲಿ ವಿಚಾರಣೆ ಹಂತದಲ್ಲೇ ಉಳಿದ ಒಟ್ಟು ಪ್ರಕರಣಗಳ ಸಂಖ್ಯೆ 1.16 ಲಕ್ಷದಷ್ಟು.

ಪೋಕ್ಸೊ ಪ್ರಕರಣ: ಭಾರಿ ಏರಿಕೆ

ದೇಶದಲ್ಲಿ ಮಕ್ಕಳ ಮೇಲಿನ ಅತ್ಯಾಚಾರ, ಲೈಂಗಿಕ ದೌರ್ಜನ್ಯ, ಲೈಂಗಿಕ ಕಿರುಕುಳದ ಪ್ರಕರಣಗಳು ಏರಿಕೆಯಾಗುತ್ತಲೇ ಇವೆ. 2021ರಲ್ಲಿ 53,276 ಪೋಕ್ಸೊ ಪ್ರಕರಣಗಳು ದೇಶದಾದ್ಯಂತ ದಾಖಲಾಗಿದ್ದವು. 2022ರಲ್ಲಿ ಪೋಕ್ಸೊ ಅಡಿ ದಾಖಲಾದ ಪ್ರಕರಣಗಳ ಸಂಖ್ಯೆ 63,116ಕ್ಕೆ ಏರಿಕೆಯಾಗಿದೆ. ಅಂದರೆ, 2021ಕ್ಕೆ ಹೋಲಿಸಿದರೆ 2022ರಲ್ಲಿ ಏರಿಕೆಯಾದ ಪ್ರಕರಣಗಳ ಸಂಖ್ಯೆ 9,840. ಆ ಒಂದು ವರ್ಷದಲ್ಲಿ ಪೋಕ್ಸೊ ಪ್ರಕರಣಗಳ ಸಂಖ್ಯೆಯಲ್ಲಿ ಶೇ 18.5ರಷ್ಟು ಏರಿಕೆ ದಾಖಲಾಗಿದೆ. 2021ರಲ್ಲಿ ಕರ್ನಾಟಕದಲ್ಲಿ 2,817 ಪೋಕ್ಸೊ ಪ್ರಕರಣಗಳು ದಾಖಲಾಗಿದ್ದವು. 2022ರಲ್ಲಿ ಇಂಥ ಪ್ರಕರಣಗಳ ಸಂಖ್ಯೆ 3,225ಕ್ಕೆ ಏರಿಕೆಯಾಗಿದೆ.

ಪೋಕ್ಸೊ ಅಡಿಯಲ್ಲಿ ದಾಖಲಾದ ಒಟ್ಟು ಪ್ರಕರಣಗಳಲ್ಲಿ ಅತ್ಯಾಚಾರ ಪ್ರಕರಣಗಳ ಪ್ರಮಾಣವೇ ಹೆಚ್ಚು. 2022ರಲ್ಲಿ ದಾಖಲಾದ ಮಕ್ಕಳ ಮೇಲಿನ ಅತ್ಯಾಚಾರ ಪ್ರಕರಣಗಳ ಸಂಖ್ಯೆ 38,030. 2021ರಲ್ಲಿ ಇಂತಹ 33,186 ಪ್ರಕರಣಗಳು ದಾಖಲಾಗಿದ್ದವು. 2022ರಲ್ಲಿ ಅಂತಹ ಪ್ರಕರಣಗಳ ಸಂಖ್ಯೆಯಲ್ಲಿ ಶೇ 14.6ರಷ್ಟು ಏರಿಕೆಯಾಗಿದೆ.





- ಮಹಾರಾಷ್ಟ್ರದಲ್ಲಿ ಪೋಕ್ಸೊ ಅಡಿ 4,258 ಅತ್ಯಾಚಾರ ಪ್ರಕರಣಗಳು ದಾಖಲಾಗಿವೆ
- ಪೋಕ್ಸೊ ಪ್ರಕರಣಗಳು ಅತಿ ಹೆಚ್ಚು ದಾಖಲಾಗಿದ್ದು ಉತ್ತರ ಪ್ರದೇಶದಲ್ಲಿ (7,970)
- ಕೆಲವು ರಾಜ್ಯಗಳಲ್ಲಿ ಪೋಕ್ಸೊ ಪ್ರಕರಣಗಳ ಸಂಖ್ಯೆ ಭಾರಿ ಏರಿಕೆ ಕಂಡಿವೆ. ಅರುಣಾಚಲ ಪ್ರದೇಶದಲ್ಲಿ 2021ರಲ್ಲಿ ದಾಖಲಾದ ಒಟ್ಟು ಪೋಕ್ಸೊ ಪ್ರಕರಣಗಳ ಸಂಖ್ಯೆ 468. 2022ರ ಹೊತ್ತಿಗೆ ಇಂತಹ ಪ್ರಕರಣಗಳ ಸಂಖ್ಯೆ 2,349ಕ್ಕೆ ಏರಿಕೆಯಾಗಿದೆ. ರಾಜಸ್ಥಾನದಲ್ಲಿ 2021ರಲ್ಲಿ ಒಟ್ಟು ಪೋಕ್ಸೊ ಪ್ರಕರಣಗಳ ಸಂಖ್ಯೆ 580 ಇತ್ತು. 2022ರಲ್ಲಿ ಇದು 3,682ಕ್ಕೆ ಏರಿಕೆಯಾಗಿದೆ
- ಮಣಿಪುರದಲ್ಲಿ ಪೋಕ್ಸೊ ಪ್ರಕರಣಗಳ ಸಂಖ್ಯೆಯಲ್ಲಿ ಇಳಿಕೆಯಾಗಿದೆ. 2021ರಲ್ಲಿ 100 ಪೋಕ್ಸೊ ಪ್ರಕರಣಗಳು ದಾಖಲಾಗಿದ್ದವು. 2022ರಲ್ಲಿ ಇದು 54ಕ್ಕೆ ಇಳಿಕೆಯಾಗಿದೆ. ಗೋವಾದಲ್ಲಿ 2021ರಂತೆ 2022ರಲ್ಲಿಯೂ ಯಾವುದೇ ಪೋಕ್ಸೊ ಪ್ರಕರಣ ದಾಖಲಾಗಿಲ್ಲ. ಹಿಮಾಚಲ ಪ್ರದೇಶದಲ್ಲಿ 2021ರಲ್ಲಿ 8 ಹಾಗೂ 2022ರಲ್ಲಿ 6 ಪೋಕ್ಸೊ ಪ್ರಕರಣಗಳು ದಾಖಲಾಗಿವೆ

ಆಧಾರ: ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊವಿನ (ಎನ್‌ಸಿಆರ್‌ಬಿ) ಭಾರತದಲ್ಲಿ ಅಪರಾಧ–2022 ವರದಿ

ಸಿನಿ ಬಿಟ್ಸ್

ಡಿ.8ಕ್ಕೆ #ಯಶ್19 ಶೀರ್ಷಿಕೆ ರಿಲೀಸ್

‘ಕೆ.ಜಿ.ಎಫ್. ಚಾಪ್ಟರ್‌–2’ ರಿಲೀಸ್‌ ಬಳಿಕ ತಮ್ಮ ಮುಂದಿನ ಪ್ರಾಜೆಕ್ಟ್‌ ಯಾವುದು ಎನ್ನುವ ಸಣ್ಣ ಸುಳಿವನ್ನೂ ನಟ ಯಶ್‌ ಬಿಟ್ಟುಕೊಟ್ಟಿರಲಿಲ್ಲ. ಇದೀಗ, ಕೆವಿಎನ್‌ ಪ್ರೊಡಕ್ಷನ್ಸ್‌ನ ಹೊಸ ಪ್ರಾಜೆಕ್ಟ್‌ ತಮ್ಮ 19ನೇ ಸಿನಿಮಾ ಎನ್ನುವುದನ್ನು ಯಶ್‌ ಘೋಷಿಸಿದ್ದಾರೆ. ಡಿ.8ರಂದು ಬೆಳಿಗ್ಗೆ 9.55ಕ್ಕೆ ಈ ಸಿನಿಮಾದ ಶೀರ್ಷಿಕೆ ಅನಾವರಣಗೊಳ್ಳಲಿದೆ ಎಂದು ಸಾಮಾಜಿಕ ಮಾಧ್ಯಮಗಳಲ್ಲಿ ಯಶ್‌ ತಿಳಿಸಿದ್ದಾರೆ.

ಜಗತ್ತಿನಾದ್ಯಂತ ಸುಮಾರು ₹1,200 ಕೋಟಿ ಬಾಚಿದ್ದ ‘ಕೆ.ಜಿ.ಎಫ್‌ ಚಾಪ್ಟರ್‌–2’ ಯಶ್‌ ಅವರ ಸಿನಿಗ್ರಾಫ್‌ಗೆ ಅತಿ ದೊಡ್ಡ ತಿರುವು ನೀಡಿತ್ತು. ಹೀಗಾಗಿ ಅವರ ಮುಂದಿನ ಪ್ರಾಜೆಕ್ಟ್‌ ಬಗ್ಗೆ ಅಭಿಮಾನಿಗಳಿಗೆ, ಜನರಿಗೆ ನಿರೀಕ್ಷೆ, ಕುತೂಹಲ ಹೆಚ್ಚಿದೆ. ‘ಕೆ.ಜಿ.ಎಫ್‌’ ಸರಣಿಗೇ ಆರೇಳು ವರ್ಷಗಳನ್ನು ಮೀಸಲಿಟ್ಟಿದ್ದ ಯಶ್‌, ಇದೀಗ ಹೊಸ ಪ್ರಾಜೆಕ್ಟ್‌ ಕೈಗೆತ್ತಿಕೊಂಡಿದ್ದಾರೆ. ಕಳೆದೊಂದು ವರ್ಷದಿಂದ ತಮ್ಮ 19ನೇ ಸಿನಿಮಾದ ತಯಾರಿಯಲ್ಲೇ ಯಶ್‌ ತೊಡಗಿಸಿಕೊಂಡಿದ್ದಾರೆ. ಇದಕ್ಕಾಗಿ ಶ್ರೀಲಂಕಾ, ಲಂಡನ್‌ಗೂ ಅವರು ತೆರಳಿದ್ದರು. ಯಶ್‌ ಅವರ 19ನೇ ಸಿನಿಮಾದ ನಿರ್ದೇಶಕರು ಯಾರೆಂದು ಇನ್ನೂ ಅಧಿಕೃತವಾಗಿ ಘೋಷಣೆಯಾಗದೇ ಇದ್ದರೂ, ಗೀತು ಮೋಹನ್‌ದಾಸ್‌ ಅವರ ಹೆಸರು ಕೇಳಿಬರುತ್ತಿದೆ.

‘ಆರ್‌.ಆರ್‌.ಆರ್‌’, ‘ಸಪ್ತ ಸಾಗರದಾಚೆ ಎಲ್ಲೋ’, ‘ಟೋಬಿ’, ‘ಕೌಸಲ್ಯಾ ಸುಪ್ರಜಾ ರಾಮ’, ‘ಅನಿಮಲ್‌’ ಸಿನಿಮಾಗಳನ್ನು ‘ಕೆವಿಎನ್‌’ ವಿತರಣೆ ಮಾಡಿ ಹೆಸರು ಪಡೆದಿದೆ. ‘ಸಖತ್‌’ ಸಿನಿಮಾ ಮೂಲಕ ನಿರ್ಮಾಣ ಕ್ಷೇತ್ರಕ್ಕೆ ಇಳಿದಿದ್ದ ‘ಕೆವಿಎನ್‌’, ‘ಬೈ2ಲವ್‌’, ಜೋಗಿ ಖ್ಯಾತಿಯ ಪ್ರೇಮ್‌ ನಿರ್ದೇಶನದ ‘KD’, ನಟ ದರ್ಶನ್‌ ಜೊತೆಗೂ ಸಿನಿಮಾವೊಂದನ್ನು ಮಾಡುತ್ತಿದೆ. ಇದೀಗ ಯಶ್‌ ಅವರ ಬಹುನಿರೀಕ್ಷಿತ ಸಿನಿಮಾದ ಚುಕ್ಕಾಣಿಯನ್ನು ‘ಕೆವಿಎನ್‌’ ಹಿಡಿದಿದೆ. 2024ರಲ್ಲಿ ಈ ಸಿನಿಮಾ ಬಿಡುಗಡೆಯಾಗುವ ಸಾಧ್ಯತೆ ಇದೆ.

ತಾಳ್ಮೆ ಇರಲಿ ಎಂದಿದ್ದ ಯಶ್‌: ಇತ್ತೀಚೆಗೆ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ್ದ ಯಶ್‌, ‘ನೀವು ಕೊಟ್ಟಿರುವ ಯಶಸ್ಸನ್ನು ಜವಾಬ್ದಾರಿ ಎಂದು ತಿಳಿದುಕೊಂಡು ಮುಂದಿನ ಹಂತಕ್ಕೆ ಹೆಜ್ಜೆ ಇಟ್ಟಿದ್ದೇನೆ. ನಾನು ಯಾವತ್ತೂ ಈ ಹಬ್ಬಕ್ಕೆ ಘೋಷಣೆ, ಆ ತಿಂಗಳಲ್ಲಿ ಘೋಷಣೆ ಎಂದಿರಲಿಲ್ಲ. ಅಡುಗೆ ಬೆಂದ ಮೇಲೆಯೇ ಬಡಿಸಬೇಕು. ಕೊಂಚ ತಾಳ್ಮೆ ಇರಲಿ’ ಎಂದಿದ್ದರು.

ಹೊರಬಂತು ‘ಬ್ರಹ್ಮರಾಕ್ಷಸ’ನ ಟೀಸರ್‌

ಶಂಕರ್‌ ವಿ. ನಿರ್ದೇಶನದ ‘ಬ್ರಹ್ಮರಾಕ್ಷಸ’ ಚಿತ್ರದ ಟೀಸರ್‌ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ.

‘ಲೈಟ್‌ಬಾಯ್‌ ಆಗಿ ಚಿತ್ರರಂಗ ಪ್ರವೇಶಿಸಿದವನು ನಾನು. ಹಲವು ನಿರ್ದೇಶಕರ ಜೊತೆ ಕೆಲಸ ಮಾಡಿ ಈಗ ಸ್ವತಂತ್ರ ನಿರ್ದೇಶಕನಾಗಿರುವೆ. ಚಿತ್ರದ ಎಲ್ಲ ಕೆಲಸಗಳು ಮುಗಿದಿದ್ದು, ಸೆನ್ಸಾರ್‌ ಹಂತದಲ್ಲಿದೆ. 1980–90ರ ದಶಕದಲ್ಲಿ ನಡೆಯುವ ಒಂದು ದ್ವೇಷ ತೀರಿಸಿಕೊಳ್ಳುವ ಕಥೆ ಇದಾಗಿದೆ’ ಎನ್ನುತ್ತಾರೆ ಶಂಕರ್‌ ವಿ. ‘ಕಲಿವೀರ’ ಮೂಲಕ ಗುರುತಿಸಿಕೊಂಡಿದ್ದ ನಟ ಅಂಕುಶ್‌ ಏಕಲವ್ಯಗೆ ಪಲ್ಲವಿ ಗೌಡ ಈ ಸಿನಿಮಾದಲ್ಲಿ ಜೋಡಿಯಾಗಿದ್ದಾರೆ. ವೈಜನಾಥ್‌ ಬಿರಾದಾರ್‌ ಪ್ರಮುಖ ಪಾತ್ರದಲ್ಲಿದ್ದಾರೆ. ಚಿತ್ರದಲ್ಲಿ 5 ಹಾಡುಗಳಿದ್ದು, ಎಂ.ಎಸ್‌.ತ್ಯಾಗರಾಜ್‌ ಸಂಗೀತ ಸಂಯೋಜನೆ ಮಾಡಿದ್ದಾರೆ.

ಪಲ್ಲವಿ ಗೌಡ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

‘ಕರ್ನಾಟದಕ ದೇವಸ್ಥಾನ ಒಂದರ ಮುಂದೆ ಸೇರಿದ್ದಕ್ಕಾಗಿ ಹಿಂದೂಗಳಿಗೆ ಮುಸ್ಲಿಮರು ತಮ್ಮ ಎಂದಿನ ವರಸೆಯನ್ನು ತೋರಿಸಿದರು. ಇದು ಕರ್ನಾಟಕದಲ್ಲಿ ನಡೆದ ಘಟನೆ’ ಎಂದು ‘ಬಾಯಿಲ್ಡ್‌ ಅಂಡಾ’ ಎನ್ನುವ ಎಕ್ಸ್‌ ಖಾತೆಯು ವಿಡಿಯೊದ ಜೊತೆಗೆ ಪೋಸ್ಟ್‌ವೊಂದನ್ನು ಹಾಕಿದೆ. ಇದೇ ರೀತಿಯಲ್ಲಿ ನೂರಾರು ಮಂದಿ ಪೋಸ್ಟ್‌ ಹಾಕಿದ್ದಾರೆ. ಅರ್ಚಕರಿಗೆ ಮುಸ್ಲಿಮರು ಥಳಿಸುತ್ತಿರುವ ದೃಶ್ಯಗಳು ಈ ವಿಡಿಯೊದಲ್ಲಿದೆ. ಆದರೆ, ಇದು ಕರ್ನಾಟಕದಲ್ಲಿ ನಡೆದ ಘಟನೆ ಅಲ್ಲ.

ಈ ಘಟನೆಯು ಮಹಾರಾಷ್ಟ್ರದ ಅಹಮದ್‌ನಗರ ಜಿಲ್ಲೆಯ ಗುಹಾ ಗ್ರಾಮದಲ್ಲಿ ನವೆಂಬರ್‌ 13ರ ಸೋಮ್‌ವತಿ ಅಮವಾಸ್ಯೆಯಂದು ನಡೆದಿದೆ. ‘ಹಿಂದೂಸ್ತಾನ್‌ ಟೈಮ್ಸ್‌’, ‘ದೈನಿಕ್‌ ಭಾಸ್ಕರ್‌’ ಸೇರಿ ಹಲವು ಪತ್ರಿಕೆಗಳು ಈ ಬಗ್ಗೆ ವರದಿ ಮಾಡಿವೆ. ಗ್ರಾಮದಲ್ಲಿ ಖಾನಿಫ್‌ನಾತ್‌ ದೇವಸ್ಥಾನ ಹಾಗೂ ದರ್ಗಾವೊಂದು ಹತ್ತಿರದಲ್ಲಿವೆ. ದೇವಸ್ಥಾನದಲ್ಲಿ ನಡೆದ ಧಾರ್ಮಿಕ ಕಾರ್ಯಕ್ರಮದ ವೇಳೆ ದೊಡ್ಡ ಸ್ಪೀಕರ್‌ಗಳನ್ನು ಅಳವಡಿಸಲಾಗಿತ್ತು. ಈ ಬಗ್ಗೆ ಸ್ಥಳೀಯ ಮುಸ್ಲಿಮರು ಅರ್ಚಕರಲ್ಲಿ ಆಕ್ಷೇಪ ವ್ಯಕ್ತಪಡಿಸಿದರು. ಈ ಬಗ್ಗೆ ಎಫ್‌ಐಆರ್‌ ಕೂಡ ದಾಖಲಾಗಿದೆ. ಇದು ಕರ್ನಾಟಕದಲ್ಲಿ ನಡೆದ ಘಟನೆ ಅಲ್ಲ ಎಂದು ‘ದಿ ಕ್ವಿಂಟ್‌’ ಫ್ಯಾಕ್ಟ್‌ಚೆಕ್‌ ಪ್ರಕಟಿಸಿದೆ.

ಗುಂಡಣ್ಣ



ನುಡಿ ಬೆಳಗು

ಅವಮಾನ

ಪಿ. ಚಂದ್ರಿಕಾ

ಮನುಷ್ಯನನ್ನು ಅವಮಾನ ಕಾಡಿಸುವಂತೆ ಯಾವುದೂ ಕಾಡಿಸಲಾರದು. ಆದರೆ ಯಾವ ಅವಮಾನವನ್ನೇ ಆಗಲಿ ನಾವು ಗೆಲುವನ್ನಾಗಿ ಮಾರ್ಪಡಿಸಿಕೊಳ್ಳಬೇಕು. ಇಲ್ಲದಿದ್ದರೆ ಅವು ದುಃಖವಾಗಿ ನಮ್ಮನ್ನು ಕಾಡುತ್ತಲೇ ಇರುತ್ತವೆ. ನಮ್ಮ ಸೋಲು ಅವಮಾನಗಳು ನಾವು ಮಾಗಿದ ಹಾಗೆ ಅವೂ ಮಾಗುತ್ತಾ, ನಮ್ಮ ವ್ಯಕ್ತಿತ್ವವನ್ನು ಬೆಳೆಸಬೇಕೆ ಹೊರತು ಅದೊಂದು ರೋಗವಾಗಬಾರದು. ಅದಕ್ಕೊಂದು ಉದಾಹರಣೆ ಹಿಟ್ಲರ್.

ಹಿಟ್ಲರ್ ಕೊನೆಗಾಲದಲ್ಲಿ ತನ್ನ ಮನೆ ಸೇಂಟ್ ಹೆನ್ನಾದಲ್ಲಿ ಕುಳಿತು ಯೋಚಿಸುತ್ತಿದ್ದ. ತಾನು ಎಲ್ಲಿಂದ ಎಲ್ಲಿಗೆ ಬಂದೆ? ಚರಿತ್ರೆಯಲ್ಲಿ ರಕ್ತಸಿಕ್ತ ಪುಟದಲ್ಲಿ ಹೇಗೆಲ್ಲಾ ರಾರಾಜಿಸಿದೆ? ಇಡೀ ದೇಶವನ್ನೇ ತನ್ನ ಕಿರುಬೆರಳಲ್ಲಿ ಅಲುಗಾಡಿಸಿದೆ. ವಿಶ್ವವನ್ನು ವಶಮಾಡಿಕೊಳ್ಳಲು ಹೊರಟೆ. ಇದೆಲ್ಲ ನಡೆಯಲಿಕ್ಕೆ ಕಾರಣ ಬಾಲ್ಯದ ಆ ಘಟನೆಯೇಅಲ್ಲವೇ ಎಂದು ಯೋಚಿಸತೊಡಗಿದ.

ಸಣ್ಣವನಿದ್ದಾಗ ಪಾಠ ಕಲಿಯದ ಹಿಟ್ಲರ್‌ಗೆ, ‘ಇಷ್ಟು ಸಣ್ಣ ಪಾಠವನ್ನು ಕಲಿಯದ ನೀನು ಜೀವನದಲ್ಲಿ ಏನನ್ನು ಸಾಧಿಸುತ್ತೀಯೇ?’ ಎಂದು ಮೇಷ್ಟ್ರು ಬೆತ್ತದಿಂದ ಹೊಡೆದಿದ್ದರು. ಆ ಮಾತುಗಳು ಹಿಟ್ಲರ್‌ನನ್ನು ಬಿಡದೆ ಹಿಂಬಾಲಿಸುತ್ತಿದ್ದವು. ತನ್ನ ಕೈಲಿ ಪಾಠ ಮಾತ್ರವಲ್ಲ ಇಡೀ ಜಗತ್ತೇ ಇರಬೇಕು ಎಂದು ನಿರ್ಧಾರ ಮಾಡಿದ. ಸರ್ವಾಧಿಕಾರಿಯಾಗಿ ಮೆರೆದ. ಜನರನ್ನು ಕೊಂದ. ತನ್ನ ಹೆಸರು ಕೇಳಿದರೆ ಜನ ಗಡಗಡ ನಡುಗುವಂತೆ ಮಾಡಿದ.

ಇಂಥ ಹಿಟ್ಲರ್ ತನ್ನ ಇಳಿಗಾಲದಲ್ಲಿ ಕುಳಿತು ಎಲ್ಲವನ್ನೂ ನೆನಪಿಸಿಕೊಳ್ಳುತ್ತಾ– ಈಗಲಾದರೂ ಆ ಮುದಿ ಮೇಷ್ಟ್ರಿಗೆ ಅರ್ಥವಾಯಿತೋ ಇಲ್ಲವೋ ನಾನು ಇತಿಹಾಸದಲ್ಲಿ ಏನನ್ನು ಸಾಧಿಸಿದೆ ಎಂಬುದು ಎಂದುಕೊಳ್ಳುತ್ತಾನೆ.

ಹಿಟ್ಲರ್‌ನ ನೋವು, ಅವಮಾನಗಳು ಇನ್ನೂ ಅವನ ಬಾಲ್ಯಾವಸ್ಥೆಯಲ್ಲೇ ಉಳಿದುಬಿಟ್ಟಿದ್ದವು. ಅವನು ಅವುಗಳಲ್ಲಿಯೇ ಮುಳುಗಿ ಹೋಗಿದ್ದ. ಆದ್ದರಿಂದ ತನ್ನ ಬಾಲ್ಯದಲ್ಲಿ ಮುದಿಯಾಗಿದ್ದ ಮೇಷ್ಟ್ರು ಇನ್ನೂ ಬದುಕಿದ್ದಾನೆ ಎಂದು ಭ್ರಮಿಸುತ್ತಾನೆ. ತನ್ನ ಸಾಧನೆಯ ಶಿಖರವನ್ನು ಮರೆಯುತ್ತಾನೆ. ಮತ್ತದೇ ದುಃಖಕ್ಕೆ ಜಾರುತ್ತಾನೆ. ಮನುಷ್ಯ ಮಾಗಿದ ಹಾಗೆ ದುಃಖಗಳು ಮಾಗಬೇಕು. ಇಲ್ಲದಿದ್ದರೆ ಮನುಷ್ಯ ಸಮಾಜಕ್ಕೆ ಮಾರಕವಾಗುತ್ತಾನೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಮಂಗಳವಾರ ಡಿಸೆಂಬರ್ 5, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣ ಅಷ್ಟಮಿ ಗಂ. 24-38 **ನಕ್ಷತ್ರ:** ಪೂರ್ವಫಲ್ಗುನಿ ಗಂ. 27-38 **ಯೋಗ:** ವಿಷ್ಕಂಭ ಗಂ 22-42 **ಕರಣ:** ಬಾಲವ ಗಂ. 11-19, ವೃಶ್ಚಿಕ ಮಾಸದ 19 ನೇ ದಿನ, **ಮಳೆನಕ್ಷತ್ರ:** ಜ್ಯೇಷ್ಠ 1.
ರಾಹುಕಾಲ: ಮಧ್ಯಾಹ್ನ 12-00 - 01-30,
ಸೂರ್ಯೋದಯ: 06-43 **ಸೂರ್ಯಾಸ್ತ :** 05-59
ಮುಸ್ಲಿಂ ದಿನಾಂಕ: 20 ಜುಮಾದುಲ್ಲಾವಲ್
ದಿನ ವಿಶೇಷ: ಕಾಲಾಷ್ಟಮಿ, ಅದೃಷ್ಟ ಸಂಖ್ಯೆ : 4, 7

ಮೇಷ: ವ್ಯವಹಾರಕ್ಕೆ ಸಂಬಂಧಿಸಿದಂತೆ ಔದಾರ್ಯ ಬುದ್ಧಿಯನ್ನು ತೋರಿದಲ್ಲಿ ವಂಚನೆಗೆ ಒಳಗಾಗುವ ಸನ್ನಿವೇಶಗಳಿವೆ. ಬಂಧುಗಳೊಂದಿಗೆ ಸಂತೋಷ ಕೂಟದಲ್ಲಿ ಭಾಗವಹಿಸುವಿರಿ. ನಿಮ್ಮ ಜೀವನ ಶೈಲಿಯ ವೆಚ್ಚ ಅಧಿಕವಾಗುತ್ತದೆ.

ವೃಷಭ: ವಾಣಿಜ್ಯ ಸಂಸ್ಥೆಯೊಂದರಲ್ಲಿ ಕೆಲಸ ಸಂಪಾದಿಸಿಕೊಳ್ಳುವ ಪ್ರಯತ್ನಿಸಬಹುದು. ಕೇಟರಿಂಗ್ ಮತ್ತು ಹೋಟೆಲ್ ಉದ್ಯಮದವರಿಗೆ ಶುಭ ದಿನ. ಅಮೂಲ್ಯ ವಸ್ತು, ವಿಚಾರದ ನಷ್ಟವು ಮನಸ್ಸಿಗೆ ನೋವು ಉಂಟುಮಾಡಲಿದೆ.

ಮಿಥುನ: ಪರಿಸ್ಥಿತಿಗೆ ಹೊಂದಿಕೊಂಡು ಹೋಗುವ ಗುಣದಿಂದ ವಿವಾಹಕ್ಕೆ ಸಂಬಂಧಪಟ್ಟ ಭಿನ್ನಾಭಿಪ್ರಾಯ ದೂರ ಮಾಡಿಕೊಳ್ಳುವಿರಿ. ನವ ದಂಪತಿಗಳಿಗೆ ಹರ್ಷದ ಸಮಾಚಾರ ಕೇಳಿ ಬರುವುದರಿಂದ ಮನಸ್ಸಿಗೆ ನೆಮ್ಮದಿ.

ಕರ್ಕಾಟಕ: ತಾಯಿಯ ಆರೋಗ್ಯ ಸುಧಾರಿಸಲು ಔಷಧದ ಜತೆ ಧಾರ್ಮಿಕ ಮಾರ್ಗ ಅನುಸರಿಸುವುದು ಉತ್ತಮ. ಪದವೀಧರರಿಗೆ ಉನ್ನತ ಶಿಕ್ಷಣಕ್ಕಾಗಿ ಉತ್ತಮ ಸ್ಥಳ ಲಭಿಸಲಿದೆ, ಅಧ್ಯಯನಕ್ಕೆ ಗಣ್ಯರ ಪ್ರೋತ್ಸಾಹ ಸಿಗಲಿದೆ.

ಸಿಂಹ: ನಿಮ್ಮ ಸಾಮರ್ಥ್ಯ, ಪ್ರತಿಭೆಗೆ ಅನುಗುಣವಾದ ಉದ್ಯೋಗ ಅವಕಾಶ ದೊರೆಯಲಿದೆ. ವೃತ್ತಿ ಪರವಾಗಿ ಕಚೇರಿಯಲ್ಲಿ ನಿಮಗೆ ವಿಶೇಷ ಗೌರವ ದೊರೆಯಲಿದೆ. ಕುಟುಂಬದಲ್ಲಿ ಸೌಖ್ಯವಿದ್ದು ಮನೋರಂಜನೆ ಪಡೆಯುವಿರಿ.

ಕನ್ಯಾ: ರಾಜಕೀಯದಲ್ಲಿ ಬೇರೆಯವರಿಂದ ವಂಚನೆ ನಡೆದರೂ, ನಿಮಗೆ ಉತ್ತಮ ಭವಿಷ್ಯವಿದೆ. ಸಂಶೋಧಕರಿಗೆ ಹೊಸ ಹೊಸ ಆವಿಷ್ಕಾರಗಳಿಂದ ಜನಪ್ರಿಯತೆ ಉಂಟಾಗುವುದು. ಗೃಹ ಸಾಮಾಗ್ರಿ ಖರೀದಿಯಿಂದ ಖರ್ಚು.

ತುಲಾ: ವಿವಿಧ ಮೂಲಗಳಿಂದ ದ್ರವ್ಯಲಾಭ ಇರುವುದು. ಹಿಂದಿನ ಸೋಲು ನಿಮ್ಮನ್ನು ಬಾಧಿಸುತ್ತಿದ್ದರೂ, ಹೊಸತನದಲ್ಲಿ ಜಯ ಕಾಣುವಿರಿ. ಅನಿರೀಕ್ಷಿತವಾಗಿ ಶತ್ರುಗಳ ಬಣ್ಣ ಬಯಲಾಗಿ ನಿಮ್ಮ ಸಂತೋಷಕ್ಕೆ ಕಾರಣವಾಗುತ್ತದೆ.

ವೃಶ್ಚಿಕ: ಕಾರ್ಯಕ್ಷೇತ್ರದಲ್ಲಿ ಹಿಡಿತಕ್ಕೆ ಸಿಕ್ಕದಿರುವ ಕೆಲಸಗಳನ್ನು ಸಮರ್ಥವಾಗಿ ಅರ್ಥೈಸಿಕೊಂಡು ಮತ್ತು ಅನುಭವ ಪಡೆದುಕೊಂಡು ಕಾರ್ಯರೂಪಕ್ಕೆ ತರುವಲ್ಲಿ ಯಶಸ್ವಿಯಾಗುವಿರಿ. ಕೊಡು-ಕೊಳ್ಳುವಿಕೆಗಳಿಂದ ಅಧಿಕ ಲಾಭ.

ಧನು: ಬೇಕರಿ ಮಾರಾಟಗಾರರಿಗೆ ಸಿಹಿ ಪದಾರ್ಥಗಳ ಮಾರಾಟದಿಂದ ಅಧಿಕ ಲಾಭವಿರುವುದು. ಸಾಧ್ಯವಾದರೆ ಆಪ್ತರ ಕಷ್ಟಗಳ ಕಡೆಗೆ ಗಮನಹರಿಸುವುದು ಒಳ್ಳೆಯದು. ಸಾಕು ಪ್ರಾಣಿಯ ಅಗಲಿಕೆಯಿಂದ ಸ್ವಲ್ಪ ಬೇಸರ ಕಾಡುವುದು.

ಮಕರ: ಏರುಪೇರಾಗಿದ್ದ ವ್ಯಾಪಾರ ವ್ಯವಹಾರಗಳನ್ನು ಉತ್ತಮ ರೀತಿಯಲ್ಲಿ ಸರಿಪಡಿಸಿಕೊಳ್ಳಬಹುದು. ಪ್ರಾಮಾಣಿಕ ಅಧಿಕಾರಿಗಳಿಗೆ ಹಿರಿಯ ಅಧಿಕಾರಿಗಳಿಂದ ಕಿರುಕುಳ. ಹೊಸದನ್ನು ಕಲಿಯುವ ಉತ್ಸಾಹ ಮೂಡಲಿದೆ.

ಕುಂಭ: ಪರಿಶ್ರಮಕ್ಕೆ ತಕ್ಕ ಆದಾಯವಿಲ್ಲದಿರುವ ನಿಮಗೆ ಹಲವಾರು ಕನಸುಗಳು ಈಡೇರುವ ಅವಕಾಶ ಅಪರಿಚಿತ ವ್ಯಕ್ತಿ ತೋರುವರು. ಅಧಿಕಾರಿಗಳ ಖಾಸಗಿ ಸಂಪರ್ಕದಿಂದ ನಿಮ್ಮ ಕೆಲಸಗಳಿಗೆ ಹೆಚ್ಚಿನ ಪುಷ್ಟಿ ದೊರೆಯಲಿದೆ.

ಮೀನ: ರಾಜಕೀಯ ವ್ಯಕ್ತಿಗಳು ನಿಮ್ಮ ಪರವಾದ ಪರಿಸ್ಥಿತಿಯ ಲಾಭ ಪಡೆದುಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ಮನೆಯಲ್ಲಿನ ವ್ಯವಹಾರಗಳಲ್ಲಿ ಈ ದಿನ ಸಕಾರಾತ್ಮಕ ಪ್ರತಿಕ್ರಿಯೆಗಳನ್ನು ಕಾಣುವಿರಿ. ಜಯ ನಿಮ್ಮದಾಗಲಿದೆ.

ಪದಬಂಧ 5520 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಅಭ್ಯರ್ಥಿ ಇಲ್ಲಿದ್ದಾನೆ (5)
3.ಮೋಕ್ಷ ಮಾಡಿಸಿಕೊಂಡಿರುವ ಕೆನ್ನೆ (3)
5.ಸದನದಲ್ಲಿರುವ ಜಾನುವಾರು (2)
7.ಕನ್ನಡಿಗನು ಹಿಡಿದಿರುವ ದರ್ಪಣ (3)
8.ತಪ್ಪಾಗಿ ಭಾವಿಸುವಿಕೆ (5)
11.ಪಣ ಕಟ್ಟಿ ಮಾಡಿದ ಪ್ರಯಾಣ! (3)
12.ಸ್ವಭಾವವಿಲ್ಲಿ ತಿರುವುಮುರುವಾಗಿದೆ (2)
14.ಬೂಬು ಹೇಳಿದ ಕಾರಣ! (3)
15.ಈತ ಅಡುಗೆಯಲ್ಲಿ ನುರಿತವನು (5)

ಮೇಲಿಂದ ಕೆಳಕ್ಕೆ
1.ಈತ ನೆರವು ನೀಡುವವನು (4)
2.ಚರ್ಚೆ ಇಲ್ಲಿದೆ (3)
4.ತಿರುಗಿ ನಿಂತಿರುವ ಅಗಸ (4)
6.ಹಳೆಯದನ್ನು ಹೊಸದು ಮಾಡುವಿಕೆ (5)
7.ಊಹೆಯನ್ನು ಹೀಗೆ ಹೇಳಿ (3)
8.ತಾರುಣ್ಯ ಹೊಂದಿದವನು (3)
9.ಆಹಾರವನ್ನು ಸೇವಿಸದಿರುವಿಕೆ (4)
10.ಒಡವೆ ಇಲ್ಲಿದೆ (4)
13.ಗಣಿತದಲ್ಲಿ ಗುಣಿಸುವ ಸಂಖ್ಯೆ (3)



5519ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅನುಮಾನ 3.ಬಾಲಂಗೋಚಿ
5.ಗುಡಾಣ 6.ತಿಲಕ
8.ಪುಳಕ 9.ಪುರೀತಾ
10.ಲಾಲಸೆ 11.ನಯನ
12.ಸುಗಮ 14.ಮರವೆ
16.ಸಮಾಚಾರ 17.ನಾಗರಿಕ

ಮೇಲಿಂದ ಕೆಳಕ್ಕೆ:
1.ಅದಿತಿ 2.ನಗು
3.ಬಾಣ 4.ಸಿಡುಕ
7.ಕರತಾಡನ 8.ಪುಸಲಾಯಿಸು
11.ನದಸ 13.ಮಶಕ 14.ಮರ
15.ವೆನಾ

ಸುಡೊಕು 5906

8			1		2		6	
		5		3				9
2		4				1		
	6	8		5			4	1
						7	9	
9	4			2				
3				8		9		5
		6					8	
	8		3		5			2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5905 ಸುಡೊಕು

4	5	7	3	6	8	9	1	2
9	8	1	5	7	2	3	4	6
6	3	2	9	4	1	7	5	8
3	7	4	2	8	9	1	6	5
5	2	9	4	1	6	8	3	7
1	6	8	7	3	5	2	9	4
2	9	3	8	5	4	6	7	1
7	4	6	1	2	3	5	8	9
8	1	5	6	9	7	4	2	3

ಮಿಜೋರಾಂನಲ್ಲಿ ಆರು ಪ್ರಾದೇಶಿಕ ಪಕ್ಷಗಳನ್ನು ಒಗ್ಗೂಡಿಸಿ ಝೆಡ್‌ಪಿಎಂ ರಚಿಸಿದ್ದ ನಾಯಕ

ಸಿ.ಎಂ ಪಟ್ಟಕ್ಕೇರಲು ಲಾಲ್ದುಹೋಮಾ ಸಜ್ಜು

ಪ್ರಜಾವಾಣಿ ವಾರ್ತೆ/ ಪಿಟಿಐ

ಗುವಾಹಟಿ: ಮಿಜೋರಾಂನ ಪ್ರಾದೇಶಿಕ ಪಕ್ಷವಾದ ಝೋರಂ ಪೀಪಲ್ಸ್ ಮೂವ್‌ಮೆಂಟ್ (ಝೆಡ್‌ಪಿಎಂ) ಇದೇ ಮೊದಲಬಾರಿಗೆ ರಾಜ್ಯದಲ್ಲಿ ಸರ್ಕಾರ ರಚಿಸುತ್ತಿದೆ. ಎಂಎನ್‌ಎಫ್ ಮತ್ತು ಕಾಂಗ್ರೆಸ್ಸೇತರ ಪಕ್ಷದ ಪ್ರಥಮ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಗೆ ಪಕ್ಷದ ಮುಖ್ಯಸ್ಥ, ಮಾಜಿ ಐಪಿಎಸ್ ಅಧಿಕಾರಿ ಲಾಲ್ದುಹೋಮಾ ಅವರು ಪಾತ್ರರಾಗಲಿದ್ದಾರೆ.

ರಾಜ್ಯದ ರಾಜ್ಯಪಾಲ ಹರಿಬಾಬು ಕಂಬಂಪತಿ ಅವರನ್ನು ಲಾಲ್ದುಹೋಮಾ ಅವರು ಮಂಗಳವಾರ ಭೇಟಿ ಆಗಿ ಸರ್ಕಾರ ರಚಿಸಲು ಹಕ್ಕು ಮಂಡಿಸುವ ನಿರೀಕ್ಷೆ ಇದೆ.


ಲಾಲ್ದುಹೋಮಾ

ಆರು ಪ್ರಾದೇಶಿಕ ಪಕ್ಷಗಳನ್ನು ಒಗ್ಗೂಡಿಸಿ ಲಾಲ್ದುಹೋಮಾ (73) ಅವರು ಝೆಡ್‌ಪಿಎಂ ಪಕ್ಷ ರಚಿಸಿದರು. ಈ ಬಾರಿಯ ವಿಧಾನಸಭೆ ಚುನಾವಣೆಯಲ್ಲಿ ಪಕ್ಷವನ್ನು ಮುನ್ನಡೆಸಿದ ಅವರು, ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರ ಭದ್ರತಾ ಉಸ್ತುವಾರಿ ಹುದ್ದೆಯಲ್ಲಿದ್ದರು. 1984ರಲ್ಲಿ ಐಪಿಎಸ್ ಹುದ್ದೆಗೆ ರಾಜೀನಾಮೆ ನೀಡಿ ಕಾಂಗ್ರೆಸ್ ಸೇರ್ಪಡೆಯಾದರು. ಅದೇ ವರ್ಷ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದಿದ್ದರು. ಅಲ್ಲಿಂದ ಈಚೆಗೆ ಹಲವಾರು ಆಡಳಿತದ ವಿರುದ್ಧ ಹೋರಾಡುತ್ತಲೇ ಮುಂದೆ ಸಾಗಿದ ಅವರು, ಈಗ ಮುಖ್ಯಮಂತ್ರಿ ಸ್ಥಾನದ ಹೊಸ್ತಿಲಿನಲ್ಲಿದ್ದಾರೆ. ಅಂದಿನ ಮಿಜೋರಾಂ ಮುಖ್ಯಮಂತ್ರಿ ಲಲ್ ಥನ್‌ಹವ್ಲಾ ಅವರ ವಿರುದ್ಧ ಸಂಚು ರೂಪಿಸಿದ ಆರೋಪಕ್ಕೆ ಗುರಿಯಾದ ಲಾಲ್ದುಹೋಮಾ, 1986ರಲ್ಲಿ ಕಾಂಗ್ರೆಸ್ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿ, ಎಂಎನ್‌ಎಫ್ ಸೇರಿದ್ದರು. ಪಕ್ಷಾಂತರ ಕಾಯ್ದೆ ಅಡಿ 1988ರಲ್ಲಿ ಅವರ ಸಂಸತ್ ಸದಸ್ಯತ್ವ ಅನರ್ಹಗೊಳಿಸಲಾಯಿತು. ಪಕ್ಷಾಂತರ ನಿಷೇಧ ಕಾಯ್ದೆ ಅಡಿ ಅನರ್ಹಗೊಂಡ ಮೊದಲ ಸಂಸದ ಎಂಬ ದಾಖಲೆಯೂ ಅವರ ಹೆಸರಲ್ಲೇ ಇದೆ.

ಎಂಎನ್‌ಎಫ್ ತೊರೆದು ಜೋರಂ ನ್ಯಾಷನಲಿಸ್ಟ್ ಪಕ್ಷವನ್ನು (ಝೆಡ್‌ಎನ್‌ಪಿ) ಕಟ್ಟಿದ ಲಾಲ್ದುಹೋಮಾ, 2003ರ ಮಿಜೋರಾಂ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದರು. 2018ರಲ್ಲಿ ಝೆಡ್‌ಪಿಎಂ ಸ್ಥಾಪಿಸಲು ಝೆಡ್‌ಎನ್‌ಪಿ ಅಡಿಗಲ್ಲಾಯಿತು. ಝೆಡ್‌ಪಿಎಂಗೆ ಚುನಾವಣಾ ಆಯೋಗದಿಂದ ಮಾನ್ಯತೆ ಸಿಗದ ಕಾರಣ ಲಾಲ್ದುಹೋಮಾ ಸೇರಿ ಪಕ್ಷದ ಸದಸ್ಯರು 2018ರ ವಿಧಾನಸಭೆ ಚುನಾವಣೆಯಲ್ಲಿ ಪಕ್ಷೇತರರಾಗಿ ಸ್ಪರ್ಧಿಸಿದರು. ಲಾಲ್ದುಹೋಮಾ ಅವರು ಎರಡು ಕ್ಷೇತ್ರಗಳಲ್ಲಿ ಗೆದ್ದಿದ್ದರು. 2019ರಲ್ಲಿ ಝೆಡ್‌ಪಿಎಂಗೆ ಪಕ್ಷದ ಮಾನ್ಯತೆ ದೊರಕಿತು. ಪಕ್ಷೇತರರಾಗಿ ಸ್ಪರ್ಧಿಸಿದ್ದ ಲಾಲ್ದುಹೋಮಾ ಝೆಡ್‌ಪಿಎಂ ಪಕ್ಷದ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದನ್ನು 'ಪಕ್ಷಾಂತರ' ಎಂದು ಕರೆದ ಎಂಎನ್‌ಎಫ್ ಶಾಸಕರು ಮಿಜೋರಾಂ ಸ್ಪೀಕರ್‌ಗೆ ದೂರು ನೀಡಿದ್ದರು. ದೂರನ್ನು ಪರಿಗಣಿಸಿದ್ದ ಸ್ಪೀಕರ್, ಲಾಲ್ದುಹೋಮಾ ಅವರನ್ನು 2020ರಲ್ಲಿ ಅನರ್ಹಗೊಳಿಸಿದರು. ಬಳಿಕ, 2021ರಲ್ಲಿ ಸೆರ್ಛಿಪ್ ಕ್ಷೇತ್ರದಿಂದ ಸ್ಪರ್ಧಿಸಿ ವಿಧಾನಸಭೆಗೆ ಪ್ರವೇಶಿಸಿದರು. ಈ ವರ್ಷ ಏಪ್ರಿಲ್‌ನಲ್ಲಿ ನಡೆದ ಲುಂಗ್ಲೆಯು ನಗರಾಡಳಿತ ಚುನಾವಣೆಯಲ್ಲಿ ಝೆಡ್‌ಪಿಎಂ ಗೆಲುವು ಸಾಧಿಸಿತು. ಬಳಿಕ, ಪೂರ್ವ ಐಜ್ವಾಲ್‌ನ ಗ್ರಾ. ಪಂ ಚುನಾವಣೆಯಲ್ಲೂ ಗೆದ್ದಿತು. ಪಕ್ಷದ ಸರಣಿ ಗೆಲುವಿನ ಓಟ ವಿಧಾನಸಭೆ ಚುನಾವಣೆಗೂ ವಿಸ್ತರಿಸಿತು.

ಈ ಬಾರಿಯ ಚುನಾವಣೆಯಲ್ಲಿ ಲಾಲ್ದುಹೋಮಾ ಅವರು ಸೆರ್ಛಿಪ್‌ನಿಂದ ಸ್ಪರ್ಧಿಸಿ ಎಂಎನ್‌ಎಫ್ ಅಭ್ಯರ್ಥಿ ವಿರುದ್ಧ 2,982 ಮತಗಳ ಅಂತರದಿಂದ ಗೆದ್ದಿದ್ದಾರೆ.



ಝೆಡ್‌ಪಿಎಂಗೆ ಸ್ಪಷ್ಟ ಬಹುಮತ

ಒಂದನೇ ಪುಟದಿಂದ

ಆಡಳಿತ ವಿರೋಧಿ ಅಲೆಯನ್ನು ಎದುರಿಸಲು ಜೋರಮ್‌ಥಂಗಾ ಅವರು ಮಿಜೊ ರಾಷ್ಟ್ರೀಯವಾದವನ್ನು ನೆಚ್ಚಿಕೊಂಡಿದ್ದರಾದರೂ, ಅದು ಎಂಎನ್‌ಎಫ್ ಪಕ್ಷಕ್ಕೆ ನೆರವಿಗೆ ಬಂದಿಲ್ಲ.

ನೆರೆಯ ಮ್ಯಾನ್ಮಾರ್, ಬಾಂಗ್ಲಾದೇಶ ಹಾಗೂ ಪಕ್ಕದ ಮಣಿಪುರ ರಾಜ್ಯದಲ್ಲಿ ನೆಲೆ ಕಳೆದುಕೊಂಡಿರುವ ಚಿನ್–ಕುಕಿ–ಜೋ ಸಮುದಾಯದವರ ಪರವಾಗಿ ಎಂಎನ್‌ಎಫ್ ತಾಳಿರುವ ನಿಲುವು ಪಕ್ಷಕ್ಕೆ ಚುನಾವಣೆಯಲ್ಲಿ ನೆರವಾಗಲಿದೆ ಎಂದು ಜೋರಮ್‌ಥಂಗಾ ಅವರು ಹೇಳಿದ್ದರು. ಆದರೆ, ಮಿಜೋರಾಂನ ಎಲ್ಲ ಪಕ್ಷಗಳೂ ಈ ಸಮುದಾಯದ ಸಂತ್ರಸ್ತರ ಪರ ಇರುವ ಕಾರಣ, ಎಂಎನ್‌ಎಫ್‌ಗೆ ಮಾತ್ರವೇ ಸಹಾಯವಾಗಲಿದೆ ಎಂಬುದು ಸುಳ್ಳು ಎಂದು ಲಾಲ್ದುಹೋಮಾ ಹೇಳಿದ್ದರು.

ಚುನಾವಣಾ ಫಲಿತಾಂಶ ಪ್ರಕಟವಾದ ನಂತರ ರಾಜ್ಯಪಾಲರನ್ನು ಭೇಟಿ ಮಾಡಿ ಜೋರಮ್‌ಥಂಗಾ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ. ಆಡಳಿತ ವಿರೋಧಿ ಅಲೆಯು ತಮ್ಮ ಪಕ್ಷದ ಸೋಲಿಗೆ ಕಾರಣವಾಯಿತು ಎಂದು ಜೋರಮ್‌ಥಂಗಾ ಒಪ್ಪಿಕೊಂಡಿದ್ದಾರೆ.

ಲಾಲ್ದುಹೋಮಾ ಅವರು ರಾಜ್ಯಪಾಲರನ್ನು ಮಂಗಳವಾರ ಭೇಟಿ ಮಾಡಿ, ಸರ್ಕಾರ ರಚನೆಗೆ ಹಕ್ಕು ಮಂಡಿಸುವ ನಿರೀಕ್ಷೆ ಇದೆ.

ಮಧ್ಯಪ್ರದೇಶ, ರಾಜಸ್ಥಾನ, ಛತ್ತೀಸಗಢ ವಿಧಾನಸಭೆ ಚುನಾವಣೆಯಲ್ಲಿ ಪಕ್ಷದ ಗೆಲುವನ್ನು ಪಶ್ಚಿಮ ಬಂಗಾಳದ ಬಿಜೆಪಿ ನಾಯಕರು ಮತ್ತು ಕಾರ್ಯಕರ್ತರು ಕೋಲ್ಕತ್ತಾದಲ್ಲಿ ಸೋಮವಾರ ಸಂಭ್ರಮಿಸಿದರು –ಪಿಟಿಐ ಚಿತ್ರ

'ಇಂಡಿಯಾ' ಮೈತ್ರಿಕೂಟದ ಮೇಲೆ ಪರಿಣಾಮ ಬೀರದು'

ನವದೆಹಲಿ (ಪಿಟಿಐ): ಐದು ರಾಜ್ಯಗಳ ವಿಧಾನಸಭಾ ಚುನಾವಣೆ ಫಲಿತಾಂಶವು 'ಇಂಡಿಯಾ' ಮೈತ್ರಿಕೂಟದ ಮೇಲೆ ಯಾವುದೇ ಪರಿಣಾಮ ಬೀರದು. ಆದರೂ ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಯಶಸ್ಸು ಗಳಿಸಬೇಕಾದರೆ ಇನ್ನಷ್ಟು ಪರಿಶ್ರಮ ಪಡಬೇಕಿದೆ ಎಂದು ವಿರೋಧ ಪಕ್ಷಗಳ ನಾಯಕರು ಹೇಳಿದ್ದಾರೆ.

ಮಧ್ಯಪ್ರದೇಶ, ರಾಜಸ್ಥಾನ ಮತ್ತು ಛತ್ತೀಸಗಢದಲ್ಲಿ ದೊರೆತ ಭರ್ಜರಿ ಗೆಲುವು, 2024ರ ಲೋಕಸಭೆ ಚುನಾವಣೆಗೆ ಮುನ್ನ ಬಿಜೆಪಿಯ ಬಲ ವೃದ್ಧಿಸಿದೆ. ರಾಜಸ್ಥಾನ ಮತ್ತು ಛತ್ತೀಸಗಢದಲ್ಲಿ ಅಧಿಕಾರ ಕಳೆದುಕೊಂಡಿರುವ ಕಾಂಗ್ರೆಸ್‌ಗೆ ತೆಲಂಗಾಣದಲ್ಲಿ ದೊರೆತ ಗೆಲುವು ಅಲ್ಪ ಸಮಾಧಾನ ನೀಡಿದೆ.

ವಿಧಾನಸಭಾ ಚುನಾವಣೆ ಫಲಿತಾಂಶ 'ಇಂಡಿಯಾ' ಮೈತ್ರಿಕೂಟದ ಮೇಲೆ ಪರಿಣಾಮ ಬೀರಲಿದೆಯೇ ಎಂಬ ಪ್ರಶ್ನೆಗೆ ನ್ಯಾಷನಲ್ ಕಾನ್ಫರೆನ್ಸ್ (ಎನ್‌ಸಿ) ನಾಯಕ ಫಾರೂಕ್ ಅಬ್ದುಲ್ಲಾ, 'ಯಾವುದೇ ಪರಿಣಾಮ ಬೀರದು. ಆದರೆ ವಿಪಕ್ಷಗಳು ಇನ್ನಷ್ಟು ಶ್ರಮವಹಿಸಿ ಕೆಲಸ ಮಾಡಬೇಕಿದೆ' ಎಂದು ಪ್ರತಿಕ್ರಿಯಿಸಿದ್ದಾರೆ.

ಆರ್‌ಜೆಡಿ ನಾಯಕ ಮನೋಜ್ ಝಾ ಅವರ ಅಭಿಪ್ರಾಯವೂ ಇದೇ ಆಗಿದೆ. 'ಇದು ರಾಜ್ಯಗಳಲ್ಲಿ ನಡೆದಿರುವ ಚುನಾವಣೆ. ರಾಷ್ಟ್ರ ಮಟ್ಟದಲ್ಲಿ ನಡೆಯುವ (ಲೋಕಸಭೆ) ಚುನಾವಣೆಯ ವಿಷಯವೇ ಬೇರೆ ಆಗಿರುತ್ತದೆ. ಐದು ರಾಜ್ಯಗಳ ಚುನಾವಣೆಯ ಫಲಿತಾಂಶದಿಂದ ಮೈತ್ರಿಕೂಟದ ಮೇಲೆ ಪರಿಣಾಮ ಉಂಟಾಗದು' ಎಂದಿದ್ದಾರೆ.

'ಚುನಾವಣೆಯಲ್ಲಿ ಗೆದ್ದವರನ್ನು ಅಭಿನಂದಿಸುತ್ತೇನೆ. ಮೂರು ರಾಜ್ಯಗಳಲ್ಲಿ ಪಕ್ಷಕ್ಕೆ ಆಗಿರುವ ಹಿನ್ನಡೆಯ ಬಗ್ಗೆ ಆತ್ಮಾವಲೋಕನ ಮಾಡಲಾಗುವುದು' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ತಿಳಿಸಿದ್ದಾರೆ.

'ಇಂಡಿಯಾ' ಮೈತ್ರಿಕೂಟದ ಪಕ್ಷಗಳ ನಡುವಣ ಭಿನ್ನಾಭಿಪ್ರಾಯದ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಮೈತ್ರಿಕೂಟದಲ್ಲಿ ಯಾವುದೇ ಒಡಕು ಇಲ್ಲ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಕಚೇರಿಯಲ್ಲಿ ಸೋಮವಾರ ನಡೆದ ಸಭೆಯಲ್ಲಿ ಎಲ್ಲ ವಿಪಕ್ಷಗಳ ಪ್ರತಿನಿಧಿಗಳೂ ಪಾಲ್ಗೊಂಡಿದ್ದರು' ಎಂದರು.

'ಏನಾದರೂ ದೂರುಗಳಿದ್ದರೆ ಅದನ್ನು ಹೇಳುವ ಅಧಿಕಾರ ಎಲ್ಲರಿಗೂ ಇದೆ. ಗಂಭೀರವಾದ ದೂರುಗಳಿದ್ದರೆ ಅವುಗಳನ್ನು ಪರಿಶೀಲಿಸಿ, ತಪ್ಪು ಸರಿಪಡಿಸಲಾಗುವುದು' ಎಂದು ನುಡಿದರು.

ರಾಜ್ಯ ಘಟಕಗಳಲ್ಲಿ ಬದಲಾವಣೆ ಮಾಡಲು ಕಾಂಗ್ರೆಸ್ ಚಿಂತನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಐದು ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಆಗಿರುವ ಹಿನ್ನಡೆಯ ಆಘಾತದಲ್ಲಿರುವ ಕಾಂಗ್ರೆಸ್ ಹೈಕಮಾಂಡ್, ಮಧ್ಯಪ್ರದೇಶ, ರಾಜಸ್ಥಾನ ಮತ್ತು ಛತ್ತೀಸಗಢದ ರಾಜ್ಯ ಘಟಕಗಳಲ್ಲಿ 'ಭಾರಿ ಬದಲಾವಣೆ' ತರುವ ಗಂಭೀರ ಚಿಂತನೆ ನಡೆಸಿದೆ.

ಕಾಂಗ್ರೆಸ್‌ನ ನಾಯಕರು ರಾಜಸ್ಥಾನದಲ್ಲಿ ಪಕ್ಷಕ್ಕೆ ಹಿನ್ನಡೆಯನ್ನು ನಿರೀಕ್ಷಿಸಿದ್ದರೂ, ಮಧ್ಯಪ್ರದೇಶ ಮತ್ತು ಛತ್ತೀಸಗಢದಲ್ಲಿ ಸೋಲನ್ನು ಊಹಿಸಿಯೂ ಇರಲಿಲ್ಲ.

'ಜಾತಿಗಣತಿ'ಯನ್ನು ಮುಖ್ಯ-ವಿಷಯವಾಗಿಟ್ಟುಕೊಂಡು ನಡೆಸಿದ ಪ್ರಚಾರ ಅಭಿಯಾನ ತಂತ್ರ ಫಲಿಸದೇ ಇರುವುದರ ಬಗ್ಗೆ ಪಕ್ಷದ ನಾಯಕರು ಚರ್ಚೆ ನಡೆಸುವ ಸಾಧ್ಯತೆಯಿದೆ ಎಂದು ಮೂಲಗಳು ಹೇಳಿವೆ.

ಮಧ್ಯಪ್ರದೇಶ ರಾಜ್ಯ ಘಟಕದ ಕೆಲವು ಪದಾಧಿಕಾರಿಗಳು ಕಮಲ್‌ನಾಥ್ ಅವರಂತಹ ಹಿರಿಯ ನಾಯಕರ 'ದುರಹಂಕಾರ'ದ ಬಗ್ಗೆ ಬಹಿರಂಗವಾಗಿ ತಮ್ಮ ಸಿಟ್ಟು ಹೊರಹಾಕಿದ್ದಾರೆ. ಆದ್ದರಿಂದ ಪಕ್ಷದ ಹೈಕಮಾಂಡ್, ರಾಜ್ಯ ಘಟಕದಲ್ಲಿ ಹೊಸ ತಲೆಮಾರಿನ ನಾಯಕರಿಗೆ ಅವಕಾಶ ನೀಡಲು ಮುಂದಾಗುವ ಸಾಧ್ಯತೆಯಿದೆ.

'ದುರಹಂಕಾರ ಮತ್ತು ಅತಿಯಾದ ಆತ್ಮವಿಶ್ವಾಸದಿಂದಾಗಿ ಮಧ್ಯಪ್ರದೇಶದಲ್ಲಿ ನಾವು ಸೋತಿದ್ದೇವೆ. ಸಾಮಾನ್ಯ ಕಾರ್ಯಕರ್ತರ ಕಡೆಗಣನೆ ಕೂಡಾ ಹಿನ್ನಡೆಗೆ ಕಾರಣ. ನಮ್ಮ ಪರ ಅಲೆಯಿದ್ದರೂ, ಅದರ ಲಾಭ ಎತ್ತಿಕೊಳ್ಳುವಲ್ಲಿ ವಿಫಲರಾದೆವು' ಎಂದು ಮಧ್ಯಪ್ರದೇಶದ ರಾಜ್ಯಸಭಾ ಸದಸ್ಯ ರಾಜಮಣಿ ಪಟೇಲ್ ಅಭಿಪ್ರಾಯಪಟ್ಟರು.

ರಾಜಸ್ಥಾನ, ಮಧ್ಯಪ್ರದೇಶ ಮಾತ್ರವಲ್ಲದೆ, ಬುಡಕಟ್ಟು ಜನರ ಪ್ರಾಬಲ್ಯದ ಛತ್ತೀಸಗಢದಲ್ಲೂ ಪಕ್ಷಕ್ಕೆ ಹಿನ್ನಡೆ ಉಂಟಾಗಿರುವುದನ್ನು ಹೈಕಮಾಂಡ್ ಗಂಭೀರವಾಗಿ ಪರಿಗಣಿಸಿದೆ ಎಂದು ಮೂಲಗಳು ಹೇಳಿವೆ.

6ರ ಸಭೆಗೆ ಮಮತಾ ಗೈರು

ಕೋಲ್ಕತ್ತ (ಪಿಟಿಐ): ಇದೇ 6ರಂದು ನಡೆಯಲಿರುವ 'ಇಂಡಿಯಾ' ಮೈತ್ರಿಕೂಟದ ಸಭೆಗೆ ತಮಗೆ ಹೋಗಲು ಸಾಧ್ಯವಾಗುವುದಿಲ್ಲ. ಅಂದು ಪೂರ್ವ ನಿಗದಿತ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕಿದೆ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದ್ದಾರೆ.

ಸಭೆಯ ದಿನಾಂಕ ತಮಗೆ ಗೊತ್ತಿರಲಿಲ್ಲ. ಈ ಬಗ್ಗೆ ಮೊದಲೇ ತಮಗೆ ಮಾಹಿತಿ ಇದ್ದಿದ್ದರೆ ತಮ್ಮ ಕಾರ್ಯಕ್ರಮವನ್ನು ಬದಲಿಸಿಕೊಳ್ಳಬಹುದಾಗಿತ್ತು ಎಂದಿದ್ದಾರೆ. ಮೈತ್ರಿಕೂಟದ ನಾಯಕರು ಇದೇ 6ರಂದು ದೆಹಲಿಯಲ್ಲಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನಿವಾಸದಲ್ಲಿ ಸಭೆ ಸೇರಲಿದ್ದಾರೆ. 2024ರ ಲೋಕಸಭೆ ಚುನಾವಣೆ ಎದುರಿಸುವ ಕುರಿತ ಕಾರ್ಯತಂತ್ರದ ಬಗ್ಗೆ ಚರ್ಚಿಸಲಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಕಾಂಗ್ರೆಸ್ ಕಳಪೆ ಸಾಧನೆ

ಮಿಜೋರಾಂನ 40 ಸ್ಥಾನಗಳ ಪೈಕಿ 1ರಲ್ಲಿ ಗೆಲುವು

ಪ್ರಜಾವಾಣಿ ವಾರ್ತೆ

ಗುವಾಹಟಿ: ಮಿಜೋರಾಂನ ಕಾಂಗ್ರೆಸ್ ಮುಖಂಡರಿಗೆ, ಮಾಜಿ ಮುಖ್ಯಮಂತ್ರಿ ಲಲಥನ್‌ಹವಲಾ ಅವರ ಅನುಪಸ್ಥಿತಿಯು ಸೋಮವಾರ ಬಹುವಾಗಿ ಕಾಡಿತು. 1986ರ ನಂತರ ಪಕ್ಷವನ್ನು ಐದು ಬಾರಿ ಗೆಲ್ಲಿಸಿದ್ದರು ಲಲಥನ್‌ಹವಲಾ.

ಮಿಜೋರಾಂ ವಿಧಾನಸಭೆಯ 40 ಸ್ಥಾನಗಳಿಗೆ ಸ್ಪರ್ಧಿಸಿ, ಮತ್ತೆ ಅಧಿಕಾರ ಹಿಡಿಯುವ ಉಮೇದಿನಲ್ಲಿದ್ದ ಕಾಂಗ್ರೆಸ್ 1 ಸ್ಥಾನ ಮಾತ್ರ ಗೆದ್ದಿದೆ. ಮಿಜೋರಾಂ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಲಾಲಸವತಾ ಅವರೂ ಸೋಲುಂಡಿದ್ದಾರೆ.

'ಲಲಥನ್‌ಹವಲಾ ಅವರ ಅನುಪಸ್ಥಿತಿಯನ್ನು ನಾವು ನಿಜಕ್ಕೂ ಅನುಭವಿಸುತ್ತಿದ್ದೇವೆ. ಪಕ್ಷವು ಮತ್ತೆ ಪುಟಿದೇಳಬೇಕು ಎಂದಾದರೆ ನಮಗೆ ಅವರಂತಹ ಬಲಿಷ್ಠ ನಾಯಕ ಬೇಕು' ಎಂದು ಕಾಂಗ್ರೆಸ್ ಮುಖಂಡರೊಬ್ಬರು ಹೇಳಿದರು.

ಮಿಜೋರಾಂನಲ್ಲಿ ಕಾಂಗ್ರೆಸ್ಸಿನ ಅಧಃಪತನವು 2018ರ ವಿಧಾನಸಭಾ ಚುನಾವಣೆಯಲ್ಲಿಯೇ ಶುರುವಾಗಿತ್ತು. ಆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಐದು ಕ್ಷೇತ್ರಗಳಲ್ಲಿ ಮಾತ್ರ ಗೆಲುವು ಸಾಧಿಸಿ, ಮೂರನೆಯ ಸ್ಥಾನಕ್ಕೆ ಕುಸಿದಿತ್ತು. ಆಗ ಎಂಎನ್‌ಎಫ್ ಪಕ್ಷವು ಲಲಥನ್‌ಹವಲಾ ನೇತೃತ್ವದ ಸರ್ಕಾರವನ್ನು ಅಧಿಕಾರದಿಂದ ಕೆಳಗಿಳಿಸಿತ್ತು.

2023ರಲ್ಲಿ ಅಧಿಕಾರ ಹಿಡಿಯಬೇಕು ಎಂಬ ಉಮೇದಿನಲ್ಲಿ ಕಾಂಗ್ರೆಸ್ ಇದ್ದಾಗ, 2021ರಲ್ಲಿ ಲಲಥನ್‌ಹವಲಾ ಅವರು ರಾಜಕಾರಣಕ್ಕೆ ನಿವೃತ್ತಿ ಘೋಷಿಸಿದರು. ಆಗ ಅವರಿಗೆ 79 ವರ್ಷ ವಯಸ್ಸಾಗಿತ್ತು. ಅವರ ನಿವೃತ್ತಿಯ ನಂತರ ಪಕ್ಷವು ಅಭ್ಯರ್ಥಿ ಗಳನ್ನು ಕಣಕ್ಕೆ ಇಳಿಸುವಲ್ಲಿ, ಸಂಘಟನಾತ್ಮಕವಾಗಿ ಸಮಸ್ಯೆ ಎದುರಿಸಿದೆ.

'ಲಲಥನ್‌ಹವಲಾ ಅವರ ನಿವೃತ್ತಿಯ ನಂತರ ಪಕ್ಷವನ್ನು ಗೆಲುವಿನ ದಡಕ್ಕೆ ಕರೆದೊಯ್ಯುವ ನಾಯಕ ಇಲ್ಲದಂತಾಗಿದೆ. ಈಗಿನ ನಾಯಕರಲ್ಲಿನ ಆಂತರಿಕ ಸಂಘರ್ಷ ಕೂಡ ಇನ್ನೊಂದು ಸಮಸ್ಯೆಯಾಗಿತ್ತು' ಎಂದು ಮಿಜೋರಾಂ ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರದ ಪ್ರಾಧ್ಯಾಪಕ ಜಾಂಗ್‌ಖೊಂಗಾಂ ದೌಂಗೆಲ್ ಅವರು ವಿಶ್ಲೇಷಿಸಿದರು.

'ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿ ಇಲ್ಲದಿರುವುದು ಕೂಡ ರಾಜ್ಯದಲ್ಲಿ ಅದರ ಮೇಲೆ ಒಂದಿಷ್ಟು ಪರಿಣಾಮ ಉಂಟುಮಾಡಿದೆ' ಎಂದು ಅವರು ಹೇಳಿದರು. ರಾಜ್ಯದಲ್ಲಿ ಕಾಂಗ್ರೆಸ್ ಪರವಾಗಿ ಪ್ರಚಾರ ನಡೆಸಿದ್ದ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಎಂಎನ್‌ಎಫ್ ಮತ್ತು ಝೆಡ್‌ಪಿಎಂ ವಿರುದ್ಧ ವಾಗ್ದಾಳಿ ನಡೆಸಿದ್ದರು. ಎರಡೂ ಪಕ್ಷಗಳು ಕ್ರೈಸ್ತ ಸಮುದಾಯದ ಬಾಹುಳ್ಯವಿರುವ ಈ ರಾಜ್ಯದಲ್ಲಿ ಬಿಜೆಪಿ ಮತ್ತು ಆರ್‌ಎಸ್‌ಎಸ್‌ಗೆ 'ಪ್ರವೇಶ ದ್ವಾರಗಳಂತೆ ಕೆಲಸ ಮಾಡುತ್ತವೆ' ಎಂದು ರಾಹುಲ್ ಅವರು ದೂರಿದ್ದರು.

ಆದರೆ ಈ ಆರೋಪವು ಕಾಂಗ್ರೆಸ್ ಪಕ್ಷದ ನೆರವಿಗೆ ಬರಲಿಲ್ಲ ಎಂದು ರಾಜಕೀಯ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ. ಎಂಎನ್‌ಎಫ್ ಮತ್ತು ಕಾಂಗ್ರೆಸ್ಸಿನ ವೈಫಲ್ಯಗಳಿಗೆ ಪ್ರತಿಯಾಗಿ ತಾನು ಬದಲಾವಣೆಗಳನ್ನು ತರುವುದಾಗಿ ಝೆಡ್‌ಪಿಎಂ ಪಕ್ಷ ಭರವಸೆ ನೀಡಿತ್ತು.

ರಾಜಸ್ಥಾನ ಸಿ.ಎಂ: ರಾಜೇ ಅನುಮಾನ

ಪ್ರಜಾವಾಣಿ ವಾರ್ತೆ

ಜೈಪುರ: ರಾಜಸ್ಥಾನದಲ್ಲಿ ನೂತನ ಮುಖ್ಯಮಂತ್ರಿಯನ್ನು ಆಯ್ಕೆ ಮಾಡುವ ಪ್ರಕ್ರಿಯೆಯನ್ನು ಬಿಜೆಪಿ ಇನ್ನಷ್ಟೇ ಆರಂಭಿಸಬೇಕಿದೆ. ಈ ನಡುವೆ, ವಸುಂಧರಾ ರಾಜೇ ಅವರು ಮುಖ್ಯಮಂತ್ರಿ ಆಗಲಿಕ್ಕಿಲ್ಲ ಎಂದು ಮೂಲಗಳು ಹೇಳಿವೆ.

ಮುಖ್ಯಮಂತ್ರಿ ನೇಮಕ ವಿಚಾರದಲ್ಲಿ ಬಿಜೆಪಿ ನಾಯಕರು ಅವಸರ ತೋರುತ್ತಿಲ್ಲ. ಪಕ್ಷದ ಒಂದು ವರ್ಗವು, ಮುಖ್ಯಮಂತ್ರಿಯಾಗಿ ರಾಜೇ ಅವರು ಸೂಕ್ತ ಅಭ್ಯರ್ಥಿಯಾಗುವುದು ಅನುಮಾನ ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

ರಾಜೇ ಅವರ ಬೆಂಬಲಿಗರ ಪೈಕಿ ಎರಡು ಡಜನ್ ಮಂದಿ ಗೆಲುವು ಕಂಡಿದ್ದಾರಾದರೂ, ರಾಜೇ ಅವರ ಕೆಲವು ಬೆಂಬಲಿಗರು ಕೆಲವೆಡೆ ಪಕ್ಷದ ಅಭ್ಯರ್ಥಿಗಳು ಸೋಲುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು ಎಂಬ ವರದಿ ಪಕ್ಷದ ವರಿಷ್ಠರನ್ನು ತಲುಪಿದೆ ಎನ್ನಲಾಗಿದೆ.

ಲೋಕಸಭಾ ಸ್ಪೀಕರ್ ಓಂ ಬಿರ್ಲಾ, ಕೇಂದ್ರ ಸಚಿವರಾದ ಗಜೇಂದ್ರ ಶೆಖಾವತ್ ಮತ್ತು ಅರ್ಜುನ್ ರಾಂ ಮೇಘವಾಲ್, ಶಾಸಕಿ ದಿಯಾ ಕುಮಾರಿ ಅವರ ಹೆಸರು ಮುಖ್ಯಮಂತ್ರಿ ಸ್ಥಾನಕ್ಕೆ ಕೇಳಿಬರುತ್ತಿದೆ.

ನೆರೆಯ ಮಧ್ಯಪ್ರದೇಶ ಮತ್ತು ಛತ್ತೀಸಗಢದಲ್ಲಿ ಮುಖ್ಯಮಂತ್ರಿ ಯಾರಾಗುತ್ತಾರೆ ಎಂಬುದರ ಆಧಾರದಲ್ಲಿ ರಾಜಸ್ಥಾನದ ಮುಖ್ಯಮಂತ್ರಿ ಯಾರು ಎಂಬುದನ್ನು ನಿರ್ಧರಿಸಬಹುದು ಎಂದು ಬಿಜೆಪಿ ರಾಜ್ಯ ಘಟಕದ ನೀತಿ ಮತ್ತು ಸಂಶೋಧನಾ ವಿಭಾಗದ ಮುಖ್ಯಸ್ಥ ಸುನಿಲ್ ಭಾರ್ಗವ ತಿಳಿಸಿದರು.

'ಛತ್ತೀಸಗಢದಲ್ಲಿ ಒಬಿಸಿ ಸಮುದಾಯದವರು, ಮಧ್ಯಪ್ರದೇಶದಲ್ಲಿ ರಜಪೂತ ಸಮುದಾಯದವರು ಮುಖ್ಯಮಂತ್ರಿಯಾದರೆ, ರಾಜಸ್ಥಾನದಲ್ಲಿ ದಲಿತರೊಬ್ಬರನ್ನು ಮುಖ್ಯಮಂತ್ರಿಯನ್ನಾಗಿಸುವ ಸಾಧ್ಯತೆ ಹೆಚ್ಚಿದೆ. ಆಗ ಮೇಘವಾಲ್ ಅವರು ಸೂಕ್ತ ಆಯ್ಕೆ ಆಗುತ್ತಾರೆ' ಎಂದು ಅವರು ವಿವರಿಸಿದರು.

'ನೌಕಾಪಡೆ– ಶ್ರೇಣಿಗಳ ಹೆಸರು ಬದಲಾವಣೆ'

ಪ್ರಜಾವಾಣಿ ವಾರ್ತೆ

ಮುಂಬೈ: ನೌಕಾಪಡೆಯ ವಿವಿಧ ಅಧಿಕಾರಿಗಳ ಶ್ರೇಣಿಯ ಹೆಸರನ್ನು ಭಾರತೀಯ ಸಂಸ್ಕೃತಿಗೆ ಅನುಗುಣವಾಗಿ ಮರುನಾಮಕರಣ ಮಾಡಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಮಹಾರಾಷ್ಟ್ರದ ಸಿಂಧುದುರ್ಗದ ಮಾಲ್ವಾಣ್‌ನಲ್ಲಿ ನೌಕಾಪಡೆ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಈ ಘೋಷಣೆ ಮಾಡಿದರು. ಇಲ್ಲಿ ಸ್ಥಾಪಿಸಿರುವ ಛತ್ರಪತಿ ಶಿವಾಜಿ ಪ್ರತಿಮೆಯನ್ನು ಅವರು ಇದೇ ವೇಳೆ ಅನಾವರಣಗೊಳಿಸಿದರು.



ಯುದ್ಧನೌಕೆಗಳು, ವಿಮಾನಗಳು ಮತ್ತು ಸಬ್‌ಮರಿನ್‌ಗಳು, ಇಲ್ಲಿನ ಪ್ರಕೃತಿ ರಮಣೀಯ ತಾರ್ಕರ್ಲಿ ಬೀಚ್‌ನಲ್ಲಿ ನೀಡಿದ ಪ್ರದರ್ಶನವನ್ನು ಅವರು ಕಣ್ತುಂಬಿಕೊಂಡರು. ಶಿವಾಜಿ ಆಲೋಚನೆಗಳಿಂದ ಸ್ಫೂರ್ತಿ ಪಡೆದು ದೇಶವು 'ಗುಲಾಮಿ ಮನಃಸ್ಥಿತಿ'ಯನ್ನು ತೊರೆದು ಅಭಿವೃದ್ಧಿ ಪಥದಲ್ಲಿ ಮುನ್ನಡೆಯುತ್ತಿದೆ ಎಂದು ಹೇಳಿದರು.

ಸೇನೆಯಲ್ಲಿ 'ನಾರಿಶಕ್ತಿ'ಯನ್ನು ಬಲಗೊಳಿಸಲು ಸರ್ಕಾರವು ಬದ್ಧವಾಗಿದೆ ಎಂದ ಅವರು, ಮೊದಲ ಮಹಿಳಾ ಕಮಾಂಡಿಂಗ್ ಅಧಿಕಾರಿ ನೇಮಕ ಮಾಡಿದ್ದಕ್ಕೆ ನೌಕಾಪಡೆಯನ್ನು ಅಭಿನಂದಿಸಿದರು.

ಮಹಿಳಾ ಪ್ರಾತಿನಿಧ್ಯ ನಿರಾಶಾದಾಯಕ

ನವದೆಹಲಿ (ಪಿಟಿಐ): ಛತ್ತೀಸಗಢ, ತೆಲಂಗಾಣ ಮತ್ತು ಮಧ್ಯಪ್ರದೇಶ ರಾಜ್ಯಗಳ ವಿಧಾನಸಭೆಗೆ ಆಯ್ಕೆ ಆದ ಮಹಿಳಾ ಸದಸ್ಯರ ಸಂಖ್ಯೆಯಲ್ಲಿ ತುಸು ಹೆಚ್ಚಳ ಕಂಡುಬಂದಿದೆ. ಲೋಕಸಭೆ ಮತ್ತು ರಾಜ್ಯಗಳ ವಿಧಾನಸಭೆಯಲ್ಲಿ ಮಹಿಳಾ ಸದಸ್ಯರ ಪ್ರಾತಿನಿಧ್ಯವು ಮೂರನೇ ಒಂದರಷ್ಟು ಇರಬೇಕು ಎಂದು ಈಚೆಗೆ ಸಂಸತ್ತಿನಲ್ಲಿ ಅಂಗೀಕಾರ ವಾದ ಮಹಿಳಾ ಮೀಸಲಾತಿ ಮಸೂದೆಯಲ್ಲಿ ಹೇಳಲಾಗಿದೆ. ಈ ದಿಸೆಯಲ್ಲಿ ಹೊಸದಾಗಿ ಆಯ್ಕೆ ಆದ ವಿಧಾನಸಭೆಗಳಲ್ಲಿಯ ಮಹಿಳಾ ಪ್ರಾತಿನಿಧ್ಯ ನಿರಾಶಾದಾಯಕವಾಗಿದೆ.

ರಾಜಸ್ಥಾನದ ಪರಿಸ್ಥಿತಿ ಇನ್ನೂ ಶೋಚನೀಯವಾಗಿದ್ದು ವಿಧಾನಸಭೆಯಲ್ಲಿ ಮಹಿಳಾ ಪ್ರಾತಿನಿಧ್ಯ ಮತ್ತಷ್ಟು ಕಡಿಮೆಯಾಗಿದೆ.

ಸರಾಸರಿ ವಯಸ್ಸಲ್ಲಿ ಹೆಚ್ಚಳ

ಕಳೆದಬಾರಿಗೆ ಹೋಲಿಸಿದರೆ 55 ವರ್ಷ ವಯಸ್ಸು ಮೇಲ್ಪಟ್ಟ ಶಾಸಕರ ಸಂಖ್ಯೆಯೂ ಛತ್ತೀಸಗಢ, ಮಧ್ಯಪ್ರದೇಶ, ತೆಲಂಗಾಣದಲ್ಲಿ ಈ ಬಾರಿ ಹೆಚ್ಚೇ ಇದೆ. 55 ವರ್ಷ ಮೇಲ್ಪಟ್ಟ ಶಾಸಕರ ಸಂಖ್ಯೆ ಛತ್ತೀಸಗಢದಲ್ಲಿ ಶೇ 41 ಇದ್ದರೆ, ಮಧ್ಯಪ್ರದೇಶದಲ್ಲಿ ಶೇ 50 ಇದೆ. ತೆಲಂಗಾಣದಲ್ಲಿ ಶೇ 60 ಇದೆ.

ಈ ವಿಚಾರದಲ್ಲೂ ರಾಜಸ್ಥಾನದ ಪರಿಸ್ಥಿತಿ ಭಿನ್ನವಾಗಿದೆ. 2018ಕ್ಕೆ (ಶೇ 48) ಹೋಲಿಸಿದರೆ 55 ವರ್ಷ ಮೇಲ್ಪಟ್ಟ ಶಾಸಕರ ಸಂಖ್ಯೆ ಈ ಬಾರಿ ಕಡಿಮೆಯಾಗಿದೆ. ಸದ್ಯ ಶೇ 46 ಶಾಸಕರು ಈ ವಯೋಮಾನದವರಾಗಿದ್ದಾರೆ.

ಛತ್ತೀಸಗಢದಲ್ಲಿ ಹೊಸದಾಗಿ ಆಯ್ಕೆ ಆದ ಶಾಸಕರಲ್ಲಿ ಶೇ 21ರಷ್ಟು ಮಹಿಳೆಯರಿದ್ದಾರೆ. 2018ರಲ್ಲಿ ರಾಜ್ಯದಲ್ಲಿ 13 ಶಾಸಕಿಯರು ಆಯ್ಕೆ ಆಗಿದ್ದರು. ಈ ಬಾರಿ 19 ಶಾಸಕಿಯರು ಆಯ್ಕೆ ಆಗಿದ್ದಾರೆ. ತೆಲಂಗಾಣದಲ್ಲಿ ಕಳೆದ ಅವಧಿಯಲ್ಲಿ 6 ಶಾಸಕಿಯರಿದ್ದರು. ಈ ಬಾರಿ ಅವರ ಸಂಖ್ಯೆ 10ಕ್ಕೆ ಏರಿಕೆಯಾಗಿದೆ. ಮಧ್ಯಪ್ರದೇಶದಲ್ಲಿ ಕಳೆದ ಅವಧಿಯಲ್ಲಿ 21 ಶಾಸಕಿಯರಿದ್ದರು , ಈ ಬಾರಿ 27 ಶಾಸಕಿಯರು ವಿಧಾನಸಭೆ ಪ್ರವೇಶಿಸಿದ್ದಾರೆ.

ರಾಜಸ್ಥಾನದಲ್ಲಿ 2018ರಲ್ಲಿ 24 ಶಾಸಕಿಯರಿದ್ದರು, ಈ ಬಾರಿ ಅವರ ಸಂಖ್ಯೆ 20ಕ್ಕೆ ಇಳಿದಿದೆ.

ಸಿ.ಎಂ ಆಯ್ಕೆ: ಖರ್ಗೆಗೆ ಅಧಿಕಾರ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ತೆಲಂಗಾಣದಲ್ಲಿ ಮುಖ್ಯಮಂತ್ರಿ ಸ್ಥಾನಕ್ಕೆ ಯಾರನ್ನು ಆಯ್ಕೆ ಮಾಡಬೇಕೆಂಬ ಬಗ್ಗೆ ಕಾಂಗ್ರೆಸ್ ಪಕ್ಷದ ಹೈಕಮಾಂಡ್ ಇನ್ನೂ ನಿರ್ಧರಿಸಬೇಕಿರುವ ಕಾರಣ ಈ ಕುರಿತ ಕುತೂಹಲ ಇನ್ನಷ್ಟು ಸಮಯದವರೆಗೆ ಮುಂದುವರಿಯಲಿದೆ.

ತೆಲಂಗಾಣದ ಎಐಸಿಸಿ ವೀಕ್ಷಕರು ಮುಖ್ಯಮಂತ್ರಿ ಆಯ್ಕೆ ಕುರಿತು ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಇತರ ಉನ್ನತ ನಾಯಕರ ಜತೆ ಚರ್ಚಿಸಲು ದೆಹಲಿಗೆ ತೆರಳಿದ್ದಾರೆ. ಈ ಬಗ್ಗೆ ನಿರ್ಧಾರ ಕೈಗೊಳ್ಳುವವರೆಗೆ ಎಲ್ಲಾ 64 ಶಾಸಕರನ್ನು ನಗರದ ತಾರಾ ಹೋಟೆಲ್‌ಗೆ ಕರೆದೊಯ್ಯಲಾಗಿದೆ.

ಪಿಸಿಸಿ ಅಧ್ಯಕ್ಷ ಎ. ರೇವಂತ್ ರೆಡ್ಡಿ ಮುಖ್ಯಮಂತ್ರಿಯಾಗಿ ಸೋಮವಾರ ಸಂಜೆ ಅಧಿಕೃತವಾಗಿ ಪ್ರಮಾಣವಚನ ಸ್ವೀಕರಿಸುವುದಷ್ಟೇ ಬಾಕಿ ಇದೆ ಎಂಬಂತೆ ಬಿಂಬಿಸಲಾಗಿತ್ತಾದರೂ ಸಂಜೆಯ ವೇಳೆಗೆ ಇದು ಬೇರೆಯೇ ತಿರುವು ಪಡೆದುಕೊಂಡಿದೆ. ಪಕ್ಷದ ಹೈಕಮಾಂಡ್ ಇದನ್ನು ತಡೆಹಿಡಿದಿದೆ.

ಎಐಸಿಸಿ ವೀಕ್ಷಕ ಮತ್ತು ಕರ್ನಾಟಕದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಶಾಸಕಾಂಗ ಸಭೆಗೆ ಮೊದಲು ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿಗಳಾದ ರೇವಂತ್ ರೆಡ್ಡಿ, ಶಾಸಕಾಂಗ ಪಕ್ಷದ ನಾಯಕ ಮಲ್ಲು ಭಟ್ಟಿ ವಿಕ್ರಮಾರ್ಕ, ಕೋಮಟಿರೆಡ್ಡಿ ವೆಂಕಟ್ ರೆಡ್ಡಿ, ಡಿ.ಶ್ರೀಧರ್ ಬಾಬು ಮತ್ತು ಎನ್. ಉತ್ತಮ್‌ಕುಮಾರ್ ರೆಡ್ಡಿ ಅವರೊಡನೆ ಪ್ರತ್ಯೇಕವಾಗಿ ಮಾತುಕತೆ ನಡೆಸಿದರು.

ಮುಖ್ಯಮಂತ್ರಿ ಆಯ್ಕೆ ಕಾರಣಕ್ಕೆ ತಡವಾಗಿದೆಯಾ ಅಥವಾ ಸಂಪುಟದಲ್ಲಿನ ಇತರ ಸ್ಥಾನ ಮತ್ತು ಹುದ್ದೆಗಳಿಗೆ ಆಯ್ಕೆ ಕಾರಣಕ್ಕೆ ವಿಳಂಬವಾಗುತ್ತಿದೆಯಾ ಎಂಬುದು ತಕ್ಷಣಕ್ಕೆ ಗೊತ್ತಾಗಿಲ್ಲ.

ಹೊಸ ಮುಖ್ಯಮಂತ್ರಿ ಅಧಿಕಾರ ಸ್ವೀಕರಿಸುತ್ತಾರೆ. ರಾಜಭವನದಲ್ಲಿ ಎಲ್ಲಾ ವ್ಯವಸ್ಥೆಗಳು ಆಗಿವೆ ಎಂಬ ವರದಿಗಳು ಇದ್ದರೂ ಮುಖ್ಯಮಂತ್ರಿ ಆಯ್ಕೆ ವಿಚಾರ ಅಂತಿಮಗೊಳ್ಳಲು ಕನಿಷ್ಠ ಇನ್ನೊಂದು ದಿನವಾದರೂ ಬೇಕು ಎಂದು ಪಕ್ಷದ ಮೂಲಗಳು ಹೇಳಿವೆ.

ತೆಲಂಗಾಣ ರಾಜ್ಯಪಾಲೆ ತಮಿಳ್‌ಇಸೈ ಸೌಂದರ್ ರಾಜನ್ ಅವರನ್ನು ಭಾನುವಾರ ರಾತ್ರಿ ಭೇಟಿ ಮಾಡಿ ಸರ್ಕಾರ ರಚನೆಯ ಹಕ್ಕು ಮಂಡಿಸಿದ ಬಳಿಕ ಎಐಸಿಸಿ ವೀಕ್ಷಕರು ಸೋಮವಾರ ಹೊಸ ನಾಯಕನ ಆಯ್ಕೆಗಾಗಿ ಶಾಸಕಾಂಗ ಪಕ್ಷದ (ಸಿಎಲ್‌ಪಿ) ಸಭೆ ನಡೆಸಿದರು. 'ಸಿಎಲ್‌ಪಿ ನಾಯಕನನ್ನು ನೇಮಕ ಮಾಡುವ ಅಧಿಕಾರವನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಬಿಟ್ಟುಕೊಡಲು ಸಭೆ ನಿರ್ಧರಿಸಿತು.

16ನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಕೆ.ವಿ.ದೇವಮ್ಮ ಸಗನೇಗೌಡರು
ನಿಧನ : 05-12-2007
ನೀವು ನಮ್ಮನ್ನಗಲಿ ಹದಿನಾರು ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಾಳದಲ್ಲಿದೆ. ನಿಮ್ಮ ದಿವ್ಯಾತ್ಮವು ಭಗವಂತನ ಪದತಳದಲ್ಲಿ ಚಿರಶಾಂತಿ ಪಡೆಯಲೆಂದು ಪ್ರಾರ್ಥಿಸುವ,
ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಮತ್ತು ಎಲ್ಲಾ ಕುಟುಂಬ ವರ್ಗದವರು, ಬೇಲೂರು–573115
ಫೋನ್: 6362934108, 9845689500 9844436598, 9964480611

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಪ್ರವಾಸ
Travel

08.01.2024 12.03.2024 12.04.2024 ಸಿಂಗಾಪುರ್ ಮಲೇಶಿಯಾ,ಥೈಲ್ಯಾಂಡ್ 7/11 ದಿನಗಳು. 13.01.2024 06.02.2024 05.03.2024 ದುಬೈ,ಅಬುದಾಬಿ 5 ದಿನಗಳು. 12.01.2024 05.03.2024 ನೇಪಾಳ 9 ದಿನಗಳು. 23.12.2023 12.01.2024 06.03.2024 ಭೂತಾನ್ 8 ದಿನಗಳು. 09.01.2024 05.02.2024 25.03.2024 ಶ್ರೀಲಂಕಾ 6 ದಿನಗಳು. 06.01.2024 15.02.2024 02.04.2024 ಅಸ್ಸಾಂ,ಮೇಘಾಲಯ 9 ದಿನಗಳು 13.01.2024 05.02.2024 ಗುಜರಾತ್ 8 ದಿನಗಳು. 13.01.2024 12.02.2024 ರಾಜಸ್ಥಾನ್ 10 ದಿನಗಳು. 12.04.2024 06.05.2024 ಕಾಶ್ಮೀರ್ 6 ದಿನಗಳು. 05.04.2024 25.04.2024 02.05.2024 ಶಿಮ್ಲಾ,ಮನಾಲಿ 8 ದಿನಗಳು. 18 04.2024 17.05.2024 ಗ್ಯಾಂಗ್ ಟಾಕ್,ಡಾರ್ಜಲಿಂಗ್ 6 ದಿನಗಳು. ಜೈನ್ ಟ್ರಾವಲ್ಸ್ ಮಲ್ಲೇಶ್ವರ. ಬೆಂಗಳೂರು.03 9448402248 7022547922

ಶಿವನಂದಿ ಟ್ರಾವಲ್ಸ್,(ರಿ.) ಹನುಮಂತನಗರ,ಬೆಂಗಳೂರು 17.1.2024 5ದಿನಗಳ ತಮಿಳುನಾಡು:ಮದುರೈ ತಿರುಪುರಕುಂಡ್ರಮ್ ಕನ್ಯಾಕುಮಾರಿ,ರಾಮೇಶ್ವರ ಶ್ರೀರಂಗಂ. 15.2.2024, 13ದಿನಗಳ ಗುಜರಾತ್, ಮಧ್ಯಪ್ರದೇಶ್: ಅಹಮದಾಬಾದ್ ನಿಷ್ಕಳಂಕ ಮಹದೇವ್ ದ್ವಾರಕ,ಮಾತೃಗಯ ಓಂಕಾರೇಶ್ವರ್ ಉಜ್ಜೈನಿ. 6.3.2024 12ದಿನಗಳ ಹರಿದ್ವಾರ್ ಮನಾಲಿ,ಕಟ್ರಾ ವೈಷ್ಣೋದೇವಿ ಹರಿದ್ವಾರ್,ಅಮೃತಸರ್. 21.3.2024 11ದಿನಗಳ ನೇಪಾಳ ಮುಕ್ತಿನಾಥ್: ಬಾಬಾಬೈದ್ಯನಾಥ್ ಗೋರಕ್‌ಪುರ ಸೋನಾಲಿಬಾರ್ಡರ್ ಲುಮ್‌ಬಿನಿ ಪೋಕ್ರಾ ಕಟ್ಮಂಡು ಮುಕ್ತಿನಾಥ್ ಮನೋಕಾಮನ ಚಿತ್ವಾನ್. ವಿಮಾನ/ಬಸ್ಸಿನಲ್ಲಿ. 9036056352 9481027363

ಉದ್ಯೋಗಾವಕಾಶ
General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ನಿವೃತ್ತಿ ಹೊಂದಿರುವವರು, ಗೃಹಿಣಿಯರು, ಅರೆಕಾಲಿಕ ಕೆಲಸ ಮಾಡುವವರನ್ನು ನೇಮಕ ಮಾಡಿಕೊಳ್ಳಲಾಗುವುದು. ಸಂಪರ್ಕಿಸಿ: 9845316068

ತಕ್ಷಣ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ,ಬ್ರಿಟಾನಿಯಾ, ಟಿ.ವಿ.ಎಸ್, MNCಗಳಿಗೆ SSLC, PUC, Degree, Diplomaದವರು 18,000- 56,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9036125229

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6366430266 /6366430366

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000ರಿಂದ20,000 ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳಿಗೆ ಸೂಕ್ತ ವೇದಿಕೆ!
ಇಂದೇ ನಿಮ್ಮ ಜಾಹೀರಾತು ಬುಕ್ ಮಾಡಿರಿ.
ವಿವರಗಳಿಗಾಗಿ ಸಂಪರ್ಕಿಸಿ:
+91 9886213331
+91 9901641752
+91 9845114560
+91 9900428036
+91 9731810277

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪ್ರೊ ಕಬಡ್ಡಿ ಲೀಗ್: ಅಸ್ಲಾಂ ಇನಾಮದಾರ್, ಮೋಹಿತ್ ಮಿಂಚು

ಪಲ್ಟನ್‌ಗೆ ಮಣಿದ ಪ್ಯಾಂಥರ್ಸ್

ಪ್ರೊ ಕಬಡ್ಡಿ ಲೀಗ್‌ನ ಪಂದ್ಯದಲ್ಲಿ ಸೋಮವಾರ ಪುಣೇರಿ ಪಲ್ಟನ್ ಮತ್ತು ಜೈಪುರ್ ಪಿಂಕ್ ಪ್ಯಾಂಥರ್ಸ್ ತಂಡಗಳ ನಡುವೆ ಪೈಪೋಟಿ

ಅಹಮದಾಬಾದ್: ಅಸ್ಲಾಂ ಇನಾಮದಾರ್ ಮತ್ತು ಮೋಹಿತ್ ಗೋಯತ್ ಅವರ ಅಮೋಘ ಆಟದ ಬಲದಿಂದ ಪುಣೇರಿ ಪಲ್ಟನ್ ತಂಡವು ಪ್ರೊ ಕಬಡ್ಡಿ ಲೀಗ್‌ನ ಪಂದ್ಯದಲ್ಲಿ 37–33ರಿಂದ ಹಾಲಿ ಚಾಂಪಿಯನ್ ಜೈಪುರ್ ಪಿಂಕ್ ಪ್ಯಾಂಥರ್ಸ್ ತಂಡವನ್ನು ಮಣಿಸಿತು.

ಟ್ರಾನ್ಸ್ ಸ್ಟೇಡಿಯಾದಲ್ಲಿ ಸೋಮವಾರ ನಡೆದ ಈ ಪಂದ್ಯದಲ್ಲಿ ವಿರಾಮದ ವೇಳೆಗೆ 14–18ರಿಂದ ಹಿಂದೆಯಿದ್ದ ಪಲ್ಟನ್ ತಂಡವು ಉತ್ತರಾರ್ಧದಲ್ಲಿ ಪುಟಿದೆದ್ದು ಮೇಲುಗೈ ಸಾಧಿಸಿತು.

ಪಲ್ಟನ್ ತಂಡವು ರೇಡ್‌ನಿಂದ 19, ಟ್ಯಾಕಲ್‌ನಿಂದ 14 ಮತ್ತು ಆಲೌಟ್‌ನಿಂದ 4 ಅಂಕಗಳನ್ನು ಸಂಪಾದಿಸಿದರೆ, ಎದುರಾಳಿ ತಂಡವು ರೇಡ್‌ನಿಂದ 24, ಟ್ಯಾಕಲ್‌ನಿಂದ 4 ಮತ್ತು ಆಲೌಟ್‌ನಿಂದ 2 ಪಾಯಿಂಟ್ಸ್ ಗಳಿಸಿತು. ಅಸ್ಲಾಂ ಅವರು 10 ಅಂಕಗಳನ್ನು ಪಲ್ಟನ್ ತಂಡಕ್ಕೆ ತಂದುಕೊಟ್ಟರೆ, ಮೋಹಿತ್ 8 ಪಾಯಿಂಟ್ಸ್ ಸಂಪಾದಿಸಿದರು. ಇದೇ ತಂಡದ ಮೊಹಮ್ಮದ್ ರೇಜಾ ಶಾಡ್ಲೊಯಿ ಟ್ಯಾಕಲ್‌ನಿಂದ 4 ಅಂಕ ಪಡೆದು ಮಿಂಚಿದರು. ಪ್ಯಾಂಥರ್ಸ್ ತಂಡದಲ್ಲಿ ಅರ್ಜುನ್ ದೇಶ್ವಾಲ್ ಏಕಾಂಗಿಯಾಗಿ ಹೋರಾಟ ನಡೆಸಿದರು. ಅವರು ತಂಡಕ್ಕೆ 10 ಬೋನಸ್ ಸೇರಿದಂತೆ ಒಟ್ಟು 17 ಪಾಯಿಂಟ್ಸ್‌ಗಳನ್ನು ತಂದುಕೊಟ್ಟರು.

ಇಂದಿನ ಪಂದ್ಯ
ಗುಜರಾತ್ ಜೈಂಟ್ಸ್–ಯು ಮುಂಬಾ
(ರಾತ್ರಿ 8)

ಬುಲ್ಸ್‌ಗೆ ಮತ್ತೆ ಸೋಲು

ಮೊದಲ ಪಂದ್ಯದಲ್ಲಿ ಗುಜರಾತ್ ಜೈಂಟ್ಸ್ ವಿರುದ್ಧ ಸೋತಿದ್ದ ಬೆಂಗಳೂರು ಬುಲ್ಸ್ ಎರಡನೇ ಪಂದ್ಯದಲ್ಲೂ ಮುಗ್ಗರಿಸಿತು.

ಸೋಮವಾರ ಬೆಂಗಾಲ್ ವಾರಿಯರ್ಸ್ ವಿರುದ್ಧದ ಪಂದ್ಯದಲ್ಲಿ 32–30ರಿಂದ ಪರಾಭವಗೊಂಡಿತು. ಆರಂಭದಲ್ಲಿ ಸಮಬಲದ ಹೋರಾಟ ಕಂಡುಬಂದರೂ ಮಧ್ಯಂತರದ ವೇಳೆ 11-14ರಿಂದ ಬುಲ್ಸ್ ಹಿನ್ನಡೆಯಲ್ಲಿತ್ತು. ಉತ್ತರಾರ್ಧದಲ್ಲಿ ಬೆಂಗಳೂರು ಮತ್ತೆ ಹೋರಾಟ ನಡೆಸಿತು. ಅಂತಿಮವಾಗಿ 2 ಅಂಕಗಳಿಂದ ಸೋತಿತು. ಮಣಿಂದರ್ ಸಿಂಗ್ ಬೆಂಗಾಲ್ ತಂಡಕ್ಕೆ 11 ಪಾಯಿಂಟ್ಸ್ ತಂದುಕೊಟ್ಟರು. ಬುಲ್ಸ್ ತಂಡದ ಪರ ಭರತ್ 6, ನೀರಜ್ ನರ್ವಾಲ್ 5 ಅಂಕ ಸಂಪಾದಿಸಿದರು.

ಜೂ. ವಿಶ್ವಕಪ್ ಹಾಕಿ: ಭಾರತ–ಕೊರಿಯಾ ಪಂದ್ಯ ಇಂದು

ಕ್ವಾಲಾಲಂಪುರ (ಪಿಟಿಐ): ಪುರುಷರ ಜೂನಿಯರ್ ವಿಶ್ವಕಪ್ ಹಾಕಿ ಟೂರ್ನಿಯಲ್ಲಿ ಎರಡು ಬಾರಿಯ ಚಾಂಪಿಯನ್ ಭಾರತವು ತನ್ನ ಮೊದಲ ಪಂದ್ಯವನ್ನು ಮಂಗಳವಾರ ಕೊರಿಯಾ ವಿರುದ್ಧ ಆಡಲಿದೆ.

ಡಿ.5 ರಿಂದ ಟೂರ್ನಿಗೆ ಚಾಲನೆ ನೀಡಲಾಗುತ್ತದೆ. ಉತ್ತಮ್ ಸಿಂಗ್ ನಾಯಕತ್ವದಲ್ಲಿ ಭಾರತ ತಂಡ ಉತ್ತಮ ಪ್ರದರ್ಶನ ನೀಡಲು ಸಜ್ಜುಗೊಂಡಿದೆ.

ಉಭಯ ತಂಡಗಳು ಆಡಿದ ಆರು ಪಂದ್ಯಗಳಲ್ಲಿ ಭಾರತ ಮೂರು, ಕೊರಿಯಾ ಎರಡರಲ್ಲಿ ಗೆದ್ದು, ಒಂದು ಪಂದ್ಯ ಡ್ರಾದಲ್ಲಿ ಅಂತ್ಯಗೊಂಡಿದೆ. ಕೊರಿಯಾ ನಂತರ, ಭಾರತವು ಗುರುವಾರ ಸ್ಪೇನ್ ಮತ್ತು ಶನಿವಾರ ಕೆನಡಾ ವಿರುದ್ಧ ಸೆಣಸಲಿದೆ.

ಈ ವರ್ಷದ ಆರಂಭದಲ್ಲಿ ನಡೆದ ಪುರುಷರ ಜೂನಿಯರ್ ಏಷ್ಯಾ ಕಪ್ ಸೆಮಿಫೈನಲ್‌ನಲ್ಲಿ ಎರಡೂ ತಂಡಗಳು ಕೊನೆ ಬಾರಿಗೆ ಮುಖಾಮುಖಿಯಾಗಿದ್ದವು. ಭಾರತವು ಕೊರಿಯಾ ವಿರುದ್ಧ 9-1 ಅಂತರದ ಜಯ ದಾಖಲಿಸಿತು.

ಭಾರತ ತಂಡಕ್ಕೆ ಕನ್ನಡತಿ ಶ್ರೇಯಾಂಕಾ

ಇಂಗ್ಲೆಂಡ್ ಎದುರಿನ ಸರಣಿಯಲ್ಲಿ ಆಡಲಿರುವ ಆಲ್‌ರೌಂಡರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಉದ್ಯಾನನಗರಿ’ಯ ಹುಡುಗಿ ಶ್ರೇಯಾಂಕಾ ಪಾಟೀಲ ಕಂಗಳಲ್ಲಿ ಈಗ ಒಲಿಂಪಿಕ್ ಪದಕ ಜಯಿಸುವ ಕನಸು. ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ದೊಡ್ಡ ಸಾಧನೆ ಮಾಡುವ ಛಲದ ಈ ಹುಡುಗಿ ಈಗ ಭಾರತ ತಂಡದಲ್ಲಿ ಪದಾರ್ಪಣೆ ಮಾಡಲು ಸಿದ್ಧರಾಗಿದ್ದಾರೆ.

ಇದೇ 6ರಿಂದ ಮುಂಬೈನಲ್ಲಿ ನಡೆಯಲಿರುವ ಇಂಗ್ಲೆಂಡ್ ವಿರುದ್ಧ ಮಹಿಳಾ ಟಿ20 ಸರಣಿಯಲ್ಲಿ ಆಡುವ ಭಾರತ ತಂಡಕ್ಕೆ ಶ್ರೇಯಾಂಕಾ ಆಯ್ಕೆಯಾಗಿದ್ದಾರೆ. ಈ ಸರಣಿಯಲ್ಲಿ ಮೂರು ಪಂದ್ಯಗಳು ನಡೆಯಲಿವೆ.

ಆಫ್‌ಬ್ರೇಕ್ ಮತ್ತು ಬಲಗೈ ಬ್ಯಾಟರ್ ಆಗಿರುವ ಶ್ರೇಯಾಂಕಾ ಕಳೆದ ವರ್ಷ ನಡೆದ ಮೊದಲ ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಟೂರ್ನಿಯಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದಲ್ಲಿ ಆಡಿದ್ದರು. 7 ಪಂದ್ಯಗಳಲ್ಲಿ ಅವರು ಆರು ವಿಕೆಟ್ ಗಳಿಸಿ, 62 ರನ್ ಕೂಡ ಕಲೆಹಾಕಿದ್ದರು. 151.22 ರ ಸ್ಟ್ರೈಕ್‌ರೇಟ್‌ನಲ್ಲಿ ಅವರು ರನ್ ಗಳಿಸಿದ್ದರು.

ಅಲ್ಲದೇ ಕೆರಿಬಿಯನ್ ಪ್ರೀಮಿಯರ್ ಲೀಗ್ (ಸಿಪಿಎಲ್) ಟೂರ್ನಿಯಲ್ಲಿ ಆಡಿದ ಮೊದಲ ಭಾರತೀಯ ಆಟಗಾರ್ತಿ ಎಂಬ ಹೆಗ್ಗಳಿಕೆಯೂ ಅವರದ್ದಾಗಿದೆ. ಆ ಟೂರ್ನಿಯಲ್ಲಿ ಗಯಾನಾ ಅಮೆಜಾನ್ ವಾರಿಯರ್ಸ್ ತಂಡವನ್ನು ಪ್ರತಿನಿಧಿಸಿದ್ದ ಅವರು ನಾಲ್ಕು ಪಂದ್ಯಗಳಿಂದ ಒಂಬತ್ತು ವಿಕೆಟ್ ಗಳಿಸಿದ್ದರು.

‘ಭಾರತ ತಂಡಕ್ಕೆ ವಿಶ್ವಕಪ್ ಜಯಿಸಲು ಕಾಣಿಕೆ ನೀಡಬೇಕು ಮತ್ತು ಲಾಸ್ ಏಂಜಲೀಸ್ ಒಲಿಂಪಿಕ್ಸ್‌ನಲ್ಲಿ ಆಡುವ ತಂಡದಲ್ಲಿದ್ದು ಪದಕ ಗೆಲ್ಲುವುದೇ ನನ್ನ ಪರಮೋಚ್ಛ ಕನಸು’ ಎಂದು ಬೆಂಗಳೂರಿನ ಆಟಗಾರ್ತಿ ಹೇಳುತ್ತಾರೆ.

2028ರ ಒಲಿಂಪಿಕ್ ಕೂಟದಲ್ಲಿ ಮಹಿಳಾ ಟಿ20 ಕ್ರಿಕೆಟ್ ನಡೆಯಲಿದೆ. 128 ವರ್ಷಗಳ ನಂತರ ಕ್ರಿಕೆಟ್ ಒಲಿಂಪಿಕ್ ಪ್ರವೇಶಿಸಲಿದೆ. ಈಚೆಗೆ ಇಂಗ್ಲೆಂಡ್ ಎ ತಂಡದ ಎದುರು ನಡೆದಿದ್ದ ಸರಣಿಯಲ್ಲಿ ಭಾರತ ಎ ತಂಡವನ್ನು ಶ್ರೇಯಾಂಕಾ ಪ್ರತಿನಿಧಿಸಿದ್ದರು. ಮೂರು ಪಂದ್ಯಗಳಲ್ಲಿ ಐದು ವಿಕೆಟ್ ಗಳಿಸಿದದರು. ಸರಣಿಯ ಮೊದಲ ಟಿ20 ಪಂದ್ಯದಲ್ಲಿ ಶ್ರೇಷ್ಠ ಆಟಗಾರ್ತಿ ಗೌರವಕ್ಕೂ ಪಾತ್ರರಾಗಿದ್ದರು.

‘ಬ್ಯಾಟಿಂಗ್ ಉತ್ತಮಪಡಿಸಿಕೊಳ್ಳಲು ಹೆಚ್ಚು ಶ್ರಮವಹಿಸಿ ಅಭ್ಯಾಸ ಮಾಡುತ್ತಿದ್ದೇನೆ. ಇದುವರೆಗೆ ಬ್ಯಾಟಿಂಗ್‌ನಲ್ಲಿ ಹೆಚ್ಚಿನ ಕಾಣಿಕೆ ಕೊಡಲು ಸಾಧ್ಯವಾಗಿಲ್ಲ. ಈಗ ಸಿಕ್ಕಿರುವ ಅವಕಾಶದಲ್ಲಿ ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡರಲ್ಲೂ ಉತ್ತಮವಾಗಿ ಆಡುವುದು ನನ್ನ ಗುರಿ‘ ಎಂದು ಶ್ರೇಯಾಂಕಾ ಹೇಳಿದ್ದಾರೆ.

ಇಂಗ್ಲೆಂಡ್ ವಿರುದ್ಧ ವೆಸ್ಟ್ ಇಂಡೀಸ್‌ಗೆ ಗೆಲುವು

ನಾರ್ತ್ ಸೌಂಡ್, ಆ್ಯಂಟಿಗಾ (ಎಪಿ): ನಾಯಕ ಶಾಯ್ ಹೋಪ್ (ಔಟಾಗದೆ 109; 83ಎ, 4X4, 6X7) ಅವರ ಶತಕದ ಬಲದಿಂದ ವೆಸ್ಟ್‌ಇಂಡೀಸ್ ತಂಡವು ಸೋಮವಾರ ನಡೆದ ಇಂಗ್ಲೆಂಡ್ ವಿರುದ್ಧದ ಮೊದಲ ಏಕದಿನ ಪಂದ್ಯದಲ್ಲಿ ನಾಲ್ಕು ವಿಕೆಟ್‌ಗಳಿಂದ ಜಯ ಸಾಧಿಸಿತು. ಮೂರು ಪಂದ್ಯಗಳ ಸರಣಿಯಲ್ಲಿ ವಿಂಡೀಸ್ 1–0 ಮುನ್ನಡೆ ಸಾಧಿಸಿತು.

2019ರ ಏಕದಿನ ವಿಶ್ವಕಪ್ ವಿಜೇತ ಇಂಗ್ಲೆಂಡ್ ತಂಡವು ಈ ಬಾರಿಯ ವಿಶ್ವಕಪ್ ಟೂರ್ನಿಯಲ್ಲಿ ನೀರಸ ಪ್ರದರ್ಶನ ನೀಡಿತ್ತು. ವಿಶ್ವಕಪ್ ಟೂರ್ನಿಗೆ ಅರ್ಹತೆ ಪಡೆಯಲು ವಿಫಲವಾಗಿದ್ದ ವೆಸ್ಟ್‌ಇಂಡೀಸ್ ತಂಡದ ವಿರುದ್ಧವೂ ಸೋತು ಮತ್ತೆ ಇಂಗ್ಲೆಂಡ್ ಮುಖಭಂಗ ಅನುಭವಿಸಿದೆ.

ಸಂಕ್ಷಿಪ್ತ ಸ್ಕೋರ್: ಇಂಗ್ಲೆಂಡ್: 50 ಓವರ್‌ಗಳಲ್ಲಿ 325 (ಫಿಲ್ ಸಾಲ್ಟ್ 45, ಜಾಕ್ ಕ್ರಾಲಿ 48, ಹ್ಯಾರಿ ಬ್ರೂಕ್ 71; ರೊಮಾರಿಯೋ ಶೆಫರ್ಡ್ 77ಕ್ಕೆ 2, ಗುಡಾಕೇಶ್ ಮೋತಿ 49ಕ್ಕೆ 2, ಓಶಾನೆ ಥಾಮಸ್ 57ಕ್ಕೆ 2). ವೆಸ್ಟ್ ಇಂಡೀಸ್: 48.5 ಓವರ್‌ಗಳಲ್ಲಿ 6 ವಿಕೆಟ್‌ಗೆ 326 (ಅಲಿಕ್ ಅಥಾನೆಜ್ 66, ಶಾಯ್ ಹೋಪ್ ಔಟಾಗದೆ 109, ರೊಮಾರಿಯೋ ಶೆಫರ್ಡ್ 48; ಗಸ್ ಅಟ್ಕಿನ್ಸನ್ 62ಕ್ಕೆ 2, ರೆಹಾನ್ ಅಹ್ಮದ್ 40ಕ್ಕೆ 2)

ಏರ್ ಪಿಸ್ತೂಲ್ ಸಿಲಿಂಡರ್ ಸ್ಫೋಟ
ಶೂಟರ್ ಎಡಗೈ ಹೆಬ್ಬೆರಳಿಗೆ ಗಾಯ

ನವದೆಹಲಿ (ಪಿಟಿಐ): ಏರ್ ಪಿಸ್ತೂಲ್ ಸಿಲಿಂಡರ್ ಸ್ಫೋಟಗೊಂಡು ರಾಷ್ಟ್ರೀಯ ಶೂಟಿಂಗ್ ಪಟು ಗಾಯಗೊಂಡ ಘಟನೆ ಕರ್ಣಿಸಿಂಗ್ ರೇಂಜ್‌ನಲ್ಲಿ ನಡೆದಿದೆ.

ಶನಿವಾರ 10 ಮೀಟರ್ ಏರ್ ಪಿಸ್ತೂಲ್ ಸಿಲಿಂಡರ್‌ಗೆ ಕಂಪ್ರೆಸ್ಡ್ ಏರ್ ತುಂಬಿಸುತ್ತಿದ್ದ ವೇಳೆ ಸ್ಫೋಟ ಸಂಭವಿಸಿದೆ. ಈ ವೇಳೆ ತರಬೇತಿ ಪಡೆಯುತ್ತಿದ್ದ ವಾಯುಪಡೆ ಅಧಿಕಾರಿ ಪುಷ್ಪೇಂದರ್ ಕುಮಾರ್ ಎಂಬುವವರು ಗಾಯಗೊಂಡಿದ್ದಾರೆ. ಅವರ ಎಡಗೈ ಹೆಬ್ಬೆರಳಿಗೆ ತೀವ್ರ ಹಾನಿಯಾಗಿದೆ. ಭೋಪಾಲ್‌ನಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗಾಗಿ ಅವರು ಅಭ್ಯಾಸ ನಡೆಸುತ್ತಿದ್ದರು. ಅವರನ್ನು ಸೇನೆಯ ಆರ್. ಆರ್. ಆಸ್ಪತ್ರೆಗೆ ದಾಖಲಿಸಲಾಗಿದೆ.

‘ಪುಷ್ಪೇಂದರ್ ಅವರು ಮುಖ್ಯ ಸಿಲಿಂಡರ್‌ನಿಂದ ಪಿಸ್ತೂಲ್ ಸಿಲಿಂಡರ್‌ಗೆ ಗಾಳಿ ತುಂಬಿಸುತ್ತಿದ್ದ ವೇಳೆ ಈ ಘಟನೆ ಸಂಭವಿಸಿದೆ. ಶಸ್ತ್ರಚಿಕಿತ್ಸೆ ಬಳಿಕ ಚೇತರಿಸಿಕೊಳ್ಳುತ್ತಾರೆ ಎಂದು ಭಾವಿಸುತ್ತೇವೆ. ಏರ್ ಪಿಸ್ತೂಲ್ ಸಿಲಿಂಡರ್‌ಗಳನ್ನು ನಿರ್ದಿಷ್ಟ ಅವಧಿ ನಂತರ ಬದಲಾಯಿಸಬೇಕು ಮತ್ತು ಬಂದೂಕು ತಯಾರಕರು ಅದನ್ನು ಉಚಿತವಾಗಿ ಮಾಡುತ್ತಾರೆ. ಪುಷ್ಪೇಂದರ್ ಅವರ ಶೂಟಿಂಗ್ ಕೈ ಸುರಕ್ಷಿತವಾಗಿದೆ. ಏರ್ ಪಿಸ್ತೂಲ್ ಸ್ವಂತದೇ ಅಥವಾ ವಾಯುಪಡೆಗೆ ಸೇರಿದೆಯೇ ಎಂಬುದು ತಿಳಿದಿಲ್ಲ’ ಎಂದು ಹೆಸರು ಹೇಳಲು ಇಚ್ಛಿಸದ ರಾಷ್ಟ್ರೀಯ ತರಬೇತುದಾರರೊಬ್ಬರು ಸುದ್ದಿಸಂಸ್ಥೆಗೆ ತಿಳಿಸಿದರು.

‘ಪ್ರಸ್ತುತ ಭೋಪಾಲ್‌ನಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಚಾಂಪಿಯನ್‌ಶಿಪ್‌ನಲ್ಲಿ ಸ್ಪರ್ಧಿಸಲು ಸಾಧ್ಯವಾಗುತ್ತಿಲ್ಲ ಎಂಬ ಬೇಸರವಿದೆ. ಸಾಮಾನ್ಯವಾಗಿ ಕರ್ಣಿ ಸಿಂಗ್‌ನಲ್ಲಿ ತರಬೇತಿ ಪಡೆಯುತ್ತಾರೆ’ ಎಂದು ಅವರು ಹೇಳಿದರು.

ಏಕದಿನ ತಂಡಕ್ಕೆ ಮರ್ಕರಂ ನಾಯಕ



ಏಡನ್ ಮರ್ಕರಂ

ಜೋಹಾನ್ಸ್‌ಬರ್ಗ್ (ಎಎಫ್‌ಪಿ): ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು ಮುನ್ನಡೆಸಿದ್ದ ತೆಂಬಾ ಬವುಮಾ ಅವರು ಭಾರತ ವಿರುದ್ಧದ ಟಿ20 ಮತ್ತು ಏಕದಿನ ಸರಣಿಯಿಂದ ಹೊರಗೆ ಉಳಿದಿದ್ದಾರೆ. ಅನುಭವಿ ಆಟಗಾರ ಏಡನ್ ಮರ್ಕರಂ ತಂಡದ ಸಾರಥ್ಯ ವಹಿಸಲಿದ್ದಾರೆ.

ಭಾರತ ವಿರುದ್ಧದ ಮೂರು ಮಾದರಿಯ ಕ್ರಿಕೆಟ್ ಸರಣಿಗಳಿಗೆ ದಕ್ಷಿಣ ಆಫ್ರಿಕಾ ತಂಡವನ್ನು ಸೋಮವಾರ ಪ್ರಕಟಿಸಲಾಗಿದೆ. ಡಿ.26ರಂದು ಸೆಂಚುರಿಯನ್‌ನಲ್ಲಿ ಆರಂಭವಾಗುವ ಎರಡು ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಪಂದ್ಯಗಳಿಗೆ ಸಿದ್ಧರಾಗುವ ಸಲುವಾಗಿ ಸೀಮಿತ ಓವರ್‌ಗಳ ಸರಣಿಗೆ ಬವುಮಾ ಮತ್ತು ವೇಗದ ಬೌಲರ್ ಕಗಿಸೊ ರಬಾಡ ಅವರಿಗೆ ವಿಶ್ರಾಂತಿ ನೀಡಲಾಗಿದೆ. ಟೆಸ್ಟ್ ಸರಣಿಯಲ್ಲಿ ಬವುಮಾ ತಂಡವನ್ನು ಮುನ್ನಡೆಸಲಿದ್ದಾರೆ.

ವೇಗದ ಬೌಲರ್‌ಗಳಾದ ಜೆರಾಲ್ಡ್ ಕೋಯೆಜಿ, ಲುಂಗಿ ಗಿಡಿ ಮತ್ತು ಮಾರ್ಕೊ ಯಾನ್ಸನ್ ಅವರು ಟಿ20 ಸರಣಿಯ ಮೂರು ಪಂದ್ಯಗಳ ಪೈಕಿ ಮೊದಲ ಎರಡರಲ್ಲಿ ಆಡಿ, ನಂತರ ದೇಶಿಯ ನಾಲ್ಕು ದಿನಗಳ ಕ್ರಿಕೆಟ್‌ನಲ್ಲಿ ತಮ್ಮ ಫ್ರಾಂಚೈಸಿಗಳಿಗೆ ಆಡುವರು. ನಂತರ ಟೆಸ್ಟ್ ಸರಣಿಗೆ ಮತ್ತೆ ತಂಡವನ್ನು ಸೇರಿಕೊಳ್ಳಲಿದ್ದಾರೆ.

ಡರ್ಬನ್‌ನಲ್ಲಿ ಭಾನುವಾರ ಮೊದಲ ಟಿ20 ಪಂದ್ಯ ನಡೆಯಲಿದೆ. ಮೂರು ಪಂದ್ಯಗಳ ಈ ಸರಣಿ ಬಳಿಕ 3 ಏಕದಿನ ಮತ್ತು 2 ಟೆಸ್ಟ್ ಪಂದ್ಯಗಳ ಸರಣಿ ನಡೆಯಲಿವೆ.

ಸರಣಿಗೆ ಭಾರತ ತಂಡವನ್ನು ಈಗಾಗಲೇ ಪ್ರಕಟಿಸಲಾಗಿದ್ದು, ಸೀಮಿತ ಓವರ್‌ಗಳ ಪಂದ್ಯ ಗಳಿಗೆ ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ ಅವರಿಗೆ ವಿಶ್ರಾಂತಿ ನೀಡಲಾಗಿದೆ. ಏಕದಿನ ತಂಡವನ್ನು ಕನ್ನಡಿಗ ಕೆ.ಎಲ್. ರಾಹುಲ್, ಟಿ20 ತಂಡವನ್ನು ಸೂರ್ಯಕುಮಾರ್ ಯಾದವ್ ಮತ್ತು ಟೆಸ್ಟ್ ತಂಡವನ್ನು ರೋಹಿತ್ ಶರ್ಮಾ ಮುನ್ನಡೆಸಲಿದ್ದಾರೆ.

ಆಗಿದ್ದಾಗಲಿ ನೋಡೋಣವೆಂದ ನಾಯಕ: ಅರ್ಷದೀಪ್

ಬೆಂಗಳೂರು: ‘ಪಂದ್ಯದ ಫಲಿತಾಂಶಕ್ಕೆ ನಿರ್ಣಾಯಕವಾಗಿದ್ದ ಕೊನೆಯ ಓವರ್ ಬೌಲಿಂಗ್ ಮಾಡಲು ನನಗೆ ಚೆಂಡು ಕೊಟ್ಟ ಸೂರ್ಯ, ಆಗಿದ್ದಾಗಲಿ ನೋಡೋಣ. ಆಡು ನೀನು ಎಂದರು. ಅದು ನನ್ನಲ್ಲಿ ವಿಶ್ವಾಸ ಹೆಚ್ಚಿಸಿತು’ ಎಂದು ಭಾರತ ತಂಡದ ಎಡಗೈ ವೇಗಿ ಅರ್ಷದೀಪ್ ಸಿಂಗ್ ಹೇಳಿದರು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಆಸ್ಟ್ರೇಲಿಯಾ ಎದುರಿನ ಟಿ20 ಪಂದ್ಯದಲ್ಲಿ ಭಾರತ ತಂಡವು 6 ರನ್‌ಗಳಿಂದ ಜಯಿಸಿತ್ತು. 161 ರನ್‌ಗಳ ಗುರಿ ಬೆನ್ನಟ್ಟಿದ್ದ ಆಸ್ಟ್ರೇಲಿಯಾಕ್ಕೆ ಗೆಲುವಿಗಾಗಿ ಕೊನೆಯ ಓವರ್‌ನಲ್ಲಿ 10 ರನ್‌ಗಳ ಅಗತ್ಯವಿತ್ತು. ಅರ್ಷದೀಪ್ ತಮ್ಮ ಮೊದಲ ಮೂರು ಓವರ್‌ಗಳಲ್ಲಿ 37 ರನ್ ಕೊಟ್ಟಿದ್ದರು. ಆದ್ದರಿಂದ ಅವರು ಮತ್ತೆ ರನ್ ಬಿಟ್ಟುಕೊಡುವ ಆತಂಕ ಇತ್ತು. ಆಸ್ಟ್ರೇಲಿಯಾ ತಂಡದ ನಾಯಕ ಮ್ಯಾಥ್ಯೂ ವೇಡ್ ಕ್ರೀಸ್‌ನಲ್ಲಿದ್ದರು. ಆದರೆ ಅರ್ಷದೀಪ್ ತಮ್ಮ ಸಾಮರ್ಥ್ಯ ಸಾಬೀತು ಮಾಡಿದರು. ಅದೃಷ್ಟವೂ ಅವರ ಬೆನ್ನಿಗಿತ್ತು.

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ ಬೆಳಗಾವಿ
ಪಂಚಾಯತ ರಾಜ ಇಂಜಿನಿಯರಿಂಗ್ ವಿಭಾಗ ಚಿಕ್ಕೋಡಿ
ಕಚೇರಿ ದೂರವಾಣಿ / ಫ್ಯಾಕ್ಸ್ ಸಂಖ್ಯೆ: 08338–272131, ಇ–ಮೇಲ್ : preckdee@gmail.com

ಕ್ರ.ಸಂ. ಪಂರಾಇಂ/ಚಿವಿ/ಡಿಬಿ/ಇ–ಪ್ರೋ/2023–24/2090 ದಿನಾಂಕ: 27–11–2023

ಅಲ್ಪಾವಧಿ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ ಚಿಕ್ಕೋಡಿ ಇವರು KW-1, KW-2, KW-3, (Standard Tender Document) ನಿಬಂಧನೆಗಳೊಪಟ್ಟಂತೆ ಪಂಚಾಯತ ರಾಜ್ ಇಂಜಿನೀಯರಿಂಗ್ ಇಲಾಖೆಯಲ್ಲಿ ಸಿವ್ಹಿಲ್ ನೊಂದಾಯಿತ ಹಾಗೂ ಇ–ಗುತ್ತಿಗೆ ಕುರಿತು ಇ–ಪ್ರೊಕ್ಯೂರ್‌ಮೆಂಟ್ ಇವರಿಂದ ನೊಂದಾಯಿಸಿದ ಅರ್ಹ ಗುತ್ತಿಗೆದಾರರುಗಳಿಂದ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ ವಿವಿಧ ಯೋಜನೆ ಅಡಿಯಲ್ಲಿಯ ಕಾಮಗಾರಿಗಳಿಗೆ ಐಟಂವಾರು ಟರ್ನಕೀ ಆಧಾರದ ಮೇಲೆ ಇ–ಟೆಂಡರ್ ಆಹ್ವಾನಿಸಲಾಗಿದೆ.

1	Last date of request for issue of blank E-bid document through e-procurement date: other works	27-11-2023 to 11-12-2023
2	Bid Closing & Submission date: other works	11-12-2023 at 4:00 PM
3	Financial Bid Opening date	13-12-2023 at 11:00 AM
4	Pre-Bid Meeting date: (KW-3 & KW-4 Work only)	06-12-2023 at 11:00 AM
5	Technical Bid Opening Date : (KW-3 & KW-4 Works only)	13-12-2023 at 11:00 AM
6	Financial Bid opening date: (KW-3 & KW-4 Works only)	15-12-2023 at 11:00 AM

General Works Indent No”s	1281, 1589, 587, 2058, 1183, 1778, 2070, 2071, 277, 480, 273, 274, 275, 484, 279, 545, 387, 540, 538, 1271, 557, 1266, 1264, 298, 600, 1974, 1384, 1145, 1385, 1769, 2012, 1843.
SC Works Indent No’s	329, 555, 1265, 1263, 1283, 1971, 1380, 1948.
ST Works Indent No’s	554, 534, 1144, 2011,

ಕಾಮಗಾರಿಗಳ ವಿವರ, ಷರತ್ತು ನಿಬಂಧನೆಗಳಿಗಾಗಿ ಈ ಕಚೇರಿಗೆ ಕಚೇರಿ ವೇಳೆಯಲ್ಲಿ ಸಂಪರ್ಕಿಸಿ ಹಾಗೂ ವೆಬ್‌ಸೈಟ್ https://kppp.karnatakat.gov.in ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಪಂ.ರಾಜ್. ಇಂ. ವಿಭಾಗ, ಚಿಕ್ಕೋಡಿ.

DIPO/RO No. 688/2023-24



ಷೇರುಪೇಟೆ ವಹಿವಾಟು	1384
ಹಿಂದಿನ ಅಂತ್ಯ	67,481
ಇಂದಿನ ಅಂತ್ಯ	68,865

ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ	20,267
ಇಂದಿನ ಅಂತ್ಯ	20,686
▲	419
ದಿನದ ಗರಿಷ್ಠ	20,702

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹530
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹530

ಖಾದ್ಯ ತೈಲ ಮುಂಬೈ

(10 ಕೆಜಿಗೆ)	
ಶೇಂಗಾ (ರಿಫೈನ್ಡ್)	₹1620 (1617)
ಸೋಯಾ (ರಿಫೈನ್ಡ್)	₹932 (942)
ಸೂರ್ಯಕಾಂತಿ (ರಿಫೈನ್ಡ್)	₹945 (945)
ಪಾಮೋಲಿನ್	₹841 (845)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹300-482
ದ್ವಿತಳಿ (ಬಿ.ವಿ)	₹320-599

ಮೂರು ರಾಜ್ಯಗಳಲ್ಲಿ ಬಿಜೆಪಿಗೆ ಗೆಲುವು: ಹೂಡಿಕೆದಾರರಲ್ಲಿ ಹೊಸ ಉತ್ಸಾಹ

ಷೇರುಪೇಟೆಯಲ್ಲಿ ಗೂಳಿಯ ನಾಗಾಲೋಟ

ಮುಂಬೈ (ಪಿಟಿಐ): ಮೂರು ರಾಜ್ಯಗಳ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಭಾರಿ ಗೆಲುವು ಸಾಧಿಸಿದೆ. ಇದು ಹೂಡಿಕೆದಾರರಲ್ಲಿ ಹೊಸ ಉತ್ಸಾಹ ಮೂಡಿಸಿದೆ. ಇದರಿಂದಾಗಿ ಮುಂಬೈ ಮತ್ತು ರಾಷ್ಟ್ರೀಯ ಷೇರುಪೇಟೆಗಳು ಸೋಮವಾರದ ವಹಿವಾಟಿನಲ್ಲಿ ಶೇ 2ಕ್ಕೂ ಅಧಿಕ ಗಳಿಕೆ ಕಾಣುವಂತಾಯಿತು.

ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ ಸೋಮವಾರ 1,384 ಅಂಶಗಳಷ್ಟು ಜಿಗಿತ ಕಂಡಿತು. ಇದರಿಂದ ಸಾರ್ವಕಾಲಿಕ ಗರಿಷ್ಠ ಮಟ್ಟವಾದ 68,865 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿತು. 2022ರ ಮೇ 20ರ ನಂತರ ದಿನದ ವಹಿವಾಟೊಂದರಲ್ಲಿ ಸೆನ್ಸೆಕ್ಸ್ ಈ ಪ್ರಮಾಣದ ಏರಿಕೆ ಕಂಡುಕೊಂಡಿತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 419 ಅಂಶ ಏರಿಕೆ ಕಂಡು ಹೊಸ ಎತ್ತರವಾದ 20,685 ಅಂಶಗಳಲ್ಲಿ ವಹಿವಾಟು ಅಂತ್ಯವಾಯಿತು.

ಆರ್ಥಿಕತೆಯು ಉತ್ತಮ ಬೆಳವಣಿಗೆಯ ಹಾದಿಯಲ್ಲಿ ಸಾಗುತ್ತಿದೆ ಎನ್ನುವುದಕ್ಕೆ ಕಳೆದವಾರದ ಬಿಡುಗಡೆ ಆದ ಜಿಡಿಪಿ, ತಯಾರಿಕಾ ವಲಯದ ಬೆಳವಣಿಗೆಯ ಮತ್ತು ಜಿಎಸ್‌ಟಿ ಅಂಕಿ–ಅಂಶಗಳು ಸ್ಪಷ್ಟ ಸೂಚನೆ ನೀಡಿವೆ. ಮಧ್ಯಪ್ರದೇಶ, ರಾಜಸ್ಥಾನ ಮತ್ತು ಛತ್ತೀಸಗಢದಲ್ಲಿ ಬಿಜೆಪಿ ಗೆಲುವು ಸಾಧಿಸಿರುವುದು ಸಕಾರಾತ್ಮಕ ಭಾವನೆಯನ್ನು ಮತ್ತಷ್ಟು ಹೆಚ್ಚಾಗುವಂತೆ ಮಾಡಿದೆ. ವಿದೇಶ ಬಂಡವಾಳ ಒಳಹರಿವು ಹೆಚ್ಚಾಗುತ್ತಿರುವುದು ಸಹ ಸೂಚ್ಯಂಕಗಳ ಓಟಕ್ಕೆ ಉತ್ತೇಜನ ನೀಡಿತು ಎಂದು ಮಾರುಕಟ್ಟೆ ವಿಶ್ಲೇಷಕರು ಹೇಳಿದ್ದಾರೆ.

ಕಚ್ಚಾ ತೈಲ ದರವು ಬ್ಯಾರಲ್‌ಗೆ 80 ಡಾಲರ್‌ಗಿಂತಲೂ ಕೆಳ ಮಟ್ಟದಲ್ಲಿ ಇರುವುದು ಸಹ ಹೂಡಿಕೆ ಚಟುವಟಿಕೆಯನ್ನು ಹೆಚ್ಚಾಗುವಂತೆ ಮಾಡಿತು ಎಂದೂ ತಿಳಿಸಿದ್ದಾರೆ.

‘ಮೂರು ರಾಜ್ಯಗಳಲ್ಲಿ ಬಿಜೆಪಿ ಗೆಲುವು ಸಾಧಿಸಿರುವುದು ಷೇರುಪೇಟೆಗಳಲ್ಲಿ ಸಾರ್ವಕಾಲಿಕ ಗರಿಷ್ಠ ಮಟ್ಟದ ವಹಿವಾಟು ನಡೆಯವಂತೆ ಮಾಡಿತು. ಮುಂದಿನ ಸಾರ್ವತ್ರಿಕ ಚುನಾವಣೆಯ ಬಳಿಕ ಸ್ಥಿರ ಸರ್ಕಾರ ರಚನೆ ಆಗುವ ನಿರೀಕ್ಷೆಯನ್ನು ಇನ್ನಷ್ಟು ಹೆಚ್ಚಾಗುವಂತೆ ಈ ಫಲಿತಾಂಶ ಮಾಡಿದೆ’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

‘ಎಲ್ಲ ವಲಯಗಳೂ ಗಳಿಕೆ ಕಂಡಿವೆಯಾದರೂ ಬ್ಯಾಂಕಿಂಗ್ ವಲಯವು ಸೂಚ್ಯಂಕದ ಏರಿಕೆಗೆ ಹೆಚ್ಚಿನ ಕೊಡುಗೆ ನೀಡಿದೆ. ಮುಂದಿನ ದಿನಗಳಲ್ಲಿಯೂ ಇದೇ ಸ್ಥಿತಿ ಇರುವ ನಿರೀಕ್ಷೆ ಮಾಡಲಾಗಿದೆ’ ಎಂದು ರೆಲಿಗೇರ್ ಬ್ರೋಕಿಂಗ್ ಲಿಮಿಟೆಡ್‌ನ ಹಿರಿಯ ಉಪಾಧ್ಯಕ್ಷ ಅಜಿತ್ ಮಿಶ್ರಾ ತಿಳಿಸಿದ್ದಾರೆ.

ಏಷ್ಯಾದಲ್ಲಿ ಹಾಂಗ್‌ಕಾಂಗ್ ಶೇ 1.10, ಜಪಾನ್ ಶೇ 0.70 ಮತ್ತು ಶಾಂಘೈ ಕಾಂಪೊಸಿಟ್ ಶೇ 0.29ರಷ್ಟು ಇಳಿಕೆ ಕಂಡಿತು. ಯುರೋಪ್‌ನಲ್ಲಿ ಮಿಶ್ರ ವಹಿವಾಟು ನಡೆಯಿತು. ಬ್ರೆಂಟ್ ಕಚ್ಚಾ ತೈಲ ಶೇ 0.65ರಷ್ಟು ಇಳಿಕೆ ಕಂಡು ಬ್ಯಾರಲ್‌ಗೆ 78.37 ಡಾಲರ್‌ಗೆ ತಲುಪಿತು.

ಪ್ರಮುಖ ಕಂಪನಿಗಳ ಗಳಿಕೆ (%)	
4.68	ಐಸಿಐಸಿಐ ಬ್ಯಾಂಕ್
3.99	ಎಸ್‌ಬಿಐ
3.88	ಎಲ್ ಆ್ಯಂಡ್ ಟಿ
3.80	ಕೋಟಕ್ ಬ್ಯಾಂಕ್
3.63	ಇಂಡಸ್‌ಇಂಡ್ ಬ್ಯಾಂಕ್

ಚಿನ್ನ: ದೆಹಲಿಯಲ್ಲಿ ₹64,300

ನವದೆಹಲಿ: ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರ ಚಿನ್ನದ ದರ 10 ಗ್ರಾಂಗೆ ₹450 ಹೆಚ್ಚಾಗಿ ದಾಖಲೆಯ ₹64,300ಕ್ಕೆ ಏರಿಕೆ ಕಂಡಿತು.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ದರ ಏರಿಕೆ ಕಂಡಿದ್ದರಿಂದ ದೇಶ ಮಾರುಕಟ್ಟೆಯಲ್ಲಿಯೂ ಅದರ ಪರಿಣಾಮ ಕಂಡುಬಂದಿತು ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ಬಿಎಸ್‌ಇ ಮೌಲ್ಯ ₹5.81 ಲಕ್ಷ ಕೋಟಿ ವೃದ್ಧಿ

ನವದೆಹಲಿ: ಬಿಎಸ್‌ಇನಲ್ಲಿ ನೋಂದಾಯಿತ ಕಂಪನಿಗಳ ಮಾರುಕಟ್ಟೆ ಮೌಲ್ಯವು ಸೋಮವಾರದ ವಹಿವಾಟಿನಲ್ಲಿ ₹5.81 ಲಕ್ಷ ಕೋಟಿಯಷ್ಟು ಏರಿಕೆ ಕಂಡಿತು. ಇದರಿಂದಾಗಿ ಷೇರುಪೇಟೆಯ ಒಟ್ಟು ಬಂಡವಾಳ ಮೌಲ್ಯವು ಸಾರ್ವಕಾಲಿಕ ಗರಿಷ್ಠ ಮಟ್ಟವಾದ ₹343.48 ಲಕ್ಷ ಕೋಟಿಗೆ ತಲುಪಿತು.

ಐದು ದಿನಗಳ ವಹಿವಾಟಿನಲ್ಲಿ ಮಾರುಕಟ್ಟೆ ಮೌಲ್ಯವು ₹14.76 ಲಕ್ಷ ಕೋಟಿಯಷ್ಟು ಏರಿಕೆ ಕಂಡಿದೆ. ನವೆಂಬರ್ 29ರಂದು ಷೇರುಪೇಟೆಯ ಮೌಲ್ಯವು 4 ಟ್ರಿಲಿಯನ್ ಡಾಲರ್ ಮೈಲಿಗಲ್ಲು ತಲುಪಿತು. ಶುಕ್ರವಾರದ ವಹಿವಾಟಿನಲ್ಲಿ ಎನ್‌ಎಸ್‌ಇ ಮಾರುಕಟ್ಟೆ ಮೌಲ್ಯ ಕೂಡಾ 4 ಟ್ರಿಲಿಯನ್ ಡಾಲರ್ (334.72 ಲಕ್ಷ ಕೋಟಿ) ದಾಟಿತು.

ಅದಾನಿ ಕಂಪನಿಗಳ ಷೇರು ಮೌಲ್ಯ ಹೆಚ್ಚಳ

ಅದಾನಿ ಸಮೂಹದ 10 ಕಂಪನಿಗಳ ಷೇರುಗಳ ಮೌಲ್ಯವು ಸೋಮವಾರ ಏರಿಕೆ ಕಂಡಿತು. ಅದಾನಿ ಗ್ರೀನ್ ಎನರ್ಜಿ ಶೇ 9.43ರಷ್ಟು ಗರಿಷ್ಠ ಏರಿಕೆ ಕಂಡಿತು. ಅಂಬುಜಾ ಸಿಮೆಂಟ್ಸ್ ಶೇ 7.21, ಅದಾನಿ ಎಂಟರ್‌ಪ್ರೈಸಸ್ ಶೇ 7.07, ಎಸಿಸಿ ಷೇರು ಶೇ 6.26ರಷ್ಟು ಹೆಚ್ಚಾಯಿತು.

10 ಕಂಪನಿಗಳ ಮಾರುಕಟ್ಟೆ ಮೌಲ್ಯವು ಸೋಮವಾರದ ವಹಿವಾಟಿನ ಒಂದು ಹಂತದಲ್ಲಿ ₹12 ಲಕ್ಷ ಕೋಟಿಗೆ ತಲುಪಿತ್ತು. ವಹಿವಾಟಿನ ಅಂತ್ಯದ ವೇಳೆಗೆ ₹11.95 ಲಕ್ಷ ಕೋಟಿಗೆ ಇಳಿಕೆ ಕಂಡಿತು.

ಶುಕ್ರವಾರದ ವಹಿವಾಟಿನ ಅಂತ್ಯದಲ್ಲಿ 10 ಕಂಪನಿಗಳ ಒಟ್ಟು ಮಾರುಕಟ್ಟೆ ಮೌಲ್ಯ ₹11.22 ಲಕ್ಷ ಕೋಟಿ ಇತ್ತು. ಸೋಮವಾರ ₹72,861 ಕೋಟಿಯಷ್ಟು ಹೆಚ್ಚಾಗಿ ₹11.95 ಲಕ್ಷ ಕೋಟಿಗೆ ತಲುಪಿತು.

ಅದಾನಿ ಸಮೂಹದ ವಿರುದ್ಧ ಅಮೆರಿಕದ ಸಂಶೋಧನಾ ಸಂಸ್ಥೆ ಹಿಂಡನ್‌ಬರ್ಗ್ ವರದಿ ಬಿಡುಗಡೆ ಆದ ಬಳಿಕ ಇದೇ ಮೊದಲ ಬಾರಿಗೆ ಸಮೂಹದ ಕಂಪನಿಗಳ ಷೇರುಮೌಲ್ಯವು ₹12 ಲಕ್ಷ ಕೋಟಿಯನ್ನು ತಲುಪಿದೆ.

‘ಐ.ಟಿ. ವಲಯ: ಸದ್ಯಕ್ಕೆ ಸುಧಾರಿಸದು ನೇಮಕಾತಿ’

ಮುಂಬೈ (ಪಿಟಿಐ): ದೇಶದ ಮಾಹಿತಿ ತಂತ್ರಜ್ಞಾನ (ಐ.ಟಿ) ಉದ್ಯಮಕ್ಕೆ ಜಾಗತಿಕ ಮಟ್ಟದಲ್ಲಿ ಬೇಡಿಕೆ ಕಡಿಮೆ ಆಗಿದೆ. ಹೀಗಾಗಿ ಮುಂದಿನ 2–3 ತ್ರೈಮಾಸಿಕಗಳವರೆಗೂ ಹೊಸ ಸಿಬ್ಬಂದಿ ನೇಮಕವು ನಿಧಾನಗತಿಯಲ್ಲಿ ಸಾಗಲಿದೆ ಎಂದು ರೇಟಿಂಗ್ ಸಂಸ್ಥೆ ಐಸಿಆರ್‌ಎ ಸೋಮವಾರ ಹೇಳಿದೆ.

ಅಮೆರಿಕ ಮತ್ತು ಯುರೋಪ್‌ನಂತಹ ದೊಡ್ಡ ಮಾರುಕಟ್ಟೆಗಳು ಹಲವು ರೀತಿಯ ಆರ್ಥಿಕ ಸವಾಲುಗಳನ್ನು ಎದುರಿಸುತ್ತಿವೆ. ಇದು ಭಾರತದ ಐ.ಟಿ. ಉದ್ಯಮದ ಬೇಡಿಕೆ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿದೆ ಎಂದು ರೇಟಿಂಗ್ ಸಂಸ್ಥೆ ತಿಳಿಸಿದೆ.

ಬೇಡಿಕೆ ಕಡಿಮೆ ಆಗಿರುವುದರಿಂದ ಕಂಪನಿಗಳು ಹೊಸ ನೇಮಕಕ್ಕೆ ಮುಂದಾಗುತ್ತಿಲ್ಲ. ಇರುವ ಸಿಬ್ಬಂದಿಯನ್ನೇ ಬಳಸಿಕೊಂಡು ಸಾಮರ್ಥ್ಯವನ್ನು ಸುಧಾರಿಸಿಕೊಳ್ಳಲು ಗಮನ ಹರಿಸುತ್ತಿವೆ ಎಂದು ಸಂಸ್ಥೆಯು ಹೇಳಿದೆ.

2022–23ನೇ ಹಣಕಾಸು ವರ್ಷದಲ್ಲಿ ಉದ್ಯಮವು ಶೇ 9.2ರಷ್ಟು ಬೆಳವಣಿಗೆ ಕಂಡಿದೆ. ಆದರೆ, ಬೇಡಿಕೆ ಕಡಿಮೆ ಆಗಿರುವುದರಿಂದ ಪ್ರಸಕ್ತ ಹಣಕಾಸು ವರ್ಷದಲ್ಲಿ ವರಮಾನದ ಬೆಳವಣಿಗೆ ಶೇ 3–5ರಷ್ಟು ಆಗುವ ಅಂದಾಜು ಮಾಡಲಾಗಿದೆ. 2024–25ನೇ ಹಣಕಾಸು ವರ್ಷದ ವೇಳೆಗೆ ಶೇ 6ರವರೆಗೆ ಏರಿಕೆ ಆಗುವ ನಿರೀಕ್ಷೆ ಇದೆ ಎಂದು ಐಸಿಆರ್‌ಎ ಹೇಳಿದೆ.

ಮುಂಬೈ ಧಾರಣೆ

ಶೇಂಗಾ

04-12-2023

ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10600-10700
ದಪ್ಪ ಮಧ್ಯಪ್ರದೇಶ(ಹೊಸ)	10100-10200
ದಪ್ಪ ಗುಜರಾತ್(ಹೊಸ)	10800-10900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1630 (1627)
ಒಂದು ವಾರದ ಡೆಲಿವರಿ	1625 (1622)
ಸೋಯಾ ಕಚ್ಚಾ	915 (920)
ಪಾಮ್ ವಾರದ ಡೆಲಿವರಿ	843 (843)
ಸೂರ್ಯಕಾಂತಿ ಎಣ್ಣೆ ಕಚ್ಚಾ	890 (900)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
62,900 (63,150)
ಬೆಳ್ಳಿ ಕೆ.ಜಿ 76,500 (76,850)

ಆವರಣದಲ್ಲಿ ಶನಿವಾರದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಹಳತು	42500-45500
ಕೋಕ	15000-27500
ಕಾರ್ಕಳ	
ಹೊಸತು	25000-36500
ಹಳತು	30000-46000
ಕುಮಟ	
ಚಿಪ್ಪು	26509-34399
ಕೋಕ	20109-31199
ಫ್ಯಾಕ್ಟರಿ	11869-24111
ಹಳೆಚಾಲಿ	37299-39199
ಹೊಸಚಾಲಿ	33089-34499
ಸಾಗರ	
ಬಿಳಿಗೋಟು	12099-34899
ಚಾಲಿ	35809-38699
ಕೋಕ	19499-34699
ಕೆಂಪುಗೋಟು	31129-34600
ರಾಶಿ	38199-47499
ಸಿಪ್ಪೆಗೋಟು	14669-21200
ಶಿವಮೊಗ್ಗ	
ಬೆಟ್ಟೆ	37000-52960
ಗೊರಬಾಲು	18000-36782
ಹೊಸತು	44509-46899
ರಾಶಿ	44509-46899
ಸರಕು	50040-76996
ಸಿದ್ದಾಪುರ	
ಬಿಳಿಗೋಟು	30689-34670
ಚಾಲಿ	38189-39099
ಕೋಕ	29019-33122
ಕೆಂಪುಗೋಟು	29180-30889
ರಾಶಿ	42899-46509
ತಟ್ಟಿಬೆಟ್ಟೆ	41012-43899
ಶಿರಸಿ	
ಬೆಟ್ಟೆ	39269-43099
ಬಿಳಿಗೋಟು	33009-35609
ಚಾಲಿ	36600-39808
ಕೆಂಪುಗೋಟು	33819-34699
ರಾಶಿ	45799-47399
ಯಲ್ಲಾಪುರ	
ಅಪಿ	67199-67199
ಬಿಳಿಗೋಟು	24899-34210
ಚಾಲಿ	35699-39678
ಕೋಕ	18609-32209
ಕೆಂಪುಗೋಟು	25019-35399
ರಾಶಿ	42909-53730
ತಟ್ಟಿಬೆಟ್ಟೆ	38499-41719

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹149
ಆರ್‌ಎಸ್‌ಎಸ್-5	₹145
ಗುಡ್ ಲಾಟ್	–₹128

ವಿನಿಮಯ ದರ

$ ಡಾಲರ್	83.38
£ ಪೌಂಡ್	105.65
€ ಯುರೊ	90.65
¥ ಯೆನ್ (100ಕ್ಕೆ)	57

ಕರ್ನಾಟಕ ಸರ್ಕಾರ
KEA
ಕರ್ನಾಟಕ ಪರೀಕ್ಷಾ ಪ್ರಾಧಿಕಾರ
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು
ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560012. ದೂರವಾಣಿ: 080–23460460 (5 ಲೈನ್ಸ್),
ಇ–ಮೇಲ್: keauthority-ka@nic.in ವೆಬ್‌ಸೈಟ್: http://kea.kar.nic.in

ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್.02/2024 ದಿನಾಂಕ: 04–12–2023

ಅಧಿಸೂಚನೆ
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ವ್ಯಾಪ್ತಿಯಲ್ಲಿರುವ
ವಸತಿ ಶಾಲೆಗಳಲ್ಲಿ 2024–25ನೇ ಶೈಕ್ಷಣಿಕ ಸಾಲಿನ 6ನೇ ತರಗತಿಗೆ ಪ್ರವೇಶಾತಿ

ಸರ್ಕಾರದ ಆದೇಶ ಸಂಖ್ಯೆ ಸಕಇ 94 ಮೊದೇಶಾ 2020 ಬೆಂಗಳೂರು ದಿನಾಂಕ: 19–06–2021 ಮತ್ತು 12–11–2021 ಹಾಗೂ ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಇವರ ಪತ್ರ ಸಂಖ್ಯೆ: KREIS/EDN/ENT/13/2023-EDU/86445 ದಿನಾಂಕ: 21–11–2023 ಅನ್ವಯ, 2024–25 ನೇ ಸಾಲಿಗೆ ಸಂಬಂಧಿಸಿದಂತೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ/ ಕಿತ್ತೂರು ರಾಣಿ ಚೆನ್ನಮ್ಮ / ಏಕಲವ್ಯ ಮಾದರಿ / ಅಟಲ್ ಬಿಹಾರಿ ವಾಜಪೇಯಿ / ಶ್ರೀಮತಿ ಇಂದಿರಾ ಗಾಂಧಿ / ಡಾ॥ ಬಿ.ಆರ್. ಅಂಬೇಡ್ಕರ್ / ಮಾಸ್ತಿ ವೆಂಕಟೇಶ ಅಯ್ಯಂಗಾರ್ / ಸಂಗೊಳ್ಳಿ ರಾಯಣ್ಣ / ಕವಿರನ್ನ / ಗಾಂಧಿತತ್ವ / ಶ್ರೀ ನಾರಾಯಣ ಗುರು ಮುಂತಾದ ವಸತಿ ಶಾಲೆಗಳಿಗೆ 6ನೇ ತರಗತಿ ಪ್ರವೇಶಕ್ಕೆ ಅಗತ್ಯವಾದ ಪ್ರವೇಶ ಪರೀಕ್ಷೆ ಮತ್ತು ಆನ್‌ಲೈನ್ ಕೌನ್ಸಿಲಿಂಗ್ ಅನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ನಡೆಸಲಾಗುವುದು.

5ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಅಭ್ಯರ್ಥಿಗಳ ಪೋಷಕರು ತಮ್ಮ ಮಕ್ಕಳನ್ನು 6ನೇ ತರಗತಿಗೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳಲ್ಲಿನ ವಸತಿ ಶಾಲೆಗಳಿಗೆ ಪ್ರವೇಶ ಪಡೆಯಲು, ದಿನಾಂಕ: **07–12–2023 ರ ಬೆಳಿಗ್ಗೆ 11.00 ರಿಂದ 31–12–2023 ರಾತ್ರಿ 11.59ರ ವರೆಗೆ ರವರೆಗೆ** ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆ / ಕಾಲೇಜುಗಳ ಮೂಲಕ ಆನ್‌ಲೈನ್ ನಲ್ಲಿ ಅರ್ಜಿ ಸಲ್ಲಿಸಲು ತಿಳಿಸಿದೆ. ಅರ್ಜಿ ಸಲ್ಲಿಸುವ ಅಭ್ಯರ್ಥಿಗಳಿಗೆ ದಿನಾಂಕ: **18–02–2024 ರಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಪ್ರವೇಶ ಪರೀಕ್ಷೆ ನಡೆಸಲಿದೆ.**

ಅರ್ಜಿ ಸಲ್ಲಿಸಲು ವರ್ಗಾವಾರು ವಾರ್ಷಿಕ ಆದಾಯದ ಮಿತಿ ಕೆಳಕಂಡಂತಿದೆ.

ಕ್ರ.ಸಂ.	ವಿದ್ಯಾರ್ಥಿಯ ವರ್ಗ	ಕುಟುಂಬದ ವಾರ್ಷಿಕ ಆದಾಯ ಮಿತಿ
01	ಪ.ಜಾತಿ / ಪರಿಶಿಷ್ಟ ವರ್ಗ	ರೂ. 2,50,000/–
02	ಹಿಂ.ವರ್ಗದ ಪ್ರವರ್ಗ–1	ರೂ. 2,50,000/–
03	ಹಿಂ.ವರ್ಗ 2ಎ, 2ಬಿ, 3ಎ ಮತ್ತು 3ಬಿ	ರೂ. 1,00,000/–

ಅರ್ಜಿ ಸಲ್ಲಿಸುವ ವಿಧಾನ, ಹಾಗೂ **“ಮಾಹಿತಿ ಪುಸ್ತಕ – 2024”** ವನ್ನು ಪ್ರಾಧಿಕಾರದ ವೆಬ್‌ಸೈಟ್: **http://kea.kar.nic.in** ನಲ್ಲಿ ಮತ್ತು ವಸತಿ ಶಿಕ್ಷಣ ಸಂಸ್ಥೆಗಳ ವೆಬ್‌ಸೈಟ್: **http://kreis.kar.nic.in** ನಲ್ಲಿ ಪ್ರಚುರ ಪಡಿಸಲಾಗಿದೆ. ಪರೀಕ್ಷೆಗೆ ಪ್ರವೇಶ ಪತ್ರಗಳನ್ನು ದಿನಾಂಕ: **01–02–2024 ರಿಂದ** ಈ ಮೇಲ್ಕಂಡ ವೆಬ್‌ಸೈಟ್‌ಗಳಿಂದ ಆಯಾ ವಸತಿ ಶಾಲೆಯಲ್ಲಿ ಡೌನ್ ಲೋಡ್ ಮಾಡಿಕೊಳ್ಳಬಹುದು.

ಗಮನಿಸಿ: ಅಭ್ಯರ್ಥಿಯು ಈಗಾಗಲೇ 5ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಶಾಲೆಯಿಂದ SATS ಸಂಖ್ಯೆ, ಇತ್ತೀಚಿನ ಭಾವಚಿತ್ರ ಮತ್ತು ಮೀಸಲಾತಿಗೆ ಸಂಬಂಧಿಸಿದ ಎಲ್ಲಾ ಮೂಲ ದಾಖಲಾತಿಗಳನ್ನು ಅಥವಾ ಜೆರಾಕ್ಸ್ ಪ್ರತಿಗಳನ್ನು ತೆಗೆದುಕೊಂಡು ಅರ್ಜಿ ಸಲ್ಲಿಸುವ ಸಮಯದಲ್ಲಿ ಸಂಬಂಧಿಸಿದ ವಸತಿ ಶಾಲೆ / ಕಾಲೇಜಿನ ಮುಖ್ಯಸ್ಥರನ್ನು ಸಂಪರ್ಕಿಸಬೇಕು.

ಪ್ರವೇಶ ಪರೀಕ್ಷೆ – 2024 ರ ವೇಳಾಪಟ್ಟಿ

ದಿನಾಂಕ	ದಿನ	ಸಮಯ	ಅಂಕಗಳು
18–02–2024	ಭಾನುವಾರ	ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 1.00 ರವರೆಗೆ	100

ವಸತಿ ಶಾಲೆಗಳ ಆಯ್ಕೆಯ ಆದ್ಯತಾ ಕ್ರಮದಲ್ಲಿ ನಮೂದಿಸುವ ಕುರಿತು: ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವಾಗ ಯಾವ ಶಾಲೆಗಳಲ್ಲಿ ದಾಖಲಾತಿ ಬಯಸುತ್ತಾರೋ, ಅಂತಹ ಶಾಲೆಗಳನ್ನು ಆದ್ಯತಾ ಕ್ರಮದಲ್ಲಿ ಆಯ್ಕೆ ಮಾಡಿಕೊಳ್ಳಬೇಕು. ಆದ್ಯತಾ ಕ್ರಮದಲ್ಲಿ ದಾಖಲಿಸುವ ಶಾಲೆಗಳನ್ನು ಮಾತ್ರ ಹಂಚಿಕೆಗೆ ಪರಿಗಣಿಸಲಾಗುವುದು. ಅಭ್ಯರ್ಥಿಗಳು ತಮ್ಮ ಸೀಟು ಹಂಚಿಕೆ ಅವಕಾಶವನ್ನು ಹೆಚ್ಚಿಸಿಕೊಳ್ಳಲು ತಮ್ಮ ಜಿಲ್ಲೆಯಲ್ಲಿರುವ KREIS ನ ಎಲ್ಲಾ ವಸತಿ ಶಾಲೆಗಳನ್ನು ಆದ್ಯತಾ ಕ್ರಮದಲ್ಲಿ ನಮೂದಿಸತಕ್ಕದು. ಪ್ರವೇಶ ಪರೀಕ್ಷೆಯಲ್ಲಿ ಗಳಿಸಿದ ಮೆರಿಟ್, ಮೀಸಲಾತಿ ಹಾಗೂ ಅಭ್ಯರ್ಥಿಗಳು ಪ್ರವೇಶಾತಿಗಾಗಿ ನಮೂದಿಸಿರುವ ಶಾಲೆಗಳ ಆದ್ಯತಾ ಕ್ರಮದ ಆಧಾರದ ಮೇಲೆ Computerized Auto Selection ಮೂಲಕ ಸೀಟು ಹಂಚಿಕೆಯನ್ನು ಮಾಡಲಾಗುವುದು.

ಕೆಇಎ ಸಹಾಯವಾಣಿ ಸಂಖ್ಯೆಗಳು: 080 – 23 460 460 – (ಐದು ಲೈನುಗಳು: ಬೆ. 9.30 ರಿಂದ ಸಂ. 6.00)

ಸಹಿ/–
(ಎಸ್. ರಮ್ಯ, ಭಾ.ಆ.ಸೇ)
ಕಾರ್ಯನಿರ್ವಾಹಕ ನಿರ್ದೇಶಕರು

ವಾಸಾಸಂಇ/ವಾ.ಪ್ರ/2400/2023–24

ಬೈಜುಸ್‌ಗೆ ಎನ್‌ಸಿಎಲ್‌ಟಿ ಆಯೋಗ ನೋಟಿಸ್

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಗೆ ₹ 158 ಕೋಟಿ ಬಾಕಿ ಪಾವತಿಸುವ ಕುರಿತು ಥಿಂಕ್ ಆ್ಯಂಡ್ ಲರ್ನ್ ಪ್ರೈವೇಟ್ ಲಿಮಿಟೆಡ್‌ಗೆ ಎನ್‌ಸಿಎಲ್‌ಟಿ ಆಯೋಗವು ನೋಟಿಸ್ ಜಾರಿ ಮಾಡಿದೆ.

ಥಿಂಕ್ ಆ್ಯಂಡ್ ಲರ್ನ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯು ಬೈಜುಸ್ ಬ್ರ್ಯಾಂಡ್ ಮೂಲಕ ಕಾರ್ಯನಿರ್ವಹಿಸುತ್ತದೆ. ಕಂಪೆನಿಯು ಪ್ರಾಯೋಜಕತ್ವದ ಬಾಕಿಯನ್ನು ತೀರಿಸದಿರುವ ಕುರಿತು ಬಿಸಿಸಿಐ, ರಾಷ್ಟ್ರೀಯ ಕಂಪೆನಿ ಕಾನೂನು ನ್ಯಾಯಮಂಡಳಿಗೆ (ಎನ್‌ಸಿಎಲ್‌ಟಿ) ದೂರು ಸಲ್ಲಿಸಿತ್ತು. 'ನೋಟಿಸ್‌ಗೆ ಪ್ರತಿಕ್ರಿಯೆ ನೀಡಲು ಕಂಪೆನಿಗೆ ಎರಡು ವಾರಗಳ ಗಡುವು ಇದೆ' ಎಂದು ಮೂಲಗಳು ತಿಳಿಸಿವೆ.

ವಿಶ್ವ ಜೂನಿಯರ್ ಬಾಕ್ಸಿಂಗ್: ಹಾರ್ದಿಕ್, ಪ್ರಾಚಿಗೆ ಬೆಳ್ಳಿ

ಅಮಿಶಾ ಕೆರೆಟ್ಟಾ

ಪ್ರಾಚಿ


ಹಾರ್ದಿಕ್

ನವದೆಹಲಿ (ಪಿಟಿಐ): ಭಾರತದ ಬಾಕ್ಸರ್‌ಗಳಾದ ಹಾರ್ದಿಕ್ ಪನ್ವಾರ್, ಅಮಿಶಾ ಕೆರೆಟ್ಟಾ ಮತ್ತು ಪ್ರಾಚಿ ಟೋಕಾಸ್ ಅವರು ಅರ್ಮೇನಿಯಾದ ಯೆರೆವಾನ್‌ನಲ್ಲಿ ನಡೆಯುತ್ತಿರುವ ಐಬಿಎ ವಿಶ್ವ ಜೂನಿಯರ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ತಮ್ಮ ವಿಭಾಗಗಳ ಫೈನಲ್‌ನಲ್ಲಿ ಸೋತು ಬೆಳ್ಳಿ ಗೆದ್ದರು.

ಏಷ್ಯನ್ ಜೂನಿಯರ್ ಚಾಂಪಿಯನ್ ಹಾರ್ದಿಕ್ (80 ಕೆಜಿ) ಸೋಮವಾರ ನಡೆದ ಪಂದ್ಯದಲ್ಲಿ ರಷ್ಯಾದ ಅಶುರೊವ್ ಬೈರಾಮ್‌ಖಾನ್ ಅವರಿಗೆ 2-3ರಿಂದ ಮಣಿದರು.

ಅಮಿಶಾ (54 ಕೆಜಿ) 0–5ರಿಂದ ಕಜಕಿಸ್ತಾನ್‌ನ ಅಯಾಜಾನ್ ಸೈಡಿಕ್‌ಗೆ ಮತ್ತು ಪ್ರಾಚಿ (80 ಕೆಜಿ) 0–5ರಿಂದ ಎರಡು ಬಾರಿ ಏಷ್ಯನ್ ಜೂನಿಯರ್ ಚಾಂಪಿಯನ್ ಉಜ್ಬೇಕಿಸ್ತಾನ್‌ನ ಸೊಬಿರಾಖೋನ್ ಶಖೋಬಿದ್ದಿನೋವಾ ವಿರುದ್ಧ ಪರಾಭವಗೊಂಡರು.

ಟೂರ್ನಿಯಲ್ಲಿ ಭಾರತ ಒಟ್ಟು 17 ಪದಕಗಳನ್ನು ಗೆದ್ದಿದೆ. ಪಾಯಲ್ (48 ಕೆಜಿ), ನಿಶಾ (52 ಕೆಜಿ), ವಿನಿ (57 ಕೆಜಿ), ಸೃಷ್ಟಿ (63 ಕೆಜಿ), ಆಕಾಂಕ್ಷಾ (70 ಕೆಜಿ), ಮೇಘಾ (80 ಕೆಜಿ), ಜತಿನ್ (54 ಕೆಜಿ), ಸಾಹಿಲ್ (75 ಕೆಜಿ) ಮತ್ತು ಹೇಮಂತ್ (80 + ಕೆಜಿ) ಅವರು ತಮ್ಮ ವಿಭಾಗದಲ್ಲಿ ಫೈನಲ್ ಪ್ರವೇಶಿಸಿದ್ದು, ಚಿನ್ನದ ಪದಕಕ್ಕಾಗಿ ಹೋರಾಡಲಿದ್ದಾರೆ.

ನೇಹಾ (46 ಕೆಜಿ), ನಿಧಿ (66 ಕೆಜಿ), ಪರಿ (50 ಕೆಜಿ), ಕೃತಿಕಾ (75 ಕೆಜಿ) ಮತ್ತು ಸಿಕಂದರ್ (48 ಕೆಜಿ) ಅವರು ಸೆಮಿಫೈನಲ್‌ನಲ್ಲಿ ಅಭಿಯಾನ ಮುಗಿಸಿ ಕಂಚಿನ ಪದಕ ಗೆದ್ದುಕೊಂಡರು.

ಬಿಜೆಪಿ ರಾಜ್ಯ ಚುನಾವಣೆಗಳಲ್ಲಿ ಭರ್ಜರಿ ಗೆಲುವನ್ನು ಸಾಧಿಸಿದೆ।

ಅಥ್ಲೆಟಿಕ್ ಕೂಟ: ಚರಿಷ್ಮಾ ದಾಖಲೆ, ಹರ್ಷಿತಾ ಹ್ಯಾಟ್ರಿಕ್

ದಕ್ಷಿಣ ಕನ್ನಡ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಹರ್ಷಿತಾ

ಚರಿಷ್ಮಾ

ಪುತ್ತೂರು (ದಕ್ಷಿಣ ಕನ್ನಡ): ಟ್ರ್ಯಾಕ್ ಮತ್ತು ಫೀಲ್ಡ್‌ನಲ್ಲಿ ಮಿಂಚಿದ ಆತಿಥೇಯ ದಕ್ಷಿಣ ಕನ್ನಡ ಜಿಲ್ಲಾ ತಂಡ ಸೋಮವಾರ ಮುಕ್ತಾಯಗೊಂಡ ಹೈಸ್ಕೂಲ್ ವಿದ್ಯಾರ್ಥಿಗಳ ರಾಜ್ಯ ಅಥ್ಲೆಟಿಕ್ ಕೂಟದ ಸಮಗ್ರ ಚಾಂಪಿಯನ್ ಪಟ್ಟ ಮುಡಿಗೇರಿಸಿಕೊಂಡಿತು.

ಇಲ್ಲಿನ ಕೊಂಬೆಟ್ಟು ತಾಲ್ಲೂಕು ಕ್ರೀಡಾಂಗಣದಲ್ಲಿ ನಡೆದ ಕೂಟದಲ್ಲಿ ದಕ್ಷಿಣ ಕನ್ನಡದ ಕ್ರೀಡಾಪಟುಗಳು 61 ಪಾಯಿಂಟ್ ಕಲೆ ಹಾಕಿದರು. 44 ಪಾಯಿಂಟ್ ಗಳಿಸಿದ ದಕ್ಷಿಣ ಕನ್ನಡ ಜಿಲ್ಲೆಯು ಬಾಲಕಿಯರ ವಿಭಾಗದಲ್ಲಿ ಮತ್ತು 21 ಪಾಯಿಂಟ್ ಗಳಿಸಿದ ಬೆಂಗಳೂರಿನ ವಿದ್ಯಾನಗರ ಕ್ರೀಡಾ ಶಾಲೆ, ಬಾಲಕರ ವಿಭಾಗದಲ್ಲಿ ಚಾಂಪಿಯನ್ ಆಯಿತು. 21 ಪಾಯಿಂಟ್ ಗಳಿಸಿದ ಶಿರಸಿ ಶೈಕ್ಷಣಿಕ ಜಿಲ್ಲೆ ಬಾಲಕಿಯರ ವಿಭಾಗದ ರನ್ನರ್ ಅಪ್ ಆಯಿತು.

ಎರಡನೇ ದಿನವಾದ ಸೋಮವಾರ ಬಾಲಕಿಯರ 1500 ಮೀಟರ್ಸ್ ಓಟದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಚರಿಷ್ಮಾ, ಕೂಟ ದಾಖಲೆ ನಿರ್ಮಿಸಿದರು. ಕಡಬ ಸರ್ಕಾರಿ ಶಾಲೆಯ 10ನೇ ತರಗತಿ ವಿದ್ಯಾರ್ಥಿನಿಯಾಗಿರುವ ಅವರು 4 ನಿಮಿಷ 55.1 ಸೆಕೆಂಡುಗಳಲ್ಲಿ ಗುರಿ ತಲುಪಿದರು. 2017ರಲ್ಲಿ 4 ನಿಮಿಷ 58.19 ಸೆಕೆಂಡುಗಳಲ್ಲಿ ಗುರಿ ಮುಟ್ಟಿದ್ದ ಬೆಂಗಳೂರು ಉತ್ತರ ಜಿಲ್ಲೆಯ ಅರ್ಪಿತಾ ಎಚ್.ವಿ ಅವರ ಹೆಸರಿನಲ್ಲಿ ಈ ದಾಖಲೆ ಇತ್ತು. ಚರಿಷ್ಮಾ, ಮೊದಲ ದಿನ 3000 ಮೀಟರ್ಸ್‌ನಲ್ಲಿ ಚಿನ್ನ ಮತ್ತು 800 ಮೀಟರ್ಸ್‌ನಲ್ಲಿ ಬೆಳ್ಳಿ ಪದಕ ಗೆದ್ದುಕೊಂಡಿದ್ದರು.

ಅಬೂಬಕ್ಕರ್, ಗೋಪಿಕಾ ವೇಗದ ತಾರೆಯರು: ವಿದ್ಯಾನಗರ ಕ್ರೀಡಾ ಶಾಲೆಯ ಎ.ಅಬೂಬಕ್ಕರ್ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಗೋಪಿಕಾ ಜಿ ಕೂಟದ ವೇಗದ ತಾರೆಯರಾದರು. ಬಾಲಕರ 100 ಮೀಟರ್ಸ್ ಓಟದಲ್ಲಿ ಅಬೂಬಕ್ಕರ್ 11.01 ಸೆಕೆಂಡುಗಳೊಂದಿಗೆ ಮಿಂಚಿದರೆ ಗೋಪಿಕಾ 12.87 ಸೆಕೆಂಡುಗಳಲ್ಲಿ ಚಿನ್ನಕ್ಕೆ ಮುತ್ತಿಕ್ಕಿದರು. (ಶಿರಸಿ)–2, ಸಿಂಪನಾ (ಹಾಸನ)–3. ದೂರ: 33.91ಮೀ.

ಹರ್ಷಿತಾ ಹ್ಯಾಟ್ರಿಕ್ ಸಾಧನೆ: ಟ್ರ್ಯಾಕ್‌ನಲ್ಲೂ ಫೀಲ್ಡ್‌ನಲ್ಲೂ ಒಟ್ಟು 3 ಚಿನ್ನ ಗೆದ್ದ ಬೆಂಗಳೂರು ಉತ್ತರ ಜಿಲ್ಲೆಯ ಹರ್ಷಿತಾ ಗಮನ ಸೆಳೆದರು. 100 ಮೀಟರ್ಸ್ ಹರ್ಡಲ್ಸ್, ಹೈಜಂಪ್ ಮತ್ತು ಟ್ರಿಪಲ್ ಜಂಪ್‌ನಲ್ಲಿ ಅವರು ಪಾರಮ್ಯ ಮೆರೆದರು. ಹಾಸನದ ಸುಮಂತ್ ಬಿ.ಎಸ್, ಬಾಲಕರ ವಿಭಾಗದ ವೈಯಕ್ತಿಕ ಚಾಂಪಿಯನ್ ಆದರು.

ಐಪಿಎಲ್: ಹೊರಗುಳಿಯಲು ಜೋಫ್ರಾಗೆ ಸೂಚನೆ


ಜೋಫ್ರಾ ಆರ್ಚರ್

ಲಂಡನ್ (ಪಿಟಿಐ): ಮುಂದಿನ ವರ್ಷ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡಲು ಆದ್ಯತೆ ನೀಡಿ, ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಗೆ ತೆರಳದಂತೆ ವೇಗಿ ಜೋಫ್ರಾ ಆರ್ಚರ್ ಅವರಿಗೆ ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿ ಸೂಚಿಸಿದೆ.

ಗಾಯದಿಂದ ಚೇತರಿಸಿಕೊಳ್ಳುತ್ತಿರುವ ಆರ್ಚರ್ ಅವರು ದೀರ್ಘ ಕಾಲದಿಂದ ಕ್ರಿಕೆಟ್‌ನಿಂದ ದೂರವಿದ್ದಾರೆ. ಹೋದ ವರ್ಷ ಮುಂಬೈ ಇಂಡಿಯನ್ಸ್ ತಂಡವು ಜೋಫ್ರಾ ಅವರನ್ನು ₹8 ಲಕ್ಷ ನೀಡಿ ಖರೀದಿಸಿತ್ತು. ಅವರ ಮೊಣಕೈಗೆ ಗಾಯವಾಗಿದ್ದರಿಂದ ಹೆಚ್ಚು ಪಂದ್ಯ ಆಡಲಿಲ್ಲ. ಈ ವರ್ಷ ಅವರನ್ನು ತಂಡವು ಬಿಡುಗಡೆ ಮಾಡಿದೆ. 28 ವರ್ಷದ ಜೋಫ್ರಾ ಈಚೆಗೆ ನಡೆದ ವಿಶ್ವಕಪ್ ಟೂರ್ನಿಯಿಂದಲೂ ಹೊರಗುಳಿದಿದ್ದರು.

ಕ್ರಿಕೆಟ್: ಫ್ರೆಂಡ್ಸ್ ಬೆಂಗಳೂರು ತಂಡಕ್ಕೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಪಾರ್ವತಮ್ಮ ಶಾಮನೂರು ಶಿವಶಂಕರಪ್ಪನವರ ಸವಿ ನೆನಪಿಗಾಗಿ ದಾವಣಗೆರೆ ಜಿಲ್ಲಾ ಕ್ರೀಡಾಂಗಣದಲ್ಲಿ ಹಮ್ಮಿಕೊಂಡಿದ್ದ ಹೊನಲು–ಬೆಳಕಿನ ಕ್ರಿಕೆಟ್ ಹಬ್ಬಕ್ಕೆ ಸೋಮವಾರ ತೆರೆ ಬಿದ್ದಿತ್ತು.

ಸೋಮವಾರ ಬೆಳಗಿನ ಜಾವ ನಡೆದ ಫೈನಲ್‌ನಲ್ಲಿ ಫ್ರೆಂಡ್ಸ್ ಬೆಂಗಳೂರು ತಂಡ ಉಡುಪಿಯ ಇಜಾನ್ ಸ್ಪೋರ್ಟ್ಸ್ ವಿರುದ್ಧ ಜಯಿಸಿತು.

ಟಾಸ್ ಗೆದ್ದು ಮೊದಲು ಫೀಲ್ಡಿಂಗ್ ಮಾಡಿದ ಫ್ರೆಂಡ್ಸ್ ಬೆಂಗಳೂರು, ಎದುರಾಳಿಗಳನ್ನು 48ರನ್‌ಗಳಿಗೆ ಕಟ್ಟಿ ಹಾಕಿತು. ಈ ತಂಡದ ಬೌಲರ್‌ಗಳು ನಾಲ್ಕು ವಿಕೆಟ್‌ಗಳನ್ನು ಉರುಳಿಸಿದರು.

ಭಾರತ ಸಬ್ ಜೂನಿಯ್ ರ್‍ಯಾಂಕಿಂಗ್ ಬ್ಯಾಡ್ಮಿಂಟನ್

ಫೈನಲ್‌ಗೆ ಲಕ್ಷ್ ಚೆಂಗಪ್ಪ, ಹಿತೈಶ್ರೀ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಲಕ್ಷ್ ಚೆಂಗಪ್ಪ ಸೋಮವಾರ ಅಖಿಲ ಭಾರತ ಸಬ್ ಜೂನಿಯರ್ ರ್‍ಯಾಂಕಿಂಗ್ ಬ್ಯಾಡ್ಮಿಂಟನ್ ಟೂರ್ನಿಯ 17 ವರ್ಷದೊಳಗಿನವರ ಬಾಲಕರ ಸಿಂಗಲ್ಸ್ ವಿಭಾಗದ ಫೈನಲ್ ಪ್ರವೇಶಿಸಿದರು.

ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆ ಕೋರ್ಟ್‌ನಲ್ಲಿ ಸೋಮವಾರ ನಡೆದ ಸೆಮಿಫೈನಲ್‌ನಲ್ಲಿ ಲಕ್ಷ್ 21–19, 21–16ರಿಂದ ತೆಲಂಗಾಣದ ಜ್ಞಾನದತ್ತಾ ಟಿಟಿ ವಿರುದ್ಧ ಸೆಣಸುವರು.

ಲಕ್ಷ್ ಅವರು ಫೈನಲ್‌ನಲ್ಲಿ ಉತ್ತರಾಖಂಡದ ಅಂಶ್ ನೇಗಿ ಅವರನ್ನು ಎದುರಿಸುವರು. ಇನ್ನೊಂದು ಸೆಮಿಫೈನಲ್‌ನಲ್ಲಿ ನೇಗಿ 21–16, 14–21, 24–22ರಿಂದ ಕರ್ನಾಟಕದ ಪ್ರತೀಕ್ ಕೌಂಡಿಲ್ಯಾ ವಿರುದ್ಧ ಗೆದ್ದರು.

ಕರ್ನಾಟಕದ ಹಿತೈಶ್ರೀ ರಾಜಯ್ಯ –ಪ್ರಜಾವಾಣಿ ಚಿತ್ರ

15 ವರ್ಷದೊಳಗಿನ ಬಾಲಕಿಯರ ಸಿಂಗಲ್ಸ್‌ನಲ್ಲಿ ಕರ್ನಾಟಕದ ಹಿತೈಶ್ರೀ ರಾಜಯ್ಯ 21–12, 20–22, 21–14ರಿಂದ ಕರ್ನಾಟಕದವರೇ ಆದ ಅಲ್ಕಿಯಾ ಶೆಟ್ಟಿ ವಿರುದ್ಧ ಜಯಿಸಿ ಫೈನಲ್ ಪ್ರವೇಶಿಸಿದರು.